www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಚೀನಾದಿಂದ 'ಕೃತಕ ದ್ಯುತಿಸಂಶ್ಲೇಷಣೆ'!



ಆಳ-ಅಗಲ
ಬೇಸಿಗೆಯಲ್ಲೂ ತೆಲಂಗಾಣಕ್ಕೆ ಸದ್ದಿಲ್ಲದೇ ಹರಿದ ಕೃಷ್ಣೆ 8
ಜೀವನ ಪರ್ಯಂತ ನಿರ್ಬಂಧ ಸಂಸತ್ತಿನ ಅಧಿಕಾರ: ಕೇಂದ್ರ 9
ಬೊಜ್ಜು 'ಭಾರ'
ನಿಷ್ಕ್ರಿಯ ಖಾತೆಗಳಲ್ಲಿ ₹55.78 ಕೋಟಿ 6
ವೈಯಕ್ತಿಕ ಸಾಲ: ನಿಯಮ ಸಡಿಲ 12

'ಕೃಪ' ಅಕ್ರಮದ ಕೂಪ

ಕೆಲಸ ಬಿಟ್ಟ ಸಿಬ್ಬಂದಿಗೂ ಪೂರ್ಣ ವೇತನ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅತಿಗಣ್ಯ ವ್ಯಕ್ತಿಗಳು, ಅತಿಥಿ ಗಳು, ಉನ್ನತಾಧಿಕಾರಿಗಳು ಬೆಂಗಳೂರಿಗೆ ಬಂದಾಗ ತಂಗಲು ರಾಜ್ಯ ಸರ್ಕಾರ ನಿರ್ಮಿಸಿರುವ 'ಕುಮಾರ ಕೃಪ' ಅತಿಥಿ ಗೃಹವು ಭ್ರಷ್ಟಾಚಾರದ ಕೂಪವಾಗಿದ್ದು, ನಿರ್ವಹಣಾ ಸಿಬ್ಬಂದಿ ಹೆಸರಲ್ಲಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವಂಚಿಸಿ ರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಐಷಾರಾಮಿ ಸೌಲಭ್ಯ ಇರುವ ಸರ್ಕಾರಿ ಅತಿಥಿ ಗೃಹದಲ್ಲಿ ನಡೆಯುತ್ತಿರುವ ಅವ್ಯವಹಾರ ಕುರಿತು ಬಂದ ದೂರನ್ನು ಆಧರಿಸಿ ತನಿಖೆ ನಡೆಸಿದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕರು, ವಂಚನೆಗೆ ಬಳಸುತ್ತಿರುವ ಅನೇಕ ಕಳ್ಳ ದಾರಿಗಳನ್ನು ತಾವು ಸಲ್ಲಿಸಿದ ವರದಿಯಲ್ಲಿ ಅನಾವರಣಗೊಳಿಸಿದ್ದಾರೆ.

8ನೇ ಪುಟ ನೋಡಿ

ಉನ್ನತಾಧಿಕಾರಿಗಳ ಮನೆಯ ಸೇವೆ

ಕೆಲ ಸಿಬ್ಬಂದಿ ಹೆಸರಿಗಷ್ಟೇ ಕುಮಾರ ಕೃಪದ ನೌಕರರಾಗಿ ನೇಮಕಗೊಂಡಿದ್ದಾರೆ. ಆದರೆ, ಬಹುತೇಕರು ವಿವಿಧ ಇಲಾಖೆಗಳ ಉನ್ನತಾಧಿಕಾರಿಗಳ ಮನೆಯಲ್ಲಿ ನಿತ್ಯವೂ ಸೇವೆ ಸಲ್ಲಿಸುತ್ತಿದ್ದಾರೆ.

ಅಡುಗೆ ಸಿಬ್ಬಂದಿ, ಸ್ವಚ್ಛತಾ ಕೆಲಸಗಾರರು ಹೀಗೆ ಹಲವರು ಅನಧಿಕೃತವಾಗಿ ಹಿರಿಯ ಅಧಿಕಾರಿಗಳ ಮನೆ ಸೇವೆ ಮಾಡುತ್ತಿರುವ ಕಾರಣ ಅವರಿಗೆ ಬಯೊಮೆಟ್ರಿಕ್ ಕಡ್ಡಾಯ ಗೊಳಿಸಲಿಲ್ಲ ಎನ್ನುವ ಅಂಶವನ್ನು ವಿಚಾರಣೆಯ ಸಮಯದಲ್ಲಿ ಅಲ್ಲಿನ ವ್ಯವಸ್ಥಾಪಕರು ಬಹಿರಂಗಪಡಿಸಿದ್ದಾರೆ ಎಂಬ ಅಂಶವನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.



'ಕುಮಾರ ಕೃಪ' ಅತಿಥಿ ಗೃಹ

ಬಯೊಮೆಟ್ರಿಕ್ ಬಳಸಿಯೇ ಇಲ್ಲ

ವಸತಿ ಗೃಹದಲ್ಲಿ ಬಯೊಮೆಟ್ರಿಕ್ ಹಾಜರಾತಿ ಕಡ್ಡಾಯ ಗೊಳಿಸಿದ್ದರೂ ಯಾವುದೇ ಅಧಿಕಾರಿ, ಸಿಬ್ಬಂದಿಯ ಬಯೊಮೆಟ್ರಿಕ್ ನೀಡಿಲ್ಲ. ಭೌತಿಕ ಹಾಜರಾತಿ ಪುಸ್ತಕದಲ್ಲಿ ನಮೂದಿಸಿರುವ ಗೈರುಹಾಜರಿ ಕಾಲಂಗಳನ್ನೂ ತಿದ್ದಲಾಗಿದೆ. ಕೆಲಸ ಬಿಟ್ಟು ಹೋದವರ ಹೆಸರಿನ ಮುಂದೆ 'ಕೆಲಸ ತೊರೆದಿದ್ದಾರೆ' ಎಂದು ಬರೆದಿದ್ದರೂ ಅಂಥವರ ಖಾತೆಗೆ ಹಣ ಜಮೆ ಮಾಡಲಾಗಿದೆ.

8ನೇ ಪುಟ ನೋಡಿ

ಅಂಕಿ ಅಂಶ

₹ **3.25** ಕೋಟಿ ವಂಚಿಸಿರುವ ಅಂದಾಜು ಮೊತ್ತ

160 ನೂತನ ಕುಮಾರ ಕೃಪದ ಸಿಬ್ಬಂದಿ

180 ಐಷಾರಾಮಿ ಕೊಠಡಿಗಳು

ಕೆಕೆಆರ್‌ಡಿಬಿಗೆ ಬಿಡುಗಡೆ ಆಗಿಲ್ಲ ಅನುದಾನ

ಕಲ್ಯಾಣಕ್ಕೆ ತಲುಪದ ಹಣ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ'ಗೆ (ಕೆಕೆಆರ್‌ಡಿಬಿ) 2024-25ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರ ₹5 ಸಾವಿರ ಕೋಟಿ ಮೊತ್ತದ ಕ್ರಿಯಾಯೋಜನೆ ರೂಪಿಸಲು ಅನುಮೋದನೆ ನೀಡಿದೆ. ಆದರೆ, ಆರ್ಥಿಕ ವರ್ಷದ ಅಂತ್ಯ ತಲುಪಿದರೂ ಈ ಸಾಲಿನ ಅನುದಾನದಲ್ಲಿ ಮಂಡಳಿಗೆ ನಯಾಪೈಸೆ ಬಿಡುಗಡೆ ಆಗಿಲ್ಲ.

ಕಳೆದ ಆಗಸ್ಟ್ 23ರಂದೇ ಮೊದಲ ಮತ್ತು ಎರಡನೇ ಕಂತಿನ ಅನುದಾನ ಒಟ್ಟು ₹1,500 ಕೋಟಿ ಬಿಡುಗಡೆ ಮಾಡುವಂತೆ ಮಂಡಳಿಯ ಕಾರ್ಯದರ್ಶಿ ಎಂ. ಸುಂದರೇಶ್ ಬಾಬು ಅವರು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಆರ್ಥಿಕ ಇಲಾಖೆಯು ಮಂಡಳಿಯಲ್ಲಿರುವ ಹಿಂದಿನ ವರ್ಷಗಳ ಬಾಕಿ ಹಣವನ್ನು ವೆಚ್ಚ ಮಾಡುವಂತೆ ಸಲಹೆ ನೀಡಿದೆ.

ಪ್ರಸಕ್ತ ಸಾಲಿನಲ್ಲಿ ₹5 ಸಾವಿರ ಕೋಟಿಗೆ ಕ್ರಿಯಾಯೋಜನೆ ರೂಪಿಸುವಂತೆ ಬಜೆಟ್ ಘೋಷಿಸಿದ್ದ ಸರ್ಕಾರ, ಈ ವರ್ಷ ₹3 ಸಾವಿರ ಕೋಟಿ ಅನುದಾನ ನಿಗದಿಪಡಿಸಿತ್ತು. ಈ ಮೊತ್ತಕ್ಕೆ ಸೀಮಿತಗೊಳಿಸಿ ವೆಚ್ಚ ಭರಿಸಲು ಮತ್ತು ಉಳಿದ ₹2 ಸಾವಿರ ಕೋಟಿ ಮೊತ್ತದ ಕಾಮಗಾರಿಯನ್ನು ಮುಂದುವರಿದ ಕಾಮಗಾರಿಗಳಾಗಿ ಮುಂದಿನ ಆರ್ಥಿಕ ವರ್ಷದಲ್ಲಿ ಅನುಷ್ಠಾನ ಗೊಳಿಸಲು ಆರ್ಥಿಕ ಇಲಾಖೆಯು ಮಂಡಳಿಗೆ ಸೂಚಿಸಿತ್ತು. ಅದರಂತೆ, ಈ ಅನುದಾನವನ್ನು ಸಾಮಾನ್ಯ ಕಾಮಗಾರಿಗಳಿಗೆ ₹2,089.28 ಕೋಟಿ, ಪರಿಶಿಷ್ಟ ಜಾತಿ ಉಪ ಯೋಜನೆಗೆ (ಎಸ್‌ಸಿಎಸ್‌ಪಿ) ₹642.86 ಕೋಟಿ, ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ₹267.86 ಕೋಟಿಯಂತೆ ವಿಂಗಡಿಸಿ ನಿಗದಿಪಡಿಸಲಾಗಿತ್ತು.

ಮಂಡಳಿಯಲ್ಲಿ ಹಿಂದಿನ ವರ್ಷಗಳ ಬಾಕಿ ಮೊತ್ತ ₹3,117.07 ಕೋಟಿ ವೆಚ್ಚವಾಗದೆ ಉಳಿದಿತ್ತು. ಆ ಮೊತ್ತದಲ್ಲಿ ₹717.32 ಕೋಟಿಯನ್ನು (ಶೇ 23ರಷ್ಟು) 2024ರ ಜುಲೈ 31ರ ವೇಳೆಗೆ ಮಂಡಳಿ ವೆಚ್ಚ ಮಾಡಿತ್ತು.

8ನೇ ಪುಟ ನೋಡಿ

ಹಳೆ ಬಾಕಿಯಲ್ಲಿ ಶೇ 75.63 ವೆಚ್ಚ

'ಮಂಡಳಿಯಲ್ಲಿದ್ದ ಹಿಂದಿನ ಸಾಲಿನ ಬಾಕಿ ಮೊತ್ತ ₹3117.07 ಕೋಟಿಯಲ್ಲಿ 2024–25ನೇ ಸಾಲಿನಲ್ಲಿ ಫೆ. 19ರವರೆಗೆ ₹2,357.37 ಕೋಟಿ (ಶೇ 75.63) ವೆಚ್ಚವಾಗಿದೆ. ಉಳಿದ ₹759.70 ಕೋಟಿಯನ್ನು ಪ್ರಸಕ್ತ ಸಾಲಿನಲ್ಲಿ ಬಳಕೆ ಮಾಡಲಾಗುವುದು. ಮಂಡಳಿಗೆ ಮೊದಲ ಕಂತಿನ ಹಣ ₹750 ಕೋಟಿಯನ್ನು ಬಿಡುಗಡೆ ಮಾಡಬೇಕು' ಎಂದು ಸರ್ಕಾರಕ್ಕೆ ಕೆಕೆಆರ್‌ಡಿಬಿ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

ಜೊತೆಗೆ ಹಣ ಬಳಕೆ ಪ್ರಮಾಣಪತ್ರವನ್ನೂ ಸಲ್ಲಿಸಿದ್ದಾರೆ. ಅಲ್ಲದೆ, ಇದೇ ಪತ್ರದಲ್ಲಿ ಅವರು 2024-25ನೇ ಸಾಲಿನಲ್ಲಿ ಮಂಡಳಿಗೆ ಸರ್ಕಾರವು ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ ಎಂದೂ ನಮೂದಿಸಿದ್ದಾರೆ.



ಚಿನಕುರುಳಿ

ಪ್ರಕಾಶ್ ಶೆಟ್ಟಿ

ಎಚ್‌ಡಿಕೆ ವಿರುದ್ಧ ಆರೋಪಪಟ್ಟಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಗಣಿಗುತ್ತಿಗೆ ಪ್ರಕರಣ

ಬೆಂಗಳೂರು: ನಿಯಮ ಉಲ್ಲಂಘಿಸಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಎಸ್‌ಎಸ್‌ವಿಎಂ) ಕಂಪನಿಗೆ ಗಣಿ ಗುತ್ತಿಗೆ ಮಂಜೂರು ಮಾಡಿರುವ ಆರೋಪದಡಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ವಿಶೇಷ ತನಿಖಾ ತಂಡವು (ಎಸ್‌ಐಟಿ) ಇಂಗ್ಲಿಷ್‌ಗೆ ಅನುವಾದಿಸಿರುವ ದಾಖಲೆಗಳೊಂದಿಗೆ ರಾಜ್ಯಪಾಲರಿಗೆ ಪುನಃ ಪ್ರಸ್ತಾವ ಸಲ್ಲಿಸಿದೆ.

ಕುಮಾರಸ್ವಾಮಿ ಅವರು 2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಎಸ್‌ಎಸ್‌ವಿಎಂ ಕಂಪನಿಗೆ ಗಣಿ ಮತ್ತು ಖನಿಜ ನಿಯಮಗಳನ್ನು ಉಲ್ಲಂಘಿಸಿ 550 ಎಕರೆ ವಿಸ್ತೀರ್ಣದ ಗಣಿ ಗುತ್ತಿಗೆ ಮಂಜೂರು ಮಾಡಿದ ಆರೋಪವಿದೆ.

2011ರಲ್ಲಿ ಲೋಕಾಯುಕ್ತ-ರಾಗಿದ್ದ ಎನ್. ಸಂತೋಷ್ ಹೆಗ್ಡೆ ಅವರು ಅಕ್ರಮ ಗಣಿಗಾರಿಕೆ ಕುರಿತು ಸಲ್ಲಿಸಿದ್ದ ವರದಿಯಲ್ಲಿನ ಉಲ್ಲೇಖ ಆಧರಿಸಿ ಲೋಕಾಯುಕ್ತದ ಎಸ್‌ಐಟಿ ತನಿಖೆ ನಡೆಸುತ್ತಿದೆ.

ಕುಮಾರಸ್ವಾಮಿ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಎಸ್‌ಐಟಿ

ಅಧಿಕಾರಿಗಳು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ 2023ರ ನವೆಂಬರ್ 21ರಂದು ಮೊದಲ ಬಾರಿಗೆ ಪ್ರಸ್ತಾವ ಸಲ್ಲಿಸಿದ್ದರು. ಕುಮಾರಸ್ವಾಮಿ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕೆಲವು ಸ್ಪಷ್ಟನೆಗಳನ್ನು ಒದಗಿಸುವಂತೆ ಸೂಚಿಸಿ ರಾಜ್ಯಪಾಲರು 2024ರ ಜುಲೈ ತಿಂಗಳಲ್ಲಿ ಎಸ್‌ಐಟಿ ಅಧಿಕಾರಿಗಳಿಗೆ ಪತ್ರ ಬರೆದಿದ್ದರು.

ರಾಜ್ಯಪಾಲರು ಕೋರಿದ್ದ ಸ್ಪಷ್ಟನೆ ಗಳೊಂದಿಗೆ 2024ರ ಆಗಸ್ಟ್‌ನಲ್ಲಿ ಹೊಸ ಪ್ರಸ್ತಾವ ಸಲ್ಲಿಸಿದ್ದ ತನಿಖಾ ತಂಡ, ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಮತ್ತೆ ಕೋರಿತ್ತು. ಆಗ ಪ್ರತಿಕ್ರಿಯಿಸಿದ್ದ ರಾಜ್ಯಪಾಲರು, ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ಹಾಗೂ ಕರಡು ಆರೋಪಪಟ್ಟಿಯ ಪ್ರತಿಯನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ಸಲ್ಲಿಸುವಂತೆ ಸೂಚಿಸಿದ್ದರು.

'ರಾಜ್ಯಪಾಲರ ಸೂಚನೆಯಂತೆ ಹಲವು ಸಾವಿರ ಪುಟಗಳಷ್ಟು ದಾಖಲೆ ಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದು, ಅವುಗಳೊಂದಿಗೆ 2025ರ ಜನವರಿ 21ರಂದು ರಾಜಭವನಕ್ಕೆ ಹೊಸ ಪ್ರಸ್ತಾವ ಸಲ್ಲಿಸಲಾಗಿತ್ತು' ಎಂದು ಲೋಕಾಯುಕ್ತದ ಎಸ್‌ಐಟಿ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

ಪುಷ್ಪ ವೃಷ್ಟಿ ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದ ಕೊನೇ ದಿನವಾದ ಬುಧವಾರ 'ಪವಿತ್ರ ಸ್ನಾನ' ಮಾಡಿದ ಭಕ್ತರ ಮೇಲೆ ಹೆಲಿಕಾಪ್ಟರ್ ಮೂಲಕ ಗುಲಾಬಿ ದಳಗಳನ್ನು ಸುರಿಸಲಾಯಿತು –ಪಿಟಿಐ ಚಿತ್ರ

ಮಹದಾಯಿ ನ್ಯಾಯಮಂಡಳಿ ಮತ್ತೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವರದಿ ಸಲ್ಲಿಸುವ ಸಂಬಂಧ ನ್ಯಾಯಮಂಡಳಿಯ ಅವಧಿಯನ್ನು ಪುನಃ ಆರು ತಿಂಗಳು ವಿಸ್ತರಿಸಲಾಗಿದೆ.

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ನಡುವಿನ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಲು ಈ ನ್ಯಾಯಮಂಡಳಿ ಸ್ಥಾಪಿಸಲಾಗಿದೆ. ನ್ಯಾಯಮಂಡಳಿಗೆ ಕರ್ನಾಟಕ ಹಾಗೂ ಗೋವಾ ಸರ್ಕಾರಗಳು ಸ್ಪಷ್ಟೀಕರಣ ಅರ್ಜಿ ಸಲ್ಲಿಸಿವೆ. ಹೀಗಾಗಿ, ಹೆಚ್ಚಿನ ವರದಿ ನೀಡಲು ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ಜಲಶಕ್ತಿ ಸಚಿವಾಲ ಯವನ್ನು ನ್ಯಾಯಮಂಡಳಿ ಕೋರಿತ್ತು. ವರದಿ ನೀಡುವ ಅವಧಿಯನ್ನು ವಿಸ್ತರಿಸಿ ಸಚಿವಾಲಯ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಮಹದಾಯಿ ವಿವಾದ ಬಗೆಹರಿಸಲು ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಸೆಕ್ಷನ್ 4ರ ಅನ್ವಯ-ಮಹದಾಯಿ ನ್ಯಾಯಮಂಡಳಿ ಸ್ಥಾಪಿಸ-ಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನ್ಯಾಯಮಂಡಳಿಯು 2018ರ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿದೆ. ಈ ವರದಿಯ ಬಗ್ಗೆ 2020ರ ಫೆ.20ರಂದು ಅಧಿಸೂಚನೆ ಹೊರಡಿಸಲಾಗಿದೆ.

'ವೈಬ್ರೆಂಟ್ ಶಕ್ತಿ, ಅನುಭವ ಬಳಸಬೇಕು'

'ನಾಯಕತ್ವ ನೀಡದೇ ಮನೆಯಲ್ಲಿರಬೇಕೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷ ನನ್ನನ್ನು ಅಧ್ಯಕ್ಷನ-ನ್ನಾಗಿ ಮಾಡಿದೆ. ಉಪ ಮುಖ್ಯಮಂತ್ರಿ ಸ್ಥಾನ ಕೊಟ್ಟಿದೆ. ಇಷ್ಟಾದ ಮೇಲೆಯೂ ನಾನು ನನ್ನ ಮುಖ ತೋರಿಸಿ ಪಕ್ಷಕ್ಕೆ ಕೆಲಸ ಮಾಡದಿದ್ದರೆ, ನನ್ನ ನಾಯಕತ್ವ ನೀಡದಿದ್ದರೆ ಹೇಗೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ನನ್ನ ನಾಯಕತ್ವದಲ್ಲೇ ಮುಂದಿನ ಚುನಾವಣೆ ಎಂಬ ನಿಮ್ಮ ಹೇಳಿಕೆಯ ಬಗ್ಗೆ ಚರ್ಚೆ ಜೋರಾಗಿದೆಯಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ 'ಮನೆಯಲ್ಲಿ ಕುಳಿತು ಕೊಳ್ಳುವುದಕ್ಕಾಗಿ ಪಕ್ಷ ನನಗೆ ಇಷ್ಟು ಶಕ್ತಿ ನೀಡಿದೆಯೇ' ಎಂದು ಮರು ಪ್ರಶ್ನೆ ಹಾಕಿದರು.

'ಸಿದ್ದರಾಮಯ್ಯನವರು ಮೊದಲ ಅವಧಿಗೆ ಮುಖ್ಯಮಂತ್ರಿ ಆಗಿದ್ದಾಗ ನಾನು ಪ್ರಚಾರ ಸಮಿತಿ ಅಧ್ಯಕ್ಷನಾಗಿದ್ದೆ. ಬಳಿಕ ಕೆಪಿಸಿಸಿ ಅಧ್ಯಕ್ಷನಾದೆ. ಪಕ್ಷ ನನಗೆ ಹಲವು ಜವಾಬ್ದಾರಿಗಳನ್ನು ನೀಡಿ ಬೆಳೆಸಿದೆ. ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ, ಅಸ್ಸಾಂ, ಬಿಹಾರ, ದಿಲ್ಲಿ, ಹಿಮಾಚಲ ಪ್ರದೇಶಕ್ಕೂ ನನ್ನನ್ನು ಕರೆಯುತ್ತಾರೆ. ನನಗಿರುವ ವೈಬ್ರೆಂಟ್ ಶಕ್ತಿ, ಅನುಭವವನ್ನು ಬಳಸಬೇಕು' ಎಂದರು.

'ಮುಂದಿನ ಚುನಾವಣೆವರೆಗೂ ಸಿದ್ದರಾಮಯ್ಯ ಮುಂದುವರಿಯು ತ್ತಾರೆಯೇ' ಎಂಬ ಪ್ರಶ್ನೆಗೆ, 'ನಮ್ಮ ಪಕ್ಷ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಯಾಗಿ ಆಯ್ಕೆ ಮಾಡಿದೆ. ನಾನು ಉಪ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ. ಪಕ್ಷದ ತೀರ್ಮಾನವನ್ನು ಗೌರವಿಸುತ್ತೇವೆ' ಎಂದರು.

'ಪಕ್ಷದಲ್ಲಿ ಕೆಲವರು ಒಬ್ಬರ ಪರವಾಗಿ ಹೇಳಿಕೆ ನೀಡುತ್ತಿದ್ದಾರೆ ಎಂದಾಗ, 'ಅದಕ್ಕೆಲ್ಲಾ ಎಐಸಿಸಿ ನಾಯಕರು ಉತ್ತರ ನೀಡುತ್ತಾರೆ' ಎಂದರು.

'ನಿಗಮ ಮಂಡಳಿಗಳಿಗೆ ನೇಮಕದ ಪಟ್ಟಿಯನ್ನು ನಾನು ತರಿಸಿಕೊಂಡಿದ್ದು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಆದ್ಯತೆ ನೀಡಬೇಕು ಎಂಬ ಉದ್ದೇಶ ನನ್ನದು. ಬ್ಲಾಕ್ ಅಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಿಗೆ ಸ್ಥಾನಮಾನ ನೀಡಬೇಕು ಎಂದು ಎಲ್ಲ ಶಾಸಕರಿಗೆ ಹೇಳಿದ್ದೇನೆ' ಎಂದರು.

'ಬಿಜೆಪಿಗೆ ಶಶಿ ತರೂರ್ ಹತ್ತಿರ ಆಗುತ್ತಿದ್ದಾರೆಂಬ ಕಾರಣಕ್ಕೆ ನೀವೂ ಬಿಜೆಪಿಗೆ ಹತ್ತಿರವಾಗುತ್ತಿದ್ದೀರಿ' ಎಂಬ ಚರ್ಚೆ ಆರಂಭವಾಗಿದೆ ಎಂದಾಗ, 'ಕೆಲವರು ಆತುರದಲ್ಲಿ ನಿರ್ಧಾರ ತೆಗೆದು ಕೊಳ್ಳಬಹುದು. ನೂರು ನಾಯಕರು ಬರುತ್ತಾರೆ, ಹೋಗುತ್ತಾರೆ. ಪಕ್ಷಕ್ಕೆ ಏನೂ ಆಗುವುದಿಲ್ಲ. ಶಶಿ ತರೂರ್ ಅವರು ಕಾಂಗ್ರೆಸ್ ಪಕ್ಷದ ಆಸ್ತಿ. ಎಲ್ಲರೂ ಒಗ್ಗಟ್ಟಾಗಿ ಹೋಗುತ್ತೇವೆ. ತಮ್ಮನ್ನು ಇನ್ನೂ ಸಮರ್ಥವಾಗಿ ಬಳಸಿಕೊಳ್ಳಿ ಎಂಬುದಷ್ಟೇ ಅವರ ಬೇಡಿಕೆ' ಎಂದರು.

'ಬಿಜೆಪಿಗೆ ಹತ್ತಿರ ಎಂಬುದು ಅಪಪ್ರಚಾರ'

'ಈಶಾ ಫೌಂಡೇಷನ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗುತ್ತಿದ್ದೇನೆ. ಅಮಿತ್ ಶಾ ಅವರನ್ನು ಇನ್ನೂ ಭೇಟಿ ಮಾಡಿಲ್ಲ. ಅಷ್ಟಕ್ಕೇ, ಸಾಮಾಜಿಕ ಜಾಲತಾಣಗಳಲ್ಲಿ ನಾನು ಬಿಜೆಪಿಗೆ ಹತ್ತಿರವಾಗುತ್ತಿದ್ದೇನೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ' ಎಂದು ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

'ಜೈಲಿನಲ್ಲಿ ಇದ್ದಾಗ ಸಿಖ್ ಧರ್ಮದ ಬಗ್ಗೆ ಕಲಿತೆ. ಜೈನರ ಮಠದ ಕಾರ್ಯ ಕ್ರಮಕ್ಕೆ ಹೋಗಿದ್ದೆ. ದರ್ಗಾ, ಚರ್ಚ್‌ಗೂ ಹೋಗುತ್ತೇನೆ. ಎಲ್ಲಾ ಧರ್ಮಗಳನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಎಲ್ಲ ಧರ್ಮ, ಸಮುದಾಯದವರು ನನ್ನನ್ನು ಪ್ರೀತಿಸುತ್ತಾರೆ, ಆಶೀರ್ವಾದ ಮಾಡುತ್ತಾರೆ' ಎಂದರು.

> **ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಕಿ ಇದ್ದಂತೆ, ಯಾರಿಂದಲೂ ಮುಟ್ಟೋಕಾಗಲ್ಲ, ಮುಟ್ಟಿದ್ರೆ ಭಸ್ಮ ಆಗ್ತಾರೆ**
>
> **ಜಮೀರ್ ಅಹ್ಮದ್ ಖಾನ್,** ವಸತಿ ಸಚಿವ

ಪೌರತ್ವ ಪಡೆಯಲು ಶ್ರೀಮಂತರಿಗೆ ಟ್ರಂಪ್ ಕಲ್ಪಿಸಿದ ಅವಕಾಶ

'ಗೋಲ್ಡ್ ಕಾರ್ಡ್' ವೀಸಾ ಸೌಲಭ್ಯ

ವಾಷಿಂಗ್ಟನ್ (ಎಪಿ): ಐದು ಮಿಲಿಯನ್ ಡಾಲರ್ (ಅಂದಾಜು ₹43.54 ಕೋಟಿ) ಮೌಲ್ಯದ 'ಗೋಲ್ಡ್ ಕಾರ್ಡ್' ವೀಸಾ ವ್ಯವಸ್ಥೆ ಆರಂಭಿಸುವ ಆಲೋಚನೆ ಇದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ. ಈ ವೀಸಾ ಪಡೆಯುವವರಿಗೆ ಅಮೆರಿಕದ ಪೌರತ್ವ ಪಡೆಯುವ ಅವಕಾಶ ಸಿಗಲಿದೆ. ಇದು ಹೂಡಿಕೆದಾರರಿಗೆ ವೀಸಾ ನೀಡುವ 35 ವರ್ಷಗಳಷ್ಟು ಹಳೆಯದಾದ ವ್ಯವಸ್ಥೆಯನ್ನು ಕೊನೆಗೊಳಿಸಲಿದೆ.



ಡೊನಾಲ್ಡ್ ಟ್ರಂಪ್

ಗೋಲ್ಡ್ ಕಾರ್ಡ್ ವೀಸಾ ಪಡೆದು ಬರುವವರು 'ಶ್ರೀಮಂತರಾಗಿರುತ್ತಾರೆ, ಅವರು ಯಶಸ್ಸು ಕಾಣುತ್ತಾರೆ, ಅವರು ಭಾರಿ ಮೊತ್ತ ಖರ್ಚು ಮಾಡುತ್ತಾರೆ, ದೊಡ್ಡ ಮೊತ್ತವನ್ನು ತೆರಿಗೆ ರೂಪದಲ್ಲಿ ಪಾವತಿಸುತ್ತಾರೆ ಮತ್ತು ಬಹಳಷ್ಟು ಜನರಿಗೆ ಉದ್ಯೋಗ ನೀಡುತ್ತಾರೆ. ಇದು ಬಹಳ ಯಶಸ್ಸು ಕಾಣುತ್ತದೆ ಎಂಬುದು ನಮ್ಮ ಭಾವನೆ' ಎಂದು ಟ್ರಂಪ್ ಅವರು ಹೇಳಿದ್ದಾರೆ.

ಟ್ರಂಪ್ ಅವರ 'ಗೋಲ್ಡ್ ಕಾರ್ಡ್' ವೀಸಾ ವ್ಯವಸ್ಥೆಯು 'ಇಬಿ–5' ವೀಸಾ ವ್ಯವಸ್ಥೆಯ ಬದಲಿಗೆ ಎರಡು ವಾರಗಳಲ್ಲಿ ಜಾರಿಗೆ ಬರಲಿದೆ ಎಂದು ಅಮೆರಿಕದ ವಾಣಿಜ್ಯ ಸಚಿವ ಹೊವಾರ್ಡ್ ಲುಟ್ನಿಕ್ ಹೇಳಿದ್ದಾರೆ. ಕನಿಷ್ಠ 10 ಜನರನ್ನು ನೇಮಕ ಮಾಡಿಕೊಂಡಿರುವ, ಕಂಪನಿಗಾಗಿ 1 ಮಿಲಿಯನ್ ಡಾಲರ್ (ಅಂದಾಜು ₹8.70 ಕೋಟಿ) ವೆಚ್ಚ ಮಾಡುವವರಿಗೆ ಇಬಿ-5 ವೀಸಾ ನೀಡಲಾಗುತ್ತದೆ.

ಗೋಲ್ಡ್ ಕಾರ್ಡ್ ವೀಸಾ ವ್ಯವಸ್ಥೆಯು ವಾಸ್ತವದಲ್ಲಿ ಗ್ರೀನ್ ಕಾರ್ಡ್ ಇದ್ದಂತೆ. ಅಂದರೆ ಅಮೆರಿಕದಲ್ಲಿ ಶಾಶ್ವತವಾಗಿ ನೆಲಸುವ ಅನುಮತಿ ಸಿಗುತ್ತದೆ. ಇದು ಹೂಡಿಕೆದಾರರು ಅಮೆರಿಕದಲ್ಲಿ ತೊಡಗಿ ಸಬೇಕಿರುವ ಮೊತ್ತವನ್ನು ಹೆಚ್ಚಿಸುತ್ತದೆ ಎಂದು ಲುಟ್ನಿಕ್ ತಿಳಿಸಿದ್ದಾರೆ.

ಕೊರತೆ ಭರ್ತಿ ಮಾಡಿಕೊಳ್ಳಲು 1 ಕೋಟಿ ಗೋಲ್ಡ್ ಕಾರ್ಡ್ ಮಾರಾಟ ಮಾಡುವ ಸಾಧ್ಯತೆ ಇದೆ ಎಂದು ಟ್ರಂಪ್ ಹೇಳಿದ್ದಾರೆ.

ಅಕ್ರಮ ವಲಸಿಗರ ನೋಂದಣಿ

ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿರುವ ಪ್ರತಿ ವ್ಯಕ್ತಿಯ ಹೆಸರು ನೋಂದಾಯಿಸುವ ಕೆಲಸವನ್ನು ಟ್ರಂಪ್ ನೇತೃತ್ವದ ಆಡಳಿತವು ಆರಂಭಿಸಿದೆ. ಅಕ್ರಮವಾಗಿ ನೆಲಸಿರುವವರು ತಾವಾಗಿಯೇ ಹೆಸರು ನೋಂದಾಯಿಸಿಕೊಳ್ಳದೆ ಇದ್ದರೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ವಲಸೆ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮವಾಗಿ ನೆಲಸಿರುವ ಪ್ರತಿ ವ್ಯಕ್ತಿಯೂ ತನ್ನ ಬೆರಳಚ್ಚು, ವಿಳಾಸವನ್ನು ಒದಗಿಸಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ. 14 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಾಗಿರುವ ಪ್ರತಿಯೊಬ್ಬರಿಗೂ ಇದು ಅನ್ವಯವಾಗುತ್ತದೆ.

'ಹೊರಗಿನವರು ಹೆಸರು ನೋಂದಾಯಿಸಲು ವಿಫಲರಾದಲ್ಲಿ ದಂಡ ಅಥವಾ ಜೈಲು ಶಿಕ್ಷೆ ಅಥವಾ ಅವೆರಡೂ ಶಿಕ್ಷೆಗಳಿಗೆ ಗುರಿಯಾಗಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಲಾಗಿದೆ.

ಬ್ಯಾಡರಹಳ್ಳಿಯ ಕಾಳಿಕಾನಗರದಲ್ಲಿ ಘಟನೆ • ಆರು ವರ್ಷದ ಮಗು ಮನೆಯಲ್ಲಿದ್ದ ವೇಳೆಯೇ ಕೃತ್ಯ

ಉಸಿರುಗಟ್ಟಿಸಿ ಪತ್ನಿಯ ಕೊಲೆ: ಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿಂಬು ಹಾಗೂ ಬೆಡ್‌ಶೀಟ್‌ನಿಂದ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ಪತಿಯೂ ಆತ್ಮಹತ್ಯೆ ಮಾಡಿಕೊಂಡ ಘಟನೆ ಬ್ಯಾಡರಹಳ್ಳಿಯ ಕಾಳಿಕಾನಗರದಲ್ಲಿ ಬುಧವಾರ ನಡೆದಿದೆ.

ಜಿ.ಮಮತಾ (32) ಕೊಲೆಯಾದವರು. ಅವರ ಪತಿ ಸುರೇಶ್(40) ಎಂಬಾತ ಕೃತ್ಯ ಎಸಗಿದ ಬಳಿಕ ಅದೇ ಮನೆಯಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ದಂಪತಿಗೆ ಆರು ವರ್ಷ ಹಾಗೂ 13 ವರ್ಷದ ಇಬ್ಬರು ಮಕ್ಕಳಿದ್ದಾರೆ. ಆರು ವರ್ಷದ ಮಗು ಮನೆಯಲ್ಲಿದ್ದ ವೇಳೆಯೇ ಕೃತ್ಯ ಎಸಗಲಾಗಿದೆ. ಜಿ.ಮಮತಾ ಅವರ ತಾಯಿ ರುಕ್ಮಿಣಿ ಅವರು ದೂರು ನೀಡಿದ್ದು, ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅಶ್ಲೀಲ ವಿಡಿಯೊ ತೋರಿಸುತ್ತಿದ್ದ’

‘ತನ್ನ ಮೊಬೈಲ್‌ನಲ್ಲಿ ಪತ್ನಿಗೆ ಸುರೇಶ್ ಅಶ್ಲೀಲ ವಿಡಿಯೊ ತೋರಿಸುತ್ತಿದ್ದ. ಇದೇ ಕಾರಣಕ್ಕೆ ದಂಪತಿ ಮಧ್ಯೆ ವೈಮನಸ್ಸು ಉಂಟಾಗಿತ್ತು. ಪತಿಯ ನಡವಳಿಕೆಯಿಂದ ಮಮತಾ ಬೇಸರ ಮಾಡಿಕೊಂಡಿದ್ದಳು. ಅಲ್ಲದೇ ಆಕೆ ಕೆಲಸ ಮಾಡುತ್ತಿದ್ದ ಸ್ಥಳಕ್ಕೂ ತೆರಳಿ ಸುರೇಶ್ ಕಿರುಕುಳ ನೀಡುತ್ತಿದ್ದ’ ಎಂದು ಕುಟುಂಬಸ್ಥರು ದೂರಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ಸುರೇಶ್ 14 ವರ್ಷಗಳ ಹಿಂದೆ ಮಮತಾ ಅವರನ್ನು ಮದುವೆಯಾಗಿದ್ದ. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಕೆಲವು ವರ್ಷ ನೆಲಸಿದ್ದ ದಂಪತಿ, ನಂತರ ಬೆಂಗಳೂರಿಗೆ ಬಂದಿದ್ದರು. ನಗರದ ತಿಗಳರಪಾಳ್ಯದ ಬಾಡಿಗೆಯ ಮನೆಯಲ್ಲಿ ನೆಲಸಿದ್ದರು. ಆರಂಭದಲ್ಲಿ ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ ಸುರೇಶ್, ಎರಡು ತಿಂಗಳಿಂದ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

‘ಕೆಲಸಕ್ಕೆ ಹೋಗದೇ ಪತ್ನಿಯ ಜತೆಗೆ ನಿತ್ಯ ಸುರೇಶ್ ಗಲಾಟೆ ಮಾಡುತ್ತಿದ್ದ.

ಅಪರಾಧ ಸುದ್ದಿ

ಹಲವು ಬಾರಿ ಬುದ್ಧಿ ಹೇಳಿದ್ದರೂ ಬದಲಾವಣೆ ಆಗಿರಲಿಲ್ಲ. ಸುರೇಶ್‌ನ ತಂದೆ ಸೋಮವಾರ ಮನೆಗೆ ಬಂದು ಬುದ್ಧಿಮಾತು ಹೇಳಿದ್ದರು. ಅಂದು ರಾತ್ರಿ ಮನೆಯಿಂದ ಹೊರಹೋಗಿದ್ದ ಆತ ವಾಪಸ್ ಬಂದಿರಲಿಲ್ಲ. ಬುಧವಾರ ಬೆಳಿಗ್ಗೆ ಮನೆಗೆ ವಾಪಸ್ ಬಂದು ಕೃತ್ಯ ಎಸಗಿದ್ದಾನೆ’ ಎಂದು ರುಕ್ಮಿಣಿ ದೂರು ನೀಡಿದ್ದಾರೆ.

ಅಜ್ಜಿಗೆ ಕರೆ ಮಾಡಿದ್ದ ಮೊಮ್ಮಗ: ಸುರೇಶ್ ಮನೆಯ ಸಮೀಪದಲ್ಲೇ ರುಕ್ಮಿಣಿ ಅವರು ವಾಸವಿದ್ದರು. ಬುಧವಾರ ಬೆಳಿಗ್ಗೆ 11.30ರ ಸುಮಾರಿಗೆ ಅಜ್ಜಿಗೆ ಕರೆ ಮಾಡಿದ್ದ ಆರು ವರ್ಷದ ಮಗು, ‘ಅಮ್ಮ ಮಾತನಾಡುತ್ತಿಲ್ಲ. ತಕ್ಷಣವೇ ಬನ್ನಿ’ ಎಂದು ಮನವಿ ಮಾಡಿದ್ದ. ಅಜ್ಜಿ ಬಂದು ನೋಡುವಾಗ ಮನೆಯ ಬಾಗಿಲು ಹಾಕಿತ್ತು. ಬಾಗಿಲು ಒಡೆದು ಒಳಗೆ ಹೋಗಿ ನೋಡಿದಾಗ ಮಮತಾ ಉಸಿರಾಡುತ್ತಿರಲಿಲ್ಲ. ಮೂಗಿನಿಂದ ರಕ್ತ ಬಂದಿತ್ತು. ಸುರೇಶ್ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿದ್ದು ಕಂಡುಬಂದಿತ್ತು ಎಂದು ಮೂಲಗಳು ಹೇಳಿವೆ.

ವೃದ್ಧ ದಂಪತಿ ಕೈ–ಕಾಲು ಕಟ್ಟಿ ಹಾಕಿ ದರೋಡೆ

ಬೆಂಗಳೂರು: ವೃದ್ಧ ದಂಪತಿ ವಾಸವಿದ್ದ ಮನೆಗೆ ನುಗ್ಗಿ, ಕೈ-ಕಾಲುಗಳನ್ನು ಕಟ್ಟಿ ದರೋಡೆ ಮಾಡಿದ್ದ ಮೂವರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಾದಗಿರಿಯ ಶಿವು ರಾಥೋಡ್(32), ರಮೇಶ್(30) ಮತ್ತು ಸಚಿನ್(34) ಬಂಧಿತರು.

ಫೆಬ್ರುವರಿ 14ರಂದು ಬಿ.ಕೆ.ಲೇಔಟ್‌ನ ತಿಂಡ್ಲು ನಿವಾಸಿ ಚಂದ್ರಶೇಖರ್ ಮತ್ತು ಸಾವಿತ್ರಮ್ಮ ದಂಪತಿ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿದ್ದರು. ದಂಪತಿಗೆ ಮೂವರು ಹೆಣ್ಣು ಮಕ್ಕಳಿದ್ದು, ಎಲ್ಲರನ್ನೂ ಮದುವೆ ಮಾಡಿಕೊಟ್ಟಿದ್ದರು. ವೃದ್ಧ ದಂಪತಿ ಮಾತ್ರ ಮನೆಯಲ್ಲಿ ನೆಲಸಿದ್ದರು.

ಪುತ್ರಿಯೊಬ್ಬರ ಮನೆಯ ಕಾರು ಚಾಲಕನಾಗಿದ್ದ ಶಿವು ರಾಥೋಡ್, ದಂಪತಿ ಬಗ್ಗೆ ತಿಳಿದುಕೊಂಡಿದ್ದ. ಕೆಲವು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದ ಆರೋಪಿ, ಫೆ.14ರಂದು ತನ್ನ ಸಹಚರರ ಜತೆಗೆ ಬೆಂಗಳೂರಿಗೆ ಬಂದಿದ್ದ. ಹಣ್ಣು ಕೊಡುವ ನೆಪದಲ್ಲಿ ವೃದ್ಧರ ಮನೆಗೆ ಆರೋಪಿ ಬಂದಿದ್ದ. ಆರಂಭದಲ್ಲಿ ಅವರ ಆರೋಗ್ಯ ವಿಚಾರಿಸಿದ್ದ. ನಂತರ, ಏಕಾಏಕಿ ಮುಂಬಾಗಿಲು ಮುಚ್ಚಿ, ಸಹಚರರ ನೆರವಿನಿಂದ ದಂಪತಿಯ ಕೈ-ಕಾಲು ಕಟ್ಟಿ ಶೌಚಾಲಯದಲ್ಲಿ ಕೂಡಿಹಾಕಿ ಮನೆಯಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಸ್ವಲ್ಪ ಸಮಯದ ನಂತರ ಹಗ್ಗ ಬಿಚ್ಚಿಕೊಂಡು ಹೊರಬಂದಿದ್ದ ದಂಪತಿ ಕರೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

‘ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಗಳ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಮದ್ಯ ಸೇವಿಸಲು ಹಣ ಕೇಳಿದ್ದ ಆರೋಪಿ: ಬಂಧನ

ಹಣ ನೀಡದ್ದಕ್ಕೆ ಮಹಿಳೆಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಆನಂದ್

ಬೆಂಗಳೂರು: ಮದ್ಯ ಸೇವಿಸಲು ಹಣ ನೀಡಲಿಲ್ಲ ಎನ್ನುವ ಕಾರಣಕ್ಕೆ ಮಹಿಳೆಗೆ ಚಾಕುವಿನಿಂದ ಇರಿದಿದ್ದ ಆನಂದ್ ಎಂಬ ಆರೋಪಿಯನ್ನು ಕೊತ್ತನೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಠಾಣಾ ವ್ಯಾಪ್ತಿಯ ಬಿಳಿಶಿವಾಲೆ ಬಳಿ ನಾಗಲಕ್ಷ್ಮಿ ಅವರು ಸೋಮವಾರ ಸಂಜೆ ಕೆ.ಆರ್. ಪುರಕ್ಕೆ ತೆರಳಲು ಬಸ್‌ಗಾಗಿ ಕಾಯುತ್ತಿದ್ದರು. ನಾಗಲಕ್ಷ್ಮಿ ಅವರ ಬಳಿ ಬಂದಿದ್ದ ಆರೋಪಿ, ಹಣ ಕೊಡುವಂತೆ ಕೇಳಿದ್ದ. ಅಪರಿಚಿತ ವ್ಯಕ್ತಿಗೆ ನಾಗಲಕ್ಷ್ಮಿ ಅವರು ಹಣ ನೀಡಿರಲಿಲ್ಲ. ಆಗ ಅವರನ್ನು ನಿಂದಿಸಿ ಅಲ್ಲಿಂದ ಆರೋಪಿ ತೆರಳಿದ್ದ. ಕೆಲವೇ ಕ್ಷಣದಲ್ಲಿ ಚಾಕು ಸಹಿತ ಪ್ರತ್ಯಕ್ಷನಾದ ಆನಂದ್, ಮಹಿಳೆಗೆ ಇರಿದಿದ್ದಾನೆ. ಇದರಿಂದ ಮಹಿಳೆಯ ಎಡಭಾಗದ ಕಿವಿ ಬಳಿ ಗಾಯವಾಗಿತ್ತು. ಸ್ಥಳದಲ್ಲಿದ್ದವರು ಮಹಿಳೆಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ಇರಿತಕ್ಕೆ ಒಳಗಾದ ನಾಗಲಕ್ಷ್ಮಿ ಅವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

‘ಆರೋಪಿಗೆ ಮದ್ಯ ಸೇವಿಸುವ ಅಭ್ಯಾಸವಿತ್ತು. ಬಸ್ ನಿಲ್ದಾಣಗಳಲ್ಲಿ ನಿಂತಿದ್ದವರು, ಪಾದಚಾರಿಗಳು ಹಾಗೂ ಬೈಕ್ ಸವಾರರನ್ನು ಅಡ್ಡಗಟ್ಟಿ ಹಣ ಕೇಳುತ್ತಿದ್ದ. ಅದೇ ರೀತಿ ನಾಗಲಕ್ಷ್ಮಿ ಅವರ ಬಳಿಯೂ ಹಣ ಕೇಳಿದ್ದಾನೆ. ಅವರು ಹಣ ನೀಡಲು ನಿರಾಕರಿಸಿದ್ದಕ್ಕೆ ಚಾಕು ತಂದು ಇರಿದಿದ್ದಾನೆ. ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಾದಕ ವಸ್ತುಗಳ ಮಾರಾಟ: ಆರೋಪಿ ವಶಕ್ಕೆ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿ ಇಮ್ರಾನ್(30) ಎಂಬಾತನನ್ನು ಶೇಷಾದ್ರಿಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ 7 ಕೆ.ಜಿ. ಗಾಂಜಾ ಹಾಗೂ ಬೈಕ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯು ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾನೆ ಎನ್ನುವ ಖಚಿತ ಮಾಹಿತಿ ಬಂದಿತ್ತು. ಅದನ್ನು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ಮಹಾರಾಷ್ಟ್ರದಿಂದ ಗಾಂಜಾವನ್ನು ತಂದು ಮಾರಾಟ ಮಾಡುತ್ತಿದ್ದೆ ಎಂಬುದಾಗಿ ಒಪ್ಪಿಕೊಂಡಿದ್ದಾನೆ. ವಿದ್ಯಾರ್ಥಿಗಳು, ಪಿ.ಜಿಯಲ್ಲಿ ನೆಲಸಿದ್ದದವರಿಗೆ ಗಾಂಜಾವನ್ನು ಪೂರೈಕೆ ಮಾಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ಬಂದ ಹಣದಲ್ಲಿ ಆರೋಪಿಯು ವಿಲಾಸಿ ಜೀವನ ನಡೆಸುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮದುವೆ ನೆಪದಲ್ಲಿ ₹60 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಆಗುವುದಾಗಿ ಯುವತಿಯನ್ನು ನಂಬಿಸಿ ಆಕೆಯಿಂದ ₹60 ಲಕ್ಷ ಪಡೆದು ವಂಚಿಸಿದ ಪ್ರಕರಣದ ಸಂಬಂಧ ಮೈಕೋ ಲೇಔಟ್ ಠಾಣೆಗೆ ದೂರು ನೀಡಲಾಗಿದೆ.

ಆರೋಪಿ ಶಿವಲಿಂಗೇಶ್ ಎಂಬಾತ 2022ರ ಡಿಸೆಂಬರ್ ನಲ್ಲಿ ‘ಜೀವನ್ ಸಾಥಿ ಡಾಟ್ ಕಾಮ್’ನಲ್ಲಿ ಯುವತಿಗೆ ಪರಿಚಯವಾಗಿದ್ದ. ಇಬ್ಬರೂ ಭೇಟಿಯಾಗಿ ಮದುವೆಯಾಗಲು ನಿರ್ಧರಿಸಿದ್ದರು. ಈ ಮಧ್ಯೆ ತನ್ನ ತಾಯಿಗೆ ಆರೋಗ್ಯ ಸಮಸ್ಯೆ ಇದೆ. ಚಿಕಿತ್ಸೆಗೆ ಹಣ ಬೇಕೆಂದು ಆರೋಪಿ ತಿಳಿಸಿದ್ದ. ಆರೋಪಿಯ ಮಾತು ನಂಬಿದ್ದ ಯುವತಿ ಹಂತ ಹಂತವಾಗಿ ಹಣ ನೀಡಿದ್ದಳು ಎಂದು ಮೂಲಗಳು ತಿಳಿಸಿವೆ.

ಕೆಲವು ತಿಂಗಳ ಬಳಿಕ ಆರೋಪಿಯ ಹಿನ್ನೆಲೆಯನ್ನು ಯುವತಿ ಪರಿಶೀಲಿಸಿದ್ದರು. ಆಗ ಬೇರೆಯವರಿಂದಲೂ ಹಣ ಪಡೆದು ವಂಚಿಸಿರುವುದು ಯುವತಿಗೆ ಗೊತ್ತಾಗಿತ್ತು.

ಕುಟುಂಬಸ್ಥರೇ ಹಾಕಿದ್ದ ಪೋಸ್ಟ್: ‘ಶಿವಲಿಂಗೇಶ್‌ಗೆ ಕ್ಯಾಸಿನೊಕ್ಕೆ ಹೋಗುವ ಅಭ್ಯಾಸವಿದೆ. ತಾಯಿಗೆ ಅನಾರೋಗ್ಯವಿದೆ ಎಂದು ಸುಳ್ಳು ಹೇಳಿ ಹಲವರಿಂದ ಹಣ ವಸೂಲಿ ಮಾಡಿದ್ದಾನೆ. ಆತನಿಗೆ ಯಾರೂ ಹಣ ನೀಡಬೇಡಿ’ ಎಂದು ಆತನ ಕುಟುಂಬಸ್ಥರೇ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದ್ದರು. ಇದನ್ನು ಗಮನಿಸಿದ ಯುವತಿ, ಮೈಕೋಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬಸವ ಪ್ರತಿಮೆ; ಉನ್ನತ ಮಟ್ಟದ ತನಿಖೆಗೆ ಮನವಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ನಗರದ ಮುರುಘಾ ಮಠದ ಹಿಂಭಾಗದ ಜಾಗದಲ್ಲಿ ಬೃಹತ್ ಬಸವ ಪ್ರತಿಮೆ ನಿರ್ಮಾಣ ಸಂಬಂಧ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಬಳಕೆಯಲ್ಲಿ ಸ್ಪಷ್ಟತೆ ಇಲ್ಲ. ಸರ್ಕಾರ ಈ ಕುರಿತಂತೆ ಉನ್ನತ ಮಟ್ಟದ ತನಿಖೆ ನಡೆಸಬೇಕು’ ಎಂದು ಕೋರಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಪ್ರತಿಮೆ ನಿರ್ಮಾಣಕ್ಕೆ ಸರ್ಕಾರ ಬಿಡುಗಡೆ ಮಾಡಿದ್ದ ₹35 ಕೋಟಿ ಮೊತ್ತ ದುರ್ಬಳಕೆಯಾಗಿದೆ ಎಂಬ ದೂರಿಗೆ ಸಂಬಂಧಿಸಿದ ಎಡಿಸಿ ವರದಿ ಆಧರಿಸಿ ಜಿಲ್ಲಾಧಿಕಾರಿಯವರು ಉನ್ನತ ಮಟ್ಟದ ತನಿಖೆಗೆ ಕೋರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಹಡಗು ನಿರೋಧಕ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ(ಪಿಟಿಐ): ನೌಕಾಪಡೆಗಾಗಿ ಅಭಿವೃದ್ಧಿಪಡಿಸಲಾಗಿರುವ ಹಡಗು ನಿರೋಧಕ ಕ್ಷಿಪಣಿಯ (ಎನ್‌ಎಎಸ್‌ಎಂ–ಎಸ್‌ಆರ್) ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಚಾಂದಿಪುರದ ಕರಾವಳಿಯಲ್ಲಿ ಯಶಸ್ವಿಯಾಗಿ ನೆರವೇರಿ ಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ.

‘ನೌಕಾಪಡೆಯ ಹೆಲಿಕಾಪ್ಟರ್‌ನಿಂದ ಈ ಕ್ಷಿಪಣಿಯ (ಎನ್‌ಎಎಸ್‌ಎಂ–ಎಸ್‌ಆರ್) ಉಡ್ಡಯನ ಪರೀಕ್ಷೆಯನ್ನು ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ(ಐಟಿಆರ್) ಮಂಗಳವಾರ ನಡೆಸಲಾಯಿತು. ನಿರ್ದೇಶಿತ ಹಡಗನ್ನು ಕ್ಷಿಪಣಿ ಕರಾರುವಾಕ್ಕಾಗಿ ಧ್ವಂಸಗೊಳಿಸಿತು’ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ, ಈ ವರ್ಗದ ಮೊದಲ ಕ್ಷಿಪಣಿಯಾಗಿರುವ ಇದು ಹಲವು ಅತ್ಯಾಧುನಿಕ ಸಾಧನಗಳನ್ನು ಒಳಗೊಂಡಿದೆ.

ಸುದ್ದಿ 2 ನಿಮಿಷ

ಕ್ರಮ ಜರುಗಿಸಲು ಪೂರ್ವಾನುಮತಿ ಕಡ್ಡಾಯ: ಸುಪ್ರೀಂ ಕೋರ್ಟ್

ನವದೆಹಲಿ: ಸಾರ್ವಜನಿಕ ಸೇವಕರು ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಎಸಗಿದ ಕೃತ್ಯಗಳ ವಿಚಾರವಾಗಿ ಕಾನೂನಿನ ಅಡಿ ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿದ್ದರೆ ಮಾತ್ರ ಅಂತಹ ಪ್ರಕರಣಗಳನ್ನು ನ್ಯಾಯಾಲಯಗಳು ಪರಿಗಣನೆಗೆ ತೆಗೆದುಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಪರಿಭಾವಿತ ಅನುಮತಿ’ ಎನ್ನುವ ಪರಿಕಲ್ಪನೆಯು ದೇಶದ ಕಾನೂನಿನಲ್ಲಿ ಇನ್ನೂ ಅಡಕವಾಗಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಸಕ್ಷಮ ಪ್ರಾಧಿಕಾರ ಅನುಮತಿ ನೀಡಲು ವಿಳಂಬ ಮಾಡಿದಲ್ಲಿ, ಪರಿಭಾವಿತ ಅನುಮತಿಯ ಮೊರೆ ಹೋಗಬಹುದು ಎಂಬ ವಾದವನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎಸ್.ಸಿ. ಶರ್ಮ ಅವರು ಇರುವ ವಿಭಾಗೀಯ ಪೀಠವು ತಿರಸ್ಕರಿಸಿದೆ.

‘ಅಪರಾಧ ದಂಡಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 197ರಲ್ಲಿ ಪರಿಭಾವಿತ ಅನುಮತಿಯ ಪರಿಕಲ್ಪನೆ ಇಲ್ಲ’ ಎಂದು ಪೀಠವು ಹೇಳಿದೆ.

ಎಫ್‌ಎಸ್‌ಎಸ್‌ಎಐ ನಿರ್ದೇಶಕಿ ಆಗಿದ್ದ ಸುನೀತಿ ತೊತೆಜಾ ಅವರ ವಿರುದ್ಧ ದಾಖಲಾಗಿದ್ದ ದೋಷಾರೋಪ ಪಟ್ಟಿ, ಸಮನ್ಸ್ ಆದೇಶ ಮತ್ತು ಇತರ ಕ್ರಮಗಳನ್ನು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲ ಎಂಬ ಕಾರಣಕ್ಕೆ ಪೀಠವು ಫೆ. 25ರಂದು ರದ್ದುಪಡಿಸಿದೆ.

ವಿನೀತ್ ನಾರಾಯಣ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಆಧರಿಸಿ ಉತ್ತರ ಪ್ರದೇಶ ಸರ್ಕಾರವು, ಕಾನೂನಿನ ಕ್ರಮ ಕೈಗೊಳ್ಳಲು ಅನುಮತಿ ಕೋರಿದಾಗ ಸಕ್ಷಮ ಪ್ರಾಧಿಕಾರವು 90 ದಿನಗಳ ಕಾಲಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ವಾದಿಸಿತ್ತು.

ಜಿಮ್ ತರಬೇತುದಾರ ಸಾವು

ಬೆಂಗಳೂರು: ಯಶವಂತಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಜೆ.ಪಿ ಪಾರ್ಕ್ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಜಿಮ್ ತರಬೇತುದಾರ ಎಂ.ಅರುಣ್ (30) ಅವರು ಮೃತಪಟ್ಟಿದ್ದಾರೆ.

ಯಶವಂತಪುರ ಬಿ.ಕೆ.ನಗರದ ಲಚ್ಚಪ್ಪ ಕಾಲೊನಿಯ ನಿವಾಸಿ ಅರುಣ್ ತಮ್ಮ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ತೆರಳುತ್ತಿದ್ದರು. ಹೆಲ್ಮೆಟ್ ಧರಿಸಿರಲಿಲ್ಲ. ಜೆ.ಪಿ ಪಾರ್ಕ್ ಕಡೆಯಿಂದ ಚೌಡೇಶ್ವರಿ ಬಸ್ ನಿಲ್ದಾಣದ ಕಡೆಗೆ ವೇಗವಾಗಿ ತೆರಳುವಾಗ ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದೆ. ಆಗ ಸವಾರನನ್ನು ಬೈಕ್ ಸ್ವಲ್ಪ ದೂರಕ್ಕೆ ಎಳೆದೊಯ್ದಿದೆ. ಅರುಣ್ ಅವರ ಸೊಂಟ, ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಸ್ಥಳದಲ್ಲಿದ್ದ ಸಾರ್ವಜನಿಕರೇ ಅವರನ್ನು ಆಟೊದಲ್ಲಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಷ್ಟರಲ್ಲಿ ಅವರು ಮೃತಪಟ್ಟಿದ್ದರು ಎಂದು ಮೂಲಗಳು ಹೇಳಿವೆ.

‘ಅಪಘಾತದಿಂದ ಬೈಕ್ ಸಂಪೂರ್ಣ ಜಖಂಗೊಂಡಿದೆ. ಮೃತ ಅರುಣ್ ಅವರ ತಂದೆ ಎಂ.ಮುರುಗನಂದಂ ಅವರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಪರಶುರಾಮ್‌ಗೆ 'ಕರೀಂಖಾನ್ ಸೌಹಾರ್ದ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಜೈ ಕರ್ನಾಟಕ ಸಂಘ ಬೆಳ್ಳೇಕೆರೆ ನೀಡುವ 'ಎಸ್.ಕೆ. ಕರೀಂಖಾನ್ ಸೌಹಾರ್ದ ಪ್ರಶಸ್ತಿ'ಗೆ ಹರಪನಹಳ್ಳಿಯ ಬಿ.ಪರಶುರಾಮ್ ಆಯ್ಕೆಯಾಗಿದ್ದಾರೆ.

'ಅಮೃತ ಕಾವ್ಯ ಪ್ರಶಸ್ತಿ'ಗೆ ಕವಯಿತ್ರಿ ಸಂಘಮಿತ್ರೆ ಎಚ್.ಎಸ್. ಹಾಗೂ ಕವಿ ವಿಶಾಲ್ ಮ್ಯಾಸರ್ ಭಾಜನರಾಗಿದ್ದಾರೆ. ಹಿ.ಚಿ. ಬೋರಲಿಂಗಯ್ಯ, ಎಚ್.ಆರ್. ಸ್ವಾಮಿ ಹಾಗೂ ಚ.ಹ. ರಘುನಾಥ ಅವರನ್ನೊಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಮೂಡಲಪಾಯ ಯಕ್ಷಗಾನ ಹಾಗೂ ಆಧುನಿಕ ರಂಗಭೂಮಿಯಲ್ಲಿ ಸಾಧನೆ ಮಾಡಿರುವ ಪರಶುರಾಮ್, ಎರಡೂ ಪ್ರಕಾರಗಳಲ್ಲಿ ನಟ ಹಾಗೂ ನಿರ್ದೇಶಕರಾಗಿ ಹೆಸರು ಮಾಡಿದ್ದಾರೆ. ಹರಪನಹಳ್ಳಿಯಲ್ಲಿ 'ಸಮಸ್ತರು' ಎಂಬ ಸಾಂಸ್ಕೃತಿಕ ಸಂಘಟನೆಯನ್ನು ಕಟ್ಟಿ, ನಿರಂತರ ರಂಗ ಕಾಯಕ ಮುಂದುವರೆಸಿದ್ದಾರೆ.

ತಿಪಟೂರಿನವರಾದ ಸಂಘಮಿತ್ರೆ ಅವರು, ಇಂಗ್ಲಿಷ್ ಅಧ್ಯಾಪಕಿಯಾಗಿ ಮೈಸೂರಿನಲ್ಲಿ ನೆಲಸಿದ್ದಾರೆ. 'ಹಿಮಪಕ್ಷಿ' ಎಂಬ ಅಂತರ್ಜಾಲ ಪತ್ರಿಕೆಯನ್ನು ಸಂಪಾದಿಸುತ್ತಿದ್ದಾರೆ. ವಿಶಾಲ್ ಮ್ಯಾಸರ್ ಅವರು ಹೊಸಪೇಟೆಯವರು. ಚೀನಾದ ಬೀಜಿಂಗ್‌ನಲ್ಲಿ ನಡೆದ ಬ್ರಿಕ್ಸ್ ರಾಷ್ಟ್ರಗಳ ಯುವ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಮಾರ್ಚ್ 8ರಂದು ಸಂಜೆ 5 ಗಂಟೆಗೆ ಸಂಸ್ಥೆಯ ಪೂರ್ಣಚಂದ್ರ ತೇಜಸ್ವಿ ರಂಗಮಂದಿರ-ದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ವ್ಯವಸ್ಥಾಪಕ ಟ್ರಸ್ಟಿ ಪ್ರಸಾದ್ ರಕ್ಷಿದಿ ಹಾಗೂ ಕವಿ ಸುಬ್ಬು ಹೊಲೆಯಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾರಿಗೆ ಬೆಂಕಿ: ಚಾಲಕ ಪಾರು

ಬೆಂಗಳೂರು: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಗಾಣಿಗರಹಳ್ಳಿ ಲೇಔಟ್‌ನಲ್ಲಿ ಜಲ್ಲಿ ಸುರಿಯುವಾಗ ವಿದ್ಯುತ್ ತಂತಿ ತಾಗಿ ಟಿಪ್ಪರ್ ಲಾರಿ ಸುಟ್ಟು ಹೋಗಿದೆ. ಚಾಲಕ ಮತ್ತು ಸ್ಥಳದಲ್ಲಿದ್ದ ಕಾರ್ಮಿಕರು ಪಾರಾಗಿದ್ದಾರೆ.

ಗಾಣಿಗರಹಳ್ಳಿ ಲೇಔಟ್‌ನಲ್ಲಿ ಕಟ್ಟಡದ ಕಾಮಗಾರಿ ನಡೆಯುತ್ತಿದ್ದು, ಮಂಗಳವಾರ ರಾತ್ರಿ ಚಾಲಕ ಜಲ್ಲಿಯನ್ನು ತುಂಬಿಕೊಂಡು ಅಲ್ಲಿಗೆ ಬಂದಿದ್ದರು. ಜಲ್ಲಿ ಸುರಿಯುತ್ತಿದ್ದ ಸಂದರ್ಭದಲ್ಲಿ ಮೇಲಿದ್ದ ವಿದ್ಯುತ್ ತಂತಿ ಲಾರಿಗೆ ತಗುಲಿದ ಪರಿಣಾಮ ಬೆಂಕಿ ಹೊತ್ತಿಕೊಂಡಿತ್ತು.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ. 2ಕ್ಕೆ ಉತ್ತರ-ದಕ್ಷಿಣ ಸರಣಿ ಜುಗಲ್‌ಬಂದಿ

ಬೆಂಗಳೂರು: ವಿವಿಡ್ ಆರ್ಟ್ಸ್ ಮತ್ತು ಪಯೋನೀರ್ ಆರ್ಟ್ಸ್ ಎಜುಕೇಶನ್ ಸೊಸೈಟಿಯು ಮಾರ್ಚ್ 2ರಂದು ಸಂಜೆ 6.30ಕ್ಕೆ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ ಉತ್ತರ-ದಕ್ಷಿಣ ಸರಣಿಯ ಜುಗಲ್‌ಬಂದಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗಾಯಕರಾದ ಜಯತೀರ್ಥ ಮೇವುಂಡಿ ಮತ್ತು ಸಂದೀಪ್ ನಾರಾಯಣ್ ಅವರು ಜುಗಲ್‌ಬಂದಿ ನಡೆಸಲಿದ್ದಾರೆ. ಈ ಉತ್ತರ-ದಕ್ಷಿಣ ಸರಣಿಯು ಭಾರತದ ಶ್ರೀಮಂತ ಶಾಸ್ತ್ರೀಯ ಸಂಗೀತ ಪರಂಪರೆಯನ್ನು ಅನಾವರಣ ಮಾಡಲಿದೆ. ಟಿಕೆಟ್‌ಗಳು ಬುಕ್ ಮೈ ಶೋ ಪೋರ್ಟಲ್‌ನಲ್ಲಿ ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.

ಜಯತೀರ್ಥ ಮೇವುಂಡಿ ಮತ್ತು ಸಂದೀಪ್ ನಾರಾಯಣ್

'ಅಂಗವಿಕಲರಿಗೆ ಸಾಧನ ಸಲಕರಣೆ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗವಿಕಲರು ಸಾಧನ ಸಲಕರಣೆಗಳಿಗೆ ಕಾಯುವುದನ್ನು ತಪ್ಪಿಸಿ, ಅಗತ್ಯವಿದ್ದಾಗ ಸಾಧನ ಸಲಕರಣೆಗಳನ್ನು ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಅವರು ಅಂಗವಿಕಲರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಆಗ್ರಹಿಸಿದ್ದಾರೆ.

'ಅಂಗವಿಕಲರ ಪುನರ್ವಸತಿಗಾಗಿ 'ಸಾಧನ ಸಲಕರಣೆ ಯೋಜನೆ'ಯಡಿ ಊರುಗೋಲು, ಗಾಲಿ ಕುರ್ಚಿ ಸೇರಿದಂತೆ ವಿವಿಧ ಸಲಕರಣೆಗಳನ್ನು ₹15 ಸಾವಿರ ಮೌಲ್ಯದೊಳಗೆ ಒದಗಿಸಲು ಅವಕಾಶವಿದೆ. ಆದರೆ, ಈ ಯೋಜನೆಯನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸುತ್ತಿರುವುದರಿಂದ ವರ್ಷದ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕಾಗಿದೆ. ಟೆಂಡರ್ ಮೂಲಕ ಸಾಧನಗಳನ್ನು ಖರೀದಿಸಿ, ವಿತರಿಸಲಾಗುತ್ತದೆ. ಆದರೆ, ಪ್ರಕ್ರಿಯೆ ಪ್ರಾರಂಭವಾಗುವುದೇ ಫೆಬ್ರುವರಿ ತಿಂಗಳಲ್ಲಿ. ₹1 ಸಾವಿರ ಮೌಲ್ಯದ ಊರುಗೋಲಿಗೂ ಅರ್ಜಿ ಸಲ್ಲಿಸಿ, ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿಯಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ ಮುಕ್ತಾಯ ಆದಲ್ಲಿ ಸಾಧನ ಸಲಕರಣೆಗೆ ಮುಂದಿನ ವರ್ಷದವರೆಗೆ ಕಾಯಬೇಕಾಗಿದೆ. ಆದ್ದರಿಂದ ಯೋಜನೆಯನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸುವ ವ್ಯವಸ್ಥೆಯನ್ನು ಸ್ಥಗಿತಗೊಳಿಸಿ, ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ನೀಡಲು ಇಲಾಖೆ ಕ್ರಮ ಕೈಗೊಳ್ಳಬೇಕು' ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.





ಚೀನಾದ ನವಸಂಶೋಧನೆಗಳು!

> ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಅಪಾರ ಪ್ರಮಾಣದ ಹೂಡಿಕೆ ಹಾಗೂ ಬದ್ಧತೆಗಳಿಂದಾಗಿ ಹಲವು ವಿಸ್ಮಯಗಳ ಸೃಷ್ಟಿ ಚೀನಾದಲ್ಲಿ ಸಾಧ್ಯವಾಗಿದೆ.

ಚನ್ನಬಸಪ್ಪ ರೊಟ್ಟಿ

ಬಾಹ್ಯಾಕಾಶದಲ್ಲಿ ಚೀನಾ 'ಕೃತಕ ದ್ಯುತಿಸಂಶ್ಲೇಷಣೆ'!

ಇತ್ತೀಚೆಗೆ, 'ಟಿಯಾಂಗಾಂಗ್' ಬಾಹ್ಯಾಕಾಶ ನಿಲ್ದಾಣದಲ್ಲಿರುವ ಚೀನಾದ 'ಶೆನ್‌ಝೌ-19' ಬಾಹ್ಯಾಕಾಶ ನೌಕೆಯ ಸಿಬ್ಬಂದಿ 'ಕೃತಕ ದ್ಯುತಿಸಂಶ್ಲೇಷಣೆ' ತಂತ್ರಜ್ಞಾನ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದರು. ಈ ಅನ್ವೇಷಣೆಯು ಬಾಹ್ಯಾಕಾಶದಲ್ಲಿ ಆಮ್ಲಜನಕ ಮತ್ತು ರಾಕೆಟ್ ಇಂಧನ ಪದಾರ್ಥಗಳ ಉತ್ಪಾದನೆಗೆ ಅನುವು ಮಾಡಿಕೊಡುತ್ತದೆ. 2030ರ ವೇಳೆಗೆ ಯೋಜಿತ ಸಿಬ್ಬಂದಿಯೊಂದಿಗೆ ಚಂದ್ರನ ಮೇಲೆ ಇಳಿಯುವುದು ಸೇರಿದಂತೆ ಭವಿಷ್ಯದ ಕಾರ್ಯಾಚರಣೆಗಳಿಗೆ ಹೆಚ್ಚಿನ ಬೆಂಬಲ ಒದಗಿಸುತ್ತದೆ. 'ಕೃತಕ ದ್ಯುತಿಸಂಶ್ಲೇಷಣೆ' ಸಸ್ಯಗಳು ಸೂರ್ಯನ ಬೆಳಕು, ಇಂಗಾಲದ ಡೈಆಕ್ಸೈಡ್ ಮತ್ತು ನೀರನ್ನು ಆಮ್ಲಜನಕ ಮತ್ತು ಗ್ಲೂಕೋಸ್ ಆಗಿ ಪರಿವರ್ತಿಸಲು ಬಳಸುವ ನೈಸರ್ಗಿಕ ಪ್ರಕ್ರಿಯೆಯನ್ನು ಅನುಕರಿಸುತ್ತದೆ.

ಶೆನ್‌ಝೌ-19 ಸಿಬ್ಬಂದಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವು ಇಂಗಾಲದ ಡೈಆಕ್ಸೈಡ್ ಮತ್ತು ನೀರನ್ನು ಆಮ್ಲಜನಕ ಮತ್ತು ಹೈಡ್ರೋಕಾರ್ಬನ್ ಇಂಧನಗಳಾಗಿ ಪರಿವರ್ತಿಸಲು ಅರೆವಾಹಕ ವೇಗವರ್ಧಕಗಳನ್ನು ಬಳಸುತ್ತದೆ. ಈ ನವೀನ ವಿಧಾನವು ಶಕ್ತಿಯ ಬಳಕೆಯನ್ನು ಕಡಿಮೆ ಮಾಡುತ್ತದೆ, ಕೋಣೆಯ ಉಷ್ಣಾಂಶ ಮತ್ತು ಪ್ರಮಾಣಿತ ವಾತಾವರಣದ ಒತ್ತಡದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ವಿಶೇಷವಾಗಿ ವಿನ್ಯಾಸಗೊಳಿಸಲಾದ ಡ್ರಾಯರ್ ಆಕಾರದ ಸಾಧನವನ್ನು ಬಳಸಿಕೊಂಡು ಸಿಬ್ಬಂದಿ 12 ಪ್ರಯೋಗಗಳನ್ನು ನಡೆಸಿದರು. ಕೋಣೆಯ ಉಷ್ಣಾಂಶದಲ್ಲಿ ಇಂಗಾಲದ ಡೈಆಕ್ಸೈಡ್ ಪರಿವರ್ತನೆ, ಸೂಕ್ಷ್ಮ ಗುರುತ್ವಾಕರ್ಷಣೆಯಲ್ಲಿ ಅನಿಲ ಸಾಗಣೆ ಮತ್ತು ಬೇರ್ಪಡಿಕೆ ಮತ್ತು ಪ್ರತಿಕ್ರಿಯಾ ಉತ್ಪನ್ನಗಳ ನೈಜ-ಸಮಯದ ಪತ್ತೆ ಇವುಗಳಲ್ಲಿ ಸೇರಿವೆ.

ಈ ತಂತ್ರಜ್ಞಾನ ಬಾಹ್ಯಾಕಾಶ ಯಾತ್ರೆಗಳಿಗೆ ಬಹಳ ಮುಖ್ಯವಾಗಿದೆ. ದೀರ್ಘಾವಧಿಯ ಕಾರ್ಯಾಚರಣೆಗಳಿಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಭರವಸೆಯನ್ನು ಇದು ನೀಡಿದೆ. ಬಾಹ್ಯಾಕಾಶದಲ್ಲಿ ಆಮ್ಲಜನಕ ಮತ್ತು ಇಂಧನವನ್ನು ಉತ್ಪಾದಿಸುವ ಮೂಲಕ, ಗಗನಯಾತ್ರಿಗಳು ಭೂಮಿಯಿಂದ ಬರುವ ಸರಬರಾಜಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು. ಭವಿಷ್ಯದಲ್ಲಿ ದೂರದ ಆಕಾಶಕಾಯಗಳನ್ನು ಅನ್ವೇಷಿಸಲು ಮತ್ತು ಸಂಭಾವ್ಯ ಮಾನವ ವಸಾಹತುಗಳನ್ನು ಸ್ಥಾಪಿಸಲು ಈ ಸಾಮರ್ಥ್ಯವು ನಿರ್ಣಾಯಕವಾಗಲಿದೆ.

ಈ ಹಿಂದೆ, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ISS) ಉಸಿರಾಡುವ ಗಾಳಿಯನ್ನು ಉತ್ಪಾದಿಸಲು ಶಕ್ತಿ-ತೀವ್ರ ವಿಧಾನಗಳನ್ನು ಬಳಸಲಾಗಿತ್ತು. ನೀರನ್ನು ಹೈಡ್ರೋಜನ್ ಮತ್ತು ಆಮ್ಲಜನಕವಾಗಿ ವಿಭಜಿಸಲು ಅದು ಸೌರಫಲಕಗಳನ್ನು ಬಳಸಿಕೊಂಡಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಕೃತಕ ದ್ಯುತಿಸಂಶ್ಲೇಷಣೆ ವಿಧಾನವು ದೀರ್ಘಕಾಲೀನ ಕಾರ್ಯಾಚರಣೆಗಳಿಗೆ ಹೆಚ್ಚು ಪರಿಣಾಮಕಾರಿ ಮತ್ತು ಸುಸ್ಥಿರ ವಿಧಾನವಾಗಿ ಹೊರಹೊಮ್ಮಿದೆ.

ಭೂಮ್ಯಾತೀತ ಕೃತಕ ದ್ಯುತಿಸಂಶ್ಲೇಷಣೆಯ ಕುರಿತು ಚೀನಾದ ಸಂಶೋಧನೆಯು 2015ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯಡಿ ಬಾಹ್ಯಾಕಾಶ ನೌಕೆಗೆ ಪ್ರೊಪಲ್ಷನ್ ವ್ಯವಸ್ಥೆ ಒದಗಿಸುವ ಮೀಥೇನ್‌ನಂಥ ಇಂಧನಗಳನ್ನು ಉತ್ಪಾದಿಸುವ ಗುರಿಯನ್ನು ಸಂಶೋಧಕರು ಹೊಂದಿದ್ದಾರೆ.

'ಕೃತಕ ದ್ಯುತಿಸಂಶ್ಲೇಷಣೆ' ದೀರ್ಘಾವಧಿಯ ಬಾಹ್ಯಾಕಾಶ ಪ್ರಯಾಣದಲ್ಲಿ ಮಾನವನ ಬದುಕುವಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆಮ್ಲಜನಕ ಮತ್ತು ಇಂಧನದ ಸುಸ್ಥಿರ ಮೂಲವನ್ನು ರಚಿಸುವ ಮೂಲಕ, ಗಗನಯಾತ್ರಿಗಳು ಭೂಮಿಯಿಂದ ಮರುಪೂರೈಕೆ ಇಲ್ಲದೇ ಜೀವಾಧಾರಕ ವ್ಯವಸ್ಥೆಗಳನ್ನು ನಿರ್ವಹಿಸಬಹುದು.

ಪರಮಾಣು ಸಮ್ಮಿಳನದಲ್ಲಿ ಚೀನಾ ಗಮನಾರ್ಹ ಪ್ರಗತಿ

ಚೀನಾ ಇತ್ತೀಚೆಗೆ ಪರಮಾಣು ಸಮ್ಮಿಳನ ಸಂಶೋಧನೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದ್ದು, ಪ್ರಾಯೋಗಿಕ ಸುಧಾರಿತ ಸೂಪರ್‌ಕಂಡಕ್ಟಿಂಗ್ ಟೋಕಮಾಕ್ (EAST: Experimental Advanced Superconducting Tokamak) ಪ್ಲಾಸ್ಮಾವನ್ನು 1,000 ಸೆಕೆಂಡುಗಳ ಕಾಲ ಉಳಿಸಿಕೊಂಡಿದೆ. ಇದು 2023ರಲ್ಲಿ ಸ್ಥಾಪಿಸಲಾದ 403 ಸೆಕೆಂಡುಗಳ ಹಿಂದಿನ ದಾಖಲೆಯನ್ನು ಮೀರಿಸಿದೆ.

ಪರಮಾಣು ಸಮ್ಮಿಳನವು ಶಕ್ತಿಯನ್ನು ಬಿಡುಗಡೆ ಮಾಡಲು ಪರಮಾಣು ನ್ಯೂಕ್ಲಿಯಸ್‌ಗಳನ್ನು ವಿಲೀನಗೊಳಿಸುವ ಕಾರ್ಯತಂತ್ರವಾಗಿದೆ. ಪರಮಾಣುಗಳನ್ನು ವಿಭಜಿಸುವ ಪರಮಾಣು ವಿದಳನಕ್ಕಿಂತ ಭಿನ್ನವಾಗಿ, ಸಮ್ಮಿಳನವು ಕನಿಷ್ಠ ವಿಕಿರಣಶೀಲ ತ್ಯಾಜ್ಯವನ್ನು ಉತ್ಪಾದಿಸುತ್ತದೆ ಮತ್ತು ಹಸಿರುಮನೆ ಅನಿಲಗಳನ್ನು ಹೊರಸೂಸುವುದಿಲ್ಲ. ಹವಾಮಾನ ಬದಲಾವಣೆ ಹಾಗೂ ಜಾಗತಿಕ ಉಷ್ಣತೆ ಏರಿಕೆಯನ್ನು ಎದುರಿಸುವ ನಿಟ್ಟಿನಲ್ಲಿ ಮತ್ತು ಜಾಗತಿಕ ಇಂಧನ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಈ ಸಂಶೋಧನೆ ಗಮನಾರ್ಹ ಪ್ರಗತಿಯಾಗಿದೆ. ಪರಮಾಣು ಸಮ್ಮಿಳನ ಕನಿಷ್ಠ ಪರಿಸರ ಪ್ರಭಾವದೊಂದಿಗೆ ವಾಸ್ತವಿಕವಾಗಿ ಅನಿಯಮಿತ ಶಕ್ತಿಯನ್ನು ನೀಡುತ್ತದೆ. ಇದರಿಂದ ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆಯಾಗುತ್ತದೆ.

ಪರಮಾಣು ಸಮ್ಮಿಳನ ಸಂಶೋಧನೆಯಡಿ ಚೀನಾ ಗಣಿತ ಶಕ್ತಿಯನ್ನು ಉತ್ಪಾದಿಸುತ್ತಿರುವ ಪ್ರಕ್ರಿಯೆಯನ್ನು ಸಾಮಾನ್ಯವಾಗಿ ಚೀನಾ ಸೃಷ್ಟಿಸಿದ 'ಕೃತಕ ಸೂರ್ಯ' ಎಂದು ಕರೆಯಲಾಗುತ್ತದೆ. ಈ ಪ್ರಯೋಗವನ್ನು ಚೀನಾದ ಹೆಫೆಯಲ್ಲಿರುವ ಪ್ಲಾಸ್ಮಾ ಭೌತಶಾಸ್ತ್ರ ಸಂಸ್ಥೆಯಲ್ಲಿ ನಡೆಸಲಾಗದೆ. ಇಲ್ಲಿ ಸ್ಥಾಪಿಸಿರುವ ರಿಯಾಕ್ಟರ್ ಸೂರ್ಯನ ಪರಮಾಣು ಸಮ್ಮಿಳನ ಪ್ರಕ್ರಿಯೆಯನ್ನು ಪುನರಾವರ್ತಿಸಿ ಅಪಾರ ಪ್ರಮಾಣದ ಶಕ್ತಿಸೃಷ್ಟಿಸುವ ಗುರಿಯನ್ನು ಹೊಂದಿದೆ. ಚೀನಾ 2006ರಿಂದ ಕಾರ್ಯನಿರ್ವಹಿಸುತ್ತಿದ್ದು, ದಕ್ಷತೆ ಮತ್ತು ಸ್ಥಿರತೆಯನ್ನು ಸುಧಾರಿಸಲು ಹಾಗೂ ದೃಢೀಕರಿಸಲು ವ್ಯಾಪಕ ಪ್ರಯೋಗಗಳನ್ನು ನಡೆಸುತ್ತಿದೆ.

ಸಮ್ಮಿಳನ ಶಕ್ತಿ ಬಳಸಲು ಚೀನಾ 'ಟೋಕಮ್ಯಾಕ್' ಎಂಬ ಪ್ರಾಯೋಗಿಕ ಸಾಧನ ವಿನ್ಯಾಸಗೊಳಿಸಿದ್ದು, 'ಟೋಕಮ್ಯಾಕ್' ಸಮ್ಮಿಳನದ ಶಕ್ತಿಯನ್ನು ಶಾಖದ ರೂಪದಲ್ಲಿ ಹೀರಿಕೊಳ್ಳುತ್ತದೆ. ಇದು ಸಾಂಪ್ರದಾಯಿಕ ವಿದ್ಯುತ್ ಸ್ಥಾವರಗಳಂತೆಯೇ ವಿದ್ಯುತ್ ಉತ್ಪಾದಿಸಲಾಗುತ್ತದೆ. ಈ ತಂತ್ರಜ್ಞಾನದಲ್ಲಿ EAST ರಿಯಾಕ್ಟರ್ ಪ್ರಮುಖ ಪಾತ್ರ ವಹಿಸುತ್ತದೆ. ಚೀನಾ ದೇಶ 'HL-2A' ಮತ್ತು 'J-TEXT' ಸೇರಿದಂತೆ ಹಲವಾರು ಟೋಕಮ್ಯಾಕ್‌ಗಳನ್ನು ನಿರ್ವಹಿಸುತ್ತಿದೆ. ಚೀನಾದ ಅತಿದೊಡ್ಡ ಮತ್ತು ಸುಧಾರಿತ ಸಮ್ಮಿಳನ ಸಾಧನ HL-2M ಟೋಕಮ್ಯಾಕ್ ಅನ್ನು ಡಿಸೆಂಬರ್ 2020 ರಲ್ಲಿ ಯಶಸ್ವಿಯಾಗಿ ಚಾಲಿತಗೊಳಿಸಲಾಗಿದೆ.

ಚೀನಾ ಅಂತರರಾಷ್ಟ್ರೀಯ 'ಥರ್ಮೋನ್ಯೂಕ್ಲಿಯರ್ ಪ್ರಾಯೋಗಿಕ ರಿಯಾಕ್ಟರ್' (ITER: International Thermonuclear Experimental Reactor) ತಯಾರಿಕೆಯ ಯೋಜನೆಯಲ್ಲೂ ಸಕ್ರಿಯವಾಗಿದ್ದು ಮಹತ್ವದ ಕೊಡುಗೆಗಳನ್ನು ನೀಡಿದೆ. ❖

'ಡೀಪ್‌ಸೀಕ್' ಸಂಚಲನ

ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನದಲ್ಲಿ ಸಂಚಲನ ಸೃಷ್ಟಿಸಿರುವ ಚೀನಾದ 'ಡೀಪ್‌ಸೀಕ್' ಸ್ಟಾರ್ಟ್‌ಅಪ್, ಇಡೀ ಜಗತ್ತೇ ತನ್ನತ್ತ ನೋಡುವಂತೆ ಮಾಡಿದೆ. 'ಡೀಪ್‌ಸೀಕ್' ಅಭಿವೃದ್ಧಿ ಪಡಿಸಿರುವ 'ಡೀಪ್‌ಸೀಕ್ R1' ಎಂಬ ಜನರೇಟಿವ್ AI ಮಾದರಿ (ಮಾಡೆಲ್) ಅಮೆರಿಕದ ಓಪನ್ AIನ ಚಾಟ್ GPT ಸೇರಿದಂತೆ ದೊಡ್ಡದೊಡ್ಡ ತಂತ್ರಜ್ಞಾನ ಕಂಪನಿಗಳು ರೂಪಿಸಿರುವ ಜನರೇಟಿವ್ AI ಮಾದರಿಗಳಿಗೆ ಸವಾಲೊಡ್ಡಿದೆ.

ಡೀಪ್‌ಸೀಕ್ ಕಂಪನಿ ತನ್ನ ವಿ3 ಜನರೇಟಿವ್ AI ಮಾದರಿಯನ್ನು ಬಿಡುಗಡೆ ಮಾಡಿದ್ದು, ಇದನ್ನು 2,000ದಷ್ಟು ವಿಶೇಷ ಕಂಪ್ಯೂಟರ್ ಚಿಪ್‌ಗಳನ್ನು (N-vediaದ ಎಚ್800 GPU ಚಿಪ್‌ಗಳು) ಬಳಸಿ ಅಭಿವೃದ್ಧಿಪಡಿಸಲಾಗಿದೆ ಎಂದು ಡೀಪ್‌ಸೀಕ್ ಹೇಳಿಕೊಂಡಿದ್ದು, ಬೇರೆ ಕಂಪನಿಗಳು ಇದೇ ರೀತಿಯ ಜನರೇಟಿವ್ AI ಮಾದರಿಗಳಿಗೆ 16 ಸಾವಿರದಷ್ಟು, ಹೆಚ್ಚು ಸಾಮರ್ಥ್ಯದ H100 ಚಿಪ್‌ಗಳನ್ನು ಬಳಸಿವೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಐದು ಸದಸ್ಯರ ಹಾಕಿ ಕ್ರೀಡೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಈ ಕ್ರೀಡೆಯಲ್ಲಿ ಗೋಲ್ ಕೀಪರ್ ಸೇರಿ ಐದು ಸದಸ್ಯರು ಮಾತ್ರ ಭಾಗವಹಿಸುತ್ತಾರೆ.
2. 2014ರ ಯುವ ಒಲಿಂಪಿಕ್ಸ್‌ಗೂ ಮುನ್ನ ಈ ಕ್ರೀಡೆಯನ್ನು ಮೊಟ್ಟಮೊದಲ ಬಾರಿಗೆ ಪರಿಚಯಿಸಲಾಯಿತು.
3. ಇತ್ತೀಚೆಗೆ ಭಾರತದ ಪುರುಷರ ತಂಡ ಏಷ್ಯಾ ಪಂದ್ಯಾವಳಿಯಲ್ಲಿ ಜಯಶಾಲಿಯಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 1, 2 ಮತ್ತು 3
ಸಿ. 2 ಮತ್ತು 3 ಡಿ. 1 ಮತ್ತು 2

ಉತ್ತರ : ಬಿ

2. ಇತ್ತೀಚೆಗೆ ಕೇಂದ್ರದ ಯಾವ ಸಚಿವಾಲಯ ವಾಟ್ಸ್ ಆ್ಯಪ್ ಸಂಸ್ಥೆಯ ಮಾತೃ ಸಂಸ್ಥೆಯಾದ ಮೆಟಾ ಸಂಸ್ಥೆಯೊಂದಿಗೆ ಸಹಭಾಗಿತ್ವಕ್ಕೆ ಸಹಿ ಹಾಕಿದೆ?

ಎ. ಕೇಂದ್ರ ಗೃಹ ಸಚಿವಾಲಯ.
ಬಿ. ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ.
ಸಿ. ಕೇಂದ್ರ ಹಣಕಾಸು ಸಚಿವಾಲಯ.
ಡಿ. ಕೇಂದ್ರ ಶಿಕ್ಷಣ ಸಚಿವಾಲಯ.

ಉತ್ತರ : ಡಿ

3. ಪಾರಂಪರಿಕ ಸ್ಥಳಗಳ ದತ್ತು ಪಡೆಯುವಿಕೆ-2.0 ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ವಾಣಿಜ್ಯೋದ್ಯಮಿಗಳು ಪಾರಂಪರಿಕ ಸ್ಥಳಗಳನ್ನು ಈ ಕಾರ್ಯಕ್ರಮದ ಅಡಿಯಲ್ಲಿ ಸ್ವಯಂ ಪ್ರೇರಣೆಯಿಂದ ಅಭಿವೃದ್ಧಿಪಡಿಸುವ ಅವಕಾಶವಿರುತ್ತದೆ.
2. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಬ್ಯಾಂಕುಗಳು ಪಾರಂಪರಿಕ ಸ್ಥಳಗಳ ಅಭಿವೃದ್ಧಿಯನ್ನು ಸ್ವಯಂ ಪ್ರೇರಣೆಯಿಂದ ಕೈಗೊಳ್ಳುವುದಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಎ

4. ವಿಶ್ವ ಆರೋಗ್ಯ ಸಂಸ್ಥೆಯ ಅಡಿಯಲ್ಲಿ ಜಾಗತಿಕ ಸಾಂಪ್ರದಾಯಿಕ ವೈದ್ಯಕೀಯ ಕೇಂದ್ರವನ್ನು ಕೆಳಗಿನ ಯಾವ ಸ್ಥಳದಲ್ಲಿ ಸ್ಥಾಪಿಸಲಾಗಿದೆ?

ಎ. ಬೆಂಗಳೂರು, ಕರ್ನಾಟಕ.
ಬಿ. ಗುವಾಹಟಿ, ಅಸ್ಸಾಂ.
ಸಿ. ಜಾಮ್ನಗರ್, ಗುಜರಾತ್.
ಡಿ. ಚೆನ್ನೈ, ತಮಿಳುನಾಡು.

ಉತ್ತರ : ಸಿ

5. ಕೆಳಗಿನ ಯಾವ ಕಾರ್ಯಕ್ರಮಗಳ ಮೂಲಕ ಎಲ್‌ಪಿಜಿ ಸಿಲಿಂಡರ್ ಸವಲತ್ತನ್ನು ಸರ್ಕಾರ ಕಲ್ಪಿಸಿದೆ?

1. ಪ್ರಧಾನಮಂತ್ರಿ ಉಜ್ವಲ ಯೋಜನೆ.
2. ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆ.
3. ಪಹಲ್ ಯೋಜನೆ.
4. ಅಟಲ್ ಗರೀಬ್ ಕಲ್ಯಾಣ್ ಯೋಜನೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಎ

6. ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್ ಅನ್ನು ಕೆಳಗಿನ ಯಾವ ವರ್ಗಗಳಿಗೆ ಎಂದು ಅಭಿವೃದ್ಧಿಪಡಿಸಲಾಗಿದೆ?

1. ರಾಜ್ಯಸಭಾ ಸದಸ್ಯರು.
2. ಲೋಕಸಭಾ ಸದಸ್ಯರು.
3. ವಿಧಾನಸಭಾ ಸದಸ್ಯರು.
4. ವಿಧಾನಪರಿಷತ್ತಿನ ಸದಸ್ಯರು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮತ್ತು 3 ಬಿ. 1 ಮತ್ತು 2
ಸಿ. 1, 2, 3 ಮತ್ತು 4 ಡಿ. 3 ಮತ್ತು 4

ಉತ್ತರ : ಸಿ

7. ಆಶ್ವಾಸ ನಿಧಿ ಯೋಜನೆಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆಯರಿಗೆ ಪರಿಹಾರವನ್ನು ಯೋಜನೆಯ ಅಡಿಯಲ್ಲಿ ಕಲ್ಪಿಸಲಾಗುತ್ತದೆ.
2. ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಹೆಚ್ಚಿನ ಪರಿಹಾರಧನವನ್ನು ನೀಡಲಾಗುತ್ತದೆ.
3. ಕೌಟುಂಬಿಕ ಹಿಂಸಾಚಾರಕ್ಕೆ ಒಳಗಾದ ಮಹಿಳೆಯರಿಗೂ ಕೂಡ ಪರಿಹಾರವನ್ನು ನೀಡಲಾಗುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 1 ಮತ್ತು 3

ಉತ್ತರ : ಸಿ

8. ಆಶ್ವಾಸ ನಿಧಿ ಯೋಜನೆಯನ್ನು ಕೆಳಗಿನ ಯಾವ ಸಚಿವಾಲಯ ಜಾರಿಗೆ ತರುತ್ತಿದೆ?

ಎ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ.
ಬಿ. ಸಮಾಜ ಕಲ್ಯಾಣ ಸಚಿವಾಲಯ.
ಸಿ. ಗೃಹ ಸಚಿವಾಲಯ.
ಡಿ. ಹಣಕಾಸು ಸಚಿವಾಲಯ.

ಉತ್ತರ : ಎ

9. ಇತ್ತೀಚೆಗೆ ಸ್ಥಾಪನೆಯಾಗಿರುವ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವನ್ನು ಸಂವಿಧಾನದ ವಿಧಿ 338B ಅನ್ವಯ ಸ್ಥಾಪಿಸಲಾಗಿದೆ.
2. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದ ಶಿಫಾರಸ್ಸು ನೀಡುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ

ಉತ್ತರ : ಸಿ

10. ಮಹಾರಾಷ್ಟ್ರ ಸರ್ಕಾರ ಮರಾಠ ಸಮುದಾಯಕ್ಕೆ ಮೀಸಲಾತಿಯನ್ನು ಕಲ್ಪಿಸುವ ವಿಚಾರದಲ್ಲಿ ಕೆಳಗಿನ ಯಾವ ಆಯೋಗವನ್ನು ರಚಿಸಿತ್ತು?

ಎ. ಗಾಯಕ್ವಾಡ್ ಆಯೋಗ.
ಬಿ. ಹೋಳ್ಕರ್ ಆಯೋಗ.
ಸಿ. ಶಿಂಧೆ ಆಯೋಗ.
ಡಿ. ಮಲ್ಹಾರ್ ಆಯೋಗ.

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

50. ಇವುಗಳಿಗೆ ಕಾರಣ ಕೊಡಿ (ಜೂನ್-2020)

1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.
2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:- (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

51) ಪೋಷಣಾಸ್ತರವನ್ನು ಚಿತ್ರವನ್ನು ಬರೆಯಿರಿ

ಉತ್ತರ:-



52) ಯಾವುದಕ್ಕೆ ಶಾಬ್ದನ (sonorous) ಎನ್ನುವರು?

ಉತ್ತರ:- ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ(sonorous) ಎನ್ನುವರು

53) ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ?

ಉತ್ತರ:- ಒಂದು ವೇಳೆ ಅಂಡವು ಫಲಿತಗೊಳ್ಳದಿದ್ದರೆ, ಅದು ಒಂದು ದಿನದವರೆಗೆ ಬದುಕಿರುತ್ತದೆ. ಅಂಡಾಶಯವು ಪ್ರತಿ ತಿಂಗಳೂ ಒಂದು ಅಂಡವನ್ನು ಬಿಡುಗಡೆಗೊಳಿಸುವುದರಿಂದ ಗರ್ಭಕೋಶವೂ ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನು ತಾನೇ ಸಜ್ಜುಗೊಳಿಸಿಕೊಳ್ಳುತ್ತದೆ. ಹೀಗೆ ಅದರ ಒಳಸ್ತರಿಯು ದಪ್ಪವಾಗಿ ಸ್ಪಂಜಿನಂತಾಗುತ್ತದೆ. ಒಂದು ವೇಳೆ ಅಂಡವು ಫಲಿತಗೊಂಡರೆ ಅದರ ಪೋಷಣೆಗಾಗಿ ಇದು ಅಗತ್ಯವಾಗುತ್ತದೆ. ಅಂಡವು ಫಲಿತಗೊಳ್ಳದಿದ್ದರೆ ಈ ಒಳಸ್ತರಿಯ ಅಗತ್ಯವಿರುವುದಿಲ್ಲ. ಆದ್ದರಿಂದ ಈ ಒಳಸ್ತರಿಯು ನಿಧಾನವಾಗಿ ಬಿರುಕು ಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುತ್ತದೆ. ಈ ಚಕ್ರವು ಸರಿ ಸುಮಾರು ಪ್ರತಿ ತಿಂಗಳೂ ನಡೆಯುತ್ತದೆ ಮತ್ತು ಇದನ್ನು ಋತುಚಕ್ರ (menstruation) ಎನ್ನುವರು. ಸಾಮಾನ್ಯವಾಗಿ ಇದು ಎರಡರಿಂದ ಎಂಟು ದಿನಗಳವರೆಗೆ ಮುಂದುವರೆಯುತ್ತದೆ.

54) ಏಕಲಿಂಗಿ ಹೂವು ಯಾವುದು?

ಉತ್ತರ:- ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು

ಉದಾ:- ಪಪಾಯ, ಕಲ್ಲಂಗಡಿ

55) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ

ಉತ್ತರ:- ಮನುಷ್ಯರಲ್ಲಿ (ಚಿತ್ರ ನೋಡಿ) ಮೂಗಿನ ಹೊಳ್ಳೆಗಳ ಮೂಲಕ ಗಾಳಿ ಒಳ ತೆಗೆದುಕೊಳ್ಳಲ್ಪಡುತ್ತದೆ. ಮೂಗಿನ ಹೊಳ್ಳೆಯೊಳಗೆ ಹಾದು ಹೋಗುವ ಗಾಳಿಯು ಹೊಳ್ಳೆಯ ಒಳದಾರಿಯಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಸೋಸಲ್ಪಡುತ್ತದೆ. ಹೊಳ್ಳೆಯ ಒಳದಾರಿಯು ಲೋಳೆಯಿಂದ ಕೂಡಾ ಆವರಿಸಿದೆ. ಇದೂ ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.



ಇಲ್ಲಿಂದ ಗಾಳಿಯು ಗಂಟಲಿನ ಮೂಲಕ ಶ್ವಾಸಕೋಶದೊಳಗೆ ಚಲಿಸುತ್ತದೆ. ಗಂಟಲಿನಲ್ಲಿ ಮೃದ್ವಸ್ಥಿಯ ಉಂಗುರಗಳಂಥ ರಚನೆಗಳಿವೆ. ಇವುಗಳು ಗಾಳಿ ಹಾದುಹೋಗುವ ರಚನೆ ಕುಸಿಯದಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿರುವಂತೆ ಮಾನವನ ಶ್ವಾಸಕಾಂಗವ್ಯೂಹ ಶ್ವಾಸನಾಳವು ಶ್ವಾಸಕೋಶದೊಳಗೆ ಅತಿಸಣ್ಣ ನಳಿಕೆಗಳಾಗಿ ವಿಭಜನೆ ಹೊಂದಿ ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಬದಲಾಗುತ್ತವೆ. ಅವುಗಳನ್ನು ಗಾಳಿಗೂಡುಗಳು ಎನ್ನುವರು. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಅಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ನಾವು ಗಾಳಿಯನ್ನು ಒಳತೆಗೆದುಕೊಂಡಾಗ ನಮ್ಮ ಪಕ್ಕೆಲುಬುಗಳು ಮೇಲಕ್ಕೆ ಏರುತ್ತವೆ ಮತ್ತು ವಪೆಯು ಚಪ್ಪಟೆಗೊಳ್ಳುತ್ತದೆ. ಇದರ ಪರಿಣಾಮವಾಗಿ ಎದೆಗೂಡು ದೊಡ್ಡದಾಗುತ್ತದೆ. ಇದರಿಂದಾಗಿ ಗಾಳಿಯು ಶ್ವಾಸಕೋಶದೊಳಗೆ ಹೀರಲ್ಪಡುತ್ತದೆ ಮತ್ತು ಹಿಗ್ಗಿದ ಗಾಳಿಗೂಡುಗಳನ್ನು ತುಂಬುತ್ತದೆ. ರಕ್ತವು ದೇಹದ ಇತರ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಗಾಳಿಗೂಡುಗಳಲ್ಲಿ ಬಿಡುಗಡೆಮಾಡಲು ತರುತ್ತದೆ ಮತ್ತು ಆಲ್ವಿಯೋಲಾರ್ ಗಾಳಿಯಲ್ಲಿರುವ ಆಕ್ಸಿಜನ್‌ಅನ್ನು ಆಲ್ವಿಯೋಲಾರ್ ರಕ್ತನಾಳಗಳಲ್ಲಿರುವ ರಕ್ತವು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ. ಉಸಿರಾಟ ಚಕ್ರದ ಸಮಯದಲ್ಲಿ ಗಾಳಿಯನ್ನು ಒಳತೆಗೆದುಕೊಂಡು ಹೊರಬಿಡುವಾಗ ಶ್ವಾಸಕೋಶಗಳು ಯಾವಾಗಲೂ ಸ್ವಲ್ಪ ಪ್ರಮಾಣದ ಗಾಳಿಯನ್ನು ಉಳಿಸಿಕೊಂಡಿರುತ್ತವೆ. ಆದ್ದರಿಂದ, ಆಕ್ಸಿಜನ್‌ಅನ್ನು ಹೀರಿಕೊಳ್ಳಲು ಮತ್ತು ಕಾರ್ಬನ್ ಡೈಆಕ್ಸೈಡ್‌ಅನ್ನು ಬಿಡುಗಡೆ ಮಾಡಲು ಸಾಕಷ್ಟು ಸಮಯ ಇರುತ್ತದೆ.

ಪ್ರಾಣಿಗಳ ದೇಹದ ಗಾತ್ರವು ದೊಡ್ಡದಾಗಿದ್ದಾಗ ವಿಸರಣಾ ಒತ್ತಡವೊಂದೇ ದೇಹದ ಎಲ್ಲಾ ಭಾಗಗಳಿಗೆ ಆಕ್ಸಿಜನ್ ಪೂರೈಸುತ ಜವಾಬ್ದಾರಿಯನ್ನು ನಿರ್ವಹಿಸಲಾರದು. ಬದಲಾಗಿ ಉಸಿರಾಟದ ವರ್ಣಕಗಳು ಶ್ವಾಸಕೋಶದಲ್ಲಿನ ಗಾಳಿಯಿಂದ ಆಕ್ಸಿಜನ್‌ಅನ್ನು ಪಡೆಯುತ್ತವೆ ಮತ್ತು ಬಿಡುಗಡೆ ಮಾಡುವ ಮೊದಲು ಆಕ್ಸಿಜನ್ ಕೊರತೆಯಿರುವ ಅಂಗಾಂಶಗಳಿಗೆ ಕೊಂಡೊಯ್ಯುತ್ತವೆ. ಮನುಷ್ಯರಲ್ಲಿ ಹಿಮೋಗ್ಲೋಬಿನ್ ಉಸಿರಾಟದ ವರ್ಣಕವಾಗಿದ್ದು ಅದು ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆಯನ್ನು ಹೊಂದಿದೆ. ಈ ವರ್ಣಕವು ಕೆಂಪು ರಕ್ತ ಕಣಗಳಲ್ಲಿರುತ್ತದೆ. ಆಕ್ಸಿಜನ್‌ಗಿಂತ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ನೀರಿನಲ್ಲಿ ಕರಗುತ್ತದೆ ಮತ್ತು ಬಹುತೇಕ ಇದರಿಂದಾಗಿ ನಮ್ಮ ರಕ್ತದಲ್ಲಿ ವಿಲೀನಗೊಂಡ ರೂಪದಲ್ಲಿ ಸಾಗಿಸಲ್ಪಡುತ್ತದೆ.

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REVISION : MODEL QUESTIONS

34) Describe the Miller & Urey's experiment.

Ans:- Miller and Urey's Experiment - It is an apparatus designed for simulating conditions prevalent on earth at the time of abiogenic evolution of organic substances by Stanley Miller.



Miller and Urey's experiment to simulate conditions of Primeval atmosphere that produced organic compounds.

The apparatus has a spark chamber with two electrodes (providing 75000 volts of energy for simulation of lightning), a flask for boiling (simulation for evaporation and circulation) to a temperature of 800° C and a condenser (simulation of raining and Haldane's soup). A control apparatus was also prepared but without electrodes in the spark chamber.

Miller used a mixture of methane, ammonia, hydrogen and water. The mixture was exposed to electric discharges, followed by condensation and then boiling. It was continued for 18 days. The experiment was repeated for a number of times.

The products were extracted and identified through chromatography.

Miller was able to identify 15 amino acids (e.g., glycine, alanine, aspartic acid), organic acids (e.g., lactic acid, succinic acid, propionic acid, acetic acid), ribose sugar and purine adenine.

Using different combinations, UV light and other sources of energy, later workers have obtained a number of organic compounds like sugars, nitrogen bases, pigments and fats. Nitrogen bases are formed if the starting combination contained HCN. Occurrence of similar compounds in the meteorites shows that similar process are also occurring elsewhere in the space.

35) Give the structure of HIV.

Ans:- *Structure of HIV –*



It is a rounded enveloped retrovirus with a core having two single strands of genomic RNA, two molecules of enzyme reverse transcriptase, an inner covering or capsid (of P-24) and an outer covering or capsid (of P-18). The number of genes present in HIV- I is eight. It is nine in HIV- II (common in Africa). Core is covered by an envelope derived from host. The envelope has spikes with glycoprotein (gp 120) capable of recognizing CD-4 or T-4 antigen receptor found on helper T-cells, macrophages and nerve cells.

36) Mention two differences between GIFT and ZIFT.

Ans:- Differences Between GIFT and ZIFT are -

S. No	*GIFT*	*ZIFT*
1.	Fertilization occurs *invivo* i.e., in fallopian tube.	Fertilization occurs in vitro, i.e., outside the body of the female.
2.	Both eggs and sperms are introduced in the fallopian tube.	One day old zygote is introduced in the fallopian tube.
3.	It is transfer of early embryo directly into uterus.	It is transfer of zygote (in ZIFT) or gametes (in GIFT) into fallopian tube.
4.	The embryo consists of more than 8 blastomeres.	The embryo is either upto 8 blastomeres stage or in unfertilized ovum stage.

ತ್ರಿವೇಣಿ ಸಂಗಮದಲ್ಲಿ ಭಕ್ತರು ಬುಧವಾರ ಪವಿತ್ರ ಸ್ನಾನ ಮಾಡಿದರು –ಪಿಟಿಐ ಚಿತ್ರಗಳು

ಮಹಾಕುಂಭ ಮುಕ್ತಾಯ

ಪ್ರಜಾವಾಣಿ ವಾರ್ತೆ/ಪಿಟಿಐ

ಮಹಾಕುಂಭ ನಗರ: ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ 45 ದಿನಗಳವರೆಗೆ ನಡೆದ ಮಹಾಕುಂಭ ಮೇಳವು ಬುಧವಾರ ಮುಕ್ತಾಯವಾಯಿತು. ಗಂಗೆ, ಯಮುನೆ ಮತ್ತು ಸರಸ್ವತಿ (ಗುಪ್ತಗಾಮಿನಿ) ನದಿಗಳು ಸೇರುವ 'ತ್ರಿವೇಣಿ ಸಂಗಮ'ದಲ್ಲಿ ರಾತ್ರಿ ಹಗಲು ಎನ್ನದೆ ಇಷ್ಟೂ ದಿನಗಳಲ್ಲಿ ಕೋಟ್ಯಂತರ ಮಂದಿ ಮಿಂದೆದ್ದಿದ್ದಾರೆ. ಈ ಬಾರಿಯ ಮಹಾಕುಂಭ ಮೇಳವು ಹಲವು ವಿವಾದಗಳಿಗೂ ಕಾರಣವಾಯಿತು.

ಮಹಾಕುಂಭ ಮೇಳದ ಕೊನೆಯ ದಿನವಾದ ಬುಧವಾರ ಶಿವರಾತ್ರಿಯೂ ಆಗಿದ್ದರಿಂದ ದೇಶದ ನಾನಾ ಭಾಗಗಳಿಂದ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. 'ಹರ ಹರ ಮಹಾದೇವ್', 'ಜೈ ಮಹಾದೇವ್' ಎನ್ನುತ್ತ ಲಕ್ಷಾಂತರ ಭಕ್ತರು ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರು. 'ಬ್ರಹ್ಮ ಮುಹೂರ್ತ'ದಲ್ಲಿ ಪವಿತ್ರ ಸ್ನಾನ ಮಾಡಲು ಮಂಗಳವಾರ ಮಧ್ಯಾಹ್ನ ದಿಂದಲೇ ಸಂಗಮದಲ್ಲಿ ಸರತಿ ಸಾಲು ರೂಪುಗೊಂಡಿತ್ತು.

ಸಂಗಮದ ಬಳಿ ನಿರ್ಮಿಸಲಾಗಿದ್ದ ವಿವಿಧ ಘಾಟ್‌ಗಳಲ್ಲಿ ಭಕ್ತರು 'ಪವಿತ್ರ ಸ್ನಾನ' ಕೈಗೊಂಡರು. ಸುಮಾರು 99 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿದ್ದ ಮಹಾಕುಂಭ ಮೇಳ ನಗರದಲ್ಲಿ ಬುಧವಾರ ಹಾಜರಿದ್ದ ಲಕ್ಷಾಂತರ ಜನರನ್ನು ನಿಯಂತ್ರಿಸಲು ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಒಟ್ಟು ಐದು ಸುತ್ತುಗಳಲ್ಲಿ ಭಕ್ತರ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಸುರಿಸಲಾಯಿತು.

ಬುಧವಾರವೇ ಮಹಾಕುಂಭ ಮೇಳ ಅಂತ್ಯ ಗೊಂಡಿದ್ದರೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗುರುವಾರ ಅಧಿಕೃತ ಘೋಷಣೆ ಮಾಡಲಿದ್ದಾರೆ. ಮೇಳದ ಕೊನೇ ದಿನಗಳಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗಿತ್ತು. ಹಾಗಿದ್ದರೂ ಸದ್ಯ ಪ್ರಯಾಗರಾಜ್‌ನಲ್ಲಿರುವ ಲಕ್ಷಾಂತರ ಭಕ್ತರನ್ನು ವಾಪಸು ಅವರ ಊರುಗಳಿಗೆ ತಲುಪಿಸುವ ದೊಡ್ಡ ಸವಾಲು ಸರ್ಕಾರದ ಮುಂದಿದೆ.

'ಪ್ರಯಾಗರಾಜ್‌ಗೆ ಮುಂದಿನ ಕೆಲವು ದಿನಗಳವರೆಗೆ ಭಕ್ತರು ಬರಲಿದ್ದಾರೆ. ಆದ್ದರಿಂದ, ಮೇಳಕ್ಕೆ ನಿರ್ಮಿಸಿಕೊಂಡಿದ್ದ ಮೂಲಸೌಕರ್ಯಗಳನ್ನು ಕೆಲವು ದಿನಗಳವರೆಗೆ ಉಳಿಸಿಕೊಳ್ಳಲಾಗುವುದು. ಮೇಳಕ್ಕೆ ಬಂದಿದ್ದ ಸಾಧು–ಸಂತರು ಗುರುವಾರದಿಂದ ಪ್ರಯಾಗರಾಜ್‌ನಿಂದ ತೆರಳಲಿದ್ದಾರೆ. ವಾರದೊಳಗೆ ಶಿಬಿರಗಳು, ಪೆಂಡಾಲ್‌ಗಳನ್ನು ತೆರವುಗೊಳಿಸಲಾಗುವುದು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಉತ್ತರ ಪ್ರದೇಶ ಸರ್ಕಾರ ಹೇಳಿದ್ದು

66 ಕೋಟಿ
45 ದಿನಗಳು ನಡೆದ ಮಹಾಕುಂಭ ಮೇಳದಲ್ಲಿ ಭಾಗವಹಿಸಿ ಭಕ್ತರ ಸಂಖ್ಯೆ

81.09 ಲಕ್ಷ
ಬುಧವಾರದಂದು ಕೊನೆಯ 'ಅಮೃತ ಸ್ನಾನ' ಕೈಗೊಂಡ ಭಕ್ತರ ಸಂಖ್ಯೆ

ಭಾರತ ಮತ್ತು ಚೀನಾವನ್ನು ಹೊರತುಪಡಿಸಿ, ಜಗತ್ತಿನ ಎಲ್ಲ ದೇಶಗಳ ಜನಸಂಖ್ಯೆಯನ್ನೂ ಮೀರಿದ ಜನರು ಮಹಾಕುಂಭ ಮೇಳಕ್ಕೆ ಭೇಟಿ ನೀಡಿದ್ದಾರೆ

ಕುಂಭಮೇಳ ಎಷ್ಟು ವರ್ಷಕ್ಕೊಮ್ಮೆ?

ಮಹಾಕುಂಭ ಮೇಳವು 12 ವರ್ಷಕ್ಕೊಮ್ಮೆ ಜರುಗುತ್ತದೆ. ಆದರೆ, ಈ ಬಾರಿ ಮಹಾಕುಂಭ ನಡೆಯುತ್ತಿರುವ ಕಾಲಘಟ್ಟವು ಗ್ರಹಗತಿಗಳು ಕೂಡಿಬಂದಿರುವ ದೃಷ್ಟಿಯಿಂದ ಅತ್ಯಂತ ಪವಿತ್ರವಾದುದು. ಇಂಥ ಸಂಯೋಗವು 144 ವರ್ಷಕ್ಕೆ ಒಮ್ಮೆ ಬರುವಂಥದ್ದು ಎನ್ನುವುದು ಸಂತರ ಅಭಿಪ್ರಾಯ. ಇದರ ಸತ್ಯಾಸತ್ಯತೆ ಕುರಿತು ವಿರೋಧ ಪಕ್ಷಗಳೂ ಸೇರಿದಂತೆ ಹಲವರು ವಿರೋಧ ವ್ಯಕ್ತಪಡಿಸಿದ್ದರು. ಈ ಸಂಖ್ಯೆಗಳೆಲ್ಲ ಉತ್ತರ ಪ್ರದೇಶ ಸರ್ಕಾರದ ಪ್ರಚಾರ ತಂತ್ರ ಎಂದೂ ಚರ್ಚೆಯಾಯಿತು.

ತಂದೆಯೊಬ್ಬರು ತಮ್ಮ ಮಗುವಿನೊಂದಿಗೆ ಪವಿತ್ರ ಸ್ನಾನ ಮಾಡಿದರು – ಎಎಫ್‌ಪಿ ಚಿತ್ರ

ಪ್ರಯಾಗರಾಜ್‌ನಲ್ಲಿ ಹಾಕಿರುವ ಗಂಗಾ ಪೆಂಡಾಲ್‌ನಲ್ಲಿ ರೂಪಿಸಲಾಗಿರುವ 80 ಅಡಿ ಉದ್ದದ 5 ಅಡಿ ಅಗಲವಿರುವ ಗೋಡೆಯ ಮೇಲೆ ಮಹಿಳೆಯೊಬ್ಬರು ಕೈ ಅಚ್ಚು ಹಾಕಿದರು

- ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಪ್ರಮುಖರು ಮಹಾಕುಂಭದಲ್ಲಿ ಪವಿತ್ರ ಸ್ನಾನ ಮಾಡಿದರು. ಹಲವು ರಾಜ್ಯಗಳ ಸಚಿವರು, ಬಾಲಿವುಡ್ ನಟ–ನಟಿಯರು, ಕ್ರಿಕೆಟ್ ದಿಗ್ಗಜರು, ಉದ್ಯಮಿಗಳಾದ ಮುಕೇಶ್ ಅಂಬಾನಿ ಹಾಗೂ ಗೌತಮ್ ಅದಾನಿ ಕುಟುಂಬ ಸೇರಿದಂತೆ ದೇಶದ ಹಲವು ಖ್ಯಾತನಾಮರು ಮೇಳದಲ್ಲಿ ಭಾಗವಹಿಸಿದರು
- ಈ ಬಾರಿಯ ಮಹಾಕುಂಭ ಮೇಳದಲ್ಲಿ ಮಾಡಿದ ರೀಲ್ಸ್, ಮೇಳದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡಿದವು. ಮೇಳದಲ್ಲಿ ಭಾಗವಹಿಸಿದ್ದ ಕೆಲವರು ಜಾಲತಾಣಗಳ ಮೂಲಕ ಭಾರಿ ಸದ್ದು ಮಾಡಿದರು. ಇವರಲ್ಲಿ, ಮಧ್ಯಪ್ರದೇಶದ ರುದ್ರಾಕ್ಷಿ ಮಾಲೆ ಮಾರುವ ಮೊನಾಲೀಸಾ ಭೋಸ್ಲೆ, 'ಐಐಟಿ ಬಾಬಾ' ಖ್ಯಾತಿಯ ಅಭಯ್ ಸಿಂಗ್ ಕೂಡ ಇದ್ದಾರೆ

2019ರಲ್ಲಿ ನಡೆದಿದ್ದ ಅರ್ಧಕುಂಭ ಮೇಳಕ್ಕೆ ಸುಮಾರು 24 ಕೋಟಿ ಭಕ್ತರು ಭೇಟಿ ನೀಡಿದ್ದರು. ಮಹಾಕುಂಭಕ್ಕೆ 65 ಕೋಟಿಗೂ ಅಧಿಕ ಭಕ್ತರು ಭೇಟಿ ನೀಡಿದ್ದಾರೆ. ಜಗತ್ತಿನೆಲ್ಲೆಡೆಯ ಸನಾತನ ಧರ್ಮದ ಅನುಯಾಯಿಗಳು ಮಹಾಕುಂಭದಿಂದ ಸಂತಸ ಗೊಂಡಿದ್ದಾರೆ. ಇಲ್ಲಿ ಜಾತಿ, ವರ್ಗ ಎಂಬ ತಾರತಮ್ಯವೇ ಇರಲಿಲ್ಲ. ಎಲ್ಲರೂ ಸಂಗಮದಲ್ಲಿ ಮಿಂದೆದ್ದರು

ನಂದನ್ ಗೋಪಾಲ್ ಗುಪ್ತಾ,
ಉತ್ತರ ಪ್ರದೇಶ ಸಚಿವ

ತ್ರಿವೇಣಿ ಸಂಗಮ

ವಿವಾದಗಳು...

- ಮೌನಿ ಅಮಾವಾಸ್ಯೆ ದಿನ (ಜ.29) ನಡೆದ ಕಾಲ್ತುಳಿತ ಪ್ರಕರಣವು ಭಾರಿ ವಿವಾದಕ್ಕೆ ಕಾರಣವಾಯಿತು. ಕಾಂಗ್ರೆಸ್, ಸಮಾಜವಾದಿ ಪಕ್ಷವು ಬಿಜೆಪಿ ನೇತೃತ್ವದ ಉತ್ತರ ಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು. ಘಟನೆಯಲ್ಲಿ '30 ಮಂದಿ ಮೃತಪಟ್ಟು, 60 ಜನರಿಗೆ ಗಾಯಗಳಾಗಿವೆ' ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿತು. 'ನೂರಾರು ಮಂದಿ ಮೃತಪಟ್ಟಿದ್ದಾರೆ. ಸರ್ಕಾರ ಸುಳ್ಳು ಹೇಳುತ್ತಿದೆ' ಎಂದು ವಿರೋಧ ಪಕ್ಷಗಳು ದೂರಿದವು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಇದು ಮೃತ್ಯುಕುಂಭ' ಎಂದರು
- ಗಂಗಾ ನದಿಯ ನೀರಿನಲ್ಲಿ ಫೀಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾ (ಚರಂಡಿ ನೀರಿನಲ್ಲಿ ಕಂಡು ಬರುವ ಬ್ಯಾಕ್ಟೀರಿಯಾ) ಪ್ರಮಾಣವು ಅಧಿಕವಾಗಿದೆ. ಸ್ನಾನ ಮಾಡಲು ಮತ್ತು ಕುಡಿಯಲು ಈ ನೀರು ಯೋಗ್ಯವಾಗಿಲ್ಲ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ವರದಿ ನೀಡಿತು. ಇದು ಕೂಡ ದೊಡ್ಡ ವಿವಾದ ಸೃಷ್ಟಿಸಿತು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈ ವರದಿಯನ್ನು ತಳ್ಳಿಹಾಕಿದರು
- ಸಂಚಾರ ದಟ್ಟಣೆ ಬಗ್ಗೆ ಅನನುಕೂಲವಾದ ಹಲವಾರು ಘಟನೆಗಳು ನಡೆದವು. ಪ್ರಯಾಗರಾಜ್ ರೈಲು ನಿಲ್ದಾಣ ತಲುಪಿದ ಜನರು ಕಿ.ಮೀ ಗಟ್ಟಲೆ ನಡೆದು ಹೋದದ್ದೂ ಆಯಿತು. ಪ್ರಯಾಗರಾಜ್ ಸುತ್ತಮುತ್ತಲು ಹಲವು ಕಿ.ಮೀ ದೂರದವರೆಗೆ ವಾಹನ ಸಂಚಾರ ಸ್ಥಗಿತಗೊಂಡ ಬಗ್ಗೆ ವರದಿಗಳು ಪ್ರಕಟಗೊಂಡವು. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಈ ಬಗ್ಗೆ ಹಲವು ಬಾರಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು

- ದೆಹಲಿ ರೈಲು ನಿಲ್ದಾಣದಲ್ಲಿ ನಡೆದ ಕಾಲ್ತುಳಿತದಲ್ಲಿ ಮಹಾಕುಂಭ ಮೇಳಕ್ಕೆ ಹೊರಟಿದ್ದ 18 ಭಕ್ತರು ಮೃತಪಟ್ಟರು. ಮಹಾಕುಂಭ ಮೇಳ ನಡೆದ ಪ್ರದೇಶದಲ್ಲಿ ರೂಪಿಸಲಾಗಿದ್ದ ಶಿಬಿರಗಳಲ್ಲಿ ಅಗ್ನಿ ಅವಗಢಗಳು ನಡೆದ ಬಗ್ಗೆ ವರದಿಯಾದವು. 'ತ್ರಿವೇಣಿ ಸಂಗಮದ ಬಳಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟವರು ಮೋಕ್ಷ ಪಡೆದುಕೊಂಡಿದ್ದಾರೆ' ಎಂದು ಹೇಳಿದ ಭಾಗೇಶ್ವರ ಧಾಮ್ ಬಾಬಾ ಅವರು ಹೇಳಿಕೆ ಬಗ್ಗೆಯೂ ಭಾರಿ ಆಕ್ರೋಶ ವ್ಯಕ್ತವಾಯಿತು

ಕರ್ನಾಟಕ ಒಂದು ರಾಜ್ಯ. ಹಲವು ಜಗತ್ತುಗಳು.
ಪ್ರವಾಸೋದ್ಯಮ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಹಾಗೂ ಜಿಲ್ಲಾಡಳಿತ, ವಿಜಯನಗರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹಂಪಿ ಉತ್ಸವ ೨೦೨೫

28.02.2025 ಸಂಜೆ 6.00 ಗಂಟೆ
ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಹಂಪಿ ಉತ್ಸವ
28ನೇ ಫೆಬ್ರವರಿ, 1 ಮತ್ತು 2ನೇ ಮಾರ್ಚ್ 2025
ಪ್ರಧಾನ ವೇದಿಕೆ: ಶ್ರೀ ಎಂ.ಪಿ. ಪ್ರಕಾಶ್ ವೇದಿಕೆ, ಗಾಯಿತ್ರಿ ಪೀಠ, ಹಂಪಿ
ಸಮಾನಾಂತರ ವೇದಿಕೆಗಳು:
ಎದುರು ಬಸವಣ್ಣ ವೇದಿಕೆ ■ ವಿರೂಪಾಕ್ಷೇಶ್ವರ ದೇವಸ್ಥಾನದ ವೇದಿಕೆ
■ ಸಾಸುವೆ ಕಾಳು ಗಣಪ ವೇದಿಕೆ ■ ಮಹಾನವಮಿ ದಿಬ್ಬ ವೇದಿಕೆ

ಶ್ರೀ ಬಿ.ಜೆಡ್. ಜಮೀರ್ ಅಹಮದ್ ಖಾನ್, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು, ಹಂಪಿ ಉತ್ಸವ–2025ರ ಪ್ರಧಾನ ವೇದಿಕೆ ಸಿದ್ಧತೆಯನ್ನು ವೀಕ್ಷಿಸುತ್ತಿರುವುದು.

ಗೌರವ ಉಪಸ್ಥಿತಿ
ಶ್ರೀ ಬಿ.ಜೆಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ಹೆಚ್.ಕೆ. ಪಾಟೀಲ
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ
ಶ್ರೀ ಹೆಚ್.ಆರ್. ಗವಿಯಪ್ಪ
ಮಾನ್ಯ ಶಾಸಕರು (ವಿಧಾನಸಭೆ), ವಿಜಯನಗರ ಕ್ಷೇತ್ರ

ಜಿಲ್ಲೆಯ ಮಾನ್ಯ ಸಂಸದರುಗಳು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಮಾನ್ಯ ಶಾಸಕರುಗಳು ಹಾಗೂ ಎಲ್ಲಾ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು

ಕನ್ನಡ ಚಲನಚಿತ್ರರಂಗದ ಖ್ಯಾತ ನಟ, ನಟಿಯರು, ಸಂಗೀತ ನಿರ್ದೇಶಕರು ಮತ್ತು ಹಿನ್ನೆಲೆ ಗಾಯಕರಿಂದ ರಸಮಂಜರಿ ಕಾರ್ಯಕ್ರಮ
ಆನೆಲಾಯ ಆವರಣದಲ್ಲಿ ವಿಜಯನಗರ ವೈಭವದ ಧ್ವನಿ ಮತ್ತು ಬೆಳಕು ಕಾರ್ಯಕ್ರಮ

ವಿಶೇಷ ಕಾರ್ಯಕ್ರಮಗಳು: ಶಿಲ್ಪಕಲಾ ಶಿಬಿರ, ಚಿತ್ರಕಲಾ ಶಿಬಿರ, ಬೈಕ್ ರ‍್ಯಾಲಿ, ತುಂಗಾರತಿ, ದೋಣಿ ವಿಹಾರ, ವಿಜಯನಗರ ವಸಂತ ವೈಭವ

ಸರ್ವರಿಗೂ ಆದರದ ಸ್ವಾಗತ

'ಭೂಸ್ವಾಧೀನಕ್ಕೆ ಬೇಕು ₹3 ಲಕ್ಷ ಕೋಟಿ'

'ನಮ್ಮ ಮೆಟ್ರೊ' ಮಾರ್ಗಗಳಲ್ಲಿ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಾಣ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ಅರಮನೆ ಜಮೀನಿಗೆ ₹3 ಸಾವಿರ ಕೋಟಿ ಪರಿಹಾರ ಕೇಳಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸುರಂಗ ಮಾರ್ಗದ ಬದಲು ರಸ್ತೆಗಳ ವಿಸ್ತರಣೆಗೆ ಮುಂದಾದರೆ ಭೂಸ್ವಾಧೀನಕ್ಕೆ ₹3 ಲಕ್ಷ ಕೋಟಿ ಬೇಕಾಗುತ್ತದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ನಗರದ ವಿವಿಧ ಸಮಸ್ಯೆಗಳಿಗೆ ದೀರ್ಘಾವಧಿಯ ಪರಿಹಾರ ಕಂಡುಕೊಳ್ಳಲು ನಾನು ಮುಂದಾಗಿದ್ದೇನೆ. ಬೆಂಗಳೂರು ನಗರದಲ್ಲಿ ಯಾವುದೇ 'ಮಾಸ್ಟರ್ ಪ್ಲಾನ್' ಇಲ್ಲದೆ ಏನೂ ಮಾಡಲು ಆಗುವುದಿಲ್ಲ' ಎಂದರು.

ಉಕ್ಕಿನ ಸೇತುವೆ ವಿರೋಧಿಸಿದಂತೆ ಸುರಂಗ ಮಾರ್ಗ ನಿರ್ಮಾಣವನ್ನೂ ವಿರೋಧಿಸಿ ಬಿಜೆಪಿ ಎಲ್ಲ 28 ಕ್ಷೇತ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ಕೆ.ಜೆ ಜಾರ್ಜ್ ಅವರು ಉಕ್ಕಿನ ಸೇತುವೆ ನಿರ್ಮಿಸಲು ಮುಂದಾದಾಗ ಬಿಜೆಪಿ ವಿರೋಧಿಸಿತ್ತು. ದೇವರೇ ಬಂದರೂ ಬೆಂಗಳೂರಿನ ರಸ್ತೆ ಪರಿಸ್ಥಿತಿಯನ್ನು ಒಂದೆರಡು ವರ್ಷದಲ್ಲಿ ಸರಿಪಡಿಸಲು ಆಗುವುದಿಲ್ಲ ಎಂದು ನಾನು ಹೇಳಿದ್ದನ್ನು ಬಿಜೆಪಿಯವರು ಟೀಕಿಸಿದ್ದಾರೆ. ಎಲ್ಲದಕ್ಕೂ ಅಧಿವೇಶನದಲ್ಲಿ ಉತ್ತರ ನೀಡುತ್ತೇನೆ' ಎಂದರು.

'ಮೆಟ್ರೊದಲ್ಲಿ ಡಬಲ್ ಡೆಕರ್ ಮೇಲ್ಸೇತುವೆ ಮಾಡಿದ್ದರೆ ಈಗ ಇಷ್ಟು ಸಮಸ್ಯೆ ಆಗುತ್ತಿರಲಿಲ್ಲ. ಮುಂದೆ ಎಲ್ಲ ಮೆಟ್ರೊ ಮಾರ್ಗಗಳಲ್ಲಿ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಿಸಲಾಗುವುದು. ಇದಕ್ಕೆ ಪಾಲಿಕೆ ವತಿಯಿಂದ ಶೇಕಡ 50ರಷ್ಟು ವೆಚ್ಚ ಭರಿಸಲಾಗುವುದು. ಇನ್ನು 160 ಕಿ.ಮೀ. ಉದ್ದದಷ್ಟು ಮೇಲ್ಸೇತುವೆ, ರಾಜಕಾಲುವೆಗಳ ಬಫರ್ ವಲಯದಲ್ಲಿ 300 ಕಿ.ಮೀ ಉದ್ದದ ರಸ್ತೆಗಳನ್ನು ಮಾಡಲು ಮುಂದಾಗಿದ್ದೇವೆ' ಎಂದರು.

'ಮುಂಬೈ, ಹೈದರಾಬಾದ್, ದೆಹಲಿ ರಸ್ತೆಗಳನ್ನು ನಾನು ನೋಡಿದ್ದೇನೆ. ಆ ಎಲ್ಲ ನಗರಗಳ ರಸ್ತೆಗಳು ಬೆಂಗಳೂರಿನ ರಸ್ತೆಗಳಿಗಿಂತ ಹದಗೆಟ್ಟಿವೆ. ಅಧಿವೇಶನದಲ್ಲಿ ಬೇರೆ ನಗರಗಳಲ್ಲಿ ವಾಹನ ಸಂಚಾರದ ಸಮಯವನ್ನು ಹೇಳುತ್ತೇನೆ. ಬೆಂಗಳೂರು ನಗರದ ಮೇಲಿನ ಒತ್ತಡ ಇಳಿಸಲು 'ಬಿಯಾಂಡ್ ಬೆಂಗಳೂರು' ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

'ವೈಟ್ ಫೀಲ್ಡ್ ಭಾಗದಲ್ಲಿ 90 ಮೀಟರ್ ಅಗಲದ ರಸ್ತೆ (ಪಿಆರ್ ಆರ್) ನಿರ್ಮಿಸಲು 2023 ಮಾರ್ಚ್ ತಿಂಗಳಲ್ಲಿ ಬಿಜೆಪಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಬೆಂಗಳೂರಿನ ಒಳಗೆ 19 ಕಿ.ಮೀ ಉದ್ದದ ರಸ್ತೆ ಮಾಡಲು ಭೂಸ್ವಾಧೀನಕ್ಕಾಗಿಯೇ ₹25 ಸಾವಿರ ಕೋಟಿ ಅಗತ್ಯವಿದೆ. ಅದನ್ನು ಯಾರಿಗಾಗಿ ಮಾಡಿದ್ದಾರೊ ಗೊತ್ತಿಲ್ಲ. ಈ ಭಾಗದಲ್ಲಿ ದೊಡ್ಡ ದೊಡ್ಡ ಕಟ್ಟಡ ಕಟ್ಟಲಾಗಿದೆ. ಅದನ್ನು ನೋಡದೇ ಅವರು ಅಧಿಸೂಚನೆ ಹೊರಡಿಸಿದ್ದರು' ಎಂದು ಆರೋಪಿಸಿದರು.

'ಕುಮಾರಸ್ವಾಮಿ ಮಾತಿಗೆ ಕಿಮ್ಮತ್ತಿಲ್ಲ'

'ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮಾತಿಗೆ ಕಿಮ್ಮತ್ತು ನೀಡುವ ಅಗತ್ಯವಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬಿಬಿಎಂಪಿ ವಿಭಜನೆ ಬಗ್ಗೆ ಎಚ್‌.ಡಿ. ಕುಮಾರಸ್ವಾಮಿ ವಿರೋಧ ವ್ಯಕ್ತಪಡಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ರಾಮನಗರ ಜಿಲ್ಲೆಗೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಲು ಸಮಿತಿ ಶಿಫಾರಸು ಮಾಡಿದೆ. ಇದರಿಂದ ಕಾನೂನು ಸುವ್ಯವಸ್ಥೆ ಹದಗೆಡಲಿದೆ ಎಂದು ಕೇಂದ್ರ ಗೃಹ ಸಚಿವರಿಗೆ ಕುಮಾರಸ್ವಾಮಿ ಹೇಳಿದ್ದಾರೆ. ಹೀಗಾಗಿ ಇದು ಕಾರ್ಯಸಾಧುವಲ್ಲ ಎಂದು ಕೇಂದ್ರ ಗೃಹ ಸಚಿವರು ತಿಳಿಸಿದ್ದಾರೆ. ನಾವು ಹೇಗೆ ನಮ್ಮ ಊರಿಗೆ ಹೆಸರು ಇಟ್ಟುಕೊಳ್ಳಬೇಕು ಎಂಬುದು ಗೊತ್ತಿದೆ' ಎಂದು ಹೇಳಿದರು.

ಉದ್ಯಮಿ ಮೋಹನ್‌ದಾಸ್ ಪೈ ಅವರು ರಾಜ್ಯ ಸರ್ಕಾರವನ್ನು ಟೀಕಿಸುತ್ತಿರುವುದರ ಬಗ್ಗೆ ಕೇಳಿದಾಗ, 'ಅವರು ಕೂಡ ರಾಜಕೀಯಕ್ಕೆ ಬರಲಿ. ರಾಜಕೀಯದ ಪ್ರಕ್ರಿಯೆಯ ಭಾಗವಾಗಲಿ. ಚುನಾವಣೆಯಲ್ಲಿ ಸ್ಪರ್ಧಿಸಿ ಸಚಿವರಾಗಲಿ, ಸಂಸದರಾಗಲಿ. ಆಗ ಅವರಿಗೆ ಕಷ್ಟ ಅರ್ಥವಾಗುತ್ತದೆ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕರ್ನಾಟಕ ಪ್ರವಾಸೋದ್ಯಮ ನೀತಿ'ಯನ್ನು ಬಿಡುಗಡೆ ಮಾಡಿದರು. ಕೆ. ಗೋವಿಂದರಾಜು, ಕೆ.ಎಚ್‌. ಮುನಿಯಪ್ಪ, ರಿಜ್ವಾನ್ ಅರ್ಷದ್, ಎಚ್‌.ಕೆ. ಪಾಟೀಲ, ಡಾ.ಎಂ.ಸಿ.ಸುಧಾಕರ್, ಎನ್‌.ಎಸ್‌. ಬೋಸರಾಜು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಂತರರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ ಉದ್ಘಾಟನೆ

ಪ್ರವಾಸೋದ್ಯಮದಲ್ಲಿ ಹೂಡಿಕೆಗೆ ಸಿ.ಎಂ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವು ಕೇವಲ ಒಂದು ಪ್ರವಾಸಿ ತಾಣವಲ್ಲ. ಬದಲಿಗೆ ಪರಂಪರೆ ಮತ್ತು ಆಧುನಿಕತೆಯ ಸಮ್ಮಿಲನ. ಗತವೈಭವ ಮತ್ತು ಭವಿತವ್ಯದ ಕನಸುಗಳು ಒಗ್ಗೂಡುವ ತಾಣ. ಪ್ರತಿ ಪ್ರವಾಸಿಗನಿಗೂ ಆಪ್ತ ಅನುಭವ ನೀಡುವ ಕರ್ನಾಟಕದಲ್ಲಿ ಪ್ರವಾಸೋದ್ಯಮ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಅದನ್ನು ಬಳಸಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ಟೂರಿಸಂ ಸೊಸೈಟಿ ಜಂಟಿ ಸಹಭಾಗಿತ್ವದಲ್ಲಿ ಆಯೋಜಿಸಿರುವ 'ಕರ್ನಾಟಕ ಅಂತರ-ರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕರ್ನಾಟಕವನ್ನು ಜಾಗತಿಕ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ಕಟಿಬದ್ಧವಾಗಿದೆ. ಹೀಗಾಗಿಯೇ ಬಜೆಟ್‌ನಲ್ಲಿ ದೊಡ್ಡ ಮೊತ್ತದ ಅನುದಾನ ನೀಡಿದ್ದೇವೆ. ಪರಿಸರ ಸ್ನೇಹಿ, ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸಲು ನೂತನ ನೀತಿಯನ್ನು ಜಾರಿಗೆ ತಂದಿದ್ದೇವೆ' ಎಂದರು.

'ಪ್ರವಾಸೋದ್ಯಮ ಬೆಳವಣಿಗೆಗೆ ಖಾಸಗಿ ವಲಯದಿಂದ ಬಂಡವಾಳ ಹೂಡಿಕೆಯೂ ಅತ್ಯವಶ್ಯ. ರಾಜ್ಯದಲ್ಲಿ ಹೂಡಿಕೆ ಮಾಡುವುದಿದ್ದರೆ, ಸರ್ಕಾರವು ಎಲ್ಲ ರೀತಿಯ ಸಹಕಾರ ಮತ್ತು ನೆರವನ್ನು ಒದಗಿಸಲಿದೆ' ಎಂದು ಖಾಸಗಿ ಪ್ರವಾಸೋದ್ಯಮ ಕಂಪನಿಗಳಿಗೆ ಕರೆ ನೀಡಿದರು.

ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ, 'ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಈ ಎಕ್ಸ್‌ಪೋ ಉತ್ತಮ ವೇದಿಕೆ ಒದಗಿಸಲಿದೆ. ಈ ಎಕ್ಸ್‌ಪೋನಲ್ಲಿ ಭಾರತದ ಕಂಪನಿಗಳು ಮಾತ್ರವಲ್ಲದೇ, ವಿದೇಶಿ ಕಂಪನಿಗಳೂ ಭಾಗಿಯಾಗುತ್ತಿವೆ. ಹೂಡಿಕೆಗೆ ಸಂಬಂಧಿಸಿದಂತೆ ಮಾತುಕತೆ ನಡೆಯಲಿದ್ದು, ಆ ಮೂಲಕ ರಾಜ್ಯದಲ್ಲಿ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಸಾಧ್ಯವಾಗಲಿದೆ' ಎಂದು ಹೇಳಿದರು.

ಬೃಹತ್ ಎಕ್ಸ್‌ಪೋ

90 ಎಕ್ಸ್‌ಪೋದಲ್ಲಿ ಭಾಗಿಯಾಗಲಿರುವ ಜಾಗತಿಕ ಪ್ರವಾಸಿ ಸೇವಾ ಕಂಪನಿಗಳು

30 ದೇಶಗಳ ಪ್ರತಿನಿಧಿಗಳು ಭಾಗಿ

230 ಭಾಗಿಯಾಗಲಿರುವ ದೇಶೀಯ ಪ್ರವಾಸಿ ಸೇವಾ ಕಂಪನಿಗಳು

14,000ಕ್ಕೂ ಹೆಚ್ಚು ಪ್ರತಿನಿಧಿ ಸಭೆಗಳು

- ನಗರದ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ 27–28ರಂದು ಎಕ್ಸ್‌ಪೋ ನಡೆಯಲಿದೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಕಾನಿಇಂ(ವಿ)/ಯೋವಿ–ಉ/ಸಕಾಇಂ(ವಿ)–4/2024–25/7101–03 ದಿನಾಂಕ:24.02.2025

ಸಾರ್ವಜನಿಕರ ತಿಳುವಳಿಕೆಗಾಗಿ/ಮಾಹಿತಿಗಾಗಿ

ಸಾರ್ವಜನಿಕರ ತಿಳುವಳಿಕೆಗಾಗಿ/ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಕ.ವಿ.ಪ್ರ.ನಿ.ನಿ ವತಿಯಿಂದ **66ಕೆವಿ ಏಕಮಾರ್ಗ 1000ಚ.ಮಿ.ಮೀ ಭೂಗತ ಕೇಬಲ್‌ನ್ನು** ಹಾಲಿ ಇರುವ **66/11ಕೆ.ವಿ ಬೂದಿಗೆರೆ ವಿದ್ಯುತ್ ಉಪಕೇಂದ್ರದಿಂದ ಪ್ರಸ್ತಾವಿತ 66/11ಕೆವಿ ಮಂಡೂರು ವಿದ್ಯುತ್ ಉಪಕೇಂದ್ರದವರೆಗೆ ಸುಮಾರು 9.025**ಕಿ.ಮೀ.ನಷ್ಟು ಭೂಗತ ಕೇಬಲ್‌ನ್ನು ಅಳವಡಿಸಲಾಗಿದ್ದು **ದಿನಾಂಕ: 03.03.2025** ರಂದು ಅಥವಾ ತದನಂತರ ಚಾಲನೆಗೊಳಿಸಲಾಗುವುದು.

ಸದರಿ 66ಕೆವಿ ವಿದ್ಯುತ್ ಪ್ರಸರಣ ಮಾರ್ಗವು ಈ ಕೆಳಕಂಡ ರಸ್ತೆ ಮಾರ್ಗದ ಮೂಲಕ ಹಾದುಹೋಗಿರುತ್ತದೆ:– "ಮಂಡೂರು ಗ್ರಾಮ ಪಂಚಾಯಿತಿ ರಸ್ತೆ, ದೇವನಹಳ್ಳಿ ಮುಖ್ಯ ರಸ್ತೆ (ಕೆ.ಆರ್.ಡಿ.ಸಿ.ಎಲ್ ರಸ್ತೆ), ಬೂದಿಗೆರೆ ಗ್ರಾಮ ಪಂಚಾಯಿತಿ ರಸ್ತೆ, ಬೂದಿಗೆರೆ ಉಪಕೇಂದ್ರದ ವರೆಗೆ.

ಆದ್ದರಿಂದ ಈ ಮೇಲ್ಕಂಡ ಭೂಗತ ಕೇಬಲ್ ಹಾದುಹೋಗಿರುವ ಮಾರ್ಗದಲ್ಲಿ ಸಾರ್ವಜನಿಕರು/ಸರ್ಕಾರಿ ಸಂಸ್ಥೆ/ಖಾಸಗಿ ಸಂಸ್ಥೆಯವರು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ ಯಾವುದೇ ಕಾಮಗಾರಿಯನ್ನು ಕ.ವಿ.ಪ್ರ.ನಿ.ನಿಯ ಗಮನಕ್ಕೆ ಬಾರದೇ ಮಾಡಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ ಹಾಗೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಇದರಿಂದ ಆಗುವ ನಿಗಮದ ನಷ್ಟವನ್ನು ಸಂಬಂಧಪಟ್ಟವರು ಭರಿಸತಕ್ಕದ್ದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಯೋಜನೆ ವಿಭಾಗ – ಉತ್ತರ, ಕವಿಪ್ರನಿನಿ, ಎ.ಆರ್.ಸರ್ಕಲ್, ಬೆಂಗಳೂರು–560009.

ಮಾಲ್ ಆಫ್ ಏಷ್ಯಾದಲ್ಲಿ ಹೂಬ್ಲೊ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಷಾರಾಮಿ ಮತ್ತು ದುಬಾರಿ ಕೈಗಡಿಯಾರಗಳಿಗೆ ಹೆಸರುವಾಸಿಯಾದ ಸ್ವಿಟ್ಜರ್ಲೆಂಡ್‌ನ 'ಹೂಬ್ಲೊ' ಭಾರತದಲ್ಲಿ ತನ್ನ ಎರಡನೇ ಮಳಿಗೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದೆ.

ನಗರದ ಬಳ್ಳಾರಿ ರಸ್ತೆಯಲ್ಲಿರುವ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಇರುವ ಮಳಿಗೆಯನ್ನು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಜೂಲಿಯನ್ ಟಾರ್ನರ್ ಬುಧವಾರ ಉದ್ಘಾಟಿಸಿದರು.

'ಹೂಬ್ಲೊ ಕೈಗಡಿಯಾರಗಳಿಗೆ ಭಾರತ ದೊಡ್ಡ ಮಾರುಕಟ್ಟೆ. ಇತರ ಕಂಪನಿಗಳ ಮೂಲಕ ನಮ್ಮ ಕೈಗಡಿಯಾರಗಳು ಮಾರುಕಟ್ಟೆಯಲ್ಲಿ ಇವೆಯಾದರೂ, ಭಾರತದ ಮಾರುಕಟ್ಟೆಯನ್ನು ನೇರವಾಗಿ ಪ್ರವೇಶಿಸಬೇಕೆಂದು ಮಳಿಗೆ ಆರಂಭಿಸಿದೆವು' ಎಂದು ಹೇಳಿದರು.

'ಭಾರತದಲ್ಲಿ ಮೊದಲ ಮಳಿಗೆ ಮುಂಬೈನಲ್ಲಿದೆ. ಬೆಂಗಳೂರು ಸಹ ನಮಗೆ ದೊಡ್ಡ ಮಾರುಕಟ್ಟೆ. ಅದನ್ನು ವಿಸ್ತರಿಸುವ ಉದ್ದೇಶದಿಂದ ಇಲ್ಲಿ ಎರಡನೇ ಮಳಿಗೆಯನ್ನು ಆರಂಭಿಸಲಾಯಿತು' ಎಂದು ಮಾಹಿತಿ ನೀಡಿದರು.

ಮಳಿಗೆಯಲ್ಲಿ ಕಂಪನಿಯ ಐಷಾರಾಮಿ ಮತ್ತು ದುಬಾರಿ ಕೈಗಡಿಯಾರಗಳು ಇವೆ. ವಾರದ ಎಲ್ಲಾ ದಿನವೂ ಬೆಳಗ್ಗೆ 11ರಿಂದ ರಾತ್ರಿ 10ರವರೆಗೆ ಮಳಿಗೆ ತೆರೆದಿರಲಿದೆ.

ನೂತನವಾಗಿ ಉದ್ಘಾಟಿಸಲಾದ ಮಳಿಗೆಯಲ್ಲಿ ಕಂಪನಿಯ ಸಿಇಒ ಜೂಲಿಯನ್ ಟಾರ್ನರ್ ಹೂಬ್ಲೊ ಕೈಗಡಿಯಾರಗಳನ್ನು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಈಶಾ ಕೇಂದ್ರಕ್ಕೆ ತೆರಳುತ್ತಿದ್ದವರ ಸಾವು

ಚಿಕ್ಕಬಳ್ಳಾಪುರ: ನಗರದ ಹೊರ ವಲಯದ ಅಗಲಗುರ್ಕಿ ಸೇತುವೆ ಬಳಿ ಬುಧವಾರ ಸಂಭವಿಸಿದ ಅಪಘಾತದಲ್ಲಿ ನೇಪಾಳ ಮೂಲದ ಸುನೀಲ್ ಮತ್ತು ಕುಜಲ್ ಎಂಬುವವರು ಮೃತಪಟ್ಟಿದ್ದಾರೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ರಲ್ಲಿ ಯಾಂತ್ರಿಕ ಕಾರ್ಯಾಗಾರ ಸ್ಥಾಪನೆಗೆ ಪ್ರಸ್ತಾವಿತ ಸಿವಿಲ್ ಕಾಮಗಾರಿಗಳು; ಎನ್‌ಐಇಟಿ ನಂ: C&MG/LEOS/2024-25/LMN-07/R1; ದಿನಾಂಕ : 18.02.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ :** ರೂ. 6.95 ಲಕ್ಷಗಳು; ಇಎಂಡಿ ರೂ.13,909/–; **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 02 ತಿಂಗಳು; ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 20.02.2025; **ಮುಕ್ತಾಯವಾಗುವ ದಿನಾಂಕ :** 10.03.2025

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

SANSERA
ideas@work

ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್
(CIN: L34103KA1981PLC004542)
ನೋಂದಾಯಿತ ವಿಳಾಸ: ಘಟಕ–7, ಸಂ. 143/ಎ, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು - 560105
ಫೋನ್ ನಂ: +91 80-27839081/82/83; **ಫ್ಯಾಕ್ಸ್ ಸಂ.:** +91 80 27839309
ವೆಬ್‌ಸೈಟ್: www.sansera.in; **ಇಮೇಲ್:** rajesh.modi@sansera.in

ಅಂಚೆ ಮತಪತ್ರ ನೋಟಿಸ್

ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್ ("**ಕಂಪನಿ**") ನ ಸದಸ್ಯರ ಅನುಮೋದನೆಯನ್ನು ಎಲೆಕ್ಟ್ರಾನಿಕ್ ವಿಧಾನಗಳಿಂದ ಅಂಚೆ ಮತಪತ್ರ ("**ಇ–ವೋಟಿಂಗ್**" ಮಾತ್ರ) ಮೂಲಕ ಪಡೆಯಲು, 2025ರ ಫೆಬ್ರವರಿ 10ರ ಅಂಚೆ ಮತಪತ್ರ ನೋಟೀಸ್‌ನಲ್ಲಿ ತಿಳಿಸಿರುವ ನಿರ್ಣಯಗಳಿಗೆ ಸಂಬಂಧಿಸಿದಂತೆ, ಕಂಪನಿಗಳ ಕಾಯಿದೆ, 2013 ("**ಕಾಯಿದೆ**") ರ ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ತಿದ್ದುಪಡಿಗೊಂಡ ಪ್ರಕಾರ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("**ಕಾಯಿದೆ**") ಯ ನಿಯಮ 20 ಮತ್ತು ನಿಯಮ 22, ತಿದ್ದುಪಡಿಗೊಂಡ ಪ್ರಕಾರ, ಭಾರತೀಯ ಷೇರು ವಿನಿಮಯ ಮಂಡಳಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ("**ಸೆಬಿ ಎಲ್‌ಒಡಿಆರ್**") ನ ನಿಯಮಾವಳಿ 44 ರ ನಿಬಂಧನೆಗಳ ಅನುಸಾರವಾಗಿ ಸೂಚನೆಯನ್ನು ನೀಡಲಾಗಿದೆ.

ಮೇಲೆ ತಿಳಿಸಲಾದ ನಿಬಂಧನೆಗಳಿಗೆ ಅನುಗುಣವಾಗಿ, ಅಂಚೆ ಮತಪತ್ರ ನೋಟಿಸ್ ('ನೋಟಿಸ್') ಮತ್ತು ವಿವರಣಾತ್ಮಕ ಹೇಳಿಕೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು 2025ರ ಫೆಬ್ರವರಿ 25 ರಂದು, 2025ರ ಫೆಬ್ರವರಿ 21, ಶುಕ್ರವಾರದಂದು ವ್ಯವಹಾರದ ಮುಕ್ತಾಯದ ಸಮಯದಲ್ಲಿ ('**ಕಟ್–ಆಫ್ ದಿನಾಂಕ**') ಕಂಪನಿ/ಠೇವಣಿದಾರರ ಮೂಲಕ ನಿರ್ವಹಿಸಲ್ಪಡುವ ಸದಸ್ಯರ ರಿಜಿಸ್ಟರ್/ಡೆಪಾಸಿಟರಿಗಳ ಪಟ್ಟಿಯಲ್ಲಿ ಹೆಸರುಗಳು ಕಾಣಿಸಿಕೊಂಡಿರುವ ಮತ್ತು ಕಂಪನಿ/ಡೆಪಾಸಿಟರಿಗಳಲ್ಲಿ ಇ–ಮೇಲ್ ಐಡಿಗಳನ್ನು ನೋಂದಾಯಿಸಿರುವ ಸದಸ್ಯರಿಗೆ ಕಳುಹಿಸಲಾಗಿದೆ.

ತಿದ್ದುಪಡಿಗೊಂಡ ನಿಯಮಗಳೊಂದಿಗೆ ಕಾಯಿದೆಯ ಸೆಕ್ಷನ್ 108, 110 ರ ನಿಬಂಧನೆಗಳು ಮತ್ತು ತಿದ್ದುಪಡಿಗೊಂಡಂತೆ ಲಿಸ್ಟಿಂಗ್ ನಿಯಂತ್ರಣಗಳ ನಿಯಮಾವಳಿ 44 ರ ಅನುಸಾರವಾಗಿ, ಸದಸ್ಯರಿಗೆ ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಆಗಿತ್ತು) ಒದಗಿಸಿದ ರಿಮೋಟ್ ಇ–ವೋಟಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ ಇ–ವೋಟಿಂಗ್ ಮೂಲಕ ಮಾತ್ರ ಎಲೆಕ್ಟ್ರಾನಿಕ್ ಆಗಿ ತಮ್ಮ ಮತಗಳನ್ನು ಚಲಾಯಿಸುವ ಸೌಲಭ್ಯವನ್ನು ಕಂಪನಿಯು ಒದಗಿಸಿದೆ. ರಿಮೋಟ್ ಇ–ವೋಟಿಂಗ್ ಮೂಲಕ ಮತಗಳನ್ನು ಚಲಾಯಿಸಲು ಲಾಗಿನ್ ರುಜುವಾತುಗಳನ್ನು ಸದಸ್ಯರಿಗೆ ಕಳುಹಿಸಲಾದ ನೋಟಿಸ್‌ನ ಟಿಪ್ಪಣಿ ಭಾಗದಲ್ಲಿ ಉಲ್ಲೇಖಿಸಲಾಗಿದೆ. ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿವರವಾದ ವಿಧಾನವನ್ನು ನೋಟಿಸ್‌ನಲ್ಲಿ ನೀಡಲಾಗಿದೆ.

2025ರ ಫೆಬ್ರವರಿ 21ರ ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್/ಡೆಪಾಸಿಟರಿಗಳ ಪಟ್ಟಿಯಲ್ಲಿ ಹೆಸರುಗಳು ಕಾಣಿಸಿಕೊಂಡಿರುವ ಸದಸ್ಯರು ಮಾತ್ರ ನೋಟಿಸ್‌ನಲ್ಲಿ ತಿಳಿಸಲಾದ ನಿರ್ಣಯಗಳ ಮೇಲೆ ರಿಮೋಟ್ ಇ–ವೋಟಿಂಗ್ ಮೂಲಕ ಮಾತ್ರ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಪಾವತಿಸಲ್ಪಟ್ಟ ಈಕ್ವಿಟಿ ಷೇರುಗಳ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಸದಸ್ಯರು ರಿಮೋಟ್ ಇ–ವೋಟಿಂಗ್ ಮೂಲಕ ಮಾತ್ರ ತಮ್ಮ ಸಮ್ಮತಿ (ಪರ) ಅಥವಾ ಭಿನ್ನಾಭಿಪ್ರಾಯ (ವಿರುದ್ಧ) ವನ್ನು ನೀಡುವಂತೆ ವಿನಂತಿಸಲಾಗಿದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ನೋಟಿಸ್ ಅನ್ನು ಮಾಹಿತಿ ಎಂದು ಮಾತ್ರ ಪರಿಗಣಿಸಬೇಕು.

ಇ–ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ:

ಇ–ಮತದಾನ ಆರಂಭದ ದಿನ, ದಿನಾಂಕ ಮತ್ತು ಸಮಯ	ಶನಿವಾರ, ಮಾರ್ಚ್ 1, 2025, ಬೆಳಗ್ಗೆ 9.00 ರಿಂದ (ಭಾರತೀಯ ಕಾಲಮಾನ)
ಇ–ಮತದಾನ ಮುಕ್ತಾಯದ ದಿನ, ದಿನಾಂಕ ಮತ್ತು ಸಮಯ	ಭಾನುವಾರ, ಮಾರ್ಚ್ 30, 2025 ರಂದು ಸಂಜೆ 5.00 (ಭಾರತೀಯ ಕಾಲಮಾನ)

ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತದಾನ ನಡೆಸಲು ಬೆಂಗಳೂರಿನ ಕಂಪನಿ ಕಾರ್ಯದರ್ಶಿ ಸಂಸ್ಥೆಯಾದ ಮೆಸರ್ಸ್ ಬಿಎಂಪಿ ಅಂಡ್ ಕಂ. ಎಲ್‌ಎಲ್‌ಪಿಯ ಸಿಎಸ್ ಪ್ರಮೋದ್ ಎಸ್‌ಎಂ ಅಥವಾ ಸಿಎಸ್ ಬಿಸ್ವಜಿತ್ ಘೋಷ್ ಅವರನ್ನು ಪರಿಶೀಲನಾಧಿಕಾರಿಯಾಗಿ ನೇಮಿಸಲಾಗಿದೆ. ಮತದಾನದ ಫಲಿತಾಂಶಗಳನ್ನು 2025ರ ಏಪ್ರಿಲ್ 1ರ ಸೋಮವಾರದಂದು ಅಥವಾ ಅದಕ್ಕೂ ಮೊದಲು ಪ್ರಕಟಿಸಲಾಗುವುದು. ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ www.sansera.in, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ BSE ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ಕ್ರಮವಾಗಿ [illegible]

[illegible]

ಸನ್‌ಸೇರಾ ಇಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/-
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂ. ಎಫ್5176
ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 26, 2025

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE
My client M/s SHREYA ENGINEERING PVT. LTD, Plot No. 146, III Phase, Peenya Industrial Area, Yeshwanthapura Hobli, Bangalore North Taluk, represented by its Director Mr.Balakrishna Marutirao Kanchani, has lost the original Sale Deed dated 04-03-1996 executed by KIADB in their favour, registered as Document No.167/1996-97, Book-I, Volume 5672, Pages 137-143, dated 15-04-1996, in the Office of Sub-Registrar, Bangalore North Taluk, dated 15-04-1996, along with other relevant original documents like allotment letter, possession certificate bearing No. IADB/2766/6788/82-83 dated: 24-08-82 issued by KIADB, pertaining to property which is described in the schedule hereunder. Public are hereby informed that any person having any right/claim over the said document or over the said property in any manner may lodge their claim/objection, if any, in writing **within 10 days** hereof or the finder may also return the same to my client/undersigned as otherwise it will be treated and presumed that there are no claims / objections from any person.
SCHEDULE PROPERTY
All that piece and parcel of Industrial Plot bearing No.**146**, carved out of Sy.No.**151** of Laggere village, Yeshwanthpura Hobli, Bangalore North Taluk, Bangalore, within BBMP Ward No.41, admeasuring 2054 Sq.Mtrs, now known as Peenya Industrial Area, III Phase, Bengaluru City and bounded on the:
On the East by : Plot No.145
On the West by : Plot No.147
On the North by : Road
On the South by : Plot No.153
K. SOMASEKHAR REDDY
Advocate,
No.1, 1st Floor, MC Plaza,1st Main, Ganganagar, Bengaluru-560032.
Phone No. 94483 81245
Date: 25-02-2025

RENTAL PROPERTIES

Accommodation Available

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

BUSINESS

Business Offers

General

RS.75,000/- TO 1,50000 or more pm net profit, be associate, very low investment, grab opportunity. Rush- 7775842189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
We, **ANAND HIREMATH** and **SUMA T.M** R/a, A-1203, SJR Vogue Residences, EPIP Zone, Road #7, Whitefield, Bengaluru-560066 have changed our minor Son's Name from **ISHAN ANAND HIREMATH** to **ISHAN HIREMATH** (DOB: 28.01.2010) vide affidavit dated: 15.2.2025 before Notary J. Anand Kumar, Bangalore.

I SRUTHI Rathish Kumar D/O, Vasudevan M R/o G3 A BlockElegence Lalbagh View ApartmentJayanagar 1st Block Bengaluru 560011 have changed my name to Sruthi V.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD ಪ್ರಜಾವಾಣಿ
Classifieds
More value, more impact
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
www.dhclassifieds.com
BOOK NOW
@550/-* PER SQCM
*Conditions apply
For more details contact:
+91 9886213331 | +91 9845114560
+91 9731810277 | 080- 45557163/164

₹100ರ ಗಡಿ ದಾಟಿದ ವೀಳ್ಯದೆಲೆ ಬೆಲೆ

ಮದುವೆ, ಜಾತ್ರೆಗಳಿಂದಾಗಿ ಬೇಡಿಕೆ ಹೆಚ್ಚಳ: ಕಡಿಮೆಯಾದ ಪೂರೈಕೆ

• ಸಿ. ಜಿ ಮೋಹನ್ ಕುಮಾರ್

ದಾಬಸ್‌ಪೇಟೆ: ಹಬ್ಬ, ಜಾತ್ರೆ, ಸಮಾರಂಭಗಳು ಸಾಲು ಸಾಲಾಗಿ ಆರಂಭವಾಗಿರುವುದರಿಂದ ವೀಳ್ಯದೆಲೆಯ ಬೆಲೆ ಆಕಾಶಮುಖ ಮಾಡಿದೆ. ಒಂದು ಕಟ್ಟು ಎಲೆಯ ದರ ₹100 ದಾಟಿದೆ.

ಕಪ್ಪುಬಣ್ಣದ, ಚುಕ್ಕಿ ಇರುವ ಎಲೆಯೇ ಕಟ್ಟಿಗೆ ₹80 ರೂಪಾಯಿ ಇದ್ದರೆ, ಬಿಳಿ ಬಣ್ಣದ ಚಿಗುರೆಲೆಯ ಕಟ್ಟು ₹120ರಿಂದ ₹130ರವರೆಗೆ ಮಾರಾಟವಾಗುತ್ತಿದೆ. ಸಮಾರಂಭ ನಡೆಸುವವರಿಗೆ ಎಲೆಯ ಬೆಲೆಯೇ ಬಿಸಿಯಾಗಿದೆ. ಚಳಿಗಾಲದಲ್ಲಿ ವೀಳ್ಯದೆಲೆ ಬಳ್ಳಿಯಲ್ಲಿ (ಅಂಬು) ಹೊಸ ಚಿಗುರು ಬರುವುದಿಲ್ಲ. ಇದರಿಂದ ವೀಳ್ಯದೆಲೆ ಹೇರಳವಾಗಿ ಸಿಗುವುದಿಲ್ಲ ಇದು ಬೆಲೆ ಏರಿಕೆಗೆ ಕಾರಣವಾಗಿದೆ.

ಹಿಂದೆ ಒಂದು ಕಟ್ಟು ವೀಳ್ಯದೆಲೆ ದರ ₹60ರಿಂದ ₹70 ಇರುತ್ತಿತ್ತು. ಮೂರು ವರ್ಷಗಳಿಂದಲೂ ದರ ₹100ರ ಗಡಿ ದಾಟುತ್ತಿದೆ ಎಂದು ವ್ಯಾಪಾರಸ್ಥರು ತಿಳಿಸಿದರು.

ದರ ಕಡಿಮೆ ಇದ್ದಾಗ ಕಟ್ಟಿನಲ್ಲಿ 100 ರಿಂದ 120 ಎಲೆ ಇರುತ್ತವೆ. ಎಲೆಯ ಗುಣಮಟ್ಟವೂ ಉತ್ತಮವಾಗಿರುತ್ತದೆ. ಆದರೆ, ದರ ಏರಿಕೆ ಆಗಿರುವುದರಿಂದ ಕಟ್ಟಿನಲ್ಲಿರುವ ಎಲೆಗಳ ಸಂಖ್ಯೆ ಕೂಡ ಕಡಿಮೆಯಾಗಿದೆ. ಜೊತೆಗೆ ಕಟ್ಟಿನ ಮಧ್ಯೆ ಸಣ್ಣ ಹಾಗೂ ಹರಿದ ಎಲೆಗಳನ್ನು ಜೋಡಿಸುತ್ತಿದ್ದಾರೆ ಎಂದು ಗ್ರಾಹಕರು ಅಳಲು ತೋಡಿಕೊಂಡರು.

'ವೀಳ್ಯದೆಲೆಯ ತೋಟಗಳು ಕಡಿಮೆ ಆಗುತ್ತಿವೆ. ಮದುವೆ, ಗೃಹಪ್ರವೇಶ, ಜಾತ್ರೆಯಂತಹ ಸಮಾರಂಭಗಳು ಹೆಚ್ಚಾಗಿ ನಡೆಯುವುದರಿಂದ ವೀಳ್ಯದೆಲೆಗೆ ಬೇಡಿಕೆ ಹೆಚ್ಚಾಗಿ ದರ ಅಧಿಕಗೊಂಡಿದೆ. ಬೇಸಿಗೆ ಆರಂಭವಾಗಿರುವುದೂ ಪೂರೈಕೆ ಕುಸಿತಕ್ಕೆ ಕಾರಣ' ಎಂದು ಮಾರಾಟಗಾರ ರಾಮಣ್ಣ ಹೇಳಿದರು.

ಡಿಸೆಂಬರ್‌ನಲ್ಲಿ ಕಟ್ಟಿಗೆ ₹50 ರಿಂದ ₹70ರ ಆಸುಪಾಸಿನಲ್ಲಿದ್ದ ದರವು ಜನವರಿ ವೇಳೆಗೆ ಹೆಚ್ಚಾಗಿತ್ತು. ಈಚೆಗೆ ನಿತ್ಯವು ದರ ಏರಿಕೆ ಆಗುತ್ತಿದೆ. ಸಾಧಾರಣ ಗುಣಮಟ್ಟದ ಎಲೆ ಕೂಡ ₹100ಕ್ಕೆ ಸಿಗುತ್ತಿಲ್ಲ. ಮುಂಗಾರು ಮಳೆ ಆರಂಭವಾಗಿ ಅಂಬುಗಳನ್ನು ಇಳಿಸಿ ಕಟ್ಟಿದ ಮೇಲೆ ಹೊಸ ಚಿಗುರು ಬಂದ ನಂತರವಷ್ಟೇ ದರ ಇಳಿಕೆ ಆಗಲಿದೆ ಎಂದರು.

ಅಂಗಡಿಯ ಮುಂದೆ ಮಾರಾಟಕ್ಕೆ ಜೋಡಿಸಿರುವ ಎಲೆ ಪೆಂಡಿ

> ನಮಗೆ ಆಗಾಗ ಎಲೆ ಅಡಿಕೆ ತಿನ್ನುವ ಅಭ್ಯಾಸ. ಆದರೆ ವೀಳ್ಯದೆಲೆ ಬೆಲೆ ಏರುತ್ತಿದ್ದು, ಹತ್ತು ರೂಪಾಯಿಗೆ ಐದಾರು ಎಲೆ ಕೊಡುತ್ತಿದ್ದಾರೆ. ಅನಿವಾರ್ಯವಾಗಿ ಬಳಕೆ ಕಡಿಮೆ ಮಾಡಿದ್ದೇವೆ
> **ಮುತ್ತಾಲಮ್ಮ,** ಗ್ರಾಹಕಿ

ಬೆಂಕಿಗೆ ಆಹುತಿಯಾದ ಕಾರ್ಖಾನೆ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿರುವ ಗಮ್ ತಯಾರಿಕೆ ಕಾರ್ಖಾನೆಯಲ್ಲಿ ಬುಧವಾರ ಸಂಜೆ ಬೆಂಕಿ ಕಾಣಿಸಿಕೊಂಡು, ಇಡೀ ಕಾರ್ಖಾನೆ ಹೊತ್ತಿ ಉರಿದಿದೆ.

ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರೆಲ್ಲರೂ ಸ್ಥಳದಿಂದ ಓಡಿ ಹೋಗಿ ಅಪಾಯದಿಂದ ಪಾರಾಗಿದ್ದಾರೆ. ಹಾರೋಹಳ್ಳಿಯಲ್ಲಿ ಕಳೆದ ಹದಿನೈದು ದಿನಗಳಲ್ಲಿ ಸಂಭವಿಸಿರುವ ಮೂರನೇ ಅಗ್ನಿ ಅನಾಹುತ ಇದಾಗಿದೆ.

ಕಾರ್ಖಾನೆಯಲ್ಲಿ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿಯು ಕೆಲವೇ ಕ್ಷಣಗಳಲ್ಲಿ ತನ್ನ ಕೆನ್ನಾಲಿಗೆಯನ್ನು ಎಲ್ಲಾ ಕಡೆಗೆ ಚಾಚಿದ್ದು, ಇಡೀ ಕಾರ್ಖಾನೆಯನ್ನು ಆವರಿಸಿಕೊಂಡಿದೆ. ವಿಷಯ ತಿಳಿಯುತ್ತಿದ್ದಂತೆ ಕನಕಪುರ, ರಾಮನಗರ, ಚನ್ನಪಟ್ಟಣದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು 8 ತಾಸಿಗೂ ಹೆಚ್ಚು ಹೊತ್ತು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಬೆಂಕಿ ಅವಘಡದಿಂದಾಗಿ ಅಕ್ಕಪಕ್ಕದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಗಮ್ ತಯಾರಿಕೆ ಕಾರ್ಖಾನೆಯಲ್ಲಿ ಬುಧವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿತು

ನಿಧನ ವಾರ್ತೆ

ಜಿ.ಕೆ. ಓಬಯ್ಯ

ಬೆಂಗಳೂರು: ಕರ್ನಾಟಕ ಆರ್ಯ ಈಡಿಗ ಸಂಘದ ಮಾಜಿ ಉಪಾಧ್ಯಕ್ಷರಾಗಿದ್ದ ಉದ್ಯಮಿ ಜಿ.ಕೆ. ಓಬಯ್ಯ (89) ಬುಧವಾರ ಶ್ರೀನಗರದಲ್ಲಿರುವ ಅವರ ಮನೆಯಲ್ಲಿ ನಿಧನರಾದರು.

ಸುಧಾ ಕೊ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷರಾಗಿ, ಕರ್ನಾಟಕ ವೈನ್ ಮರ್ಚೆಂಟ್ ಅಸೋಸಿಯೇಶನ್ ಉಪಾಧ್ಯಕ್ಷರಾಗಿ, ಬಸವನಗುಡಿ ವಿದ್ಯಾರಣ್ಯ ಯುವಕರ ಸಂಘದ ಸ್ಥಾಪಕ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

ಅವರಿಗೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 2ಕ್ಕೆ ಬನಶಂಕರಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಗಾಂಧಿ ಸಿನಿಮಾ ಕ್ಲಬ್ ಉದ್ಘಾಟನೆ, 'ಗಾಂಧಿ' ಸಿನಿಮಾ ಪ್ರದರ್ಶನ ಹಾಗೂ ಸಂವಾದ ಸರಣಿಗೆ ಚಾಲನೆ: ಗಿರೀಶ್ ಕಾಸರವಳ್ಳಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಶಯ ನುಡಿ: ಎನ್. ಆರ್. ವಿಶುಕುಮಾರ್, ಉಪಸ್ಥಿತಿ: ಎಸ್.ಜಿ. ಸಿದ್ಧರಾಮಯ್ಯ, ಎಚ್.ಬಿ. ದಿನೇಶ್, ಜಿ.ಬಿ. ಶಿವರಾಜ್, ಅನಿದಾ ಬೇಗಂ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ರಾಷ್ಟ್ರೀಯ ತೋಟಗಾರಿಕಾ ಮೇಳ–2025: ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಡಾ.ಸಿ.ಎನ್. ಮಂಜುನಾಥ್, ಎಸ್.ಆರ್. ವಿಶ್ವನಾಥ್, ಅಶೋಕ್ ದಳವಾಯಿ, ವೈ.ಎಸ್. ಪಾಟೀಲ್, ಡಿ.ಎಸ್. ರಮೇಶ್, ತುಷಾರ್ ಕಾಂತಿ ಬೆಹೆರಾ, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್), ಹೆಸರಘಟ್ಟ, ಬೆಳಿಗ್ಗೆ 11.15

ಕರ್ನಾಟಕ ವಿಧಾನಸಭೆ 'ಪುಸ್ತಕ ಮೇಳ-2025' ಉದ್ಘಾಟನೆ: ಸಿದ್ದರಾಮಯ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಯು.ಟಿ. ಖಾದರ್, ಬಸವರಾಜ ಹೊರಟ್ಟಿ, ಅತಿಥಿಗಳು: ಚಂದ್ರಶೇಖರ ಕಂಬಾರ, ದಾಮೋದರ್ ಮೌಜೋ, ಆರ್. ಅಶೋಕ, ಎಚ್.ಕೆ. ಪಾಟೀಲ, ಛಲವಾದಿ ನಾರಾಯಣಸ್ವಾಮಿ, ಕೆ.ಜೆ. ಜಾರ್ಜ್, ರುದ್ರಪ್ಪ ಲಮಾಣಿ, ಸತೀಶ್ ಜಾರಕಿಹೊಳಿ, ಆಯೋಜನೆ: ಕರ್ನಾಟಕ ವಿಧಾನಸಭೆ, ಸ್ಥಳ: ವಿಧಾನಸೌಧದ ಆವರಣ, ಸಂಜೆ 4

'ಶಿವಶರಣರಾದ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನ ಪರಿಚಯ' ಉಪನ್ಯಾಸ: ಸುಜಾತಾ ಲಕ್ಷ್ಮೀಪುರ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ವಚನ ದರ್ಶನ' ಮಿಥ್ಯ v/s ಸತ್ಯ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ತೋಂಟದ ಸಿದ್ಧರಾಮ ಸ್ವಾಮೀಜಿ, ಬಸವಲಿಂಗ ಪಟ್ಟದ್ದೇವರು, ಗಂಗಾ ಮಾತಾಜಿ, ಶಿವರುದ್ರ ಸ್ವಾಮೀಜಿ, ಅಲ್ಲಮಪ್ರಭು ಸ್ವಾಮೀಜಿ, ಶರಶ್ಚಂದ್ರ ಸ್ವಾಮೀಜಿ, ಆನ್‌ಲೈನ್ ಲಿಂಗಾಯತ ಮಾಸಿಕ ಪತ್ರಿಕೆ ಉದ್ಘಾಟನೆ: ಬಸವರಾಜ ಹೊರಟ್ಟಿ, ಪುಸ್ತಕ ಬಿಡುಗಡೆ: ಎಂ.ಬಿ. ಪಾಟೀಲ, ಅತಿಥಿಗಳು: ಶಾಮನೂರು ಶಿವಶಂಕರಪ್ಪ, ಗೊ.ರು. ಚನ್ನಬಸಪ್ಪ, ಶಂಕರ ಬಿದರಿ, ಪ್ರಾಸ್ತಾವಿಕ ನುಡಿ: ಶಿವಾನಂದ ಜಾಮದಾರ, ಪುಸ್ತಕ ಪರಿಚಯ: ಟಿ.ಆರ್. ಚಂದ್ರಶೇಖರ, ಆಯೋಜನೆ: ಜಾಗತಿಕ ಲಿಂಗಾಯತ ಮಹಾಸಭಾ, ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಸ್ಥಳ: ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬಸವೇಶ್ವರ ರಸ್ತೆ, ಬೆಳಿಗ್ಗೆ 11



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

'ಡಾ. ಬೇಲೂರು ರಘುನಂದನ್ ಏಕವ್ಯಕ್ತಿ ನಾಟಕೋತ್ಸವ', ರಂಗಬದುಕು ಐದನೇ ವರ್ಷದ ಸಂಭ್ರಮ–2025: ಅತಿಥಿಗಳು: ವೈಷ್ಣವಿ, ಎಸ್.ಈ. ಸುಧೀಂದ್ರ, 'ಅಕ್ಕಯ್' ನಾಟಕ ಪ್ರದರ್ಶನ: ರಂಗರೂಪ ನಿರ್ದೇಶನ: ಬೇಲೂರು ರಘುನಂದನ್, ಸಂಗೀತ: ರಾಜ್‌ಗುರು, ಪ್ರಸ್ತುತಿ: ಕಾಜಾಣ ಮತ್ತು ರಂಗಪಯಣ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ವಿವಿಧೆಡೆ ಶಿವಭಕ್ತಿಯಲ್ಲಿ ಮಿಂದೆದ್ದ ಭಕ್ತ ಸಮೂಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಶಿವರಾತ್ರಿ ಪ್ರಯುಕ್ತ ನಗರದ ವಿವಿಧೆಡೆ ಭಕ್ತಿ ಮತ್ತು ಸಡಗರದಿಂದ ಶಿವನ ಪೂಜೆ, ಜಾಗರಣೆಗಳು ಬುಧವಾರ ನಡೆದವು.

ದಾಬಸ್ ಪೇಟೆ ವರದಿ: ಸೋಂಪುರ ಹೋಬಳಿಯ ಶಿವ ದೇವಾಲಯಗಳಲ್ಲಿ 'ಶಿವರಾತ್ರಿ' ಹಬ್ಬದ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಓಂ ನಮಃ ಶಿವಾಯ, ಹರಹರ ಮಹದೇವ, ಶಂಭೋ ಶಂಕರ ಎಂಬ ಜಯಘೋಷ ಮಾರ್ದನಿಸಿತು. ರುದ್ರಪಠಣ, ಅಭಿಷೇಕ, ಬಿಲ್ವಪತ್ರೆ ಅಭಿಷೇಕ ಮಾಡಲಾಯಿತು.

ಶಿವಗಂಗೆಯ ಗಂಗಾಧರೇಶ್ವರ, ದಾಬಸ್ ಪೇಟೆ ಪಟ್ಟಣದ ಸೋಮೇಶ್ವರ, ದೇವರಹೊಸಹಳ್ಳಿಯ ವೀರಭದ್ರ ಸ್ವಾಮಿ, ಹಳೇನಿಜಗಲ್ಲಿನ ಉದ್ಯಾನ ವೀರಭದ್ರ, ಕರಿಮಣ್ಣೆಯ ಈಶ್ವರ ದೇವಾಲಯ, ಹೆಗ್ಗುಂದ ವೀರಭದ್ರ ದೇವಾಲಯಗಳು ತಳಿರು ತೋರಣ, ಹೂವುಗಳಿಂದ ಅಲಂಕಾರಗೊಂಡಿದ್ದವು.

ಬುಧವಾರ ಬೆಳಿಗ್ಗೆ 5ಕ್ಕೆ ದೇವಾಲಯದ ಬಾಗಿಲು ತೆರೆದು ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಉಪವಾಸದ ಮೂಲಕ ಭಕ್ತಿಯಿಂದ ದೇವರ ದರ್ಶನ ಮಾಡಿದರು. ದೇವಾಲಯಗಳಲ್ಲಿ ಭಜನೆ ನಡೆಸಲಾಯಿತು. ಭಕ್ತರಿಗೆ ಹಣ್ಣಿನ ರಸಾಯನ ಪಾನಕ ಹಂಚಲಾಯಿತು

ಕೆ.ಆರ್.ಪುರ ವರದಿ: ವೆಂಗಯ್ಯನ ಕೆರೆ ಸಮೀಪದ ಇತಿಹಾಸ ಪ್ರಸಿದ್ಧ ಶ್ರೀಮಹಾಬಲೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

ಬುಧವಾರ ಮುಂಜಾನೆಯಿಂದಲೇ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ ಪಂಚಾಮೃತ ಅಭಿಷೇಕ, ಹೋಮ ಹವನಗಳು ನಡೆದವು. ಕೆ.ಆರ್.ಪುರ, ಮೇಡಹಳ್ಳಿ, ರಾಮಮೂರ್ತಿನಗರ, ಬಾಣಸವಾಡಿ, ಹೊಸಕೋಟೆ, ಆವಲಹಳ್ಳಿ, ಅಯ್ಯಪ್ಪನಗರ ಟಿ.ಸಿ.ಪಾಳ್ಯ ಸುತ್ತಮುತ್ತಲಿನಿಂದ ಬಂದ ಭಕ್ತರು ಸರತಿ ಸಾಲಿನಲ್ಲಿ ನಿಂತು ಶಿವನ ದರ್ಶನ ಪಡೆದರು.

ಅಹೋರಾತ್ರಿ ಜಾಗರಣೆ ಪ್ರಯುಕ್ತ ಭಜನೆ, ಭಕ್ತಿಗೀತೆಗಳ ಗಾಯನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲಾಗಿತ್ತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಈಶಾ ಯೋಗ ಕೇಂದ್ರಕ್ಕೆ ಭಕ್ತರ ದಂಡು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಅಗಲಗುರ್ಕಿಯ ಈಶಾ ಯೋಗ ಕೇಂದ್ರಕ್ಕೆ ಶಿವರಾತ್ರಿಯ ಪ್ರಯುಕ್ತ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರು. ಬೆಳಿಗ್ಗೆಯಿಂದ ರಾತ್ರಿ 8ರವರೆಗೂ ಬೆಂಗಳೂರಿನಿಂದ ಬಿಎಂಟಿಸಿ ಬಸ್‌ಗಳು ಯೋಗ ಕೇಂದ್ರಕ್ಕೆ ಬರುತ್ತಿದ್ದವು.

ಚಿಕ್ಕಬಳ್ಳಾಪುರದಿಂದ ಈಶಾ ಯೋಗ ಕೇಂದ್ರಕ್ಕೆ ಸಾಗುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಿತ್ತು. ಕೊಯಮತ್ತೂರಿನ ಈಶ ಯೋಗಕೇಂದ್ರದಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯು ನೇರ ಪ್ರಸಾರವನ್ನು ರಾತ್ರಿ ಸೇರಿದ್ದ ಭಕ್ತರು ಕಣ್ತುಂಬಿಕೊಂಡರು.

ಬುಧವಾರ ಬೆಳಿಗ್ಗೆ ಈಶಾ ಯೋಗ ಕೇಂದ್ರದ ಸುತ್ತಮುತ್ತಲಿನ ಗ್ರಾಮಗಳ ಸ್ಥಳೀಯ ಸಮುದಾಯಗಳ ಸದಸ್ಯರು ಅಂಗಡಿಗಳನ್ನು ಸ್ಥಾಪಿಸಿ ಕಡಲೆಕಾಯಿ, ಜೋಳ ಮತ್ತು ಎಳೆನೀರು ಸೇರಿದಂತೆ ಸ್ಥಳೀಯವಾಗಿ ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಿದರು. ಗೋಶಾಲೆಯಲ್ಲಿ ದೇಸಿ ತಳಿಯ ಜಾನುವಾರುಗಳನ್ನು ಪ್ರದರ್ಶಿಸಲಾಯಿತು.

'ಶಿವಶಕ್ತಿಯಿಂದ ಅಧ್ಯಾತ್ಮದ ಬೆಳಕು'

'ಶಿವಶಕ್ತಿಯು ಭಕ್ತರಿಗೆ ವಿವೇಕ, ನಿರ್ಭಯ ಮತ್ತು ಅಧ್ಯಾತ್ಮಿಕ ಬೆಳಕನ್ನು ನೀಡುತ್ತದೆ' ಎಂದು ಕಣ್ವ ಮಠದ ವಿದ್ಯಾಕಣ್ವವಿರಾಜ ಸ್ವಾಮೀಜಿ ತಿಳಿಸಿದರು.

ಬೆಂಗಳೂರಿನ ಮಹದೇವಪುರ ಬಡಾವಣೆಯಲ್ಲಿ ಮಹಾಶಿವರಾತ್ರಿ ಅಂಗವಾಗಿ ನಡೆದ ವಿಠ್ಠಲ ಕೃಷ್ಣನ ಸಂಸ್ಥಾನ ಪೂಜೆ ನಂತರ ಆಶೀರ್ವಚನ ನೀಡಿದರು.

ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ಶಿವರಾತ್ರಿ ಹಿಂದುಗಳೆಲ್ಲರೂ ಒಟ್ಟಾಗಿ ಆಚರಿಸುವ ದೊಡ್ಡ ಹಬ್ಬವಾಗಿದೆ ಎಂದು ಹೇಳಿದರು.

ಪಾದಪೂಜೆ, ಮುದ್ರಾ ಧಾರಣ, ಹರಿನಾಮ ಸ್ಮರಣೆ, ಸಂಸ್ಥಾನ ಪೂಜೆ, ಮಹಾಮಂಗಳಾರತಿ ನಡೆಯಿತು.

ಮಲ್ಲೇಶ್ವರದಲ್ಲಿರುವ ದಕ್ಷಿಣ ಮುಖ ನಂದಿ ತೀರ್ಥ ಕಲ್ಯಾಣಿ ದೇವಸ್ಥಾನದಲ್ಲಿ ಶಿವಲಿಂಗವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು



ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಮಲ್ಲಿಕಾರ್ಜುನ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು

ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಭಕ್ತಾದಿಗಳು ದೇವರ ದರ್ಶನ ಪಡೆದರು ಚಿತ್ರಗಳು: ಎಂ.ಎಸ್.ಮಂಜುನಾಥ್

ಶಿವಧ್ಯಾನ, ಶಿವಪೂಜೆ, ಶಿವಗಾನ, ಶಿವನಾಟ್ಯಗಳಿಗೆ ಸಾಕ್ಷಿಯಾದ ಶಿವಾಲಯಗಳು • ಶಿವಲಿಂಗಕ್ಕೆ ಕ್ಷೀರಾಭಿಷೇಕ

ಮಹಾಶಿವರಾತ್ರಿ: ದೇವಸ್ಮರಣೆಯ ಜಾಗರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಶಿವರಾತ್ರಿ ನಿಮಿತ್ತ ಬುಧವಾರ ಶಿವಾಲಯಗಳಲ್ಲಿ ಶಿವಧ್ಯಾನ, ಶಿವಪೂಜೆ, ಶಿವಗಾನ, ಶಿವನಾಟ್ಯಗಳು ಸಮ್ಮಿಲನಗೊಂಡವು. ಭಕುತರ ಹೃದಯ ಮಂದಿರದಲ್ಲಿ 'ಓಂ ನಮಃ ಶಿವಾಯ' ಜಪ ಮೊಳಗಿತು.

ಬೆಳಿಗ್ಗೆಯೇ ಶಿವ ದೇವಾಲಯಗಳತ್ತ ಭಕ್ತರ ದಂಡು ಹರಿದುಬಂದಿತ್ತು. ಮನೆಯ ಮುಂದೆ, ದೇಗುಲಗಳ ಮುಂದೆ ಭಕ್ತಿಯ ರಂಗೋಲಿಯ ಚಿತ್ತಾರಗಳು ಅರಳಿದವು. ಭಕ್ತಿ ಮತ್ತು ಸಂಭ್ರಮ ಮೇಳೈಸಿದ ಜಾಗರಣೆಗಳು ನಡೆದವು.

ಜನರು ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿದರು. ಹಿರಿಯರು, ಕಿರಿಯರು ಶಿವಲಿಂಗಕ್ಕೆ ಕ್ಷೀರಾಭಿಷೇಕ ನೆರವೇರಿಸಿದರು. ಹೂವಿನ ಅಲಂಕಾರ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಮಹಾಲಕ್ಷ್ಮೀ ಹೋಮ, ವಿಶೇಷ ರುದ್ರ ಹೋಮ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ನಡೆದವು.

ಗವಿಪುರದ ಗವಿಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಾಲಯ, ಟೆಂಪಲ್ ಸ್ಟ್ರೀಟ್‌ನ ದಕ್ಷಿಣಮುಖ ನಂದಿ ತೀರ್ಥ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಚನ್ನಮ್ಮನ ಕೆರೆ ಅಚ್ಚುಕಟ್ಟು ಪ್ರದೇಶದ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಕೋಣನಕುಂಟೆಯ ಚಂದ್ರಚೂಡೇಶ್ವರ ದೇವಸ್ಥಾನ, ಬಸವನಗುಡಿಯ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಚಾಮರಾಜಪೇಟೆಯ ಮಲೆ ಮಹದೇಶ್ವರ ದೇವಸ್ಥಾನ, ಹಳೆ ವಿಮಾನ ನಿಲ್ದಾಣ ರಸ್ತೆಯ ಮುರುಗೇಶ ಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಠೇಶ್ವರ ದೇವಸ್ಥಾನ ಸೇರಿ ಪ್ರಮುಖ ದೇಗುಲಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು.

'ದಕ್ಷ ಯಜ್ಞ' ನಾಟಕ ಪ್ರದರ್ಶನ, 'ಶಿವ ನಾದಾನುಭವ' ಭಕ್ತಿ ಗೀತೆಗಳ ಗಾಯನ, 'ವೀಣಾ ವಾದನ', 'ಶಿವಾಮೃತ', 'ಶಿವ ಸ್ಮರಣೆ', 'ಶಿವತಾಂಡವ', 'ಶಿವಾರ್ಪಣಂ' ಭರತನಾಟ್ಯ' ಪ್ರದರ್ಶನವನ್ನು ಕಾಡುಮಲ್ಲೇಶ್ವರ ಬಯಲು ರಂಗಮಂಟಪದಲ್ಲಿ ಕಾಡುಮಲ್ಲೇಶ್ವರ ಗೆಳೆಯರ ಬಳಗದವರು ಹಮ್ಮಿಕೊಂಡಿದ್ದರು.

ಮಲ್ಲೇಶ್ವರದಲ್ಲಿರುವ ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ 'ಮೃತ್ತಿಕಾ ಶಿವಲಿಂಗ ದರ್ಶನ', 'ರುದ್ರಾಭಿಷೇಕ' ನಡೆಯಿತು. ಚಿಕ್ಕಲಾಲ್‌ಬಾಗ್ ತುಳಸಿ ತೋಟ ಆಟದ ಮೈದಾನದಲ್ಲಿ 'ಜಾಣ ಜಾಣೆಯರ ನಗೆ ಜಾಗರಣೆ, ಶಿವಪಾರ್ವತಿಯರ ಅಂಬಾರಿ ಉತ್ಸವ'ಗಳು ಮನ ಸೆಳೆದವು. ಎಂ.ಎಸ್. ನರಸಿಂಹಮೂರ್ತಿ, ಕೃಷ್ಣೇಗೌಡ, ಮಿಮಿಕ್ರಿ ದಯಾನಂದ್, ಮಿಮಿಕ್ರಿ ಗೋಪಿ ಸೇರಿದಂತೆ ಹಲವು ಹಾಸ್ಯ ಕಲಾವಿದರು ನಗೆಬುಗ್ಗೆ ಉಕ್ಕಿಸಿದರು.

ಜೆ.ಪಿ. ನಗರ ಮೂರನೇ ಹಂತದಲ್ಲಿ ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್ ವತಿಯಿಂದ ಭಕ್ತಿ ಗೀತೆಗಳು, ಭಜನೆ, ಹರಿಕಥೆ, ಭರತನಾಟ್ಯ ಪ್ರದರ್ಶನ, ಕೊಳಲು ವಾದನ ಆಯೋಜಿಸಲಾಗಿತ್ತು. ವಿದ್ಯಾರಣ್ಯಪುರ ಎನ್‌ಟಿಐ ಮೈದಾನದಲ್ಲಿ ಕಥಾಶಾಸ್ತ್ರ ನಡೆಯಿತು. ಕೆಂಗೇರಿ ಉಪನಗರದ ಗಣೇಶ ದೇವಸ್ಥಾನದ ಆಟದ ಮೈದಾನದಲ್ಲಿ ಶಿವವೈಭವ ನಡೆಯಿತು. ಅಮರನಾಥ ಹಿಮದ ಜ್ಯೋತಿರ್ಲಿಂಗ ದರ್ಶನ, ಆದಿಯೋಗಿ ಶಿವನ ದರ್ಶನ, ಪ್ರಸಾದ ವಿನಿಯೋಗ ಮಾಡಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಶಂಕರಪುರ ಶೃಂಗೇರಿ ಶಂಕರ ಮಠದಲ್ಲಿ ರೋಟರಿ ಸೃಷ್ಟಿ ಶಿವರಾತ್ರಿ ಸಂಸ್ಕೃತಿ ಉತ್ಸವ ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿತ್ತು. 'ನಾದಸ್ವರ' ಕೂಚಿಪುಡಿ ನೃತ್ಯ, ಭರತನಾಟ್ಯ, ಗಾಯನಗಳು ನಡೆದವು. ಜ್ಞಾನಭಾರತಿ ಜ್ಞಾನ ಮುನೇಶ್ವರ ಸ್ವಾಮಿ ದೇವಾಲಯದಲ್ಲಿ ಗಣ ಹೋಮ, ಪಂಚಾಮೃತ ಅಭಿಷೇಕ, ಅಲಂಕಾರ, ತೀರ್ಥ ಪ್ರಸಾದ ವಿನಿಯೋಗಗಳಾದವು.

ಜಯನಗರ ನಾಲ್ಕನೇ ಬ್ಲಾಕ್‌ನಲ್ಲಿರುವ ಬಿ.ಎಸ್. ಚಂದ್ರಶೇಖರ್ ಆಟದ ಮೈದಾನದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದಿಂದ ವೀರಗಾಸೆ ಕುಣಿತ, ಸ್ಯಾಕ್ಸೋಫೋನ್, ಹಾಸ್ಯ ಕಾರ್ಯಕ್ರಮ, ಶಿವ ತಾಂಡವ ನೃತ್ಯ ವೈಭವ, ಸಂಗೀತ ಕಾರ್ಯಕ್ರಮ, ವಾಸುಕಿ ವೈಭವ ನಡೆದವು.

ಕೆಂಪೇಗೌಡನಗರ ಬಂಡೆ ಮಹಾಂಕಾಳಿ ದೇವಾಲಯದಲ್ಲಿ 'ದಕ್ಷ ಯಜ್ಞ ಅಥವಾ ಭೃಗುಮುನಿಯ ಗರ್ವಭಂಗ' ನಾಟಕ ಪ್ರದರ್ಶನ, ಅಬ್ಬಿಗೆರೆ ಸೋಮೇಶ್ವರಸ್ವಾಮಿ ದೇವಸ್ಥಾನ, ಸಹಸ್ರಾರು ದೀಪೋತ್ಸವ, ರಾತ್ರಿ ಜಾಗರಣೆಗಳಾದವು.

ಮಲ್ಲೇಶ್ವರದಲ್ಲಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಶನ್ ವತಿಯಿಂದ ಶಿವರಾತ್ರಿ ಕಲಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾಗಶೆಟ್ಟಿಹಳ್ಳಿಯಲ್ಲಿ ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ವತಿಯಿಂದ ನೃತ್ಯ ಕಾರ್ಯಕ್ರಮ, ಕೋರಮಂಗಲ ಗಣಪತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಮತ್ತು ಗಿರಿಜಾ ಕಲ್ಯಾಣೋತ್ಸವ ಪ್ರಯುಕ್ತ ಮಂಗಳೂರಿನ ಸನಾತನ ನಾಟ್ಯಾಲಯದ ಕಲಾವಿದರಿಂದ 'ಸನಾತನ ರಾಷ್ಟ್ರಾಂಜಲಿ' ನೃತ್ಯ ಕಾರ್ಯಕ್ರಮ ನಡೆಯಿತು.

'ಶಿವದರ್ಶನ': ಬೆಂಗಳೂರು ನಗರ್ತರ ಪೇಟೆಯಲ್ಲಿರುವ ನಗರೇಶ್ವರ ದೇವಾಲಯದಲ್ಲಿ 'ಶಿವದರ್ಶನ' ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು, ಕನ್ನಡನಾಡಿನ ವೈವಿಧ್ಯಮಯ ಶಿವಲಿಂಗಗಳು, ಶಿವನಲೀಲಾಮೂರ್ತಿಗಳು, ಪರಿವಾರ ದೇವತೆಗಳ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ನಗರೇಶ್ವರ ದೇವಸ್ಥಾನದ, ಅಧ್ಯಕ್ಷ ವಿಜಯ್ ಕುಮಾರ್, ಕೆಂಗೇರಿ ಚಕ್ರಪಾಣಿ, ಕನ್ನಡಪರ ಹೋರಾಟಗಾರ ಗೋಮೂರ್ತಿ ಯಾದವ್, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ, ಸಮಾಜ ಸೇವಕ ಪ್ರವೀಣ್ ಭಾಗವಹಿಸಿದ್ದರು.

ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಬುಧವಾರ ದೇವರ ದರ್ಶನಕ್ಕೆ ಭಕ್ತರು ಸಾಲುಗಟ್ಟಿ ನಿಂತಿದ್ದ ದೃಶ್ಯ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ವಿವಿಧ ದೇವಸ್ಥಾನಗಳಲ್ಲಿ ಲಕ್ಷ ದೀಪೋತ್ಸವ
- ವಿದ್ಯುತ್ ದೀಪಗಳಿಂದ ಕಂಗೊಳಿಸಿದ ಶಿವಾಲಯಗಳು
- ಪೌರಾಣಿಕ, ಐತಿಹಾಸಿಕ ನಾಟಕಗಳ ಪ್ರದರ್ಶನ

ನಗರದ ಹನುಮಂತ ನಗರದಲ್ಲಿರುವ ಶ್ರೀ ಶೇಷ ಮಹಾಬಲಮುರಿ ಗಣಪತಿ ದೇವಸ್ಥಾನದಲ್ಲಿ ಭಕ್ತರು ಶಿವಲಿಂಗಕ್ಕೆ ಬುಧವಾರ ಹಾಲೆರೆದರು ಚಿತ್ರ: ರಂಜು ಪಿ.

ಬಂಗಾರದ ಗೋಪುರಗಳ ಮಾದರಿಯ ದೇವಸ್ಥಾನ

ಎಚ್‌ಎಎಲ್ ಮೂರನೇ ಹಂತದ ಶಿಶುಗೃಹ ಪೂರ್ಣಪ್ರಜ್ಞ ಆಟದ ಮೈದಾನದಲ್ಲಿ ಮಹಾಲಿಂಗೇಶ್ವರ ಸೇವಾ ಟ್ರಸ್ಟ್‌ನಿಂದ ಐದನೇ ವರ್ಷದ ಮಹಾಶಿವರಾತ್ರಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಬಂಗಾರದ ಗೋಪುರಗಳ ಮಾದರಿಯ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶಿವನ ಲಿಂಗಕ್ಕೆ ಪ್ರತಿಷ್ಠಾಪನೆ ಮಾಡಲಾಯಿತು. ಬಳಿಕ ವಿಶೇಷ ಪೂಜೆ, ಹೋಮ, ಹವನ, ರುದ್ರಾಭಿಷೇಕ ಹಾಗೂ ರುದ್ರಪಾರಾಯಣ ನೆರವೇರಿಸಲಾಯಿತು.

ಪ್ರಯಾಗರಾಜ್ ತ್ರಿವೇಣಿ ಸಂಗಮದ ಜಲ ಪ್ರೋಕ್ಷಣೆ ಮಾಡಲಾಯಿತು. ಸಿರಿಧಾನ್ಯದಿಂದ ತಯಾರಿಸಿದ ಪ್ರಸಾದವನ್ನು 24 ಗಂಟೆ ನಿರಂತರವಾಗಿ ವಿತರಿಸಲಾಯಿತು ಎಂದು ಟ್ರಸ್ಟಿ ಬೆಳ್ಳಿಪಾಡಿ ಗುಣರಂಜನ್ ಶೆಟ್ಟಿ ತಿಳಿಸಿದರು.

'ಕಾವ್ಯ ಶಿವರಾತ್ರಿ'

ಜನಸಂಸ್ಕೃತಿ ಪ್ರತಿಷ್ಠಾನ ಕಾವ್ಯ ಮಂಡಲ ಹಾಗೂ ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಜಂಟಿಯಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಕಾವ್ಯ ಶಿವರಾತ್ರಿ ಆಯೋಜಿಸಿತ್ತು. ಅಹೋರಾತ್ರಿ ಮಂಟೇಸ್ವಾಮಿ ಮತ್ತು ಮಲೆಮಹಾದೇಶ್ವರ ಮಹಾಕಾವ್ಯ ಗಾಯನ ನಡೆಯಿತು.

ಸೂರ್ಯ ಲಕ್ಷದೀಪೋತ್ಸವ ಕಾರ್ಯಕ್ರಮದಲ್ಲಿ ಭಕ್ತರು ದೀಪಗಳನ್ನು ಹಚ್ಚಿದರು

ವೈಭವದ ಸೂರ್ಯ ಲಕ್ಷ ದೀಪೋತ್ಸವ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಮಹಾಶಿವರಾತ್ರಿ ಹಬ್ಬದ ಅಂಗವಾಗಿ ತೋಟಗೆರೆ ಬಸವೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಹಿತಚಿಂತನಾ ಚಾರಿಟಬಲ್ ಟ್ರಸ್ಟ್ ವತಿಯಿಂದ 12ನೇ ವರ್ಷದ ಸೂರ್ಯ ಲಕ್ಷ ದೀಪೋತ್ಸವ ಕಾರ್ಯಕ್ರಮ ವೈಭವದಿಂದ ನಡೆಯಿತು.

ಬಸವೇಶ್ವರ ಸ್ವಾಮಿಯ ಗರ್ಭಗುಡಿಯನ್ನು ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು ಹೋಮ, ಹವನ, ಅಭಿಷೇಕ ನಡೆದವು. ದೇವಸ್ಥಾನವನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಟ್ಟು ವಾದ್ಯಮೇಳಗಳೊಂದಿಗೆ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು. ನಂದಿಧ್ವಜ ಕುಣಿತ ಭಕ್ತಾದಿಗಳ ಗಮನ ಸೆಳೆಯಿತು.

ಲಕ್ಷದೀಪೋತ್ಸವದಲ್ಲಿ ಭಕ್ತರು ಒಮ್ಮೆಗೆ 13 ಸಾವಿರ ದೀಪಗಳನ್ನು ಹಚ್ಚುವ ವ್ಯವಸ್ಥೆ ಮಾಡಲಾಗಿತ್ತು. 15,000 ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಕ್ಷೇತ್ರದಲ್ಲಿ ನಡೆದ ದನಗಳ ಜಾತ್ರೆಗೆ ಆಗಮಿಸಿದ್ದ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಹಾಲು ಹಲ್ಲು, ಎರಡು ಹಲ್ಲು, ನಾಲ್ಕು ಹಲ್ಲು, ಆರು ಹಲ್ಲು, ಕಡೆ ಹಲ್ಲು ವಿಭಾಗಗಳಲ್ಲಿ ವಿಜೇತ ರೈತರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನವಾಗಿ ಹಿತ ಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ ತಲಾ 100 ಗ್ರಾಂ, 50 ಗ್ರಾಂ, 25 ಗ್ರಾಂ ಬೆಳ್ಳಿಯನ್ನು ಬಹುಮಾನವಾಗಿ ವಿತರಣೆ ಮಾಡಲಾಯಿತು.

ಪೀಣ್ಯ ದಾಸರಹಳ್ಳಿ ವರದಿ: ದಾಸರಹಳ್ಳಿಯ ಶಿವ ದೇವಸ್ಥಾನದಲ್ಲಿ ಶಿವ ಲಿಂಗಕ್ಕೆ ಪುಷ್ಪಾಲಂಕಾರ ಮತ್ತು ವಿಶೇಷ ಪೂಜೆ, ಶಿವಮಂತ್ರ ಪಠಣೆ ಮತ್ತು ಭಕ್ತಿಗೀತೆ ಗಾಯನ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಾವಿರಾರು ಭಕ್ತರು ಶಿವಪೂಜೆ ಸಲ್ಲಿಸಿ ದರ್ಶನ ಪಡೆದರು. ಭಕ್ತರಿಗೆ ಲಾಡು ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಶಾಸಕ ಎಸ್ ಮುನಿರಾಜು ಹಾಗೂ ಸುಜಾತ ಮುನಿರಾಜು ದಂಪತಿ ಹಾಗೂ ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಜಿ ಮರಿಸ್ವಾಮಿ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಶಿವಾಲಯ ಟ್ರಸ್ಟ್ ಅಧ್ಯಕ್ಷ ವಿ.ಎನ್. ಸಿದ್ದಗಂಗಯ್ಯ, ದಾಸರಹಳ್ಳಿ ಶಿವಾಲಯ ಸೇವಾ ಸಮಿತಿ ಟ್ರಸ್ಟ್ ಗೌರವ ಅಧ್ಯಕ್ಷ ಜಿ. ರುದ್ರೇಶ್ ಬಸವರಾಜಯ್ಯ, ಅಧ್ಯಕ್ಷ ವಿ.ಎನ್. ಸಿದ್ದಗಂಗಯ್ಯ. ಇತರ ಪದಾಧಿಕಾರಿಗಳು ಇದ್ದರು.

ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಶಿವರಾತ್ರಿ ಆಚರಣೆ

ಸೋಮನಾಥ ಜ್ಯೋತಿರ್ಲಿಂಗ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಸಾವಿರ ವರ್ಷಗಳ ನಂತರ ಪತ್ತೆಯಾದ ಮೂಲ ಸೋಮನಾಥ ಜ್ಯೋತಿರ್ಲಿಂಗದ ಅವಶೇಷಗಳನ್ನು ಮಹಾಶಿವರಾತ್ರಿಯ ಸಮಯದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಅವರು ಅನಾವರಣಗೊಳಿಸಿದರು ಎಂದು ಆರ್ಟ್ ಆಫ್ ಲಿವಿಂಗ್ ಪ್ರಕಟಣೆ ನೀಡಿದೆ.

ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್‌ನ ವೈಭವದ ವಿಶಾಲಾಕ್ಷಿ ಮಂಟಪದಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ಅನಾವರಣಗೊಳಿಸಲಾಯಿತು. 180 ದೇಶಗಳ ಭಕ್ತರು ಇದನ್ನು ಆನ್‌ಲೈನ್ ಮೂಲಕ ವೀಕ್ಷಿಸಿದರು.

'ಶಿವನು ಕಾಲಾತೀತ, ಆದರೂ ಅವನು ಮಹಾಕಾಲ. ಮಹಾಕಾಲ್ ಎಂಬುದು ಶಿವನ ಅತ್ಯಂತ ಪೂಜ್ಯ ರೂಪ. ಸಮಯವು ಮನಸ್ಸಿಗೆ ಬದ್ಧವಾಗಿದೆ. ಕಾಲವನ್ನು ಮೀರುವುದೇ ಮಹಾಕಾಲ' ಎಂದು ರವಿಶಂಕರ್ ಗುರೂಜಿ ಅವರು ವಿವರಿಸಿದರು.

ಆರ್ಟ್ ಆಫ್ ಲಿವಿಂಗ್ ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಮಹಾಶಿವರಾತ್ರಿಗೆ ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು

'12 ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದೇ ಸೋಮನಾಥ ಜ್ಯೋತಿರ್ಲಿಂಗವಾಗಿದೆ. ಸೋಮನಾಥ ದೇವಾಲಯ ಮತ್ತು ಅದರೊಳಗಿನ ಜ್ಯೋತಿರ್ಲಿಂಗವನ್ನು ಘಜ್ನಿ ಮಹಮ್ಮದ್ ನಾಶಪಡಿಸಿದಾಗ, ಕೆಲವು ಬ್ರಾಹ್ಮಣರು ಒಡೆದ ಚೂರುಗಳನ್ನು ತಮಿಳುನಾಡಿಗೆ ಕೊಂಡೊಯ್ದು ಸಣ್ಣ ಶಿವಲಿಂಗವಾಗಿ ರೂಪಿಸಿದರು. ಅವರ ತಲೆಮಾರಿನವರು ಸಾವಿರ ವರ್ಷಗಳ ಕಾಲ ರಹಸ್ಯವಾಗಿ ಪೂಜಿಸಿದರು. ಒಂದು ಶತಮಾನದ ಹಿಂದೆ, ಅವರನ್ನು ಸಂತ ಪ್ರಣವೇಂದ್ರ ಸರಸ್ವತಿ ಅವರು ಕಂಚಿ ಶಂಕರಾಚಾರ್ಯ ಸ್ವಾಮಿ ಚಂದ್ರಶೇಖರೇಂದ್ರ ಸರಸ್ವತಿಯವರ ಬಳಿಗೆ ಕರೆದೊಯ್ದಾಗ ಇನ್ನೂ ನೂರು ವರ್ಷ ಅವುಗಳನ್ನು ಮರೆಮಾಡಲು ಸೂಚಿಸಿದ್ದರು' ಎಂದು ಮಾಹಿತಿ ನೀಡಿದರು.

ಆಶ್ರಮದೊಳಗಿನ ಪೂಜ್ಯ ಶಿವ ದೇವಾಲಯದಲ್ಲಿ ಲಕ್ಷಾಂತರ ಜನರು ಅಭಿಷೇಕವನ್ನು ಅರ್ಪಿಸುವುದರೊಂದಿಗೆ ಮಹಾಶಿವರಾತ್ರಿ ದಿನ ಪ್ರಾರಂಭವಾಯಿತು. ಭಕ್ತರಿಗೆ ನಿರಂತರವಾಗಿ ಪ್ರಸಾದ ನೀಡಲಾಯಿತು. ರಾತ್ರಿ ಶಿವಧ್ಯಾನದಲ್ಲಿ ಭಕ್ತರು ತೊಡಗಿದರು.

PARAS

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ವಿಚಾರಣ ಸಂಖ್ಯೆ: ಬೆವಿಕಂ/2024-25/ಎಸ್ಇ0230/ಕರೆ-2 ರ ಅನ್ವಯ ದತ್ತ ಕೇಂದ್ರದಲ್ಲಿ ನಿಯೋಜಿಸಲಾದ ಬ್ಯಾಕ್‌ಅಪ್ ತಂತ್ರಾಂಶದ ವಾರ್ಷಿಕ ತಾಂತ್ರಿಕ ಬೆಂಬಲವನ್ನು (ಎಟಿಎಸ್) ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.
ಪೂರ್ವ-ಬಿಡ್ ಸಭೆಯ ದಿನಾಂಕ: 04.03.2025, ಬೆಳಗ್ಗೆ 11.00 ಗಂಟೆಗೆ, ಪ್ರಧಾನ ವ್ಯವಸ್ಥಾಪಕರು (ಐಟಿ) ಶಾಖೆ, ಬೆವಿಕಂ, 5ನೇ ಮಹಡಿ, ಬೆಳಕು ಭವನ, ಕಾರ್ಪೊರೇಟ್ ಕಚೇರಿ, ಕೆ.ಆರ್. ವೃತ್ತ, ಬೆಂಗಳೂರು-560001. **ಪ್ರಶ್ನೆಗಳು/ಸ್ಪಷ್ಟೀಕರಣವನ್ನು ಸ್ವೀಕರಿಸುವ ಕೊನೆಯ ದಿನಾಂಕ:** 04.03.2025 ಸಂಜೆ 4.00 ಗಂಟೆಯವರೆಗೆ. **ಅಗತ್ಯ ಇಎಂಡಿ ಮತ್ತು ಸಂಬಂಧಿತ ದಾಖಲೆಗಳೊಂದಿಗೆ ಅರ್ಹತಾ ಮಾನದಂಡಗಳ ಸಲ್ಲಿಕೆ/ಅಪ್‌ಲೋಡಿಂಗ್‌ಗೆ ಅಂತಿಮ ದಿನಾಂಕ:** 06.03.2025, ಸಂಜೆ 4.00 ಗಂಟೆಯವರೆಗೆ.
ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **27.02.2025.** ಬಿಡ್ಡಿಂಗ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತ ಬಿಡ್ದುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: +91 80 46010000, +91 80 68948777 ನ್ನು ಸಂಪರ್ಕಿಸಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಪ್ರಧಾನ ವ್ಯವಸ್ಥಾಪಕರು (ICT&MIS)
ಬೆವಿಕಂ, 5ನೇ ಮಹಡಿ, ಬೆಳಕು ಭವನ, ಬೆಂಗಳೂರು-01.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಜಿಲ್ಲಾ ಪಂಚಾಯತ್, ಧಾರವಾಡ.
ದೂರವಾಣಿ: 0836-2742221 ಇ-ಮೇಲ್: dszpdharwad@gmail.com

ಸಂಖ್ಯೆ: ಧಾಜಿಪಂ/ಉಕಾ/ಸಿ-10/ಸಿಆರ್/2024-25/3505 ದಿನಾಂಕ: 18-02-2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಇ-ಟೆಂಡರ್ ಪೋರ್ಟಲ್)

ಧಾರವಾಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿಯ ಹೊಸದಾಗಿ ಪ್ರಾರಂಭವಾಗುವ 110 ಗ್ರಾಮ ಪಂಚಾಯತ್ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಖರೀದಿಸಲು ಸರ್ಕಾರದ ಆದೇಶ ಪತ್ರ ಸಂಖ್ಯೆ: **ಕೆಪಿಆರ್‌ಸಿ/ಡಿಇವಿ/688/2024 ದಿನಾಂಕ: 04-10-2024** ರನ್ವಯ ಕೆ.ಪಿ.ಪಿ. ಇ-ಟೆಂಡರ್ ಪೋರ್ಟಲ್ ಸಂಖ್ಯೆ: **RDPR/2024-25/IND/7728** ರಲ್ಲಿ ವಿವರಗಳನ್ನು ಲಗತ್ತಿಸಿ ಟೆಂಡರ್ ಆಹ್ವಾನಿಸಲಾಗಿದೆ.
ಪ್ರತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಖರೀದಿಸಲು **ರೂ. 1.00 ಲಕ್ಷ ಮಿತಿಯೊಳಗೆ ಅಂದಾಜು ವೆಚ್ಚ ಮಾದರಿ ಮಾಡಲಾಗಿದೆ.** ಟೆಂಡರ್ ಪ್ರಾರಂಭ ಅರ್ಜಿ ದಿನಾಂಕ: **18-02-2025 ರಿಂದ 17-03-2025 ರಂದು ಸಂಜೆ 5.00 ಗಂಟೆಯವರೆಗೆ ಸಲ್ಲಿಸಬಹುದು.**
1) Last Date for Receiving Queries: **15-03-2025. 2)** Last Date for Submission of Online Tenders: **17-03-2025. 3)** Date of Opening of Technical Bid: **19-03-2025. 4)** Date of Opening of Financial Bid: **25-03-2025.** ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ಧಾರವಾಡ.
ವಾಸಾಸಂಇ/ಧಾರವಾಡ/1013/ಅಡ್ವರ್ಟೋರ್/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್.: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (Document Verification) ದಿನಾಂಕ: 25.02.2025

ಅಧಿಸೂಚನೆ

ವಿಷಯ : ಕವಿಪ್ರನಿನಿಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಾಖಲಾತಿಗಳ ಪರಿಶೀಲನೆಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸುವ ಹಾಗೂ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (KK) & (NKK) ದಿನಾಂಕ: 14.10.2024.
2. ತಿದ್ದುಪಡಿ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 (KK) ದಿನಾಂಕ: 20.12.2024.

ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/44953/2023-24 (KK) & (NKK) ದಿನಾಂಕ 14.10.2024 ಹಾಗೂ ದಿನಾಂಕ 20.12.2024 ರ ತಿದ್ದುಪಡಿಗೆ ಅನುಗುಣವಾಗಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳಿಗೆ ಸೂಚಿತ ರಿಕ್ತ ಸ್ಥಾನಗಳ 1:5 ರ ಅನುಪಾತದಲ್ಲಿ ಹುದ್ದೆವಾರು ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು, ಕಟ್-ಆಫ್ ಅಂಕಗಳೊಂದಿಗೆ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in/ ರಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಗಳು ಅಭ್ಯರ್ಥಿಯವಾರು ಪಟ್ಟಿಗಳಾಗಿದ್ದು ಹಾಗೂ ಆನ್-ಲೈನ್ ಅರ್ಜಿಯಲ್ಲಿ ಅಭ್ಯರ್ಥಿಗಳು ತಿಳಿಸಿರುವ ಮಾಹಿತಿಯ ಅನುಗುಣವಾಗಿ ಪ್ರಕಟಿಸಲಾಗಿದೆ.

ಸರ್ಕಾರದ Digilocker ತಂತ್ರಾಂಶವನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ದಾಖಲಾತಿಗಳ ಪರಿಶೀಲನೆಯನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಈ ಕೆಳಗೆ ತಿಳಿಸಿರುವಂತೆ ಕ್ರಮ ಪೂರ್ವಕವಾಗಿ ಸೂಚನೆಗಳನ್ನು ಪಾಲಿಸಿಕೊಂಡು, ದಾಖಲಾತಿಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಸೂಕ್ತ ರೀತಿಯಲ್ಲಿ ಅಪ್‌ಲೋಡ್ ಮಾಡುವಂತೆ ತಿಳಿಸಲಾಗಿದೆ.
1. ದಾಖಲಾತಿ ಪರಿಶೀಲನೆ ಪಟ್ಟಿಯಲ್ಲಿ ಸೇರಿರುವಂತಹ ಎಲ್ಲಾ ಅಭ್ಯರ್ಥಿಗಳು ಮೊದಲಿಗೆ Digilocker ತಂತ್ರಾಂಶದಲ್ಲಿ Register ಮಾಡಿಕೊಂಡು, ತಮ್ಮ ಆಧಾರ್ ಸಂಖ್ಯೆಯೊಂದಿಗೆ Login ಆಗಿ, 10ನೇ ತರಗತಿ, ಜಾತಿ ಪ್ರಮಾಣ ಪತ್ರ, ಹೆಚ್.ಕೆ. ಪ್ರಮಾಣ ಪತ್ರ, UDID Card ಪ್ರಮಾಣ ಪತ್ರಗಳನ್ನು Issued documentsನಲ್ಲಿ ಪಡೆಯತಕ್ಕದ್ದು (Digilocker ತಂತ್ರಾಂಶದಲ್ಲಿ Register ಮಾಡಿಕೊಂಡು ದಾಖಲಾತಿಗಳನ್ನು Issued Documents ನಲ್ಲಿ ಪಡೆಯುವ ವಿಧಾನವನ್ನು ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ).
2. 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್-ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಾರಣಾಂತರಗಳಿಂದ ಛಾಯಾಚಿತ್ರ / ಸಹಿ ತಪ್ಪಾಗಿ ನಮೂದಾಗಿದ್ದಲ್ಲಿ, Document upload module ನಲ್ಲಿ login ಮಾಡಿದ ಕೂಡಲೇ "ನಿಮ್ಮ ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಛಾಯಾಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡುವಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿದೆಯೇ?" ಎಂಬುದಕ್ಕೆ "ಹೌದು" ಎಂದು ಗುರುತಿಸಿ, ಒತ್ತಿ, ತಮ್ಮ ಸರಿಯಾದ ಛಾಯಾಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡತಕ್ಕದ್ದು.
3. 1:5 ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ e-sign ಪ್ರಕ್ರಿಯೆ ಪೂರ್ಣಗೊಳಿಸದೇ ಇದ್ದಲ್ಲಿ, Document upload module ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಮುನ್ನ ತಮ್ಮ ಆಧಾರ್ ಸಂಖ್ಯೆಯೊಂದಿಗೆ e-sign ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.
4. Digilocker ನ Issued documents ನಲ್ಲಿ ದಾಖಲಾತಿಗಳನ್ನು fetch ಮಾಡಿಕೊಂಡ ನಂತರ, ಕವಿಪ್ರನಿನಿ ವೆಬ್‌ಸೈಟ್ ಭೇಟಿ ನೀಡಿ ಅಭ್ಯರ್ಥಿಗಳು ದಾಖಲಾತಿ ಅಪ್‌ಲೋಡ್ ಮಾಡುವ ಸಲುವಾಗಿ ತಿಳಿಸಿರುವ ಲಿಂಕ್ ಅನ್ನು ಒತ್ತಿ, ವೆಬ್‌ಸೈಟ್‌ನಲ್ಲಿ ತಿಳಿಸಿರುವ ಮಾರ್ಗಸೂಚಿಯನ್ನು ಪಾಲಿಸುವುದರೊಂದಿಗೆ, ಅರ್ಜಿಯಲ್ಲಿ ಕ್ಲೇಮು ಮಾಡಿರುವ ಮೀಸಲಾತಿಗಳಿಗನುಗುಣವಾಗಿ, ದಾಖಲಾತಿಗಳನ್ನು ಸಲ್ಲಿಸುವುದು (Document upload ಮಾಡುವ ವಿಧಾನವನ್ನು ಮತ್ತು ನಮೂನೆಗಳನ್ನು ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ).
5. Digilocker ತಂತ್ರಾಂಶದಲ್ಲಿ ಲಭ್ಯವಿಲ್ಲದೇ ಇರುವಂತಹ ದಾಖಲೆಗಳನ್ನು ಅಭ್ಯರ್ಥಿಗಳು 500 KB ಮೀರದಂತಹ PDF Document ಗಳಾಗಿ ಸ್ಕ್ಯಾನ್ ಮಾಡಿಕೊಂಡು ತಂತ್ರಾಂಶದ Document Upload ವಿಭಾಗದಲ್ಲಿ ಸಂಬಂಧಪಟ್ಟ ಮೀಸಲಾತಿ ಮುಂದೆ ಅಪ್‌ಲೋಡ್ ಮಾಡುವುದು.
6. ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳನ್ನು ಅಪ್-ಲೋಡ್ ಮಾಡಿದ ನಂತರ, ತಮ್ಮ ಆಧಾರ್ ಸಂಖ್ಯೆಯೊಂದಿಗೆ e-sign ಮಾಡುವುದು. e-sign ಮಾಡುವ ಮುನ್ನ, ತಾವು ಎಲ್ಲಾ ದಾಖಲಾತಿಗಳನ್ನು ನಿಗದಿತ ನಮೂನೆಗಳಲ್ಲಿ ಅಪ್-ಲೋಡ್ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು ಹಾಗೂ ಅದರ ಒಂದು ಮುದ್ರಿತ ಪ್ರತಿಯನ್ನು / soft-copy ಪಡೆದಿಟ್ಟುಕೊಳ್ಳತಕ್ಕದ್ದು.

ಮುಂದುವರೆದು, ದಾಖಲಾತಿಗಳ ಪರಿಶೀಲನೆಗಾಗಿ, ಎಲ್ಲಾ ಅವಶ್ಯಕ ಮಾಹಿತಿಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in/** ರಲ್ಲಿ ಪ್ರಕಟಿಸಲಾಗುತ್ತದೆ. **ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in/ ರಲ್ಲಿ ದಿನಾಂಕ: 27.02.2025 ರಿಂದ 10.03.2025 ರವರೆಗೆ ಅವಕಾಶವನ್ನು ಕಲ್ಪಿಸಲಾಗುತ್ತದೆ.**
ದಿನಾಂಕ: **10.03.2025** ರ ನಂತರ ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಅವಕಾಶವನ್ನು ನೀಡಲಾಗುವುದಿಲ್ಲ. ನಿಗದಿತ ಕಾಲಾವಧಿಯೊಳಗೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡದ ಅಭ್ಯರ್ಥಿಗಳನ್ನು ಗೈರು ಹಾಜರೆಂದು ಪರಿಗಣಿಸಿ, ಇವರಿಗೆ ನೇಮಕಾತಿಗೆ ಯಾವುದೇ ಆಸಕ್ತಿಯಿಲ್ಲವೆಂದು ಭಾವಿಸಿ, ನೇಮಕಾತಿ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.
ಪೂರ್ಣಪ್ರಮಾಣದ ದಾಖಲಾತಿಗಳನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಸಹನಾ ಶಕ್ತಿ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರತ್ಯೇಕ ಅಧಿಸೂಚನೆ ಮತ್ತು ಮಾರ್ಗಸೂಚನೆಗಳನ್ನು ನಂತರದ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಸಹಿ/- ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009.

ಬೆಳಗಾವಿ– ಕೊಲ್ಹಾಪುರ ಜಿಲ್ಲಾಧಿಕಾರಿಗಳು ನಡೆಸಿದ ವಿಡಿಯೊ ಸಂವಾದದ ಫಲಶ್ರುತಿ

ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಮತ್ತೆ ಶುರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಸ್ ನಿರ್ವಾಹಕನ ಮೇಲೆ ಹಲ್ಲೆ ಪ್ರಕರಣದ ಹಿನ್ನೆಲೆಯಲ್ಲಿ ನಾಲ್ಕು ದಿನಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ-ಮಹಾರಾಷ್ಟ್ರ ನಡುವಿನ ಬಸ್‌ಗಳ ಸಂಚಾರ ಬುಧವಾರ ಪುನಃ ಆರಂಭಗೊಂಡಿತು.

ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಕೊಲ್ಹಾಪುರ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ವರಿಷ್ಠಾಧಿಕಾರಿ ಜೊತೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ್ದರು.

'ಚಿಕ್ಕೋಡಿ ವಿಭಾಗದಿಂದ ಮಹಾರಾಷ್ಟ್ರದ ಮಿರಜ್, ಇಚಲಕರಂಜಿ, ಕೊಲ್ಹಾಪುರಕ್ಕೆ ಕೆಲ ಬಸ್ ಹೋಗುತ್ತಿವೆ. ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳೂ ಬೆಳಗಾವಿ ಜಿಲ್ಲೆಯೊಳಗೆ ಬರುತ್ತಿವೆ. ವೇಳಾಪಟ್ಟಿಯಂತೆ ಹಂತ-ಹಂತವಾಗಿ ಎಲ್ಲ ಬಸ್‌ಗಳೂ ಮಹಾರಾಷ್ಟ್ರಕ್ಕೆ ಸಂಚರಿಸಲಿವೆ. ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತದಿಂದ ನಮ್ಮ ವಿಭಾಗಕ್ಕೆ ದಿನಕ್ಕೆ ₹10 ಲಕ್ಷ ನಷ್ಟವಾಗಿದೆ' ಎಂದು ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಚಿಕ್ಕೋಡಿ ವಿಭಾಗೀಯ ನಿಯಂತ್ರಣಾಧಿಕಾರಿ ವಿ.ಎಂ.ಶಶಿಧರ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳಗಾವಿಯಿಂದ ಮಿರಜ್, ಕೊಲ್ಹಾಪುರಕ್ಕೆ ಹಲವು ಬಸ್‌ಗಳು ಸಂಚರಿಸಿವೆ. ಪರಿಸ್ಥಿತಿ ಪೂರ್ಣ ಹತೋಟಿಗೆ ಬಂದ ನಂತರ, ಮಹಾರಾಷ್ಟ್ರದ ವಿವಿಧ ಮಾರ್ಗಗಳಲ್ಲಿ ಎಂದಿನಂತೆ ಬಸ್‌ಗಳು ಸಾಗಲಿವೆ' ಎಂದು ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ ಹುದ್ದಾರ ಹೇಳಿದರು.

ಧಾರವಾಡದಿಂದ ಬೆಳಗಾವಿ ಮಾರ್ಗವಾಗಿ ಕೊಲ್ಹಾಪುರಕ್ಕೆ ತೆರಳಿದ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು
- ಚಿಕ್ಕೋಡಿ ವಿಭಾಗದಿಂದ ಮಹಾರಾಷ್ಟ್ರದ ಮಿರಜ್, ಇಚಲಕರಂಜಿ, ಕೊಲ್ಹಾಪುರಕ್ಕೆ ಬಸ್ ಸಂಚಾರ
- ವೇಳಾಪಟ್ಟಿಯಂತೆ ಹಂತ–ಹಂತವಾಗಿ ಎಲ್ಲ ಬಸ್‌ಗಳೂ ಮಹಾರಾಷ್ಟ್ರಕ್ಕೆ ಸಂಚಾರ

ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಅವರು ಮಂಗಳವಾರ ಮನೆಗೆ ಮರಳಿದ್ದಾರೆ. ಸ್ವಲ್ಪ ದಿನ ವಿಶ್ರಾಂತಿ ಪಡೆಯಲು ಅವರಿಗೆ ತಿಳಿಸಲಾಗಿದೆ
ಅನಂತ ಶಿರಗುಪ್ಪಿಕರ
ವ್ಯವಸ್ಥಾಪಕ, ಸಾರಿಗೆ ಸಂಸ್ಥೆ ಎರಡನೇ ಘಟಕ, ಬೆಳಗಾವಿ

ಬಾಲ್ಯವಿವಾಹ, ಅದ್ದೂರಿ ಮೆರವಣಿಗೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ತಾವರಗೇರಾ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ ಮಂಗಳವಾರ (ಫೆ. 25) ಬಾಲ್ಯವಿವಾಹ ನಡೆದಿದೆ.

16 ವರ್ಷದ ಬಾಲಕಿಯನ್ನು ಯುವಕನೊಬ್ಬ ಮದುವೆಯಾಗಿದ್ದಾನೆ. ಬಳಿಕ ಆ ಗ್ರಾಮದಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಗಿದೆ. ಪ್ರೀ ವೆಡ್ಡಿಂಗ್ ಶೂಟ್ ಕೂಡ ಮಾಡಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಕುಷ್ಟಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಮ್ಮ ಹಂಡಿ 'ಫೆ. 25ರಂದು ಮಧ್ಯಾಹ್ನ ಇಲಾಖೆ ಮೇಲ್ವಿಚಾರಕರು ಸ್ಥಳಕ್ಕೆ ಭೇಟಿ ನೀಡಿದಾಗ ತೋಟದ ಮನೆಯಲ್ಲಿ ಮದುವೆ ನಡೆದಿರುವುದು ಖಚಿತವಾಗಿದೆ. ಮೆರವಣಿಗೆಯನ್ನೂ ನಡೆಸಲಾಗಿದೆ. ದಾಖಲೆಗಳನ್ನು ಪರಿಶೀಲಿಸಿದಾಗ ಬಾಲ್ಯವಿವಾಹ ನಡೆದಿರುವುದು ದೃಢಪಟ್ಟಿದೆ' ಎಂದು ತಿಳಿಸಿದರು. ಯುವಕ ಮತ್ತು ಕುಟುಂಬದವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 'ಬಾಲ್ಯವಿವಾಹ ನಡೆಯುತ್ತಿರುವ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಮೊದಲೇ ಮಾಹಿತಿ ನೀಡಿದ್ದರೂ ವಿವಾಹ ತಡೆಯಲು ಮುಂದಾಗಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಆರೋಪಪಟ್ಟಿ ಸಲ್ಲಿಸಲು ಲಂಚ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಟರ್ ಬಡ್ಡಿ ದಂಧೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಪಟ್ಟಿ ಸಲ್ಲಿಸಲು ₹5,000 ಲಂಚ ಪಡೆಯುತ್ತಿದ್ದ ವೇಳೆ ಆವಲಹಳ್ಳಿ ಪೊಲೀಸ್ ಠಾಣೆಯ ಇಬ್ಬರು ಸಿಬ್ಬಂದಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೋನದಾಸಪುರ ನಿವಾಸಿ ಪವಿತ್ರ ಎಂಬುವವರು ಮೀಟರ್ ದಂಧೆ ನಡೆಸುವ ವ್ಯಕ್ತಿಗಳ ವಿರುದ್ಧ ಆವಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಜಾತಿನಿಂದನೆ ಕಾಯ್ದೆಯ ಅಡಿಯಲ್ಲೂ ದೂರು ದಾಖಲಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಸಹಾಯಕ ತನಿಖಾಧಿಕಾರಿ ಮಧುಸೂದನ್ ಮತ್ತು ಠಾಣಾ ಸಿಬ್ಬಂದಿ ಮಹೇಶ್ ₹5,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಪವಿತ್ರ ಅವರು ನೀಡಿದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ದೂರುದಾರರು ಪೊಲೀಸ್ ಠಾಣೆಯ ಬಳಿ ಆರೋಪಿಗಳಿಗೆ ಲಂಚದ ಹಣ ನೀಡಿದ್ದರು. ಆಗ ದಾಳಿ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು. ಲಂಚದ ಹಣ ವಶಕ್ಕೆ ಪಡೆದುಕೊಂಡು, ತನಿಖೆ ಮುಂದುವರೆಸಲಾಗಿದೆ ಎಂದು ತಿಳಿಸಿದ್ದಾರೆ.

ಎಚ್‌ಡಿಕೆ ವಿರುದ್ಧ ಆರೋಪಪಟ್ಟಿಗೆ ಪ್ರಸ್ತಾವ

ಒಂದನೇ ಪುಟದಿಂದ...

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಭಾರತೀಯ ದಂಡ ಸಂಹಿತೆ ಹಾಗೂ ಗಣಿ ಮತ್ತು ಖನಿಜ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಕುಮಾರಸ್ವಾಮಿ ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಲಾಗಿದೆ' ಎಂದು ಲೋಕಾಯುಕ್ತದ ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬಾರದ ಪ್ರತಿಕ್ರಿಯೆ: ಅನುವಾದಿತ ದಾಖಲೆಗಳೊಂದಿಗೆ ಹೊಸ ಪ್ರಸ್ತಾವ ಸಲ್ಲಿಸಿ ತಿಂಗಳು ಕಳೆದರೂ ರಾಜ್ಯಪಾಲರಿಂದ ಎಸ್‌ಐಟಿ ಅಧಿಕಾರಿಗಳಿಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಮೂಲಗಳು ಹೇಳಿವೆ.

ಸೇವಾ ಭದ್ರತೆಗೆ ಆಗ್ರಹಿಸಿ ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರಿಂದ ಪ್ರತಿಭಟನೆ

ಕೆಲಸ ಕಾಯಂಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಕಾಯಂಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಿದರು.

ರಾಜ್ಯ ಗುತ್ತಿಗೆ ಶುಶ್ರೂಷಣಾ ಅಧಿಕಾರಿಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, 'ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಕಾಲಮಿತಿಯ ಒಳಗೆ ಸೇವಾ ಭದ್ರತೆ ಒದಗಿಸಬೇಕು' ಎಂದು ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಶುಶ್ರೂಷಣಾ ಅಧಿಕಾರಿಗಳು, ತಂತ್ರಜ್ಞರು, ಅರೆವೈದ್ಯಕೀಯ ಸಿಬ್ಬಂದಿ ಒತ್ತಾಯಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಸಿ.ಎನ್. ಮಂಜುನಾಥ್ ಭೇಟಿ ನೀಡಿ, 'ಗುತ್ತಿಗೆ ನೌಕರರ ಬೇಡಿಕೆಗಳನ್ನು ತಕ್ಷಣ ಈಡೇರಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಕರಾವಳಿಯಲ್ಲಿ ಉಷ್ಣಾಂಶ ಹೆಚ್ಚಳ

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ತಾಪಮಾನವು ಏರಿಕೆಯಾಗುತ್ತಿದ್ದು, ಈ ಭಾಗದಲ್ಲಿ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ಉತ್ತರ ಕನ್ನಡದ ಕಾರವಾರದಲ್ಲಿ ಬುಧವಾರ ಗರಿಷ್ಠ ಉಷ್ಣಾಂಶ (38.4 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ದಕ್ಷಿಣ ಕನ್ನಡದ ಪಣಂಬೂರಿನಲ್ಲಿ 38.3 ಡಿಗ್ರಿ ಸೆಲ್ಸಿಯಸ್, ಉತ್ತರ ಕನ್ನಡದ ಹೊನ್ನಾವರದಲ್ಲಿ 38.2 ಡಿಗ್ರಿ ಸೆಲ್ಸಿಯಸ್ ಹಾಗೂ ಕಲಬುರಗಿಯಲ್ಲಿ 36.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವರದಿಯಾಗಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಉಷ್ಣಾಂಶ ದಾಖಲಾಗಿದೆ.



ಗುರುವಾರ ಹಾಗೂ ಶುಕ್ರವಾರ ಕರಾವಳಿಯಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ. ಇದರಿಂದಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ತಾಪಮಾನ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕರವೇ 13 ಸದಸ್ಯರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗದ(ಕೆಪಿಎಸ್‌ಸಿ) ಕಚೇರಿ ಎದುರು ಅಕ್ರಮವಾಗಿ ಗುಂಪುಗೂಡಿ, ರಸ್ತೆಯಲ್ಲಿ ಅಡ್ಡಲಾಗಿ ನಿಂತು ಸಂಚಾರಕ್ಕೆ ಅಡ್ಡಿಪಡಿಸಿದ್ದ ಆರೋಪದ ಮೇರೆಗೆ ಕರ್ನಾಟಕ ರಕ್ಷಣಾ ವೇದಿಕೆಯ(ಕರವೇ–ನಾರಾಯಣಗೌಡ ಬಣ) 13 ಸದಸ್ಯರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕರವೇಯ ಶಿವಕುಮಾರ್, ಗಂಗಾಧರ್, ಸಣ್ಣವೀರಪ್ಪ, ಧರ್ಮರಾಜೇಗೌಡ, ಅಂಜಿನಪ್ಪ, ಮಹೇಶ್, ಗಾಯತ್ರಿ, ಲತಾ, ಸುಕನ್ಯಾ, ನಳಿನಾ, ಸುಜಾತಾ, ಪವನ್, ಅರ್ಜುನ್ ಸೇರಿ ಹಲವರ ವಿರುದ್ಧ ಪ್ರಕರಣ ದಾಖಲಾಗಿದೆ. ವಿಧಾನಸೌಧ ಠಾಣೆಯ ಇನ್‌ಸ್ಪೆಕ್ಟರ್ ಎಸ್.ಪಿ.ಕುಮಾರಸ್ವಾಮಿ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ' ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ನಾರಾಯಣಗೌಡ, 'ಆಕ್ಸಾ' ಸಂಘಟನೆಯ ಅಧ್ಯಕ್ಷ ಕಾಂತಕುಮಾರ್ ಕೆಪಿಎಸ್‌ಸಿ ವಿರುದ್ಧ ಪ್ರತಿಭಟನೆಗೆ ಕರೆ ನೀಡಿದ್ದರು. ಅದರಂತೆ ಫೆ. 23ರಂದು ಪ್ರತಿಭಟನೆ ನಡೆದಿತ್ತು. 'ರಸ್ತೆ ಸಂಚಾರಕ್ಕೆ ಅಡ್ಡಿ ಆಗಿತ್ತು' ಎಂಬ ದೂರು ಆಧರಿಸಿ ಎಫ್‌ಐಆರ್ ನಲ್ಲಿ ಉಲ್ಲೇಖಿಸಲಾಗಿದೆ. ವಿಧಾನಸೌಧ ಠಾಣಾ ವ್ಯಾಪ್ತಿ ಯಲ್ಲಿ ಮುಷ್ಕರಕ್ಕೆ ಅವಕಾಶ ಇಲ್ಲ ಎಂಬುದಾಗಿ ನಾರಾಯಣಗೌಡ ಹಾಗೂ ಕಾಂತಕುಮಾರ್ ಅವರಿಗೆ ಫೆ.23ರಂದು ನೋಟಿಸ್ ನೀಡಲಾಗಿತ್ತು. ಆದರೂ, ಪ್ರತಿಭಟನೆ ನಡೆಸಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೇಂದ್ರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒತ್ತಾಯ

'ಮೇಕೆದಾಟು: ನಿಲುವು ಸ್ಪಷ್ಟಪಡಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ವಿಚಾರದಲ್ಲಿ ನಿಲುವು ಸ್ಪಷ್ಟಪಡಿಸುವಂತೆ ಕೇಂದ್ರ ಜಲಶಕ್ತಿ ಸಚಿವರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಮೇಕೆದಾಟು ವಿಚಾರದಲ್ಲಿ ಸಮಯ ವ್ಯರ್ಥ ಮಾಡುವುದು ಬೇಡ. ಈ ಯೋಜನೆ ಜಾರಿಗೊಳಿಸಲು ಬದ್ಧರಾಗಿದ್ದೀರೋ, ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸುವಂತೆ ಕೇಂದ್ರ ಜಲಶಕ್ತಿ ಸಚಿವರನ್ನು ಕೇಳಿದ್ದೇವೆ' ಎಂದರು.


ಮೇಕೆದಾಟು ಪ್ರದೇಶ (ಸಂಗ್ರಹ ಚಿತ್ರ)

'ಪೆನ್ನಾರ್ ನದಿ ವಿಚಾರವಾಗಿ ಕರ್ನಾಟಕ ಹಾಗೂ ತಮಿಳುನಾಡು ನಡುವೆ ತಿಕ್ಕಾಟವಿದ್ದು, ಸಂಧಾನದ ಮೂಲಕ ಈ ಸಮಸ್ಯೆ ಬಗೆಹರಿಸಿಕೊಳ್ಳಬಹುದೇ ಎಂದೂ ಕೇಳಿದ್ದೇವೆ' ಎಂದರು.

'ನವಲಿ ಬಳಿ ಸಮಾನಾಂತರ ಅಣೆಕಟ್ಟು ನಿರ್ಮಿಸುವ ವಿಚಾರವಾಗಿ ಆಂಧ್ರ ಪ್ರದೇಶ ಮುಖ್ಯಮಂತ್ರಿ ಸಮಯ ನೀಡಿದ ಬಳಿಕ ನಾನು ಮತ್ತು ಇಡೀ ತಂಡ ಆ ರಾಜ್ಯಕ್ಕೆ ಭೇಟಿ ನೀಡಲಿದ್ದೇವೆ' ಎಂದರು.

ಜಲಶಕ್ತಿ ಸಚಿವರ ಜೊತೆ ಮತ್ತೆ ಸಭೆ: 'ನದಿ ಜೋಡಣೆ ವಿಚಾರವಾಗಿ ಕೇಂದ್ರ ಸರ್ಕಾರದ ಮುಂದೆ ಅನೇಕ ಪ್ರಸ್ತಾಪಗಳಿದ್ದು, ನಾವು ನಮ್ಮ ಪಾಲಿನ ನೀರಿನ ಬಗ್ಗೆ ಪ್ರಸ್ತಾಪಿಸಿದ್ದೇವೆ. ಮಾರ್ಚ್ 18ರ ಒಳಗೆ ಮತ್ತೊಮ್ಮೆ ಜಲಶಕ್ತಿ ಸಚಿವರ ಭೇಟಿಗೆ ಸಮಯ ಪಡೆಯಲಾಗಿದೆ' ಎಂದರು.

ಸಂಸದರಿಗೆ ಪತ್ರ: 'ಎಲ್ಲ ಸಂಸದರಿಗೆ ಇಲಾಖೆಯ ವತಿಯಿಂದ ಪತ್ರ ಬರೆದು ಅವರ ಕ್ಷೇತ್ರಗಳಿಗೆ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗುವುದು. ಅವರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ಈ ಯೋಜನೆಗಳಿಗೆ ಅನುಮತಿ ಪಡೆಯಬಹುದು' ಎಂದರು.

ನ್ಯಾಯಾಲಯದಲ್ಲಿ ಪ್ರಕರಣ: 10 ವರ್ಷದಲ್ಲಿ ₹400 ಕೋಟಿ ಖರ್ಚು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ಎದುರಿಸಲು ಕಳೆದ 10 ವರ್ಷಗಳಲ್ಲಿ ₹409 ಕೋಟಿ ಖರ್ಚು ಮಾಡಿರುವುದಾಗಿ ತಿಳಿಸಿದೆ.

ಬಜೆಟ್ ಅಧಿವೇಶನದ ವೇಳೆ ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ನೀಡಿರುವ ಉತ್ತರದಲ್ಲಿ ಸರ್ಕಾರವು ಈ ಮಾಹಿತಿ ನೀಡಿದೆ.

ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಎದುರಿಸಲು 2023–24ನೇ ಹಣಕಾಸು ವರ್ಷದಲ್ಲಿ ಸರ್ಕಾರ ₹66 ಕೋಟಿ ಖರ್ಚು ಮಾಡಿದೆ. ಇದು 2022–23ರಲ್ಲಿ ಮಾಡಿದ ಖರ್ಚಿಗಿಂತ ₹9 ಕೋಟಿ ಅಧಿಕವಾಗಿದೆ.

ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿನ ಎರಡು ವರ್ಷಗಳನ್ನು ಹೊರತುಪಡಿಸಿ 2014–15ರಿಂದ ನ್ಯಾಯಾಲಯಗಳಲ್ಲಿನ ದಾವೆಗಳನ್ನು ಎದುರಿಸಲು ಸರ್ಕಾರ ಮಾಡುತ್ತಿರುವ ವೆಚ್ಚದ ಮೊತ್ತ ಹೆಚ್ಚಾಗಿದೆ.

ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸರ್ಕಾರ 'ರಾಷ್ಟ್ರೀಯ ದಾವೆ ನೀತಿ'ಯನ್ನು ರೂಪಿಸುತ್ತಿದೆ. ಇದರ ಅಂತಿಮ ಕರಡನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗುವುದು ಎಂದು ಅದು ಹೇಳಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section,
CESC, Mysuru-570017.

ಪತ್ರಿಕಾ ಪ್ರಕಟಣೆ – ದಿನಾಂಕ : 27.02.2025

ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/44953/2023–24(NKK) ದಿನಾಂಕ:14.10.2024 ಅನುಗುಣವಾಗಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಗಳಿಗೆ ಸೂಚಿತ ರಿಕ್ತ ಸ್ಥಾನಗಳ 1:5 ರ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು, ಕಟ್–ಆಫ್ ಅಂಕಗಳೊಂದಿಗೆ ಚಾವಿಸನಿನಿ ವೆಬ್‌ಸೈಟ್ https://cescmysore.karnataka.gov.in/ ನಲ್ಲಿ ಪ್ರಕಟಿಸಲಾಗಿದೆ. **ಹೆಚ್ಚಿನ ಮಾಹಿತಿಯನ್ನು https://cescmysore.karnataka.gov.in/**ನಲ್ಲಿ ಪಡೆಯುವುದು ಹಾಗೂ ವಿಚಾರಣೆಗಾಗಿ ಕಛೇರಿ ವೇಳೆಯಲ್ಲಿ **(ಬೆಳಗ್ಗೆ 10:00 ರಿಂದ ಸಂಜೆ 5:30 ಗಂಟೆವರೆಗೆ) ದೂರವಾಣಿ ಸಂಖ್ಯೆ: 0821–2343384** ಅನ್ನು ಸಂಪರ್ಕಿಸಬಹುದು.
ಸಹಿ/–ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.) ಚಾವಿಸನಿನಿ, ಮೈಸೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾ&ನಿ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
1	(ಕಾವೇರಿ–ಕಾ&ನಿ)–2	ಬೆಂಜಮಂ/ಕಾನಿಅ(ಕಾ–ಕಾ&ನಿ)–2/ಪಿಬಿ/3089/2024–25 ದಿನಾಂಕ: 21–02–2025 (ಕರೆ–2)	1	ರೂ. 75,07,340/–	06–03–2025 ರ ಸಂಜೆ 4.00 ಗಂಟೆಯವರೆಗೆ	07–03–2025 ರ ಸಂಜೆ 5.00 ಗಂಟೆಯ ನಂತರ
				ರೂ. 1,51,000/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ–ಕಾ&ನಿ)–2						
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
2	(ದಕ್ಷಿಣ–ಪಶ್ಚಿಮ–1)	ಬೆಂಜಮಂ/ಕಾನಿಅ(ದಪ–1)/ತಾಂಅ/ಪಿಬಿ/4965/2024–25 ದಿನಾಂಕ: 24–02–2025	1	ರೂ. 18,90,154/–	07–03–2025 ರ ಸಂಜೆ 4.00 ಗಂಟೆಯವರೆಗೆ	10–03–2025 ರ ಮಧ್ಯಾಹ್ನ 3.00 ಗಂಟೆಯ ನಂತರ
				ರೂ. 47,300/–		
			2	ರೂ. 99,56,308/–		
				ರೂ. 1,99,200/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–ಪಶ್ಚಿಮ–1)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್‌ಸೈಟ್: https://kppp.karnataka.gov.in. ಗೆ ಲಾಗಿನ್ ಆಗಿ ಪಡೆಯಬಹುದು.
ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ವಾಸಾಸಂಇ/ವಾ.ಪ್ರ/ಅಡ್ವರ್ಟೋರ್/5313/2024–25

ಸರ್ಕಾರದ ಸೌಲಭ್ಯ ಪಡೆಯಲು 3,305 ಖಾತೆ

ನಿಷ್ಕ್ರಿಯ ಖಾತೆಗಳಲ್ಲಿ ₹55.78 ಕೋಟಿ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ಸರ್ಕಾರಿ ಸೌಲಭ್ಯ ಪಡೆಯಲು ರಾಜ್ಯದ ರಾಷ್ಟ್ರೀಕೃತ ಮತ್ತು ಖಾಸಗಿ ವಲಯದ ವಿವಿಧ ಬ್ಯಾಂಕ್‌ಗಳಲ್ಲಿ ಜನರು ತೆರೆದಿದ್ದ 3,305 ಖಾತೆಗಳು ಈಗ ವಾರಸುದಾರರಿಲ್ಲದೆ ನಿಷ್ಕ್ರಿಯವಾಗಿವೆ. ಈ ಖಾತೆಗಳಲ್ಲಿ ಇರುವ ₹55.78 ಕೋಟಿ ಹಣವನ್ನು ಮರಳಿಸಲು ಬ್ಯಾಂಕ್‌ನವರು ವಾರಸುದಾರರಿಗೆ ಮತ್ತು ಕಾನೂನುಬದ್ಧ ಅವಲಂಬಿತರಿಗೆ ಹುಡುಕಾಟ ನಡೆಸಿದ್ದಾರೆ.

ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ₹45.14 ಕೋಟಿ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ₹7.03 ಕೋಟಿ ಹಣವು ರಾಜ್ಯ ಸರ್ಕಾರದ ಠೇವಣಿಯಾಗಿದ್ದು, ಯಾರ ಬಳಕೆಗೂ ಬಾರದೆ ಹಾಗೆಯೇ ಉಳಿದಿದೆ.

ವಾರಸುದಾರರಿಲ್ಲದ ಅತಿ ಹೆಚ್ಚು 190 ಖಾತೆಗಳು ಮೈಸೂರು ಜಿಲ್ಲೆಯಲ್ಲಿದ್ದು, ₹5.17 ಕೋಟಿ ಠೇವಣಿ ಸಂಗ್ರಹವಾಗಿದೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 120 ಖಾತೆಗಳಿದ್ದು, ₹ 6.38 ಕೋಟಿ ಇದೆ. ಅತಿ ಕಡಿಮೆ 34 ಖಾತೆಗಳು ಬಾಗಲಕೋಟೆ ಜಿಲ್ಲೆಯಲ್ಲಿದ್ದು, ₹1.04 ಕೋಟಿ ಠೇವಣಿ ಇದೆ. ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ ₹3.37 ಲಕ್ಷ ಠೇವಣಿಯಿದ್ದು, 99 ಖಾತೆಗಳಿವೆ.

ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ರಾಷ್ಟ್ರೀಕೃತ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲು ಸಾರ್ವಜನಿಕರಿಗೆ ಸೂಚಿಸಲಾಗುತ್ತದೆ. ಹೀಗೆ ತೆರೆಯಲಾದ ಖಾತೆಗಳಲ್ಲಿ ಸೌಲಭ್ಯದ ಹಣ ಜಮಾ ಆಗುತ್ತದೆ. ಆದರೆ, ಕೆಲವರು ಆ ಹಣವನ್ನು ಪಡೆಯದೇ ಹಾಗೆಯೇ ಇಟ್ಟಿರುತ್ತಾರೆ. ಮತ್ತೆ ಕೆಲ ಫಲಾನುಭವಿಗಳು ಮೃತಪಟ್ಟಿರುತ್ತಾರೆ. ಕೆಲವು ಖಾತೆಗಳಿಗೆ ಅವಲಂಬಿತರ ಹೆಸರೇ ಇಲ್ಲ. ಹೀಗಾಗಿ ಸರ್ಕಾರದ ಹಣ ಅನೇಕ ವರ್ಷಗಳಿಂದ ಅಲ್ಲಿಯೇ ಇದೆ.

'ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಶಿಷ್ಯವೇತನ ಸೇರಿ ಇತರ ಸೌಲಭ್ಯಗಳಿಗೆ ತೆರೆಯಲಾದ ಖಾತೆಗಳ ಪಟ್ಟಿಯನ್ನು 10 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ನಿಷ್ಕ್ರಿಯಗೊಳಿಸಿದ ಪಟ್ಟಿಯನ್ನು ಬ್ಯಾಂಕ್‌ಗಳು ತಮ್ಮ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲು ಅಥವಾ ನವೀಕರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ಬ್ಯಾಂಕ್‌ಗಳಿಗೆ ಸಲಹೆ ನೀಡಿದೆ. ಅದರನ್ವಯ ಬ್ಯಾಂಕ್‌ಗಳು ಖಾತೆಯನ್ನು ಮರುಸಕ್ರಿಯಗೊಳಿಸಲು ಅಥವಾ ಮುಕ್ತಾಯಗೊಳಿಸಲು ಮುಂದಾಗಿವೆ' ಎಂದು ಧಾರವಾಡ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಪ್ರಭುದೇವ ಎನ್.ಜಿ. ತಿಳಿಸಿದರು.

ಇಂತಹ ಖಾತೆಗಳಲ್ಲಿ ಇರುವ ಹಣವನ್ನು ಸುಲಭವಾಗಿ ಪತ್ತೆ ಮಾಡಲು ಮತ್ತು ವಾರಸುದಾರರಿಗೆ ತಲುಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರೀಕೃತ ವೆಬ್ ಪೋರ್ಟಲ್ (UDGAM-unclame diposits gateway to access information) ಪರಿಚಯಿಸಿದೆ. ಪೋರ್ಟಲ್‌ನಲ್ಲಿ ಹೆಸರು, ಜನ್ಮದಿನಾಂಕ, ಆಧಾರ್ ಕಾರ್ಡ್ ನಂಬರ್ ಸ್ಪಷ್ಟವಾಗಿ ನಮೂದಿಸಿದರೆ, ಅವರ ಹೆಸರಲ್ಲಿ ಯಾವ ಬ್ಯಾಂಕ್‌ನಲ್ಲಿ ನಿಷ್ಕ್ರಿಯವಾಗಿರುವ ಖಾತೆಯಿದೆ, ಮೊತ್ತ ಎಷ್ಟಿದೆ ಎನ್ನುವುದು ತಿಳಿಯುತ್ತದೆ.

ಪ್ರಮುಖ ಜಿಲ್ಲೆಗಳ ನಿಷ್ಕ್ರಿಯ ಖಾತೆಗಳ ವಿವರ

ಜಿಲ್ಲೆ	ಖಾತೆಗಳ ಸಂಖ್ಯೆ	ಠೇವಣಿ
ಬೆಂಗಳೂರು ನಗರ	120	₹6.38 ಕೋಟಿ
ತುಮಕೂರು	142	₹5.19 ಕೋಟಿ
ಮೈಸೂರು	190	₹5.17 ಕೋಟಿ
ಬಳ್ಳಾರಿ	41	₹2.68 ಕೋಟಿ
ಕಲಬುರಗಿ	122	₹2.57 ಕೋಟಿ
ರಾಯಚೂರು	171	₹2.31 ಕೋಟಿ
ಕೋಲಾರ	135	₹2.19 ಕೋಟಿ
ಚಿತ್ರದುರ್ಗ	130	₹2.10 ಕೋಟಿ
ಹಾಸನ	157	₹1.93 ಕೋಟಿ
ಗದಗ	80	₹1.71 ಕೋಟಿ

ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಹಣ ನಿರ್ವಹಣೆ ಮಾಡದ ಖಾತೆಗಳು ಸಾಕಷ್ಟಿವೆ. ಸರ್ಕಾರದ ಅನುದಾನ ಜಮಾವಣೆಯಾದ ಶಿಷ್ಯವೇತನ ಮತ್ತು ರೈತರ ಸಹಾಯಧನ ಖಾತೆಗಳು ಇವೆ
ಪ್ರಭುದೇವ ಎನ್.ಜಿ
ವ್ಯವಸ್ಥಾಪಕ ಧಾರವಾಡ ಜಿಲ್ಲಾ ಲೀಡ್ ಬ್ಯಾಂಕ್

ಸಾಮಾಜಿಕ ಕಾಳಜಿಯ ರಾಜಕೀಯ ತಪಸ್ವಿ

• ಸುಧಾಕರ ಹೊಸಳ್ಳಿ

ಹೋರಾಟದ ಕಸುವು, ಸಾಮಾಜಿಕ ನ್ಯಾಯ, ಮುತ್ಸದ್ದಿತನ, ನಾಡನ್ನು ಮುನ್ನಡೆಸುವ ಚಾತುರ್ಯವನ್ನು ಹೊಂದಿರುವ ಅನೇಕ ರಾಜಕೀಯ ನಾಯಕರು ಕರ್ನಾಟಕದ ಮುಂಚಲನೆಗೆ ಕಾರಣ-ರಾಗಿದ್ದಾರೆ. ಹೀಗೆ, ಕರ್ನಾಟಕದ ರಾಜಕಾರಣವನ್ನು ಮೆಲುಕು ಹಾಕುವಾಗ ಉಪೇಕ್ಷಿಸಲು ಸಾಧ್ಯವೇ ಆಗದ ಧೀಮಂತಿಕೆಯುಳ್ಳ ಅಪರೂಪದ ವ್ಯಕ್ತಿತ್ವ ಮಂಡ್ಯ ಜಿಲ್ಲೆಯ ಬೂಕನಕೆರೆಯವರಾದ ಬಿ.ಎಸ್ ಯಡಿಯೂರಪ್ಪನವರೂ ಒಬ್ಬರು.

ಕೆಲವರು ತಮ್ಮ ಹಿನ್ನೆಲೆಯ ಕಾರಣಕ್ಕೆ ರಾಜಕಾರಣದ ಭಾಗವಾದರೆ, ಕೆಲವರು ಅನಿರೀಕ್ಷಿತವಾ-ಗಿಯೂ ರಾಜಕಾರಣದ ಮೆಟ್ಟಿಲುಗಳನ್ನು ಸವೆಸಿದ್ದುಂಟು. ಆದರೆ, ಕೆಲವೇ ಕೆಲವು ವ್ಯಕ್ತಿಗಳು ರಾಜಕೀಯ ವಲಯದಲ್ಲಿ ತಮ್ಮ ತಪಸ್ಸಿನ ಕಾರಣಕ್ಕಾಗಿ, ಸಾಮಾಜಿಕ ಹೋರಾಟಗಳ ಗಾಂಭೀರ್ಯಕ್ಕಾಗಿ, ಸಮಾಜದ ನೋವುಗಳ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡ ಕಾರಣಕ್ಕಾಗಿ, ರಾಜಕಾರಣದ ಮುಂಚೂಣಿಯಲ್ಲಿ ಇರುತ್ತಾರೆ.

ತಮಗೆ ಸಿಕ್ಕ ಅವಕಾಶಗಳಿಂದ ಪ್ರಸಿದ್ಧಿ ಪಡೆದವರು ಕೆಲವರು. ತಮ್ಮ ಹೋರಾಟ, ನಡವಳಿಕೆ, ನೀತಿ ನಿರೂಪಣೆಗಳ ಕಾರಣಕ್ಕಾಗಿ, ತಮಗೆ ದಕ್ಕಿದ ಸ್ಥಾನದ ಮಹತ್ತನ್ನೇ ಉನ್ನತಿಗೇರಿಸುವುದು ಕೆಲವೇ ಕೆಲವು ವ್ಯಕ್ತಿಗಳಿಗೆ ಸಾಧ್ಯ. ಅಂತಹ ವಿಶಿಷ್ಟ ನೆಲಗಟ್ಟಿನಲ್ಲಿ ನಿಂತು, ನಾಡಿನ ಭವಿಷ್ಯವನ್ನು ಬೆಳಗಿಸುವಲ್ಲಿ ತಮ್ಮದೇ ಕೊಡುಗೆ ನೀಡಿದವರು ಯಡಿಯೂರಪ್ಪನವರು ಎನ್ನಲು ಹಿಂಜರಿಕೆ, ಮುಜುಗರ ಬೇಕಿಲ್ಲ.

ಕಾರಣವಿಷ್ಟೇ; ಕರ್ನಾಟಕದಲ್ಲಿ ಮಾತ್ರವಲ್ಲ, ದಕ್ಷಿಣ ಭಾರತದಲ್ಲೇ ನೆಲೆ ಇಲ್ಲದ ಬಿಜೆಪಿಗೆ ಗಟ್ಟಿ ನೆಲೆ ದೊರಕಿಸಿ ಕೊಡುವಲ್ಲಿ ಅವರ ಪಾತ್ರ ಭಿನ್ನಕೋನದ್ದೆ. ಅಂದರೆ ಯಡಿಯೂರಪ್ಪನವರ ಕಾರಣಕ್ಕಾಗಿ ಒಂದು ಪಕ್ಷ ಅಸ್ತಿತ್ವಕ್ಕೆ ಬಂತು ಎಂದು ಹೇಳುವುದು ಕೇವಲ ಔಪಚಾರಿಕವಾಗುತ್ತದೆ. ಯಾವುದೇ ಒಂದು ರಾಜಕೀಯ ಪಕ್ಷ ಅಸ್ತಿತ್ವ ಕಂಡುಕೊಳ್ಳಲು, ವಿಸ್ತರಿಸಿಕೊಳ್ಳಲು ಕಾರ್ಯಕರ್ತರ ಶ್ರಮ ಗಂಭೀರ-ವಾಗಿರುತ್ತದೆ. ಅದಾಗಿಯೂ ಒಂದು ರಾಜಕೀಯ ದೃಷ್ಟಿಕೋನದ, ತನ್ನದೇ ಸೈದ್ಧಾಂತಿಕ ಹಿನ್ನೆಲೆ ಇರುವ ಪಕ್ಷಕ್ಕೆ ಕಾರ್ಯಕರ್ತರ ವಿಶ್ವಾಸ ಗಳಿಸಲು ದ್ರಷ್ಟಾರನಂತಹ ನಾಯಕನೂ ಅಗತ್ಯ.

ಕರ್ನಾಟಕದಲ್ಲಿ ಈ ರೀತಿಯ ಭಿನ್ನ ನಾಯಕತ್ವದ ಪರಂಪರೆಯನ್ನು ಯಡಿಯೂರಪ್ಪನವರಲ್ಲಿದ್ದ ನಾಯಕತ್ವದ ಗುಣ ಗಟ್ಟಿಗೊಳಿಸಿತು ಎನ್ನುವುದನ್ನು ಮರೆಮಾಚಲಾಗದು. ನಾಲ್ಕು ಬಾರಿ ಮುಖ್ಯಮಂತ್ರಿ ಪಟ್ಟ ಏರುವುದೆಂದರೆ ಸಾಮಾನ್ಯವೇನಲ್ಲ. ಇಂತಹ ಅಧಿಕಾರದ ಭಾಗವಾಗುವ ಮುನ್ನ ಇಡೀ ರಾಜ್ಯದಲ್ಲಿ ಅವರು ಕೈಗೊಂಡ ಸಾಮಾಜಿಕ ಚಳವಳಿಗಳು, ರಾಜಕೀಯ ಹೋರಾಟಗಳು, ಎದುರಿಸಿದ ಸವಾಲುಗಳು, ರೈತರ ಪರ ಎತ್ತಿದ್ದ ಧ್ವನಿ ಅತ್ಯಂತ ಪರಿಗ-ಣಿಸಬೇಕಾದ ಅಂಶಗಳು.

ಈ ನೆಲೆಯಿಂದ ಕರ್ನಾಟಕದ ರಾಜಕೀಯ ಶ್ರೀಮಂತಿಕೆಗೆ ಯಡಿಯೂರಪ್ಪನವರ ಕೊಡುಗೆ ಐತಿಹಾಸಿಕವಾಗಿ ದಾಖಲಾದದ್ದು. ಕೇವಲ ರಾಜಕೀಯದಲ್ಲಿ ಎದುರಾಗುವ ಸವಾಲುಗಳನ್ನು ಮಾತ್ರ ಮೀರಿನಿಲ್ಲದೆ, ಸಾರ್ವಜನಿಕ ಬದುಕಿನ ಸಂಕಷ್ಟಗಳಿಗೆ ಸ್ಪಂದಿಸುವ ನಡವಳಿಕೆ ಅವರ ನಾಯಕತ್ವವನ್ನು ಪ್ರತ್ಯೇಕ ನೆಲೆಗಟ್ಟಿನಲ್ಲಿ ಸ್ಥಾಪಿಸಿದೆ. ಅಧಿಕಾರ ಸಿಕ್ಕಿದ ಮೇಲೂ ಕಾಣೆಯಾಗದ ಅವರ ಸಾಮಾಜಿಕ ಕಳಕಳಿ ಅವರನ್ನು ಮಹೋನ್ನತ ನಾಯಕನ ಸ್ಥಾನದಲ್ಲಿ ಎಂದಿಗೂ ನಿಲ್ಲಿಸುತ್ತದೆ.

ರಾಜಕೀಯದ ದಿಕ್ಸೂಚಿ: ಬಹುಪಾಲು ರಾಜಕಾರಣಿಗಳಂತೆ ಯಡಿಯೂರಪ್ಪನವರ ರಾಜಕೀಯ ಬದುಕು ಸಾಮಾನ್ಯ ಏರಿಳಿತಗಳಿಂದ ಹೊರತಾದುದಲ್ಲ. ಒಂದು ರಾಜಕೀಯ ಪಕ್ಷವು ಅನೇಕ ವೈವಿಧ್ಯ, ವೈರುಧ್ಯಗಳ ನಡುವೆ ಶಕ್ತಿ ಪಡೆಯಲು ಸಾಧ್ಯ ಎಂದು ಸಾಬೀತುಪಡಿಸಿದ ಕೀರ್ತಿಗೆ ಯಡಿಯೂರಪ್ಪ ಭಾಜನರಾದವರು. 1972 ರಲ್ಲಿ ಜನ ಸಂಘದ ತಾಲೂಕಿನ ಅಧ್ಯಕ್ಷ ಪಟ್ಟದಿಂದ ಪ್ರಾರಂಭಿಸಿ, 1977 ಜನತಾ ಪಕ್ಷದ ತಾಲೂಕಿನ ಕಾರ್ಯದರ್ಶಿ , 1980 ತಾಲೂಕು ಅಧ್ಯಕ್ಷ, 1985 ಶಿವಮೊಗ್ಗ ಘಟಕದ ಜಿಲ್ಲಾಧ್ಯಕ್ಷ, 1988ರಿಂದ 1991 ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ. 1992 ರಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ, 1995 -2000 ಇಸವಿಯಲ್ಲಿ 2ನೇ ಬಾರಿಗೆ ರಾಜ್ಯಾಧ್ಯಕ್ಷ , 2003ರಲ್ಲಿ ಬಿಜೆಪಿಯ ಪ್ರಚಾರ ಸಮಿತಿ ಅಧ್ಯಕ್ಷ, ತದನಂತರ ನಾಲ್ಕು ಬಾರಿ ಮುಖ್ಯಮಂತ್ರಿ ರಾಷ್ಟ್ರೀಯ ಸಂಸದೀಯ ಮಂಡಳಿಯಲ್ಲಿ ಸ್ಥಾನ ಗಿಟ್ಟಿಸಿದ್ದು ಹೀಗೆ ನಿರಂತರ ಆರೋಹಣ ಕ್ರಮದಲ್ಲಿ ತಮ್ಮ ವ್ಯಕ್ತಿತ್ವವನ್ನು ಕಡೆದಿಟ್ಟುಕೊಂಡದ್ದು ಅವರ ಹೆಗ್ಗಳಿಕೆ.

ಸಾಮಾಜಿಕ ಹೋರಾಟಗಳ ಬೆನ್ನೆಲುಬು

1974ರಲ್ಲಿ 'ಗ್ರಾಮ ರಾಜ್ಯ ಉಳಿಸಿ ರೈತರನ್ನು ರಕ್ಷಿಸಿ' ಎಂಬ ಘೋಷಣೆಯೊಂದಿಗೆ ಶಿವಮೊಗ್ಗದಿಂದ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದ ಪ್ರಕರಣದಿಂದ ಸಾಗಿ, 1988 ರಲ್ಲಿ ರೈತರ ಸಮಸ್ಯೆಗಳ ಪರಿಹಾರಕ್ಕೆ ಬಸವ-ನಬಾಗೇವಾಡಿಯಿಂದ ಬೆಂಗಳೂರಿಗೆ ರೈತ ಜಾಥಾ, ಕೂಲಿಗಾಗಿ ಕಾಳು ಯೋಜನೆಯ ಭ್ರಷ್ಟಾಚಾರ, ಸಿ ಮತ್ತು ಡಿ ವರ್ಗದ ರೈತರ ಜಮೀನಿನನ್ನು ಅರಣ್ಯ ಇಲಾಖೆಯು ಸ್ವಾಧೀನದ ಪಡಿಸಿಕೊಳ್ಳಲು ಮುಂದಾದಾಗ ಅದರ ವಿರುದ್ಧ ಹೋರಾಟ, ನಕಲಿ ಛಾಪಾ ಕಾಗದ ಹಗರಣ, ಸಿಇಟಿ ಗೊಂದಲಗಳಿಗೆ ಸಂಬಂಧಿಸಿದಂತೆ ಕೈಗೊಂಡ ಹೋರಾಟಗಳು, ರಾಜ್ಯ ವ್ಯಾಪಿಯಾಗಿ ಸ್ವೀಕೃತವಾದವು.

1998 ರಲ್ಲಿನ ಕಾವೇರಿ ಹೋರಾಟ ಅವರ ಸಾಮಾಜಿಕ ಮತ್ತು ರಾಜಕೀಯ ಬದುಕಿನ ವಿಶೇಷ ತಿರುವು. ಹೋರಾಟಗಾರನೊಬ್ಬನ ಗುರಿ ಸ್ಪಷ್ಟವಾಗಿ-ದ್ದರೆ, ಜನಪರವಾದ ಕಾಳಜಿಯನ್ನು ಇಟ್ಟುಕೊಂಡಿದ್ದರೆ ಯಶಸ್ಸು ಸಾಧ್ಯ ಎಂಬುದನ್ನು ಯಡಿಯೂರಪ್ಪನವರ ಕಾರ್ಯ ಚಟುವಟಿಕೆ ಸಾದೃಶಗೊಳಿಸಿದೆ. ಜೀತ ಪದ್ಧತಿಯ ಸಮಸ್ಯೆಯನ್ನು ಸರ್ಕಾರ ಆದ್ಯತೆ ಮೇರೆಗೆ ಪರಿಹರಿಸು ವಂತೆ ಮಾಡಲು ಒಂದು ತಿಂಗಳ ಉಪವಾಸ ಅವರ ಹಿರಿಮೆ. ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟ, ಸೆರೆವಾಸವನ್ನೂ ಅನುಭವಿಸಿದ ಧುರೀಣ.

ಯಡಿಯೂರಪ್ಪನವರ ಜೀವನದಲ್ಲಿ ಏನೆಲ್ಲ ಏರಿಳಿತ ಕಂಡರೂ, ಕರ್ನಾಟಕದ ಜನತೆ ಯಡಿಯೂರಪ್ಪನವರ ರಾಜಕೀಯ ಚರಿತ್ರೆಯನ್ನು ಶ್ರೀಮಂತವಾದದ್ದು ಎಂದು ಭಾವಿಸುವುದಂತೂ ಸತ್ಯ. ಎಲ್ಲ ಸಮುದಾಯಗಳೂ ಯಾವತ್ತೂ ಒಪ್ಪುವ ಜನನಾಯಕ ಎಂಬ ಹೆಗ್ಗಳಿಕೆಯು ಯಡಿಯೂರಪ್ಪನವರಿಗೆ ಎಂದಿಗೂ ಅಲಂಕೃತವಾಗಿಯೂ ಇರುತ್ತದೆ ಎಂಬುದನ್ನಂತೂ ಅಲ್ಲಗಳೆಯಲಾಗದು. ❖



ಆರೆಸ್ಸೆಸ್ ಸಾಂಗತ್ಯ ತಂದ ಸಾಮಾಜಿಕ ಕಳಕಳಿ

ಏರುಪೇರುಗಳು ಮತ್ತು ಅನಿರೀಕ್ಷಿತವಾದ ಸವಾಲುಗಳನ್ನು ಸ್ವೀಕರಿಸಿ ಮುನ್ನಡೆಯುವಾಗಲೂ ಜನಪರ ಕಾಳಜಿ ಮರೆಯಾಗದಂತೆ ಜಾಗ್ರತೆ ವಹಿಸಿದ, ಜನಪರ ಧ್ವನಿ ತೆರೆಮರೆಗೆ ಸರಿಯದಂತೆ ಜಾಣ್ಮೆ ವಹಿಸಿದ ಯಡಿಯೂರ-ಪ್ಪನವರ ಔದಾರ್ಯದ ಹಿಂದೆ ಆರ್‌ಎಸ್‌ಎಸ್‌ನ ಪ್ರಭಾವ ಅಗಾಧವಾದದ್ದು.

1965 ರಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಆರ್‌ಎಸ್‌ಎಸ್ ಸಂಪರ್ಕಕ್ಕೆ ಬಂದ ಯಡಿಯೂರಪ್ಪನವರು, 1970 ರಿಂದ 72 ರವರೆಗಿನ ಸಂಘದ ತಳಮಟ್ಟದ ಪ್ರಮುಖ ಜವಾಬ್ದಾರಿಯಾದ ತಾಲೂಕು ಕಾರ್ಯವಾಹ ಹೊಣೆಗಾರಿಕೆ-ಯನ್ನು ಶಿಸ್ತಿನಿಂದ ನಿಭಾಯಿಸಿದ್ದರು.

ರಾಷ್ಟ್ರದ ಸಾಮಾಜಿಕ ಸಂಘಟನೆಯ ಸಂಪರ್ಕದಲ್ಲಿ ರಾಜಕಾರಣದ ಹಾದಿ ತುಳಿದ ಯಡಿಯೂರಪ್ಪ ನವರು, ಅಧಿಕಾರದ ಗದ್ದುಗೆ ಹಿಡಿದಾಗ ರೈತಪರ ಬಜೆಟ್ ಮಂಡಿಸಲು, ದೀನ–ದಲಿತರಿಗೆ ಸಹಕಾರದ ಯೋಜನೆಗಳನ್ನು ಕೈಗೆತ್ತಿಕೊಳ್ಳಲು, ಕಾರ್ಮಿಕ ವಲಯವನ್ನು ಉತ್ತೇಜಿಸಲು ಆರ್‌ಎಸ್‌ಎಸ್ ಒಡನಾಟವೇ ಕಾರಣ ಎಂಬುದನ್ನು ಅವರೇ ಅನೇಕ ಬಾರಿ ಸಾರ್ವಜನಿಕವಾಗಿ ಘಂಟಾಘೋಷವಾಗಿ ಸಾರಿದ್ದಾರೆ.

ಎದುರಾಳಿಗಳು ಆರ್‌ಎಸ್‌ಎಸ್ ಕುರಿತು ಆರೋಪ ಮಾಡಿದಾಗ, 'ನಾನು ಆರ್‌ಎಸ್‌ಎಸ್ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ' ಎಂದು ಸದನದಲ್ಲೇ ಗುಡುಗಿದ್ದರು.

ಶಿಕ್ಷಣ ಕ್ಷೇತ್ರದ ಮೇಲಿನ ಪ್ರೇಮ

ದ್ವಿತೀಯ ಪಿಯು ಮಾತ್ರ ಓದಿದ್ದ ಯಡಿಯೂರಪ್ಪ-ನವರಲ್ಲಿ ಶಿಕ್ಷಣ, ಶಿಕ್ಷಕರು, ವಿದ್ಯಾರ್ಥಿಗಳ ಕುರಿತಾದ ಅಭಿವೃದ್ಧಿಯ ಚಿಂತನೆಗಳು ಸಮೃದ್ಧವಾಗಿಯೇ ಆವರಿಸಿ-ಕೊಂಡಿದ್ದವು.

ಅವರ ಅಧಿಕಾರದ ಅವಧಿಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಯೋಜನೆಗಳು, ಶಿಕ್ಷಣ ವಲಯದಲ್ಲಿ ಕ್ರಾಂತಿಯನ್ನೇ ಸೃಷ್ಟಿ ಮಾಡಿದವು. ಶಿಕ್ಷಕರ ನೇಮಕಾತಿ, ಸರ್ಕಾರಿ ನೌಕರರ ವೇತನ ಪರಿಷ್ಕರಣೆ, ಬಿ ಇಡಿ ಶಿಕ್ಷಕರ ಸಮಸ್ಯೆ ಪರಿಹಾರ, ಅತಿಥಿ ಉಪನ್ಯಾಸಕರಿಗೆ ಸಂಬಳ ಮತ್ತು ಸವಲತ್ತುಗಳ ವಿಸ್ತರಣೆ, ಪಿಯು ಉಪನ್ಯಾಸಕರ ಸಮಸ್ಯೆಗಳಿಗೆ ಪರಿಹಾರ, ದೈಹಿಕ ಶಿಕ್ಷಣ ವಲಯದ ಅಳಲುಗಳಿಗೆ ಸ್ಪಂದನೆ, ಹೊಸ ಪದವಿ ಕಾಲೇಜುಗಳ ಸ್ಥಾಪನೆಗೆ ಕ್ರಮವಹಿಸಿದರು.

ಶಾಲಾ ದಾಖಲಾತಿ ಹೆಚ್ಚಿಸಲು ಮಕ್ಕಳಿಗೆ ಬೈಸಿಕಲ್ ವಿತರಣೆ, ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ, ಬಿಸಿಯೂಟ ವಿಸ್ತರಣೆಯ ವಿಶೇಷ ಕ್ರಮಗಳನ್ನು ಕೈಗೊಂಡರು.

ಸರ್ವಮಾನ್ಯ ರೈತ ನಾಯಕ

ತಮ್ಮ 82ನೇ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜನಪರ ರಾಜಕಾರಣದ ಜೊತೆಗೆ ತಮ್ಮದೇ ವಿಶಿಷ್ಟ ಶೈಲಿಯ ನಾಯಕತ್ವ ಮಾದರಿ ರೂಪಿಸಿಕೊಂಡ ಅಗ್ರಗಣ್ಯ ರಾಜ-ಕಾರಣಿಯಾಗಿದ್ದಾರೆ. ಒಬ್ಬ ಜನನಾಯಕನಾಗಿ ಅಭಿವೃದ್ಧಿಯ ಬಗ್ಗೆ ಸ್ಪಷ್ಟ ದೃಷ್ಟಿಕೋನಗಳನ್ನು ಹೊಂದಿದ್ದರಿಂದಲೇ ತಾವು ಮುಖ್ಯಮಂತ್ರಿ ಚುಕ್ಕಾಣಿ ಹಿಡಿದಿದ್ದಾಗ ಹಲವು ಮಹತ್ವದ ಉಪಕ್ರಮಗಳನ್ನು ಅವರು ಅನುಷ್ಠಾನಗೊಳಿಸಿ-ದರು; ಮಾತ್ರವಲ್ಲ, ಪ್ರತಿಪಕ್ಷದಲ್ಲಿದ್ದಾಗಲೂ ತಮ್ಮ ಹೋರಾಟಗಳ ಮೂಲಕ ಹಾಗೂ ಸದನದಲ್ಲಿ ಧ್ವನಿ ಎತ್ತುವ ಹಲವಾರು ಜನಪರ ಕಾರ್ಯಗಳು ಜಾರಿಗೊಳ್ಳಲು ಪರೋಕ್ಷವಾಗಿ ಅಪಾರ ಕೊಡುಗೆ ನೀಡಿದ್ದಾರೆ.

ಒಟ್ಟು ನಾಲ್ಕು ಬಾರಿ- 2007, 2008, 2018 ಹಾಗೂ 2019ರಲ್ಲಿ-ರಾಜ್ಯದ ಮುಖ್ಯಮಂತ್ರಿ ಸ್ಥಾ-ನಕ್ಕೇರಿದವರು ಅವರು. ಈ ಪೈಕಿ 2007 ಹಾಗೂ 2018ರಲ್ಲಿ ಬೆರಳೆಣಿಕೆಯಷ್ಟು ದಿನಗಳ ಅವಧಿಗೆ ಗಾದಿಯಲ್ಲಿದ್ದ ಅವರು, 2008ರಲ್ಲಿ ಮುಖ್ಯಮಂತ್ರಿ ಆದಾಗ ಮೂರು ವರ್ಷಕ್ಕೂ ಸ್ವಲ್ಪ ಹೆಚ್ಚು ಹಾಗೂ 2019ರ ಜುಲೈನಿಂದ ಎರಡು ವರ್ಷ ಆಡಳಿತದ ಚುಕ್ಕಾಣಿ ಹಿಡಿದು ಮುನ್ನಡೆಸಿದರು.

ಸಮಾಜ ಕಲ್ಯಾಣ

ಯಡಿಯೂರಪ್ಪನವರು ಸಮಾಜ ಕಲ್ಯಾಣ ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳ ಪ್ರಾಮುಖ್ಯವನ್ನೂ ಮನಗಂಡ ರಾಜಕೀಯ ನಾಯಕ. ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಐಟಿ–ಬಿಟಿ ಇಲಾಖೆಯ ಮೂಲಕ 'ಬಿಯಾಂಡ್ ಬೆಂಗಳೂರು' ಉಪಕ್ರಮಕ್ಕೆ ಚಾಲನೆ ನೀಡಿದರು. ಅಲ್ಲದೆ, ರಾಜ್ಯಕ್ಕೆ ಹೆಚ್ಚು ಹೂಡಿಕೆ ಗಳನ್ನು ಆಕರ್ಷಿಸುವ ಉದ್ದೇಶದಿಂದ 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್' (ಕೆಡಿಇಎಂ) ಅಸ್ತಿತ್ವಕ್ಕೆ ತಂದರು. ಫಿನ್ ಟೆಕ್, ಎಡು ಟೆಕ್, ಗ್ರೀನ್ ಟೆಕ್, ರೋಬೋಟಿಕ್ಸ್, ಯಾಂತ್ರಿಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ಸೆಮಿಕಂಡಕ್ಟರ್ ಇನ್ನಿತರ ಹೊಸ ತಲೆಮಾರಿನ ಉದ್ದಿಮೆಗಳಿಗೆ ಸೂಕ್ತವಾದ ಕಾರ್ಯಪರಿಸರ (ಇಕೊ ಸಿಸ್ಟಮ್) ರೂಪಿಸಲು ಆದ್ಯತೆ ನೀಡಿದರು.

ಆರ್ಥಿಕತೆಗೆ ಚಾಲನೆ ನೀಡುವಲ್ಲಿ ಮೂಲಸೌಕರ್ಯ ನಿರ್ಮಾಣ ಅತ್ಯವಶ್ಯ ಎಂಬುದು ಯಡಿಯೂರಪ್ಪ ಅವರ ದೃಢ ನಂಬಿಕೆಯಾಗಿದೆ. ಹೀಗಾಗಿಯೇ, ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಸ್ಥಾಪನೆಯಾಗುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ತಾವು ಹಿಂದೆ ಉಪ ಮುಖ್ಯ-ಮಂತ್ರಿಯಾಗಿದ್ದಾಗ, 2005ರ ಸಂದರ್ಭದಲ್ಲಿ ಈ ಮಹತ್ವಾಕಾಂಕ್ಷಿ ಯೋಜನೆಯ ಕನಸು ಬಿತ್ತಿದ್ದ ಅವರು, 2019ರಲ್ಲಿ ಮುಖ್ಯಮಂತ್ರಿಯಾದ ಮೇಲೆ ಅದಕ್ಕೆ ₹384 ಕೋಟಿ ಅನುದಾನ ಲಭ್ಯ-ವಾಗಿಸಿದರು. ಈಗ ಈ ವಿಮಾನ ನಿಲ್ದಾಣದಿಂದ ಬೆಂಗಳೂರು, ಗೋವಾ, ತಿರುಪತಿ ಮತ್ತು ಹೈದರಾಬಾದಿಗೆ ವಿಮಾನಗಳು ಕಾರ್ಯಾಚರಿ-ಸುತ್ತಿವೆ. ಶಿವಮೊಗ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯ ಹಿಂದೆಯೂ ಯಡಿಯೂ-ರಪ್ಪನವರು ಒತ್ತಾಸೆಯಾಗಿ ನಿಂತಿದ್ದರು ಎಂಬುದು ಉಲ್ಲೇಖಾರ್ಹ.

ವಿದ್ಯಾರ್ಥಿಗಳಿಗೆ ಕಲಿಕೆಯ ಅವಧಿಯಲ್ಲೇ ಕೌಶಲಗಳನ್ನು ಮೈಗೂಡಿಸುವುದು ಅತ್ಯಗತ್ಯ ಎಂದು ಮನಗಂಡು, ತಾವು ಮುಖ್ಯಮಂ-ತ್ರಿಯಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಹೆಚ್ಚಿನ ಗಮನ ನೀಡಿದರು. ಜೊತೆಗೆ, ಹೊಸ ಪರಿಕಲ್ಪನೆಯ ವಿಶ್ವವಿದ್ಯಾಲಯ-ಗಳ ಸ್ಥಾಪನೆಯನ್ನು ತಾವು ಮಂಡಿಸಿದ ಬಜೆಟ್‌ನಲ್ಲಿ ಪ್ರಕಟಿಸಿದ್ದರು.

ತಾವು ಮುಖ್ಯಮಂತ್ರಿಯಾದಾಗ, ತೃತೀಯ ಲಿಂಗಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇಕಡಾ 1ರಷ್ಟು ಮೀಸಲು ಜಾರಿಗಳಿಸಿದ ಹಿರಿಮೆ ಅವರ ದ್ದಾಗಿದೆ. ಮಠ ಮಾನ್ಯಗಳಿಗೆ ಉದಾರ ಅನುದಾನ ನೀಡಿದ ಶ್ರೇಯವೂ ಯಡಿಯೂರಪ್ಪನವರಿಗೆ ಸಲ್ಲುತ್ತದೆ.

ಯಡಿಯೂರಪ್ಪನವರು ಮುಖ್ಯಮಂತ್ರಿಯಾ-ಗಿದ್ದಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗದವರಿಗಾಗಿ ವಸತಿ, ಶಿಕ್ಷಣ ಮತ್ತು ಉದ್ಯೋಗ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಸಾಕಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದರು. ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಹೆಚ್ಚಿನ ಹಣಕಾಸು ನೆರವಿನ ತರಬೇತಿ ವ್ಯವಸ್ಥೆ ಕಲ್ಪಿಸಿದರು.

ಸಹಕಾರ-ತತ್ವ ಆಧಾರಿತ ಯಶಸ್ವಿನಿ ಆರೋಗ್ಯ ವಿಮೆ ಯೋಜನೆ, ಮಕ್ಕಳಿಗೆ ಪೌಷ್ಟಿಕತೆ ಖಾತರಿಗೊಳಿಸಲು ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೆ ಮುತುವರ್ಜಿ ತೋರಿದರು.

ರೈತರಿಗೆ ಹಾಗೂ ಸ್ಥಳೀಯ ವ್ಯಾಪಾರ ಚಟು-ವಟಿಕೆಗಳಿಗೆ ಅನುಕೂಲ ಮಾಡಿಕೊಡಲು ಯಡಿಯೂರಪ್ಪ ಅವರು ಗ್ರಾಮೀಣ ರಸ್ತೆಗಳ ಜಾಲ ಸುಧಾರಿಸಲು ಗಮನ ಕೇಂದ್ರೀಕರಿಸಿ-ದರು. ಇದಕ್ಕಾಗಿ 'ನಮ್ಮ ಗ್ರಾಮ, ನಮ್ಮ ರಸ್ತೆ' ಯೋಜನೆ ಮೂಲಕ ಕುಗ್ರಾಮಗಳಿಗೂ ರಸ್ತೆ ಸಂಪರ್ಕ ಕಲ್ಪಿಸಿದರು. ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಉಡುಪಿ ಮತ್ತ, ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರಗಳ ಉತ್ಪಾದನಾ ಸಾಮರ್ಥ್ಯ ಅಧಿಕಗೊಳಿ-ಸಿದರು. ಸೌರಶಕ್ತಿ ವಿದ್ಯುತ್ ಹಾಗೂ ಗಾಳಿಯಿಂದ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಿ ಪರಿಸರಸ್ನೇಹಿ ವಿದ್ಯುತ್ ಉತ್ಪಾದನೆ ಉತ್ತೇಜಿಸಿದರು. ಎಸ್‌ಇಜಡ್ ಸ್ಥಾಪನೆ ಮತ್ತು ಬೆಂಗಳೂರು, ಮೈಸೂರು, ಮಂಗಳೂರು ಮತ್ತಿತರ ಕಡೆ ಐಟಿ ಪಾರ್ಕ್‌ಗಳಿಗೆ ನೆರವು ನೀಡುವ ಮೂಲಕ ಉದ್ಯಮ ಬೆಳವಣಿಗೆಗೆ ಒತ್ತಾಸೆಯಾದರು.

ವಿವಿಧ ಬೆಳೆಗಳಿಗೆ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ, ಹನಿ ನೀರಾವರಿ ಹಾಗೂ ತುಂತುರು ನೀರಾವರಿಗೆ ಪ್ರೋತ್ಸಾಹ, ಸಿರಿಧಾನ್ಯ ಕೃಷಿ ಆಸರೆಯಾಗಲು ರೈತ ಸಿರಿ ಯೋಜನೆ, ಮಳೆ ನೀರು ಕೊಯಿಲು ಪ್ರೋತ್ಸಾಹಿಸಲು ಕೃಷಿಭಾಗ್ಯ ಯೋಜನೆ, ಶೀತಲೀಕರಣ ಕೇಂದ್ರ ಹಾಗೂ ಉಗ್ರಾಣಗಳ ಬಲವರ್ಧನೆ, ಸಾವಯವ ಕೃಷಿಗೆ ಪ್ರೋತ್ಸಾಹಕ ಭತ್ಯೆಗಳು ಹಾಗೂ ಮಾರುಕಟ್ಟೆ ನೆರವು, ಕೃಷಿಯಲ್ಲಿ ಯಾಂತ್ರೀಕರಣಕ್ಕೆ ಸಬ್ಸಿಡಿ ಇತ್ಯಾದಿಗಳ ಮೂಲಕ ಅನ್ನದಾತರ ಆದಾಯ ಹೆಚ್ಚಿಸಲು ಗಮನ ನೀಡಿದರು.

ಯಡಿಯೂರಪ್ಪ ಅವರು ಜನಕೇಂದ್ರಿತ ರಾಜಕಾರಣದ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳದೆ ಸಮಾಜದ ಸಕಲ ವರ್ಗಗಳನ್ನೂ ಸಮತೋಲಿತವಾಗಿ ಮುನ್ನಡೆಸಿದ ರಾಜಕೀಯ ಧುರೀಣ ಎಂಬ ಸರ್ವಮಾನ್ಯ ಶ್ರೇಯ ಅವರಿಗೆ ಸಲ್ಲುತ್ತದೆ. ❖

ನೀರಾವರಿಯ ಹರಿಕಾರ

ಉತ್ತರ ಕರ್ನಾಟಕದ ಮಹತ್ವದ ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯನ್ನು ತ್ವರಿತಗೊಳಿಸುವ ದಿಸೆಯಲ್ಲಿ ಭೂಸ್ವಾಧೀನ ಹಾಗೂ ಮತ್ತಿತರ ಮೂಲಸೌಕರ್ಯಕ್ಕಾಗಿ ಗಣನೀಯ ಅನುದಾನ ನೀಡಿದರು. ಇದರಿಂದ ಬಾಗಲಕೋಟೆ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳ ಜನರಿಗೆ ಸಾಕಷ್ಟು ಅನುಕೂಲವಾಯಿತು.

ಕಾವೇರಿ ನೀರಾವರಿ ನಿಗಮದ ನಿಯಮಿತದ (ಕೆಎನ್‌ಎನ್‌ಎಲ್) ಸದೃಢಗೊಳಿಸಲು ಕ್ರಮ ಕೈಗೊಂಡು, ಅದಕ್ಕೆ ಹೆಚ್ಚಿನ ಅನುದಾನ ನೀಡಿದರು. ಗದಗ ಜಿಲ್ಲೆಯ ಶುಷ್ಕ ಪ್ರದೇಶಗಳಿಗೆ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಕೆಲ ಪ್ರದೇಶಗಳಿಗೆ ಅನುಕೂಲ ಕಲ್ಪಿಸುವ ಸಿಂಗಟಾಲೂರು ಏತ ನೀರಾವರಿ ಯೋಜನೆ, ಬರಪೀಡಿತ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರಿನ ಜೊತೆಗೆ ಕೃಷಿಗೆ ಆಸರೆಯಾಗುವ ಎತ್ತಿನಹೊಳೆ ಯೋಜನೆಗಳಿಗೂ ಹೆಚ್ಚಿನ ನೆರವು ನೀಡಿದರು. ಆಲಮಟ್ಟಿ, ನಾರಾಯಣಪುರ ಅಣೆಕಟ್ಟುಗಳ ವಿಸ್ತರಣೆಗೆ ಕ್ರಮ ಕೈಗೊಂಡರು.

ಕೋವಿಡ್ ನಿರ್ವಹಣೆಯ ಕೋವಿದ

ಕೋವಿಡ್ ಸಂಕಷ್ಟ ಕಾಲದಲ್ಲಿ ಆಮ್ಲಜನಕ ಪೂರೈಕೆ, ಅವುಗಳ ಸಮರ್ಪಕ ನಿರ್ವಹಣೆಗೆ ಆಸ್ಪತ್ರೆ-ಗಳಲ್ಲಿ ಸೂಕ್ತ ಪೈಪಿಂಗ್ ವ್ಯವಸ್ಥೆ, ಪಿಪಿಪಿ ಕಿಟ್‌ಗಳು, ಗುಳಿಗೆ-ಇಂಜೆಕ್ಷನ್‌ಗಳ ಲಭ್ಯತೆ ಖಾತರಿಗೊಳಿ-ಸುವುದು, ಲಸಿಕೆ, ಮುಂಚೂಣಿ ಕಾರ್ಯಕರ್ತರ ಸಜ್ಜುಗೊಳಿಸುವಿಕೆ, ಆರೋಗ್ಯ ಕಾರ್ಯಕರ್ತರ ನಿಯೋಜನೆ, ವಾರ್ ರೂಮ್ ಕಾರ್ಯಾಚರಣೆ, ದತ್ತಾಂಶ ಸಂಗ್ರಹ, ಸಂತ್ರಸ್ತರಿಗೆ ಪರಿಹಾರ ವಿತರಣೆ, ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ ವ್ಯವಸ್ಥೆ ಹೀಗೆ ಹಲವಾರು ಏರ್ಪಾಡುಗಳನ್ನು ಮಾಡಿದರು.

ಸೋಂಕಿನಿಂದಾಗಿ ದುಡಿಯುವ ವ್ಯಕ್ತಿಯನ್ನು ಕಳೆದುಕೊಂಡು ನೋವಿನಲ್ಲಿದ್ದ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರವನ್ನು ಶೀಘ್ರ ಲಭ್ಯವಾಗುವಂತೆ ಮಾಡಲು ಕಾಳಜಿ ವಹಿಸಿದರು.

ಕೋವಿಡ್ ಪರೀಕ್ಷೆಯನ್ನು ಉಚಿತವಾಗಿ ಸಾರ್ವತ್ರಿಕವಾಗಿ ವಿಸ್ತರಿಸುವಂತೆ ಕ್ರಮ ಕೈಗೊಂಡಿದ್ದು, ಉಚಿತ ವ್ಯಾಕ್ಸಿನ್ ವ್ಯವಸ್ಥೆಯನ್ನೂ ಮಾಡಿ ಕೋವಿಡ್ ನಿಗ್ರಹದಲ್ಲಿ ಕರ್ನಾಟಕ ದೇಶದ ಗಮನವನ್ನೇ ಸೆಳೆಯಿತು. ಈ ಸಂದರ್ಭದಲ್ಲಿ ಪ್ರತಿ ಹೆಕ್ಟೇರ್‌ಗೆ ₹25,000 ಪರಿಹಾರ, ವ್ಯವಹಾರಿಕವಾಗಿ ಹೆಚ್ಚು ನಷ್ಟಕ್ಕೊಳಗಾದ ಅಗಸ ಮತ್ತು ಕ್ಷೌರಿಕ ವೃತ್ತಿಯ 2,90,000 ಜನರಿಗೆ ₹5,000 ಪರಿಹಾರ ನೀಡಿದ್ದು 7,75,000 ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ನಿಯಮಿತವಾಗಿ ₹5000 ನೀಡಿದ್ದು, ಈ ವರ್ಗದ ಜನರ ಆರ್ಥಿಕ ಸಂಕಷ್ಟವನ್ನು ನಿವಾರಿಸುವಲ್ಲಿ ಗಮ್ಯ ಪರಿಣಾಮ ಬೀರಿತು.

ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ದಾವೋಸ್‌ನಲ್ಲಿ ನಡೆದ ವರ್ಲ್ಡ್ ಎಕನಾಮಿಕ್ ಫೋರಮ್ ಸಮಾವೇಶದಲ್ಲಿ ಕರ್ನಾಟಕ ಪೆವಿಲಿಯನ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಫೋರಮ್‌ನ ವ್ಯವಸ್ಥಾಪಕ ನಿರ್ದೇಶಕ ಮೊರಾಟ್ ಸ್ಯಾನ್ ಮೆಜ್, ಭಾರತ ಮತ್ತು ಏಷ್ಯಾ ಅಜೆಂಡಾದ ಪ್ರಾದೇಶಿಕ ಮುಖ್ಯಸ್ಥ ವಿರಾಜ್ ಮೆಹ್ತಾ, ಅಂದಿನ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಇದ್ದರು

ಬಿ.ಎಸ್.ಯಡಿಯೂರಪ್ಪ ಜನಪರ ಕಾರ್ಯದ ಹಾದಿ

- 2008-2011 ಅಧಿಕಾರಾವಧಿಯಲ್ಲಿ ಅನೇಕ ಸುಧಾರಣೆ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು
- 2008ರಲ್ಲಿ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ. ರಾಜ್ಯದಲ್ಲಿ ಮೊದಲ ಬಾರಿಗೆ ಶೂನ್ಯ ಬಡ್ಡಿ ದರದಲ್ಲಿ ರೈತರ ಕೃಷಿ ಸಾಲ ಯೋಜನೆ ಜಾರಿ
- ಸಾವಯವ ಕೃಷಿ ಯೋಜನೆ ₹10.05 ಕೋಟಿ ವಿನಿಯೋಗ 83 ಸಾವಿರ ರೈತರನ್ನು ಇದರಲ್ಲಿ ತೊಡಗುವಂತೆ ಮಾಡಿ 76 ಸಾವಿರ ಹೆಕ್ಟರ್ ಭೂಮಿಯಲ್ಲಿ ಇದನ್ನು ಜಾರಿಗೊಳಿಸಲಾಯಿತು
- ಸುವರ್ಣ ಭೂಮಿ ಯೋಜನೆಯಲ್ಲಿ ಹತ್ತು ಲಕ್ಷ ರೈತರ ಕುಟುಂಬಕ್ಕೆ ಅನುಕೂಲವಾಗುವಂತೆ ಅವರ ಜೀವನಮಟ್ಟ ಉತ್ತಮವಾಗುವಂತೆ ಮಾಡುವಲ್ಲಿ ಸಫಲವಾಯಿತು
- ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಕಡುಬಡರಿಗೆ ₹400 ಮಾಸಾಶನ
- ಸರ್ಕಾರಿ, ಸರ್ಕಾರೇತರ ಅನುದಾನಿತ ಶಾಲೆಗಳ ಎಂಟನೇ ತರಗತಿ ಮಕ್ಕಳಿಗೆ ಸುಮಾರು ₹125 ಕೋಟಿ ವೆಚ್ಚದಲ್ಲಿ ಸೈಕಲ್ ವಿತರಣೆ
- ಆರೋಗ್ಯ ಕವಚ ಯೋಜನೆಯಡಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತುರ್ತು ಸೇವೆಯ ವಾಹನಗಳನ್ನು ಜನರ ಬಳಕೆಗೆ ಬಿಡುಗಡೆ
- ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಕ್ಕೆ ₹1 ಲಕ್ಷ ರೂಪಾಯಿ ನೆರವು
- ನೇಕಾರರ ಒಂದು ಲಕ್ಷ ರೂವರೆಗಿನ ಸಾಲ ಮನ್ನಾ, ಮೀನುಗಾರರ ಸಾಲ ಮನ್ನಾ, ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ ವಿಮೆ ಪಾವತಿ, ಕೆರೆಗಳ ಪುನಶ್ಚೇತ-ನಕ್ಕೆ ಮಿಷನ್ ಕಲ್ಯಾಣಿ ಯೋಜನೆಗಳ ಜಾರಿ
- ಕೊರೊನಾ ಸೋಂಕಿನಿಂದ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಶಿಕ್ಷಣ ಒದಗಿಸಲು ತಿಂಗಳಿಗೆ ₹3,500 ನೀಡುವ ಮುಖ್ಯಮಂತ್ರಿ ಬಾಲಸೇವಾ ಯೋಜನೆ ಜಾರಿ
- 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ ₹1 ಲಕ್ಷ ನೆರವು ಘೋಷಣೆ
- ಹಾಲಿನ ಪ್ರೋತ್ಸಾಹಧನವನ್ನು ಹೆಚ್ಚಳ ಮಾಡಿದ್ದ ಯಡಿಯೂರಪ್ಪ ಅವರು 8.8 ಲಕ್ಷ ಹಾಲು ಉತ್ಪಾದಕರ ಖಾತೆಗೆ 2,446.68 ಕೋಟಿ ಜಮೆ ಮಾಡಿದ್ದರು. ಇದರಿಂದ ಪ್ರತಿ ನಿತ್ಯ 45 ಲಕ್ಷ ಲೀಟರ್ ಉತ್ಪಾದನೆಯಾಗುತ್ತಿದ್ದ ಹಾಲಿನ ಪ್ರಮಾಣ ಕ್ರಮೇಣ 85 ಲಕ್ಷ ಲೀಟರ್‌ಗೆ ಏರಿಕೆಯಾಗಿತ್ತು
- 91.19 ಲಕ್ಷ ರೈತರ ಖಾತೆಗೆ ಎರಡು ಕಂತುಗಳಲ್ಲಿ ನೇರವಾಗಿ ₹4 ಸಾವಿರ ಜಮೆ. ಅದಕ್ಕಾಗಿ ಮೊದಲ ಕಂತಿನಲ್ಲೇ 9,862.21 ಕೋಟಿ ನೀಡಿದ್ದರು
- ಸಾರಾಯಿ ನಿಷೇಧಿಸುವ ನಿರ್ಧಾರಕ್ಕೆ ಬೆನ್ನೆಲುಬಾಗಿ ನಿಂತು, ಜಾರಿಗೊಳಿಸುವಲ್ಲಿ ಯಶಸ್ವಿ

ಪಾದರಸದಂಥ ವ್ಯಕ್ತಿತ್ವ

- 2019 ಇಸವಿ, ಜುಲೈ 26, ಸಂಪುಟ ರಚನೆಗೂ ಮೊದಲೇ ರಾಜ್ಯದಾದ್ಯಂತ ಮಳೆ ಆರ್ಭಟ. ಅಂದು ಅವರು ಕಾಲಿಗೆ ಚಕ್ರ ಕಟ್ಟಿಕೊಂಡ ವರಂತೆ ಏಕಾಂಗಿಯಾಗಿ ನೆರೆಪೀಡಿತ ಪ್ರದೇ-ಶಗಳನ್ನು ಸುತ್ತಿ ಸಂಕಷ್ಟಕ್ಕೆ ಸಿಲುಕಿದ್ದ ಜನರಲ್ಲಿ ಭರವಸೆ, ಆತ್ಮಸ್ಥೈರ್ಯ, ಸ್ಪಂದನೆ ಮೂಡಿಸಿದ್ದರು
- 2009ರಲ್ಲೂ ಉತ್ತರ ಕರ್ನಾಟಕದ ಜನರ ಕಷ್ಟಕ್ಕೆ ಮರುಗಿದ್ದ ಅವರು ಸರ್ಕಾರದ ಜತೆಗೆ ದಾನಿಗಳ ನೆರವು ಪಡೆದು ನೆರವಾಗಿದ್ದರು
- 2019ರಲ್ಲಿ ಕೋವಿಡ್ ಆಸ್ಪತ್ರೆಗಳನ್ನು ಸಜ್ಜುಗೊಳಿಸಿದ್ದರು. ಹೆಚ್ಚುವರಿ ಹಾಸಿಗೆ, ಆಮ್ಲಜನಕ ಘಟಕಗಳು, ವೆಂಟಿಲೇಟರ್ ಸೌಲಭ್ಯ ಹೆಚ್ಚಿಸಿದರು. 2.50 ಕೋಟಿ ಡೋಸ್ ಉಚಿತ ಲಸಿಕೆ ಪೂರೈಸಿದ್ದರು. ತಾಲ್ಲೂಕು ಕೇಂದ್ರಗಳಲ್ಲೂ ಕೋವಿಡ್ ಆಸ್ಪತ್ರೆ ತೆರೆದಿದ್ದರು

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಜುರಾಲಾ ಅಣೆಕಟ್ಟೆಗೆ ನೀರು • ರೈತರಿಂದ ವಿರೋಧ • ಪ್ರತಿಭಟನೆಗೆ ಸಜ್ಜು

ಬೇಸಿಗೆಯಲ್ಲೂ ತೆಲಂಗಾಣಕ್ಕೆ ಸದ್ದಿಲ್ಲದೇ ಹರಿದ ಕೃಷ್ಣೆ

• ಬಸವರಾಜ್ ಸಂಪಳ್ಳಿ

ವಿಜಯಪುರ: ತೆಲಂಗಾಣ ರಾಜ್ಯದ ಮನವಿ ಮೇರೆಗೆ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯದಿಂದ ಬಿರುಬೇಸಿಗೆಯನ್ನೂ ಲೆಕ್ಕಿಸದೇ 1.24 ಟಿಎಂಸಿ ಅಡಿ ನೀರನ್ನು ರಾಜ್ಯದಿಂದ ಹರಿಸಲಾಗಿದೆ.

ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯದಿಂದ ಗೂಗಲ್ ಬ್ಯಾರೇಜ್‌ಗೆ ನೀರು ಹರಿಸಿ, ಅಲ್ಲಿಂದ ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಜುರಾಲಾ ಅಣೆಕಟ್ಟೆಗೆ ನೀರು ಹರಿಸಲಾಗಿದೆ. ರಾತ್ರಿ ವೇಳೆ ಕಾರ್ಯಾಚರಣೆ ನಡೆದಿದೆ.

‘ಕುಡಿಯುವ ಉದ್ದೇಶಕ್ಕಾಗಿ ನಾರಾಯಣಪುರ ಜಲಾಶಯದ ಮುಂಭಾಗಕ್ಕೆ ನೀರು ಬಿಟ್ಟಿದ್ದೇವೆ’ ಎಂದು ನಾರಾಯಣಪುರ ಜಲಾಶಯದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ. ಫೆ.20ರಿಂದ 23ರ ಅವಧಿಯಲ್ಲಿ ತೆಲಂಗಾಣಕ್ಕೆ 1.24 ಟಿಎಂಸಿ ಅಡಿ ನೀರಿ ನೀರು ಬಿಡಲಾಗಿದೆ. ಆದರೆ, ನೀರು ಬಿಟ್ಟಿರುವ ಬಗ್ಗೆ ಎಲ್ಲಿಯೂ ಅಧಿಕಾರಿಗಳು ದಾಖಲಿಸಿಲ್ಲ.

ಅಧಿಕಾರಿಗಳ ಸಮ್ಮತಿ ಇರಲಿಲ್ಲ: ‘ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯದ ಅಧಿಕಾರಿಗಳಿಗೆ ಇತ್ತೀಚೆಗೆ ಪತ್ರ ಬರೆದು, ಜಲಾಶಯಗಳಲ್ಲಿನ ನೀರಿನ ಸ್ಥಿತಿ ಹಾಗೂ ತೆಲಂಗಾಣಕ್ಕೆ ನೀರು ಬಿಡುವುದರ ಬಗ್ಗೆ ಸ್ಪಷ್ಟ ಅಭಿಪ್ರಾಯ ತಿಳಿಸಲು ಸೂಚಿಸಿದ್ದರು. ತೆಲಂಗಾಣಕ್ಕೆ ನೀರು ಬಿಟ್ಟರೆ ಬೇಸಿಗೆಯಲ್ಲಿ ತೊಂದರೆ ಆಗುತ್ತದೆ. ನೀರು ಬಿಡಬಾರದು ಎಂದು ತಿಳಿಸಿದ್ದರು. ಆದರೂ, ಜಲಸಂಪನ್ಮೂಲ ಸಚಿವರ ವಿಶೇಷ ಆಸಕ್ತಿಯ ಮೇರೆಗೆ ನೀರು ಹರಿಸಲಾಗಿದೆ’ ಎಂದು ರೈತರು ಆರೋಪಿಸಿದ್ದಾರೆ.

6.5 ಟಿಎಂಸಿ ಅಡಿ ನೀರು: ‘ತೆಲಂಗಾಣಕ್ಕೆ ನೀರು ಹರಿಸಲೆಂದೇ ಆಲಮಟ್ಟಿಯಿಂದ ಫೆಬ್ರುವರಿ 19 ರಿಂದ ಫೆಬ್ರುವರಿ 26 ರವರೆಗೆ ಆಲಮಟ್ಟಿ ಜಲಾಶಯದ ಬಲಭಾಗದ ವಿದ್ಯುತ್ ಉತ್ಪಾದನಾ ಕೇಂದ್ರ (ಕೆಪಿಸಿಎಲ್) ಮೂಲಕ 75,950 ಕ್ಯುಸೆಕ್ (6.56 ಟಿಎಂಸಿ ಅಡಿ) ನೀರನ್ನು ಹರಿಸಲಾಗಿದೆ’ ಎಂದು ಭಾರತೀಯ ಕಿಸಾನ್ ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಹುಣಸಗಿಯ ರಾಘವೇಂದ್ರ ಕಾಮನಟಗಿ ದೂರಿದ್ದಾರೆ.

ಸದ್ಯ ಆಲಮಟ್ಟಿ ಜಲಾಶಯದಲ್ಲಿ 51.552 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಅದರಲ್ಲಿ 33.932 ಟಿಎಂಸಿ ಅಡಿ ನೀರು ಬಳಕೆಗೆ ಯೋಗ್ಯವಿದೆ. ಜಲಾಶಯದಿಂದ ಕೆಪಿಸಿಎಲ್‌ಗೆ 9,800 ಕ್ಯುಸೆಕ್, ನೀರಾವರಿಗಾಗಿ 1382 ಕ್ಯುಸೆಕ್ ಸೇರಿ 12,187 ಕ್ಯುಸೆಕ್ ನೀರು ಜಲಾಶಯದಿಂದ ಹೊರಹೋಗುತ್ತಿದೆ.

ಆಲಮಟ್ಟಿ ಜಲಾಶಯದ ಬಲಭಾಗದ ವಿದ್ಯುತ್ ಉತ್ಪಾದನಾ ಕೇಂದ್ರದ (ಕೆಪಿಸಿಎಲ್) ಮೂಲಕ ಹರಿಯುತ್ತಿರುವ ಕೃಷ್ಣಾ ನದಿ ನೀರು

ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ

> **ನಮ್ಮಲ್ಲಿ ನೀರಿದ್ದಾಗ ಕುಡಿಯಲು ಕೊಡುವುದರಲ್ಲಿ ತಪ್ಪಿಲ್ಲ. ಈ ಹಿಂದೆ ಮಹಾರಾಷ್ಟ್ರದಿಂದ ಕುಡಿಯಲು ಕೃಷ್ಣಾ, ಭೀಮಾ ನದಿಗೆ ನೀರು ಬಿಡಿಸಿಕೊಂಡಿದ್ದೇವೆ**
> **ಶಿವಾನಂದ ಪಾಟೀಲ**, ಸಚಿವ

> **ಆಲಮಟ್ಟಿ ಜಲಾಶಯದ ಬಲಭಾಗದ ಮೂಲಕ ನೀರಾವರಿಗಾಗಿ ನಾರಾಯಣಪುರ ಜಲಾಶಯಕ್ಕೆ 9800 ಕ್ಯುಸೆಕ್ ನೀರು ಬಿಡಲಾಗುತ್ತಿದೆ**
> **ಡಿ.ಬಸವರಾಜ,** ಮುಖ್ಯ ಎಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ

> **ತೆಲಂಗಾಣ ಸರ್ಕಾರದ ಮನವಿಗೆ ರಾಜ್ಯ ಸರ್ಕಾರ ಸ್ಪಂದಿಸಿ, ನೀರು ಬಿಟ್ಟಿದೆ. ಅಲ್ಲಿಯ ರೈತರ ಅನುಕೂಲಕ್ಕಾಗಿ ನೀರು ಬಿಡಲಾಗಿದೆ**
> **ರಾಘವೇಂದ್ರ ಕಾಮನಟಗಿ**, ಕಾರ್ಯದರ್ಶಿ, ಭಾರತೀಯ ಕಿಸಾನ್ ಸಂಘ

> **ತೆಲಂಗಾಣಕ್ಕೆ ನೀರು ಬಿಟ್ಟಿರುವುದನ್ನು ಖಂಡಿಸಿ ಫೆ.28 ರಂದು ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗುವುದು**
> **ಅರವಿಂದ ಕುಲಕರ್ಣಿ,** ಪ್ರಧಾನ ಕಾರ್ಯದರ್ಶಿ, ಅಖಂಡ ಕರ್ನಾಟಕ ರೈತ ಸಂಘ

‘ತೆಲಂಗಾಣಕ್ಕೆ ನೀರು ಬಿಡಲು ಅನುಮತಿ: ಡಿ.ಕೆ. ಶಿವಕುಮಾರ್

‘ನಾರಾಯಣಪುರ ಅಣೆಕಟ್ಟಿನಿಂದ ತೆಲಂಗಾಣಕ್ಕೆ 1 ಟಿಎಂಸಿ ಅಡಿ ನೀರು ಬಿಡಲಾಗಿದೆ. ಈ ವಿಚಾರದಲ್ಲಿ ಮುಚ್ಚುಮರೆ ಇಲ್ಲ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಮಹಾರಾಷ್ಟ್ರ, ತೆಲಂಗಾಣ ಸೇರಿದಂತೆ ನೆರೆ ರಾಜ್ಯಗಳ ಜತೆ ಪರಸ್ಪರ ಸಹಕಾರದ ಮಾದರಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಆ ರಾಜ್ಯದವರು ಕೂಡ ಕೆಲವು ಸಂದರ್ಭದಲ್ಲಿ ನಮಗೆ ಸಹಾಯ ಮಾಡಿದ್ದಾರೆ. ತೆಲಂಗಾಣ ಸಚಿವರು ತಾವೇ ಬಂದು ನೀರು ಬಿಡುವಂತೆ ಮನವಿ ಮಾಡಿದ್ದರು. ನೀರು ಹರಿಸಲು ಅಧಿಕಾರಿಗಳಿಗೆ ನಾನು ಅನುಮತಿ ನೀಡಿದ್ದೇನೆ’ ಎಂದರು.

ಸುದ್ದಿ 2 ನಿಮಿಷ

ರೌಡಿ ಕಾಲಿಗೆ ಗುಂಡೇಟು

ಮಂಡ್ಯ: ಯುವಕನ ಮೇಲೆ ಹಲ್ಲೆ ಸೇರಿದಂತೆ ಐದು ಪ್ರಕರಣಗಳಲ್ಲಿ ಬೇಕಾಗಿದ್ದ ಆರೋಪಿ ಸುಭಾಷ್ ಎಸ್. ಅಲಿಯಾಸ್ ಸುಬ್ಬಿ (18) ಎಂಬಾತನ ಬಲಗಾಲಿಗೆ ಪೊಲೀಸರು ತಾಲ್ಲೂಕಿನ ಬಿ.ಹೊಸೂರು ಬಳಿ ಬುಧವಾರ ಗುಂಡೇಟು ಹೊಡೆದಿದ್ದಾರೆ.

ಆರೋಪಿ ನಗರದ ಸಾದತ್ ನಗರದ ನಿವಾಸಿಯಾಗಿದ್ದು, ಆತನ ವಿರುದ್ಧ ಮಂಡ್ಯ ಪೂರ್ವ, ಪಶ್ಚಿಮ, ಸೆಂಟ್ರಲ್ ಹಾಗೂ ಹಲಗೂರು ಪೊಲೀಸ್ ಠಾಣೆಯಲ್ಲಿ ಬೆದರಿಕೆ, ಹಲ್ಲೆ ಮತ್ತು ಕೊಲೆ ಯತ್ನ ಪ್ರಕರಣಗಳು ದಾಖಲಾಗಿದ್ದವು. ತಿ.ನರಸೀಪುರದ ಯಶವಂತ ಎಂಬ ಯುವಕನನ್ನು ಬೈಕಿನಲ್ಲಿ ಸ್ಮಶಾನಕ್ಕೆ ಕರೆದೊಯ್ದು ಆರೋಪಿ ಮತ್ತವನ ತಂಡ ಮಚ್ಚಿನಿಂದ ಹಲ್ಲೆ ನಡೆಸಿತ್ತು.

‘ಖಚಿತ ಮಾಹಿತಿ ಮೇರೆಗೆ, ಬುಧವಾರ ಬೆಳಿಗ್ಗೆ 6.30ರ ಸಮಯದಲ್ಲಿ ಪೊಲೀಸರು ಬಂಧಿಸಲು ಹೋದಾಗ, ಆರೋಪಿಯು ಕಲ್ಲಿನಿಂದ ಹಲ್ಲೆಗೆ ಮುಂದಾದ. ಆತ್ಮರಕ್ಷಣೆಗಾಗಿ ಸಬ್‌ಇನ್‌ಸ್ಪೆಕ್ಟರ್ ಶೇಷಾದ್ರಿ ಅವರು ಪಿಸ್ತೂಲಿನಿಂದ ಆತನ ಕಾಲಿಗೆ ಗುಂಡು ಹೊಡೆದು ಬಂಧಿಸಿದರು. ನಂತರ ಮಂಡ್ಯ ‘ಮಿಮ್ಸ್’ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ’ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು.

ಚೀನಾ ಹಿತ ಕಾಯಲು ಕಾಂಗ್ರೆಸ್ ಬದ್ಧವೇ?: ಜೋಶಿ

> **ಎಸ್‌ಸಿಪಿ, ಟಿಎಸ್‌ಪಿ ನಿಧಿ ದುರ್ಬಳಕೆ ಬಗ್ಗೆ ಪ್ರಶ್ನಿಸಿದರೆ ಸಿದ್ದರಾಮಯ್ಯ, ಮಾಧ್ಯಮದವರಿಗೆ ದಬಾಯಿಸುತ್ತಾರೆ. ತಪ್ಪನ್ನೂ ಸಮರ್ಥಿಸಿಕೊಳ್ಳುವ ದಪ್ಪ ಚರ್ಮ ಕಾಂಗ್ರೆಸ್‌ನದ್ದು**
> **ಪ್ರಲ್ಹಾದ ಜೋಶಿ**, ಕೇಂದ್ರ ಸಚಿವ

ಹುಬ್ಬಳ್ಳಿ: ‘ತ್ವೇಷಮಯ ಸಂದರ್ಭದಲ್ಲೇ ರಾಹುಲ್ ಗಾಂಧಿ ಅವರು ಚೀನಾ ರಾಯಭಾರಿಯನ್ನು ಭೇಟಿಯಾಗಿದ್ದರು. ಕಾಂಗ್ರೆಸ್ ಪಕ್ಷವು ಚೀನಾಕ್ಕೆ ಬದ್ಧವಿದೆಯೋ ಅಥವಾ ಭಾರತದ ಹಿತ ಕಾಯಲು ಬದ್ಧವಿದೆಯೋ ಎಂಬುದನ್ನು ಸ್ಪಷ್ಟಪಡಿಸಲಿ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ಚೀನಾದಿಂದ ರಾಜೀವ್‌ಗಾಂಧಿ ಫೌಂಡೇಶನ್‌ಗೆ ಹಣ ಪಡೆದ ಬಳಿಕ ಕಾಂಗ್ರೆಸ್‌ನ ಸ್ಯಾಮ್ ಪಿತ್ರೋಡ ವಿದೇಶದಲ್ಲಿ ಇದ್ದುಕೊಂಡು ದೇಶ ವಿರೋಧಿ ಹೇಳಿಕೆ ನೀಡಿದರು. ರಾಹುಲ್‌ಗಾಂಧಿಯ ಮುಖ್ಯ ಸಲಹೆಗಾರರಾದ ಅವರನ್ನು ಪಕ್ಷದಿಂದ ಹೊರ ಹಾಕಿಲ್ಲ, ಅಮಾನತು ಸಹ ಮಾಡಿಲ್ಲ’ ಎಂದು ಅವರು ಬುಧವಾರ ತಿಳಿಸಿದರು.

‘ಕುಂಭಮೇಳದ ವಿರುದ್ಧ ಮಾತನಾಡುವ ಕಾಂಗ್ರೆಸ್, ಮೆಕ್ಕಾ-ಮದೀನಾದ ಅಹಿತಕರ ಘಟನೆಗಳ ಬಗ್ಗೆಯೂ ಮಾತನಾಡಲಿ. ಹಿಂದೂಗಳಿಗೆ ಅವಮಾನಿಸಿ, ಅಲ್ಪಸಂಖ್ಯಾತರ ಮತ ಗಳಿಸುವ ರಾಜಕಾರಣವಿದು. ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧದ ಭೂ ಒತ್ತುವರಿ ಪ್ರಕರಣವನ್ನು ಮತ್ತೆ ತೆರೆದು, ದ್ವೇಷದ ರಾಜಕಾರಣ ಮಾಡುತ್ತಿದೆ’ ಎಂದರು.

₹23.94 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ಜಪ್ತಿ

ನವದೆಹಲಿ (ಪಿಟಿಐ): ಬಿಟ್‌ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿ ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಸಿಬಿಐ ಎರಡು ದಿನ ನಡೆಸಿದ ಶೋಧ ಕಾರ್ಯದಲ್ಲಿ ₹23.94 ಕೋಟಿಗೂ ಅಧಿಕ ಮೌಲ್ಯದ ಕ್ರಿಪ್ಟೊ ಕರೆನ್ಸಿಯನ್ನು ಜಪ್ತಿ ಮಾಡಲಾಗಿದೆ.

ಮಂಗಳವಾರ ಮತ್ತು ಬುಧವಾರ ನಡೆದ ಶೋಧದ ವೇಳೆ, ಹಲವು ಹಾರ್ಡ್‌ವೇರ್ ಕ್ರಿಪ್ಟೊ ವ್ಯಾಲೆಟ್‌ಗಳು, 121 ದಾಖಲೆಗಳು, 34 ಲ್ಯಾಪ್‌ಟಾಪ್ ಮತ್ತು ಹಾರ್ಡ್ ಡಿಸ್ಕ್ ಜಪ್ತಿ ಮಾಡಲಾಗಿದೆ.

ದೆಹಲಿ, ಪುಣೆ, ನಾಂದೇಡ್, ಕೊಲ್ಲಾಪುರ, ಮುಂಬೈ, ಬೆಂಗಳೂರು, ಚಂಡೀಗಢ, ಮೊಹಾಲಿ, ಝೂನ್ಸಿ ಮತ್ತು ಹುಬ್ಬಳ್ಳಿ ಸೇರಿ 60 ಸ್ಥಳಗಳಲ್ಲಿ ಸಿಬಿಐ ಶೋಧ ನಡೆಸಿದೆ.

ಈಶ ಯೋಗ ಕೇಂದ್ರದ ಕಾರ್ಯಕ್ರಮಕ್ಕೆ ಡಿಕೆಶಿ

ರಾಹುಲ್ ಅವರನ್ನು ಅಣಕಿಸಿದವರ ಕಾರ್ಯಕ್ರಮದಲ್ಲಿ ಭಾಗಹಿಸಿದರೆ ತಪ್ಪು ಸಂದೇಶ: ಮೋಹನ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಸದ್ಗುರು ಜಗ್ಗಿ ವಾಸುದೇವ್ ನೇತೃತ್ವದಲ್ಲಿ ನಡೆಯುವ ಮಹಾ ಶಿವರಾತ್ರಿ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗವಹಿಸುವುದು ಸರಿಯಲ್ಲ ಎಂದು ಎಐಸಿಸಿ ಕಾರ್ಯದರ್ಶಿ ಪಿ.ವಿ.ಮೋಹನ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪಿ.ವಿ.ಮೋಹನ್

‘ಡಿ.ಕೆ.ಶಿವಕುಮಾರ್ ಜಾತ್ಯತೀತ ಪಕ್ಷವೊಂದರ ಅಧ್ಯಕ್ಷ ಹಾಗೂ ಜಾತ್ಯತೀತ ಸರ್ಕಾರದಲ್ಲಿ ಉಪಮುಖ್ಯಮಂತ್ರಿ. ಸದ್ಗುರು ಜಗ್ಗಿ ವಾಸುದೇವ್ ಅವರು ಸಂದರ್ಶನವೊಂದರಲ್ಲಿ, ‘ರಾಹುಲ್ ಗಾಂಧಿ ಯಾರು? ಅವರು ಯಾರೆಂದೇ ಗೊತ್ತಿಲ್ಲ’ ಎಂದು ಅಣಕಿಸಿದ್ದರು. ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಪೂರಕವಾದ ದೃಷ್ಟಿಕೋನ ಹೊಂದಿರುವ ವ್ಯಕ್ತಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಭಾಗವಹಿಸುವುದರಿಂದ ಪಕ್ಷದ ಕಾರ್ಯಕರ್ತರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ’ ಎಂದು ಪಿ.ವಿ. ಮೋಹನ್ ತಮ್ಮ ಫೇಸ್ ಬುಕ್ ಪುಟದಲ್ಲಿ ಬರೆದುಕೊಂಡಿದ್ದಾರೆ.

‘ಆರ್‌ಎಸ್‌ಎಸ್ ಹಿನ್ನೆಲೆಯ ಹಲವಾರು ವ್ಯಕ್ತಿಗಳಿಗೂ ಈ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿದೆ. ಅವರಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಒಬ್ಬರು. ನಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಅಮಿತ್ ಶಾ ಅವರ ಜೊತೆ ವೇದಿಕೆ ಹಂಚಿಕೊಳ್ಳುವುದು ಹಾಗೂ ರಾತ್ರಿ ಇಡೀ ಅವರ ಜೊತೆ ಇರುವುದನ್ನು ಅರ್ಥೈಸಿಕೊಳ್ಳುವುದು ಕಠಿಣ’ ಎಂದು ಅವರು ಬರೆದುಕೊಂಡಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಪಿ.ವಿ.ಮೋಹನ್, ‘ಹಿಂದೂ ಆಚರಣೆಗಳಲ್ಲಿ ಡಿ.ಕೆ.ಶಿವಕುಮಾರ್ ಅವರು ಭಾಗವಹಿಸುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ಈಚೆಗೆ ಅವರು ಕುಂಭ ಮೇಳದಲ್ಲಿ ಭಾಗವಹಿಸಿದ್ದಕ್ಕೆ ಯಾರೂ ಟೀಕೆ ಮಾಡಿಲ್ಲ. ರಾಹುಲ್ ಗಾಂಧಿ ಅವರನ್ನು ಅಣಕಿಸಿದ ವ್ಯಕ್ತಿಯ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷರು ಭಾಗವಹಿಸುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಡಿ.ಕೆ.ಶಿವಕುಮಾರ್ ನಮ್ಮ ನಾಯಕರು. ಅವರ ಜೊತೆ ನಾನು ಕೆಲಸ ಮಾಡಿದ್ದೇನೆ. ಅದು ಬೇರೆ ವಿಚಾರ. ಆದರೆ ಪಕ್ಷದ ಸಿದ್ಧಾಂತದ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲಾಗದು. ಅವರು ಕೆಪಿಸಿಸಿ ಅಧ್ಯಕ್ಷರು. ಅವರ ನಡವಳಿಕೆಯೂ ಅದಕ್ಕೆ ತಕ್ಕಂತೆ ಇರಬೇಕು. ಪಕ್ಷವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದರು.

ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ನಡೆಯುವ ಮಹಾಶಿವರಾತ್ರಿ ಕಾರ್ಯಕ್ರಮಕ್ಕೆ ಸದ್ಗುರು ಜಗ್ಗಿ ವಾಸುದೇವ್ ಅವರು ಕಳುಹಿಸಿದ್ದ ಆಹ್ವಾನ ಪತ್ರವನ್ನು ಡಿ.ಕೆ.ಶಿವಕುಮಾರ್ ಅವರು ತಮ್ಮ ಫೇಸ್ ಬುಕ್ ಪುಟದಲ್ಲಿ ಹಂಚಿಕೊಂಡಿದ್ದರು. 'ಕೊಯಮತ್ತೂರಿನ ಈಶ ಯೋಗಕೇಂದ್ರದಲ್ಲಿ ನಡೆಯಲಿರುವ ಮಹಾ ಶಿವರಾತ್ರಿ ಕಾರ್ಯಕ್ರಮಕ್ಕೆ ಬರುವಂತೆ ಸದ್ಗುರು ಜಗ್ಗಿ ವಾಸುದೇವ್ ಅವರು ಆಹ್ವಾನಿಸಿದ್ದು, ಈ ಮಹೋನ್ನತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹಾಗೂ ಭಕ್ತಿ-ಭಾವಗಳಲ್ಲಿ ಮಿಂದೇಳಲು ಉತ್ಸುಕನಾಗಿದ್ದೇನೆ’ ಎಂದು ಬರೆದುಕೊಂಡಿದ್ದರು. ಇದನ್ನು ಟ್ಯಾಗ್ ಮಾಡಿ ಪಿ.ವಿ ಮೋಹನ್ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಪುಸ್ತಕ ಮೇಳ’ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಸಚಿವಾಲಯವು ಇದೇ ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ ಫೆಬ್ರುವರಿ 27ರಿಂದ ಮಾರ್ಚ್ 3ರವರೆಗೆ ಪುಸ್ತಕ ಮೇಳ ಹಮ್ಮಿಕೊಂಡಿದೆ. ಐದು ದಿನಗಳ ಮೇಳವು ಸಾಹಿತ್ಯ ಲೋಕದ ವಿವಿಧ ಆಯಾಮಗಳನ್ನು ಪರಿಚಯಿಸಲಿದೆ.

ಗುರುವಾರ ಸಂಜೆ 4 ಗಂಟೆಗೆ ಮೇಳಕ್ಕೆ ಚಾಲನೆ ದೊರೆಯಲಿದೆ. ಶುಕ್ರವಾರದಿಂದ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಮೇಳ ನಡೆಯಲಿದೆ. ಪುಸ್ತಕ ಪ್ರದರ್ಶನ, ಸಂವಾದ, ಕವಿಗೋಷ್ಠಿ, ಪುಸ್ತಕ ಬಿಡುಗಡೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ವಿವಿಧ ಪ್ರಕಾಶನ ಸಂಸ್ಥೆಗಳ ಮಳಿಗೆಗಳ ಜತೆಗೆ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ವಿವಿಧ ಅಕಾಡೆಮಿಗಳಿಗೆ ಸಂಬಂಧಿಸಿದ ಮಳಿಗೆಗಳೂ ಇರಲಿವೆ. 150ಕ್ಕೂ ಅಧಿಕ ಮಳಿಗೆಗಳಲ್ಲಿ ಕನ್ನಡ ಹಾಗೂ ಇತರೆ ಎಲ್ಲ ಭಾಷೆಯ ಪುಸ್ತಕಗಳ ಮಾರಾಟವೂ ಇರಲಿದ್ದು, ರಿಯಾಯಿತಿ ದರದಲ್ಲಿ ಪುಸ್ತಕಗಳ ಮಾರಾಟ ನಡೆಯಲಿದೆ.

ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಲು ಮೇಳದಲ್ಲಿ ಒಂದು ಮಳಿಗೆ ಇರಲಿದೆ. ಇಲ್ಲಿ ವಿವಿಧ ಲೇಖಕರ ಪುಸ್ತಕಗಳು ಬಿಡುಗಡೆಯಾಗಲಿದೆ. ಮೊದಲ ದಿನವಾದ ಗುರುವಾರ ಉದ್ಘಾಟನೆ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಎರಡು ವೇದಿಕೆಗಳಲ್ಲಿ ಸಂವಾದ ಗೋಷ್ಠಿ ನಡೆಯಲಿವೆ. ಎರಡನೇ ದಿನವಾದ ಶುಕ್ರವಾರ ನಾಲ್ಕು ಸಂವಾದಗಳು ನಡೆಯಲಿವೆ. ‘ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಜವಾಬ್ದಾರಿ’, ‘ಸಮಕಾಲೀನ ಪ್ರಕಾಶನ ಕ್ಷೇತ್ರದ ಸವಾಲುಗಳು’, ‘ನಾಯಕತ್ವ–ಇಂದು ಮತ್ತು ನಾಳೆ’ ಹಾಗೂ ‘ನೆಲಮೂಲದಿಂದ ಅಂತರಿಕ್ಷದವರೆಗೆ’ ವಿಷಯದ ಮೇಲೆ ಸಂವಾದ ಹಮ್ಮಿಕೊಳ್ಳಲಾಗಿದೆ. ಸಂಜೆ ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಶನಿವಾರವೂ ನಾಲ್ಕು ಸಂವಾದ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಭಾನುವಾರ ‘ಕನ್ನಡ ಸಾಹಿತ್ಯದಲ್ಲಿ ಸರ್ವ ಸಮಭಾವದ ಚಿಂತನೆಗಳು’, ‘ಮಕ್ಕಳ ಸಾಹಿತ್ಯ’, ‘ಅಂಗಾಂಗ ದಾನದ ಅರಿವು’, ‘ಸಾಹಿತ್ಯ ಮತ್ತು ಚಲನಚಿತ್ರ’ ಹಾಗೂ ‘ಓದಿನ ಸುಖ’ ವಿಷಯದ ಮೇಲೆ ಸಂವಾದಗಳು ನಡೆಯಲಿವೆ. ಬಳಿಕ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ. ಸಂಜೆ 5 ಗಂಟೆಯಿಂದ ಅರ್ಜುನ್ ಜನ್ಯ, ಸಾಧುಕೋಕಿಲ ಹಾಗೂ ಸಂಗಡಿಗರಿಂದ ಸಂಗೀತ ಸಂಜೆ ನಡೆಯಲಿದೆ.

‘ಹಿಂದಿನ ವಿಷಯ ಕೆದಕಿ ರಾಜಕೀಯ’

ಪ್ರತಿಪಕ್ಷಗಳ ವಿರುದ್ಧ ರಾಯಚೂರು ಸಂಸದ ಜೆ.ಕುಮಾರ ನಾಯಕ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ರಾಯಚೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರಿಹಾರ ರೂಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ನಿಯಮಾನುಸಾರ ನಿವೇಶನ ಹಂಚಿಕೆ ಮಾಡಿದ ವಿಷಯವನ್ನು 20 ವರ್ಷಗಳ ನಂತರ ಕೆದಕಿ ರಾಜಕೀಯ ಮಾಡಲಾಗುತ್ತಿದೆ’ ಎಂದು ರಾಯಚೂರು ಸಂಸದ ಜಿ.ಕುಮಾರ ನಾಯಕ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

‘ಭೂ ಮಾಲೀಕರು ಭೂಮಿ ಕಳೆದುಕೊಂಡ ನಂತರ ಪರಿಹಾರ ಒದಗಿಸಿದ್ದೇ ಈಗ ಸಮಸ್ಯೆಯಾಗಿದೆ. ವಾಸ್ತವದಲ್ಲಿ ಇದು ಸಮಸ್ಯೆಯೇ ಅಲ್ಲ. ಈ ಪ್ರಕರಣದಲ್ಲಿ ಡಿನೋಟಿಫಿಕೇಶನ್‌ನ ಹೊರತಾಗಿಯೂ ಮುಡಾ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಸೈಟ್‌ಗಳನ್ನೂ ನಿರ್ಮಾಣ ಮಾಡಿದೆ’ ಎಂದು ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಭೂಮಾಲೀಕ ತನ್ನ ಭೂಮಿಯನ್ನು ಕಳೆದುಕೊಂಡಿದ್ದರಿಂದ ಮುಡಾ 50:50 ನಿಯಮದ ಮೇಲೆ ಪರಿಹಾರವನ್ನು ನೀಡಿದೆ. ಭೂ ಪರಭಾರೆಯು ನಿಯಮದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. 2005ರಲ್ಲಿ ಪರಿಹಾರ ನೀಡದ ಕಾರಣ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ಹೇಳಿದರು.

‘ಡಿನೋಟಿಫಿಕೇಷನ್ ಬ್ರಹ್ಮ ಬರೆದ ವಾಕ್ಯ ಅಲ್ಲ. ಅದನ್ನು ಯಾವಾಗ ಬೇಕಾದರೂ ರದ್ದುಪಡಿಸುವ ಅಧಿಕಾರ ಸರ್ಕಾರಕ್ಕೆ ಇದೆ. ರೈತರು ಎಷ್ಟು ಎಕರೆ ಜಮೀನು ಕಳೆದುಕೊಂಡಿರುತ್ತಾರೆಯೋ, ಅದಕ್ಕೆ ಅನುಗುಣವಾಗಿ ನಿವೇಶನಗಳನ್ನೂ ಪಡೆಯುತ್ತಾರೆ. ಇದು ಕರ್ನಾಟಕ ಅಷ್ಟೇ ಅಲ್ಲ ದೇಶದ ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ನಿಯಮವಾಗಿದೆ’ ಎಂದು ತಿಳಿಸಿದರು.

‘ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಯನ್ನು ನೋಡಿರುವೆ. ಲೋಕಾಯುಕ್ತ ಕಚೇರಿಯಿಂದ ವರದಿ ಅಥವಾ ಯಾವುದೇ ರೀತಿಯ ಪತ್ರ ನನ್ನ ಕೈಸೇರಿಲ್ಲ. ಅದು ನನ್ನ ಕೈಸೇರಿದ ಮೇಲೆ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಲೋಕಾಯುಕ್ತಕ್ಕೆ ಉತ್ತರ ಕೊಡುವೆ’ ಎಂದು ಹೇಳಿದರು.

> **ನನ್ನನ್ನು ರಾಯಚೂರು ಜಿಲ್ಲೆಯ ಜನ ಆಯ್ಕೆ ಮಾಡಿದ್ದಾರೆ. ಇಲ್ಲಿಯ ಜನರಿಗೆ ದ್ರೋಹ ಬಗೆದಿಲ್ಲ. ಹೀಗಾಗಿ ರಾಜೀನಾಮೆ ಕೊಡುವ ಪ್ರಶ್ನೆಯೂ ಉದ್ಭವಿಸುವುದಿಲ್ಲ**
> **ಜಿ. ಕುಮಾರ ನಾಯಕ,** ಸಂಸದ

ಹಂಪಿ ಉತ್ಸವದ ಪ್ರಯುಕ್ತ ಹಂಪಿಯ ವಿರೂಪಾಕ್ಷ ದೇವಸ್ಥಾನದ ಬಳಿ ಬುಧವಾರ ರಾತ್ರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ತುಂಗಾ ಆರತಿ ನೆರವೇರಿಸಿದರು. ಶಾಸಕ ಎಚ್‌.ಆರ್‌.ಗವಿಯಪ್ಪ ಇದ್ದರು

ಪ್ರಜಾವಾಣಿ ಚಿತ್ರ: ಲವ ಕೆ.

ಬಾಚೆಪಳ್ಳಿ: ಮದ್ಯವ್ಯಸನಿ ಪತಿಯನ್ನು ಕೊಂದ ಪತ್ನಿ

ಔರಾದ್ (ಬೀದರ್ ಜಿಲ್ಲೆ): ನಿತ್ಯ ಮದ್ಯ ಕುಡಿದು ಬಂದು ಕಿರುಕುಳ ನೀಡುತ್ತಿದ್ದ ಪತಿಯನ್ನು ಪತ್ನಿ ಹೊಡೆದು ಕೊಲೆ ಮಾಡಿದ ಘಟನೆ ತಾಲ್ಲೂಕಿನ ಬಾಚೆಪಳ್ಳಿ ಗ್ರಾಮದಲ್ಲಿ ನಡೆದಿದೆ.

ಸಿದ್ದಪ್ಪ ಶಿವರಾಜ (26) ಕೊಲೆಯಾದ ವ್ಯಕ್ತಿ. ಸಿದ್ದಪ್ಪ ಎಂದಿನಂತೆ ಮಂಗಳವಾರ ಮದ್ಯ ಸೇವಿಸಿ ಬಂದು ಜಗಳ ಆಡುತ್ತಿದ್ದಾಗ ಹೆಂಡತಿ ಸವಿತಾ ತಲೆಗೆ ಬಲವಾಗಿ ಹೊಡೆದಿದ್ದಾರೆ. ಗಾಯಗೊಂಡ ಆತ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಸಂತಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ಸಿದ್ದಪ್ಪ ಆರು ವರ್ಷಗಳ ಹಿಂದೆ ಲಾಧಾ ಗ್ರಾಮದ ಸವಿತಾ ಅವರ ಜತೆ ಮದುವೆಯಾಗಿದ್ದ. ದಂಪತಿಗೆ ಇಬ್ಬರು ಪುತ್ರರು ಇದ್ದಾರೆ.

ಸ್ವಪಕ್ಷೀಯರ ವಿರುದ್ಧ ಕಾಂಗ್ರೆಸ್ ಶಾಸಕಿ ಕೆಂಡಾಮಂಡಲ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಸೇರಿದಂತೆ ಸ್ವಪಕ್ಷೀಯ ನಾಯಕರ ವಿರುದ್ಧ ಕೆಜಿಎಫ್ ಕಾಂಗ್ರೆಸ್ ಶಾಸಕಿ ರೂಪಕಲಾ ಶಶಿಧರ್ ಹರಿಹಾಯ್ದಿದ್ದಾರೆ.

ನಗರದಲ್ಲಿ ನಡೆದ ಜನಪರ ಉತ್ಸವಕ್ಕೆ ಪರಿಶಿಷ್ಟ ಜನಾಂಗದ ಶಾಸಕರನ್ನು ಆಹ್ವಾನಿಸದ ಬೈರತಿ ಸುರೇಶ್ ವಿರುದ್ಧ ಶಾಸಕಿ ಬುಧವಾರ ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲಿಯೂ ಜಿಲ್ಲೆಯ ಕಾಂಗ್ರೆಸ್ ನಾಯಕರ ಹೆಸರು ಹೇಳದೆ ವಾಗ್ದಾಳಿ ನಡೆಸಿದ ಅವರು, ‘ಎಲ್ಲರೂ ಸೇರಿ ಡಿಸಿಸಿ ಬ್ಯಾಂಕ್ ಹಾಳು ಮಾಡಿದರು’ ಎಂದು ಬೇಸರ ವ್ಯಕ್ತಪಡಿಸಿದರು.

ಕೋಚಿಮುಲ್‌ನಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಬಂಗಾರಪೇಟೆ ಕಾಂಗ್ರೆಸ್ ಶಾಸಕ ಎಸ್.ಎನ್. ನಾರಾಯಣಸ್ವಾಮಿ, ಒಕ್ಕೂಟದ ಮಾಜಿ ಅಧ್ಯಕ್ಷ, ಶಾಸಕ ಕೆ.ವೈ. ನಂಜೇಗೌಡ ವಿರುದ್ಧ ಮುಗಿಬಿದ್ದಿದ್ದರು. ಜನಪರ ಉತ್ಸವದಲ್ಲಿ ಜಿಲ್ಲೆಯ ದಲಿತ ಶಾಸಕರನ್ನು ಕಡೆಗಣಿಸಿದ್ದಾರೆ ಎಂದು ಸಚಿವ ಬೈರತಿ ಸುರೇಶ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ಈಗ ಡಿಸಿಸಿ ಬ್ಯಾಂಕ್ ವಿಚಾರವಾಗಿ ಶಾಸಕಿ ರೂಪಕಲಾ ಸ್ವಪಕ್ಷೀಯರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರೂಪಕಲಾ

ನಮ್ಮಲ್ಲಿ ಗುಂಪುಗಾರಿಕೆಯೇನೂ ಇಲ್ಲ; ಬದಲಾಗಿ ರೈತರ ವಿಚಾರದಲ್ಲಿ ತೆಗೆದುಕೊಂಡ ನಿಲುವುಗಳ ಬಗ್ಗೆ ಅಸಮಾಧಾನ ಇದೆ. ಜವಾಬ್ದಾರಿ ಸ್ಥಾನದಲ್ಲಿ ಇರುವವರು ಸರಿಯಾಗಿ ಸ್ಪಂದಿಸಲಿಲ್ಲ ಎಂಬ ನೋವಿದೆ. ಸರ್ಕಾರಕ್ಕೆ ತಪ್ಪು ಸಂದೇಶ ನೀಡಿ ಹಾಳು ಗೆಡುವಿರುವ ಬಗ್ಗೆ ನೋವಿದೆ, ಬಡವರು ನೀಡಿದ ಅಧಿಕಾರವನ್ನು ದುರುದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದಾರೆ’ ಎಂದು ಅಸಮಾಧಾನ ತೋಡಿಕೊಂಡರು.

‘ನನ್ನ ಕುಟುಂಬದ ಬಗ್ಗೆ ದ್ವೇಷ ಮಾಡಿದರೆ ನಾನು ಬೇಸರ ಮಾಡಿಕೊಳ್ಳಲ್ಲ. ದೇವರಿಗೆ ಒಪ್ಪಿಸಿ ಮುನ್ನಡೆ-ಯುತ್ತೇನೆ. ರಾಜಕೀಯವಾಗಿ ತೊಂದರೆ ಕೊಟ್ಟರೆ ದೇವರಿಗೆ ಒಪ್ಪಿಸುತ್ತೇನೆ. ಆದರೆ, ರೈತರು, ಮಹಿಳೆಯರು, ಬಡವರಿಗೆ ಆಗುವ ಅವಮಾನ ಸಹಿಸಿಕೊಳ್ಳಲು ಆಗಲ್ಲ’ ಎಂದರು.

‘ಬಜೆಟ್‌ನಲ್ಲಿ ಜಿಲ್ಲೆಗೆ ಸಂಬಂಧಿಸಿದ ಯೋಜನೆ ಘೋಷಣೆ ಮಾಡಬೇಕಿದ್ದರೆ ಮುಂಚಿತವಾಗಿ ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಚರ್ಚಿಸಬೇಕಿತ್ತು. ಜಿಲ್ಲೆಯ ಕುಂದುಕೊರತೆಗಳೇನು, ಬೇಡಿಕೆಗಳೇನು ಎಂಬ ವಿಚಾರದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ಪಡೆದಿಲ್ಲ, ಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ಇದು ಬೇಸರ ಉಂಟು ಮಾಡುತ್ತದೆ’ ಎಂದು ಹೇಳಿದರು.

‘ಯಾರು ಈ ರೀತಿ ಮಾಡಿದ್ದಾರೆ ನಿರ್ದಿಷ್ಟವಾಗಿ ಹೆಸರು ಹೇಳಿ’ ಎಂಬ ಮಾಧ್ಯಮದವರ ಪ್ರಶ್ನೆಗೆ, ‘ಈ ಎಲ್ಲಾ ವಿಚಾರ ಮಾಧ್ಯಮದವರಿಗೆ ಗೊತ್ತಿದೆ. ಮಾಧ್ಯಮದವರಿಗೆ ಗೊತ್ತಿಲ್ಲದ್ದು ಯಾವುದೂ ಇಲ್ಲ’ ಎಂದರು.

‘ಕೃಪ’ ಅಕ್ರಮದ ಕೂಪ

ಒಂದನೇ ಪುಟದಿಂದ...

ಸಚಿವರು, ಶಾಸಕರು, ನಿಗಮ, ಮಂಡಳಿ, ಪ್ರಾಧಿಕಾರ ಮತ್ತಿತರ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರು–ಸದಸ್ಯರು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸೇರಿದಂತೆ ಸಮೂಹ ‘ಎ’ ಗುಂಪಿನ ಅಧಿಕಾರಿಗಳು ಅಧಿಕೃತ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದಾಗ ಹಾಗೂ ರಾಜ್ಯ ಸರ್ಕಾರದ ಅತಿಥಿಗಳಿಗೆ, ಗಣ್ಯರಿಗೆ ತಂಗಲು ಅತ್ಯಾಧುನಿಕ ಸೌಲಭ್ಯ ಇರುವ 180 ಕೊಠಡಿಗಳ ಹೊಸ ಅತಿಥಿ ಗೃಹವನ್ನು ಸರ್ಕಾರ ನಿರ್ಮಿಸಿದೆ. ಈ ಕಟ್ಟಡದ ನಿತ್ಯದ ನಿರ್ವಹಣೆಯ ಹೊಣೆಯನ್ನು 2018ರಿಂದ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿದೆ. ಇದೇ ಕಟ್ಟಡದಲ್ಲಿ ನಿಗಮವು ಸುಸಜ್ಜಿತ ಹೋಟೆಲ್ ನಡೆಸುತ್ತಿದೆ.

ವಸತಿ ಗೃಹ ಹಾಗೂ ಹೋಟೆಲ್ ನಿರ್ವಹಣೆಗೆ ಅಗತ್ಯವಿರುವ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು, ಸ್ವಾಗತಕಾರರು, ನಗದು ಸಂಗ್ರಹಕಾರರು, ಅಡುಗೆ ತಯಾರಕರು, ಸಹಾಯಕ ಸಿಬ್ಬಂದಿ, ಸ್ವಚ್ಛತಾ ಕೆಲಸಗಾರರು– ಮೇಲ್ವಿಚಾರಕರು, ಕಾವಲುಗಾರರು–ಮೇಲ್ವಿಚಾರಕರು, ವೇಟರ್‌ಗಳು, ಕೊಠಡಿ ಸಹಾಯಕರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ವಾಸ್ತವದಲ್ಲಿ ಸುಮಾರು 160 ಸಿಬ್ಬಂದಿ ಇದ್ದರೂ, ಲೆಕ್ಕದಲ್ಲಿ ಅದು ದ್ವಿಗುಣಗೊಂಡಿದೆ.

ಎಲ್ಲರಿಗೂ ಶೇ 100ರಷ್ಟು ಹಾಜರಾತಿ: ‘ಅತಿಥಿ ಗೃಹದಲ್ಲಿ ಪ್ರತಿದಿನ ಕೆಲಸ ಮಾಡುವ ಸಿಬ್ಬಂದಿ ಒಂದು ದಿನವೂ ರಜೆ ಪಡೆದಿಲ್ಲ. ಎಲ್ಲರಿಗೂ ಪೂರ್ಣ ಪ್ರಮಾಣದ ವೇತನ ನೀಡಲಾಗಿದೆ. ಅತಿಥಿ ಗೃಹಕ್ಕೆ ಭೇಟಿ ನೀಡಿ, ಹಾಜರಾತಿ ಪರಿಶೀಲಿಸಿದಾಗ, 41 ಸಿಬ್ಬಂದಿ ತಿಂಗಳಿಗೆ 10ರಿಂದ 15 ದಿನವೂ ಕೆಲಸ ಮಾಡಿಲ್ಲ. ಹಲವರು ಐದಾರು ತಿಂಗಳು ಅಧಿಕೃತವಾಗಿಯೇ ರಜೆ ಪಡೆದಿದ್ದಾರೆ. ಅಂತಹ ಎಲ್ಲರಿಗೂ ಪೂರ್ಣ ಪ್ರಮಾಣದ ವೇತನ ನೀಡಲಾಗಿದೆ. ಕೆಲವರು ಕೆಲಸ ಬಿಟ್ಟು ವರ್ಷಗಳೇ ಕಳೆದಿದ್ದರೂ ಅವರ ಖಾತೆಗೆ ಪ್ರತಿ ತಿಂಗಳು ಹಣ ಜಮೆ ಮಾಡಲಾಗಿದೆ’ ಎಂದು ಅಂತಹ ಸಿಬ್ಬಂದಿ ಹೆಸರು ಸಹಿತ ವಿವರ ನೀಡಲಾಗಿದೆ.

ಕರ್ತವ್ಯಲೋಪ ಎಸಗಿ ಸರ್ಕಾರಕ್ಕೆ ಹಾಗೂ ನಿಗಮಕ್ಕೆ ಆರ್ಥಿಕ ನಷ್ಟ ಮಾಡಿರುವ, ಕರ್ತವ್ಯಲೋಪ ಎಸಗಿರುವ, ಹೊರಗುತ್ತಿಗೆ ಸಂಸ್ಥೆ ಜತೆ ಶಾಮೀಲಾಗಿರುವ ಅತಿಥಿ ಗೃಹದ ವ್ಯವಸ್ಥಾಪಕ, ಲೆಕ್ಕಾಧಿಕಾರಿ ಹಾಗೂ ಹೊರಗುತ್ತಿಗೆ ಸಂಸ್ಥೆ ವಿರುದ್ಧ ಕ್ರಮ ಕೈಗೊಳ್ಳುವಂತೆ ತನಿಖಾಧಿಕಾರಿ ಶಿಫಾರಸು ಮಾಡಿದ್ದಾರೆ.

ಬಯೊಮೆಟ್ರಿಕ್ ಬಳಸಿಯೇ ಇಲ್ಲ

ಒಂದನೇ ಪುಟದಿಂದ...

ಸಿಬ್ಬಂದಿ ವೇತನದಲ್ಲಿ ಕಡಿತಗೊಳಿಸಿದ ಭವಿಷ್ಯ ನಿಧಿ (ಪಿಎಫ್) ಹಣವನ್ನೂ ನೇಮಕಾತಿ ಗುತ್ತಿಗೆ ಪಡೆದ ಕಾಸ್ಮೊಪಾಲಿಟನ್ ಸಂಸ್ಥೆ ‘ಭವಿಷ್ಯ ನಿಧಿ ಮಂಡಳಿ’ ಖಾತೆಗೆ ಜಮೆ ಮಾಡಿಲ್ಲ ಎನ್ನುವ ಅಂಶಗಳನ್ನು ತನಿಖೆಯಲ್ಲಿ ಪತ್ತೆ ಮಾಡಲಾಗಿದೆ.

ಕಲ್ಯಾಣಕ್ಕೆ ಸಿಗದ ಹಣ

ಒಂದನೇ ಪುಟದಿಂದ...

₹10 ಕೋಟಿಗೂ ಹೆಚ್ಚಿನ ಮೊತ್ತದ ಯೋಜನೆಗಳಿಗೆ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಯ ಸಮ್ಮತಿ ಅಗತ್ಯ. ಆ ಕಾರಣಕ್ಕೆ ಮಂಡಳಿಯ ಕಾರ್ಯದರ್ಶಿ 2024-25ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ತಲಾ ₹750 ಕೋಟಿಯನ್ನು ಒಟ್ಟಿಗೆ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಮಂಡಳಿಯ ಪ್ರಸ್ತಾವವನ್ನು ಯೋಜನಾ ಇಲಾಖೆಯು ಆರ್ಥಿಕ ಇಲಾಖೆಗೆ ಸಲ್ಲಿಸಿತ್ತು.

ಈ ಪ್ರಸ್ತಾವಕ್ಕೆ ಸೆಪ್ಟೆಂಬರ್ 19ರಂದೇ ಹಿಂಬರಹ ನೀಡಿರುವ ಆರ್ಥಿಕ ಇಲಾಖೆ, ‘ಮಂಡಳಿಯಲ್ಲಿ 2024ರ ಜುಲೈ 31ರ ಅಂತ್ಯಕ್ಕೆ ವೆಚ್ಚವಾಗದ ಹಳೆ ಬಾಕಿ ಇನ್ನೂ ₹2,399 ಕೋಟಿ ಇದೆ. ಹೀಗಾಗಿ, ಅನುದಾನ ಬಿಡುಗಡೆ ಮಾಡುವ ಅಗತ್ಯ ಇಲ್ಲ. ತನ್ನಲ್ಲಿರುವ ಹಣವನ್ನು ಕಾಮಗಾರಿಗಳ ಬಿಲ್‌ಗಳ ಪಾವತಿಗೆ ಬಳಸಬಹುದು. ನಂತರ ಈ ಪ್ರಸ್ತಾವ-ವನ್ನು ಮರು ಸಲ್ಲಿಸಿ’ ಎಂದು ಸಲಹೆ ನೀಡಿತ್ತು.

ಅಭಿವೃದ್ಧಿ ಆಯುಕ್ತರೂ ಆಗಿರುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಅವರ ಅಧ್ಯಕ್ಷತೆಯಲ್ಲಿ ನವೆಂಬರ್ 30 ಮತ್ತು ಇದೇ ಫೆಬ್ರುವರಿ 5ರಂದು ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನೆ ನಡೆದಿದೆ. ಮಂಡಳಿಗೆ ಸರ್ಕಾರದಿಂದ ಪ್ರಸಕ್ತ ಸಾಲಿನ ಅನುದಾನ ಬಿಡುಗಡೆ ಆಗದಿರುವ ಕುರಿತು ನವೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಚರ್ಚೆ ಆಗಿತ್ತು. ಆರ್ಥಿಕ ವರ್ಷ ಮುಗಿಯಲು ಕೇವಲ ನಾಲ್ಕು ತಿಂಗಳು ಬಾಕಿ ಇದ್ದು, ಈವರೆಗೂ ಒಂದು ಕಂತಿನ ಅನುದಾನವೂ ಮಂಡಳಿಗೆ ಬಿಡುಗಡೆ ಆಗಿಲ್ಲ. ಆದ್ದರಿಂದ, ಆರ್ಥಿಕ ಇಲಾಖೆಯ ಮಾರ್ಗಸೂಚಿಯಂತೆ ಹೆಚ್ಚಿನ ಪ್ರಗತಿ ಸಾಧಿಸಿ, ತಕ್ಷಣ ಅನುದಾನ ಬಿಡುಗಡೆ ಮಾಡಲು ಸೂಕ್ತ ಪ್ರಸ್ತಾವ ಸರ್ಕಾರಕ್ಕೆ ಸಲ್ಲಿಸುವಂತೆ ಮಂಡಳಿಯ ಕಾರ್ಯದರ್ಶಿಗೆ ಅಂದಿನ ಸಭೆಯಲ್ಲಿ ಸೂಚಿಸಲಾಗಿತ್ತು.

> **ಮಂಡಳಿಗೆ ಮೊದಲ ಕಂತು ₹750 ಕೋಟಿ ಬಿಡುಗಡೆಗೆ ಆರ್ಥಿಕ ಇಲಾಖೆ ಸಹಮತ ಸೂಚಿಸಿದೆ. ಯೋಜನಾ ಇಲಾಖೆಯು ಹಣ ಬಿಡುಗಡೆ ಪ್ರಕ್ರಿಯೆ ಮಾಡಬೇಕಿದೆ**
> **ಎಂ. ಸುಂದರೇಶ್ ಬಾಬು**, ಕಾರ್ಯದರ್ಶಿ, ಕೆಕೆಆರ್‌ಡಿಬಿ

ಕೆಕೆಆರ್‌ಡಿಬಿ– ಪ್ರಸಕ್ತ ಸಾಲಿನ ಪ್ರಗತಿ

₹5,000 ಕೋಟಿ
2024–25ನೇ ಸಾಲಿನಲ್ಲಿ ಕ್ರಿಯಾಯೋಜನೆಗೆ ನಿರ್ಣಯಿಸಿದ ಮೊತ್ತ

₹4,075 ಕೋಟಿ
ಈವರೆಗೆ ಸಿದ್ಧಪಡಿಸಿದ್ದ ಕಾಮಗಾರಿವಾರು ಕ್ರಿಯಾಯೋಜನೆ ಮೊತ್ತ

₹924.94 ಕೋಟಿ
ಕ್ರಿಯಾಯೋಜನೆ ಸಿದ್ಧಪಡಿಸಲು ಬಾಕಿ ಇರುವ ಮೊತ್ತ

ಪ್ರಸಕ್ತ ಸಾಲಿನಲ್ಲಿ ಯಾವ ಜಿಲ್ಲೆ, ಎಷ್ಟು ಮೊತ್ತದ ಕ್ರಿಯಾಯೋಜನೆ ಬಾಕಿ

ಜಿಲ್ಲೆ	ಮೊತ್ತ (₹ ಕೋಟಿಗಳಲ್ಲಿ)
ಬೀದರ್	120.12
ಕಲಬುರಗಿ	239.73
ಯಾದಗಿರಿ	14.71
ರಾಯಚೂರು	88.70
ಕೊಪ್ಪಳ	14.39
ಬಳ್ಳಾರಿ	22.14
ವಿಜಯಪುರ	11.51

ಕೆಕೆಆರ್‌ಡಿಬಿ: 2024–25ನೇ ಸಾಲಿನ ಅನುದಾನ ಹಂಚಿಕೆ

ಯೋಜನೆ	ನಿಗದಿಪಡಿಸಿದ ಮೊತ್ತ (₹ ಕೋಟಿಗಳಲ್ಲಿ)
ಸಾಮಾನ್ಯ	3,482.10
ಎಸ್‌ಸಿಎಸ್‌ಪಿ	1,071.45
ಟಿಎಸ್‌ಪಿ	4,46.45
ಒಟ್ಟು	5,000

ಪ್ರಗತಿಯಲ್ಲಿ ಹಿಂದೆ

‘2023–24ನೇ ಸಾಲಿನಲ್ಲಿ ಕೆಕೆಆರ್‌ಡಿಬಿಗೆ ರಾಜ್ಯ ಸರ್ಕಾರ ₹3 ಸಾವಿರ ಕೋಟಿ ಹಂಚಿಕೆ ಮಾಡಿತ್ತು. ಮಂಡಳಿಯು ₹2,969.20 ಕೋಟಿಯ ಕ್ರಿಯಾಯೋಜನೆಗೆ ಅನುಮೋದನೆ ನೀಡಿತ್ತು. ಅದರಲ್ಲಿ ₹1,459.37 ಕೋಟಿಯಷ್ಟೆ (ಶೇ 49) ವೆಚ್ಚವಾಗಿದೆ. ಒಟ್ಟು 6,182 ಕಾಮಗಾರಿಗಳಲ್ಲಿ ಕೇವಲ 1,940 ಕಾಮಗಾರಿಗಳು ಪೂರ್ಣಗೊಂಡಿದ್ದು, 3,870 ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿವೆ. 372 ಕಾಮಗಾರಿಗಳು ಆರಂಭವೇ ಆಗಿಲ್ಲ’ ಎಂದು ಕೆಕೆಆರ್‌ಡಿಬಿ ಮೂಲಗಳು ತಿಳಿಸಿವೆ.

ಶಿವರಾತ್ರಿ ಮಹಾಶಿವರಾತ್ರಿ ಅಂಗವಾಗಿ ಕಲಬುರಗಿಯ ರಾಮತೀರ್ಥದಲ್ಲಿರುವ ಶಿವನ ದೇವಸ್ಥಾನಕ್ಕೆ ಬುಧವಾರ ಶಿವನ ವೇಷದಲ್ಲಿ ಬಂದ ವೃಕ್ಷಾ ವಿಕ್ರಮ ಮತ್ತು ಸಂಸ್ಕೃತಿ ಕಣ್ಣಿ ಗಮನ ಸೆಳೆದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕ್ಷೇತ್ರಗಳ ಪುನರ್ ವಿಂಗಡಣೆ: ಒಂದೇ ಒಂದು ಲೋಕಸಭಾ ಸ್ಥಾನ ಕಳೆದುಕೊಳ್ಳದು: ಭರವಸೆ

ದಕ್ಷಿಣಕ್ಕೆ ಅನ್ಯಾಯ ಆಗಲು ಬಿಡಲ್ಲ: ಶಾ

ಪ್ರಜಾವಾಣಿ ವಾರ್ತೆ/ ಪಿಟಿಐ

ಕೊಯಮತ್ತೂರು/ಚೆನ್ನೈ (ತಮಿಳುನಾಡು): 'ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಭರವಸೆ ನೀಡಿದ್ದಾರೆ.



ಅಮಿತ್ ಶಾ

ಮೂರು ಜಿಲ್ಲೆಗಳ ಬಿಜೆಪಿ ಕಚೇರಿಗಳನ್ನು ಉದ್ಘಾಟಿಸಿದ ನಂತರ ಕೊಯಮತ್ತೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ನ್ಯಾಯಯುತ ಮತ್ತು ಪಾರದರ್ಶಕ ವಿಧಾನವನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸುವ ಸಂಬಂಧ ಜಂಟಿ ಮನವಿ ಸಲ್ಲಿಸಲು ಮಾರ್ಚ್ 5 ರಂದು ಸರ್ವಪಕ್ಷ ಸಭೆ ಕರೆದಿರುವ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹೇಳಿದ ಮರು ದಿನವೇ ಶಾ ಅವರಿಂದ ಈ ಸ್ಪಷ್ಟನೆ ಬಂದಿದೆ.

ಕೇವಲ ಜನಸಂಖ್ಯೆಯ ಆಧಾರದ ಮೇಲೆ ಮತ್ತು ಲೋಕಸಭೆಯ ಒಟ್ಟು ಸ್ಥಾನಗಳ ಸಂಖ್ಯೆಯನ್ನು ಪ್ರಸ್ತುತ 543ಕ್ಕೆ ಸೀಮಿತಗೊಳಿಸಿದರೆ ತಮಿಳುನಾಡು 8 ಕ್ಷೇತ್ರಗಳನ್ನು ಕಳೆದುಕೊಳ್ಳುತ್ತದೆ ಎಂದು ಸ್ಟಾಲಿನ್ ಆತಂಕ ವ್ಯಕ್ತಪಡಿಸಿದ್ದರು.

'ದಕ್ಷಿಣದ ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಕೇರಳ ಹಾಗೂ ತೆಲಂಗಾಣ ರಾಜ್ಯಗಳು ಒಂದೇ ಒಂದು ಲೋಕಸಭಾ ಸ್ಥಾನವನ್ನು ಸಹ ಕಳೆದುಕೊಳ್ಳುವುದಿಲ್ಲವೆಂದು ಮೋದಿ ನೇತೃತ್ವದ ಸರ್ಕಾರವು ಈಗಾಗಲೇ ಲೋಕಸಭೆಯಲ್ಲಿ ಸ್ಪಷ್ಟಪಡಿಸಿದೆ. ಜನಸಂಖ್ಯೆ ಅನುಪಾತ ಆಧರಿಸಿ, ಮಾಡಲಾಗುವ ಕ್ಷೇತ್ರ ಹಂಚಿಕೆಯಲ್ಲಿ ಈ ರಾಜ್ಯಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು' ಎಂದು ಶಾ ಹೇಳಿದರು.

'ಜನಸಂಖ್ಯೆ ಅನುಪಾತದ ಆಧಾರದ ಮೇಲೆ ಸ್ಥಾನಗಳನ್ನು ಹಂಚಿಕೆ ಮಾಡಲಾಗುವುದರಿಂದ ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವು ಮತ್ತಷ್ಟು ಹೆಚ್ಚಾಗಲಿದೆ' ಎಂದು ಅವರು ಹೇಳಿದರು.

ಪುನರ್ ವಿಂಗಡಣೆ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಪ್ಪು ಮಾಹಿತಿ ನೀಡುತ್ತಿದ್ದಾರೆ. ತಮಿಳುನಾಡು ಸೇರಿ ದಕ್ಷಿಣದ ಯಾವುದೇ ರಾಜ್ಯವು ಸಂಸತ್ ಪ್ರಾತಿನಿಧ್ಯದಲ್ಲಿ ಒಂದೇ ಒಂದು ಸ್ಥಾನ ಕಳೆದುಕೊಳ್ಳುವುದಿಲ್ಲ ಎಂದು ದೃಢವಾಗಿ ಹೇಳುವ ಮೂಲಕ, ಊಹಾಪೋಹಗಳಿಗೆ ತೆರೆ ಎಳೆಯುವ, ದಕ್ಷಿಣದ ರಾಜ್ಯಗಳ ಆತಂಕವನ್ನು ನಿವಾರಿಸುವ ಪ್ರಯತ್ನ ಮಾಡಿದರು.

'ಕೊಯಮತ್ತೂರಿನಿಂದ ಹಿಡಿದು ದಕ್ಷಿಣದ ಎಲ್ಲ ರಾಜ್ಯಗಳ ಜನರಿಗೆ ನಾನು ಭರವಸೆ ನೀಡುತ್ತೇನೆ, ಮೋದಿ ಅವರು ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ದೇಶದಾದ್ಯಂತ ಒಂದೇ ಒಂದು ಸ್ಥಾನ ಕಡಿಮೆಯಾಗದಂತೆ ನೋಡಿಕೊಳ್ಳುತ್ತಾರೆ. ಎಷ್ಟೇ ಸ್ಥಾನಗಳನ್ನು ಹೆಚ್ಚಿಸಿದರೂ ದಕ್ಷಿಣವು ಹೆಚ್ಚಿನ ಪಾಲು ಹೊಂದಿರುತ್ತದೆ. ಇದರ ಬಗ್ಗೆ ಯಾವುದೇ ಸಂದೇಹ ಪಡುವ ಅಗತ್ಯವಿಲ್ಲ' ಎಂದು ಶಾ ಹೇಳಿದರು.

'ಡಿಎಂಕೆಯ ಎಲ್ಲ ನಾಯಕರು ಭ್ರಷ್ಟಾಚಾರದಲ್ಲಿ ತೊಡಗಿದ್ದು, ಜನರು ರಾಜ್ಯ ಸರ್ಕಾರದ ಹಲವು ವಿಷಯಗಳಲ್ಲಿ ಬೇಸರಗೊಂಡಿದ್ದಾರೆ. ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆಯಲು ಸ್ಟಾಲಿನ್ ಮತ್ತು ಅವರ ಪುತ್ರ ಉದಯನಿಧಿ ಅವರು ಇಲ್ಲಸಲ್ಲದ ವಿಷಯಗಳನ್ನು ಕೈಗೆತ್ತಿಕೊಂಡು, ಜನರ ಹಾದಿ ತಪ್ಪಿಸುವುದರಲ್ಲಿ ನಿರತರಾಗಿದ್ದಾರೆ' ಎಂದು ಅಮಿತ್ ಶಾ ಟೀಕಿಸಿದರು.

ಭರವಸೆ ನಂತರವೂ ದೂರವಾಗದ ಆತಂಕ

ಪುದುಚೇರಿ ಸೇರಿ ಒಟ್ಟು 130 ಲೋಕಸಭಾ ಸ್ಥಾನಗಳನ್ನು ಹೊಂದಿರುವ ದಕ್ಷಿಣ ಭಾರತದ ರಾಜ್ಯಗಳ ಆತಂಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಈ ಹೇಳಿಕೆ ಪೂರ್ಣ ನಿವಾರಿಸಿಲ್ಲ ಎಂದು ವಿಶ್ಲೇಷಿಸಲಾಗಿದೆ.

ಏಕೆಂದರೆ, ಒಟ್ಟು ಫಲವಂತಿಕೆ ದರ (ಟಿಎಫ್‌ಆರ್) 2.1 ಮಿತಿಯನ್ನು ಮೀರಿರುವ ಉತ್ತರ ಪ್ರದೇಶ ಮತ್ತು ಬಿಹಾರದಂತಹ ರಾಜ್ಯಗಳು ಜನಸಂಖ್ಯಾ ನಿಯಂತ್ರಣದ ಕ್ರಮಗಳನ್ನು ಗಂಭೀರವಾಗಿ ಅನುಷ್ಠಾನಗೊಳಿಸುವವರೆಗೂ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯನ್ನು ಮುಂದೂಡಬೇಕೆಂಬುದು ದಕ್ಷಿಣದ ರಾಜ್ಯಗಳ ಬೇಡಿಕೆಯಾಗಿದೆ.

1971ರ ಜನಗಣತಿಯ ಆಧಾರದ ಮೇಲೆ ನಿಗದಿಪಡಿಸಲಾದ ರಾಜ್ಯಗಳಲ್ಲಿನ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ 'ಪ್ರಸ್ತುತ ಅನುಪಾತ' ಮುಂದುವರಿಯಬೇಕೆಂದು ದಕ್ಷಿಣ ರಾಜ್ಯಗಳು ಒತ್ತಾಯಿಸುತ್ತಿವೆ. ಆದರೆ, ಕೇಂದ್ರ ಸರ್ಕಾರವು ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಕೈಗೊಳ್ಳಲು ಸಿದ್ಧವಾಗಿದೆ ಎಂಬುದನ್ನು ಅಮಿತ್ ಶಾ ಅವರ ಈ ಹೇಳಿಕೆಗಳು ಸ್ಪಷ್ಟಪಡಿಸುತ್ತಿವೆ.

ಅಮಿತ್ ಶಾ ಅವರು ಉಲ್ಲೇಖಿಸಿರುವ ಜನಸಂಖ್ಯಾ ಅನುಪಾತದ ಆಧಾರದ ಸೂತ್ರದ ಪ್ರಕಾರ ದಕ್ಷಿಣ ಭಾರತದಲ್ಲಿ ಲೋಕಸಭಾ ಸ್ಥಾನಗಳ ಸಂಖ್ಯೆಯು ಹೆಚ್ಚಳವನ್ನು ಕಂಡರೂ ಉತ್ತರ ಭಾರತದ ರಾಜ್ಯಗಳ ಸ್ಥಾನಗಳ ಸಂಖ್ಯೆಯು ಭಾರಿ ಹೆಚ್ಚಳಕ್ಕೆ ಸಾಕ್ಷಿಯಾಗಲಿದೆ. ಇದು ಸಂಸತ್ತಿನಲ್ಲಿ ದಕ್ಷಿಣದ ರಾಜಕೀಯ ಪ್ರಾತಿನಿಧ್ಯವನ್ನು ವ್ಯಾಪಕ ಪ್ರಮಾಣದಲ್ಲಿ ತಗ್ಗಿಸಲಿದೆ.

ಕೇಂದ್ರ ಸರ್ಕಾರದ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು 1970ರ ದಶಕದಿಂದ ಕಟ್ಟುನಿಟ್ಟಾಗಿ ಪಾಲಿಸಿದ್ದಕ್ಕಾಗಿ ದಕ್ಷಿಣ ರಾಜ್ಯಗಳು ದಂಡ ತೆರಬೇಕಾಗಿದೆ ಎಂದು ಭಾವಿಸಲು ಇದು ಇನ್ನಷ್ಟು ದಾರಿ ಮಾಡಿಕೊಡಲಿದೆ.

ಏನೇ ಆಗಲಿ, ಜನಗಣತಿ ಕಾರ್ಯವನ್ನು ಕೈಗೆತ್ತಿಕೊಳ್ಳುವವರೆಗೆ ಕ್ಷೇತ್ರ ಪುನರ್ ವಿಂಗಡಣೆ ಕಾರ್ಯವು ಸಾಧ್ಯವಾಗದು. ಜನಗಣತಿ ಈಗಾಗಲೇ ನಾಲ್ಕು ವರ್ಷ ವಿಳಂಬವಾಗಿದೆ.

'ತಮಿಳುನಾಡಿಗೆ ₹5 ಲಕ್ಷ ಕೋಟಿ'

'ಅನುದಾನ ಹಂಚಿಕೆಯಲ್ಲಿ ತಮಿಳುನಾಡಿಗೆ ಕೇಂದ್ರದಿಂದ ಅನ್ಯಾಯವಾಗಿಲ್ಲ. ನರೇಂದ್ರ ಮೋದಿ ನೇತೃತ್ವದ ಸರ್ಕಾರ 2014 ರಿಂದ 24ರ ಅವಧಿಯಲ್ಲಿ ರಾಜ್ಯಕ್ಕೆ ₹5,08,337 ಕೋಟಿ ಅನುದಾನ ಒದಗಿಸಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಆಡಳಿತಾರೂಢ ಡಿಎಂಕೆ ವಿಫಲವಾಗಿದೆ. ಜನರ ಗಮನ ಬೇರೆಡೆ ಸೆಳೆಯಲು ಮುಖ್ಯಮಂತ್ರಿ ಸ್ಟಾಲಿನ್ ಕ್ಷೇತ್ರಗಳ ಪುನರ್ ವಿಂಗಡಣೆ ವಿಷಯ ಪ್ರಸ್ತಾಪಿಸಿದ್ದಾರೆ ಎಂದು ಟೀಕಿಸಿದರು.

ಜೀವನ ಪರ್ಯಂತ ನಿರ್ಬಂಧ ಸಂಸತ್ತಿನ ಅಧಿಕಾರ: ಕೇಂದ್ರ

ಕ್ರಿಮಿನಲ್ ಅಪರಾಧಿಗಳಿಗೆ ಶಾಸನಸಭೆಗಳಿಂದ ಬಹಿಷ್ಕಾರ: ಅರ್ಜಿ

ನವದೆಹಲಿ (ಪಿಟಿಐ): ಕ್ರಿಮಿನಲ್ ಅಪರಾಧಗಳಲ್ಲಿ ಶಿಕ್ಷೆಗೆ ಗುರಿಯಾದವರನ್ನು ಶಾಸನ ಸಭೆಗಳಿಂದ ಶಾಶ್ವತವಾಗಿ ದೂರ ಇರಿಸಬೇಕು ಎಂಬ ಕೋರಿಕೆಯನ್ನು ಕೇಂದ್ರ ಸರ್ಕಾರವು ವಿರೋಧಿಸಿದೆ. ಈ ಸಂಬಂಧ ಅದು ಸುಪ್ರೀಂ ಕೋರ್ಟ್‌ಗೆ ತನ್ನ ಅಭಿಪ್ರಾಯವನ್ನು ಸಲ್ಲಿಸಿದೆ.

ಈ ಬಗೆಯಲ್ಲಿ ನಿರ್ಬಂಧ ವಿಧಿಸುವ ಅಧಿಕಾರ ಇರುವುದು ಸಂಸತ್ತಿಗೆ ಮಾತ್ರ ಎಂದು ಕೇಂದ್ರ ಹೇಳಿದೆ. ಈ ಸಂಬಂಧವಾಗಿ ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿಯು, ಕ್ರಿಮಿನಲ್ ಅಪರಾಧ ಎಸಗಿದವರು ಜೀವನಪರ್ಯಂತ ಚುನಾವಣೆಗೆ ಸ್ಪರ್ಧಿಸದಂತೆ ಮಾಡಬೇಕು, ಶಾಸಕರು ಹಾಗೂ ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕು ಎಂಬ ಕೋರಿಕೆಯನ್ನು ಹೊಂದಿದೆ.

ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8(1)ರ ಪ್ರಕಾರ, ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದವರಿಗೆ ಆರು ವರ್ಷ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧ ಇದೆ ಎಂದು ಕೇಂದ್ರವು ವಿವರಿಸಿದೆ.

'ಈ ಸೆಕ್ಷನ್‌ನಲ್ಲಿ ಹೇಳಿರುವ ಅನರ್ಹತೆಯ ಅವಧಿಗೆ ಮಿತಿ ಇದೆ. ಇದು ಸಂಸತ್ತು ರೂಪಿಸಿದ ನೀತಿ. ಈ ಮಿತಿಯ ಬದಲಿಗೆ, ಜೀವನಪರ್ಯಂತ ನಿರ್ಬಂಧವನ್ನು ಹೇರುವುದು ಸರಿಯಾಗುವುದಿಲ್ಲ' ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ಆರು ವರ್ಷಗಳ ನಿರ್ಬಂಧ ಎನ್ನುವುದು ಸಾಂವಿಧಾನಿಕವಾಗಿ ಸರಿಯಾಗಿಯೇ ಇದೆ, ಅದು ಸಂಸತ್ತಿನ ಅಧಿಕಾರಗಳ ಮಿತಿಯಲ್ಲಿಯೇ ಇದೆ ಎಂದು ಕೇಂದ್ರ ಹೇಳಿದೆ. ಯಾವುದೇ ಬಗೆಯ ದಂಡವನ್ನು ವಿಧಿಸುವ ಸಂದರ್ಭದಲ್ಲಿ ಸಂಸತ್ತು ಆ ದಂಡವು ತಪ್ಪಿನ ಪ್ರಮಾಣಕ್ಕೆ ಅನುಗುಣವಾಗಿ ಇದೆಯೇ, ಶಿಕ್ಷೆಯು ತರ್ಕಬದ್ಧವಾಗಿ ಇದೆಯೇ ಎಂಬುದನ್ನು ಪರಿಶೀಲಿಸುತ್ತದೆ ಎಂದು ವಿವರಿಸಿದೆ.

ಹೆಚ್ಚುವರಿ ಮೊತ್ತದ ಔಷಧ: ಕೇರಳ ಹೈಕೋರ್ಟ್ ಆದೇಶಕ್ಕೆ ತಡೆ

ವಂಶವಾಹಿಯಿಂದಾಗಿ ಬರುವ ಬೆನ್ನುಹುರಿಯ ಸಮಸ್ಯೆಯೊಂದನ್ನು ಎದುರಿಸುತ್ತಿರುವ ವ್ಯಕ್ತಿಯೊಬ್ಬರಿಗೆ ಗರಿಷ್ಠ ಮಿತಿಯನ್ನು ಮೀರಿ ₹18 ಲಕ್ಷ ಮೌಲ್ಯದ ಔಷಧಗಳನ್ನು ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಕೇರಳ ಹೈಕೋರ್ಟ್ ನೀಡಿದ್ದ ನಿರ್ದೇಶನಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕಾಯಿಲೆಗೆ ಚಿಕಿತ್ಸೆ ಒದಗಿಸಲು ಕೇಂದ್ರ ಸರ್ಕಾರದಿಂದ ಗರಿಷ್ಠ ₹50 ಲಕ್ಷದವರೆಗೆ ನೆರವು ನೀಡಲು ನಿಯಮಗಳಲ್ಲಿ ಅವಕಾಶ ಇದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಕೇರಳ ಹೈಕೋರ್ಟ್‌ನ ಆದೇಶಕ್ಕೆ ತಡೆ ನೀಡಿದೆ.

24 ವರ್ಷ ವಯಸ್ಸಿನ ಸೆಬಾ ಪಿ.ಎ. ಅವರಿಗೆ ಚಿಕಿತ್ಸೆ ಮುಂದುವರಿಸಲು ಒಂದು ಬಾರಿಯ ಕ್ರಮವಾಗಿ ರಿಸ್ಡಿಪ್ಲಾಮ್ ಔಷಧವನ್ನು ನೀಡಬೇಕು ಎಂದು ಹೈಕೋರ್ಟ್ ಹೇಳಿತ್ತು.

ಈ ಔಷಧದ ಒಂದು ಬಾಟಲಿಗೆ ₹6.2 ಲಕ್ಷ ಬೆಲೆ ಇದೆ. 20 ಕೆ.ಜಿ.ಗಿಂತ ಕಡಿಮೆ ತೂಕ ಇರುವ ವ್ಯಕ್ತಿಗಳಿಗೆ ತಿಂಗಳಿಗೆ ಒಂದು ಬಾಟಲಿ ಔಷಧಿ ನೀಡಬೇಕಾಗುತ್ತದೆ. ಹೆಚ್ಚು ತೂಕ ಇರುವವರಿಗೆ ಮೂರು ಬಾಟಲಿಗಳವರೆಗೆ ಬೇಕಾಗುತ್ತದೆ. ಇದರಿಂದಾಗಿ ಈ ಕಾಯಿಲೆಗೆ ದೀರ್ಘ ಅವಧಿಯವರೆಗೆ ಚಿಕಿತ್ಸೆ ಒದಗಿಸುವುದು ಹಣಕಾಸಿನ ದೃಷ್ಟಿಯಿಂದ ಭಾರಿ ಹೊರೆ.

ರೋಗಿಗಳಿಗೆ ₹50 ಲಕ್ಷದವರೆಗೆ ಮಾತ್ರ ನೆರವು ಒದಗಿಸಲು ಅವಕಾಶ ಇದೆ ಎಂದು ಕೇಂದ್ರವು ಪೀಠಕ್ಕೆ ತಿಳಿಸಿತು. ಪ್ರಕರಣವನ್ನು ಪರಿಶೀಲಿಸಿ ₹50 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ವೆಚ್ಚಗಳನ್ನು ಭರಿಸಲು ಅನುಮತಿ ನೀಡುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸುವಂತೆ ಕೇಂದ್ರಕ್ಕೆ ಪೀಠವು ಸೂಚಿಸಿದೆ.

ನಿತೀಶ್ ಸಂಪುಟಕ್ಕೆ 7 ಸಚಿವರ ಸೇರ್ಪಡೆ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಬುಧವಾರ ಸಚಿವ ಸಂಪುಟ ವಿಸ್ತರಣೆ ಮಾಡಿದ್ದು, ಮೈತ್ರಿಕೂಟದ ಪಾಲುದಾರ ಪಕ್ಷವಾದ ಬಿಜೆಪಿಯ ಏಳು ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದಾರೆ. ಬಿಹಾರ ವಿಧಾನಸಭೆಗೆ ಈ ವರ್ಷಾಂತ್ಯದ ವೇಳೆಗೆ ಚುನಾವಣೆ ನಡೆಯಲಿದೆ.

ನಿತೀಶ್ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಇದು ಕೊನೆಯ ವಿಸ್ತರಣೆ ಎನ್ನಲಾಗಿದ್ದು, ಸಚಿವರ ಸಂಖ್ಯೆ 36ಕ್ಕೆ ಏರಿಕೆಯಾಗಿದೆ. 243 ಶಾಸಕರನ್ನು ಹೊಂದಿರುವ ರಾಜ್ಯ ವಿಧಾನಸಭೆಯು ಹೊಂದಬಹುದಾದ ಸಚಿವರ ಗರಿಷ್ಠ ಸಂಖ್ಯೆ ಇದಾಗಿದೆ.

ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

ರಾಜ್ಯ ಬಿಜೆಪಿ ಅಧ್ಯಕ್ಷರೂ ಆದ ದಿಲೀಪ್ ಜೈಸ್ವಾಲ್ ಅವರು ಪಕ್ಷದಲ್ಲಿ 'ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ' ನೀತಿ ಉಲ್ಲೇಖಿಸಿ, ಸಂಪುಟ ದರ್ಜೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ದಿನವೇ ಸಂಪುಟ ವಿಸ್ತರಣೆಯ ಬೆಳವಣಿಗೆ ನಡೆದಿದೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಮುಖ ನಾಯಕರೊಂದಿಗೆ ಸಭೆ ನಡೆಸಿದ ಬೆನ್ನಲ್ಲೇ, ಸಚಿವ ಸಂಪುಟ ವಿಸ್ತರಣೆ ಮಾಡಲಾಗಿದೆ.

'ಅಧ್ಯಕ್ಷ ಸ್ಥಾನ ತ್ಯಜಿಸಲು ಸಿದ್ಧ'

ತಿರುವನಂತಪುರ (ಪಿಟಿಐ): ಕೇರಳ ಕಾಂಗ್ರೆಸ್ ಘಟಕದ ಪುನರ್‌ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಚಿಂತನೆ ನಡೆಸಿದೆ ಎಂಬ ವರದಿಗಳ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷ ಕೆ.ಸುಧಾಕರನ್ ಅವರು, 'ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಎಐಸಿಸಿಯ ಯಾವುದೇ ನಿರ್ಧಾರಕ್ಕೆ ತಲೆಬಾಗುತ್ತೇನೆ' ಎಂದು ಬುಧವಾರ ಹೇಳಿದರು.

ಕೆ.ಸುಧಾಕರನ್

'ಕೆಪಿಸಿಸಿ ಅಧ್ಯಕ್ಷ ಸ್ಥಾನ ತ್ಯಜಿಸುವಂತೆ ಈವರೆಗೆ ಯಾರೂ ಹೇಳಿಲ್ಲ. ಎಐಸಿಸಿ ಸೂಚಿಸಿದರೆ ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿಯುತ್ತೇನೆ' ಎಂದು ಸ್ಪಷ್ಟಪಡಿಸಿದರು.

ಪಕ್ಷದ ಪುನರ್ ಸಂಘಟನೆ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ನಿರ್ಮಾಣ ಹಂತದ ಕಾಲುವೆ ಕುಸಿತ, 8 ಮಂದಿ ರಕ್ಷಣಾ ಕಾರ್ಯ

ತೆಲಂಗಾಣ: ಮಣ್ಣು ತೆರವಿನ ಸವಾಲು

ಪ್ರಜಾವಾಣಿ ವಾರ್ತೆ

ನಾಗರಕರ್ನೂಲ್ (ತೆಲಂಗಾಣ): ಜಿಲ್ಲೆಯ ದೋಮಲಪೆಂಟ ಗ್ರಾಮದ ಬಳಿ ನಿರ್ಮಾಣ ಹಂತದ ಶ್ರೀಶೈಲಂ ಎಡದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಕುಸಿದು, ಸಿಲುಕಿರುವ ಸಿಬ್ಬಂದಿ ರಕ್ಷಣಾ ಕಾರ್ಯ ಮತ್ತಷ್ಟು ಸವಾಲಿನದಾಗಿ ಪರಿಣಮಿಸಿದೆ.

ಈಗ, ರಕ್ಷಣಾ ಕಾರ್ಯ ನಡೆಯುತ್ತಿರುವ ಸ್ಥಳದಿಂದ 8 ಜನ ಸಿಬ್ಬಂದಿ ಸಿಲುಕಿದ್ದಾರೆ ಎಂದು ಶಂಕಿಸಲಾದ ಸ್ಥಳವು 40 ಮೀಟರ್‌ನಷ್ಟು ದೂರ ಇದೆ. ಆದರೆ, ಈ ಸ್ಥಳ ತಲುಪಲು 10 ಸಾವಿರ ಘನ ಮೀಟರ್‌ನಷ್ಟು ಕೆಸರು ಮಣ್ಣನ್ನು ತೆರವುಗೊಳಿಸಬೇಕಾಗಿದೆ.

ಸುಮಾರು 10 ಅಡಿ ಎತ್ತರದಷ್ಟು ಕೆಸರಿನಿಂದ ಕೂಡಿದ ಮಣ್ಣು ಇಲ್ಲಿದ್ದು, ಇದನ್ನು ತೆರವುಗೊಳಿಸುವ ಕಾರ್ಯ ಸವಾಲಿನದು ಹಾಗೂ ಸಂಕೀರ್ಣವಾಗಿದೆ ಎಂದು ತಜ್ಞರು ಹೇಳಿದ್ದಾರೆ.

'ಟನೆಲ್ ಬೋರಿಂಗ್ ಮಷಿನ್ (ಟಿಬಿಎಂ) ಮೇಲೆ ಕಾಂಕ್ರೀಟ್ ಹಾಗೂ ಕಬ್ಬಿಣದಿಂದ ಕೂಡಿದ ಅವಶೇಷಗಳು ಬಿದ್ದಿವೆ. ಇದು, ತೆರವು ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಇನ್ನೊಂದೆಡೆ ಕೆಸರಿನಿಂದ ಕೂಡಿದ ಮಣ್ಣನ್ನು ತೆರವು ಮಾಡಿ, ಕೊನೆಯ 40 ಮೀಟರ್ ವರೆಗೆ ತೆರಳಿ, ಸಿಲುಕಿರುವವರನ್ನು ರಕ್ಷಿಸುವುದು ಸಾಧ್ಯವಿಲ್ಲ' ಎಂದು ರಕ್ಷಣಾ ಕಾರ್ಯದ ಭಾಗವಾಗಿರುವ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಳೆದ ಶನಿವಾರ, ಇಲ್ಲಿ ನಿರ್ಮಾಣ ಹಂತದ ಕಾಲುವೆ ಕುಸಿದಿದೆ. ಒಳಗಡೆ ಹೋಗಿ, ಮತ್ತೆ ತಿರುಗಿ ಬರುವುದಕ್ಕೆ ಅವಕಾಶವೇ ಇಲ್ಲ. ಒಳಗಡೆ ಹೋಗುವ ಟ್ರಕ್‌ಗಳು ಕೆಸರು ತುಂಬಿಕೊಂಡು ವಾಪಸ್ ಬರಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಸಹ ರಕ್ಷಣಾ ಕಾರ್ಯವನ್ನು ಮತ್ತಷ್ಟು ಜಟಿಲಗೊಳಿಸಿದೆ.

ನೌಕಾಪಡೆಯ ಮರೈನ್ ಕಮಾಂಡೊಗಳನ್ನು (ಮಾರ್ಕೋಸ್) ಬುಧವಾರವೇ ರಕ್ಷಣಾ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ. ಜೆಸಿಬಿಯೊಂದನ್ನು ಒಳಗಡೆ ಕಳುಹಿಸಿ, ಮಣ್ಣು ತೆರವುಗೊಳಿಸಲು ಯೋಜಿಸಲಾಗಿತ್ತು. ಆದರೆ, ಯಂತ್ರವು ಮರಳಿ ಬರುವುದೇ ಸವಾಲಿನದು ಎಂಬ ಕಾರಣಕ್ಕೆ ಈ ಯೋಜನೆಯನ್ನು ಕೈಬಿಡಲಾಗಿತ್ತು.

ರಕ್ಷಣಾ ಕಾರ್ಯಕ್ಕಿರುವ ಅಡ್ಡಿ

- ಸುರಂಗದಲ್ಲಿರುವ ಟನೆಲ್ ಬೋರಿಂಗ್ ಮಷಿನ್‌ಗೆ (ಟಿಬಿಎಂ) ಅಳವಡಿಸಲಾದ ಕನ್ವೆಯರ್ ಬೆಲ್ಟ್ ಭಾರಿ ಪ್ರಮಾಣದಲ್ಲಿ ಹಾನಿಗೆ ಒಳಗಾಗಿದೆ. ಹೀಗಾಗಿ, ಕೆಸರು ಮಿಶ್ರಿತ ಮಣ್ಣನ್ನು ಕನ್ವೆಯರ್ ಬೆಲ್ಟ್ ಮೂಲಕ ಸಾಗಿಸುವ ಆಯ್ಕೆಯೂ ಈಗ ಇಲ್ಲದಂತಾಗಿದೆ
- ಟಿಬಿಎಂಗೆ ಹಾನಿಯಾಗಿದೆ. ಕಾರ್ಮಿಕರು ಸಿಲುಕಿರುವ ಸ್ಥಳವನ್ನು ರಕ್ಷಣಾ ಸಿಬ್ಬಂದಿ ತಲುಪಲು ಇದ್ದ ದಾರಿಗೆ ಇದು ಅಡ್ಡಿಯಾಗಿದೆ
- 100 ಮೀ. ಉದ್ದಕ್ಕೂ ಬಿದ್ದಿರುವ ಮಣ್ಣು ತೆರವುಗೊಳಿಸಿ, ಸಿಲುಕಿರುವ ಸಿಬ್ಬಂದಿಗಾಗಿ ಶೋಧ ನಡೆಸುವುದು ಮತ್ತೊಂದು ಸವಾಲಾಗಿದೆ
- ಕೆಸರಿನಿಂದ ಕೂಡಿದ ಮಣ್ಣನ್ನು ತೆರವುಗೊಳಿಸಲು ಆರಂಭಿಸಿದರೆ, ಮೇಲ್ಮೈಯ ಮಣ್ಣು ಮತ್ತಷ್ಟು ಕುಸಿಯುವ ಅಪಾಯವೂ ಇದೆ

ಎಸ್‌ಎಲ್‌ಬಿಸಿ ಸುರಂಗ ಅವಘಡ ಕುರಿತು ಹಾಲಿ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಿ ತನಿಖೆ ನಡೆಸಬೇಕು

ಕೆ.ಟಿ.ರಾಮರಾವ್, ಬಿಆರ್‌ಎಸ್‌ನ ಕಾರ್ಯಾಧ್ಯಕ್ಷ

'ಇಂತಹ ಅವಘಡ ಸಂಭವಿಸುತ್ತವೆ...'

'ಬೃಹತ್ ಎಂಜಿನಿಯರಿಂಗ್ ಪ್ರಾಜೆಕ್ಟ್‌ಗಳಡಿ ನಿರ್ಮಾಣ ಕಾರ್ಯ ಕೈಗೊಂಡ ವೇಳೆ ಇಂತಹ ಅವಘಡಗಳು ಸಂಭವಿಸುವ ಸಾಧ್ಯತೆಗಳು ಇರುತ್ತವೆ' ಎಂದು ಜೆಪಿ ಗ್ರೂಪ್‌ನ ಮುಖ್ಯಸ್ಥ ಜೈಪ್ರಕಾಶ್ ಗೌರ್ ಹೇಳಿದ್ದಾರೆ.

ಘಟನಾ ಸ್ಥಳದಲ್ಲಿ, ರಸ್ತೆ ಸಚಿವ ಕೆ.ರಾಜಗೋಪಾಲ ರೆಡ್ಡಿ ಅವರನ್ನು ಭೇಟಿ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. 'ಕೆಲ ಸಂದರ್ಭಗಳಲ್ಲಿ, ನಿಸರ್ಗ ಒಡ್ಡುವ ಸವಾಲುಗಳನ್ನು ಎದುರಿಸುವುದು ಕಷ್ಟ. 8 ಮಂದಿಯನ್ನು ರಕ್ಷಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ' ಎಂದರು.

ಟುಲಿಪ್ ಮೆರುಗು

ಹಿಮಾಚಲ ಪ್ರದೇಶದ ಪಾಲಂಪುರದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಬಯೋಸೋರ್ಸ್ ಟೆಕ್ನಾಲಜಿ (ಐಎಚ್‌ಬಿಟಿ) ಆವರಣದಲ್ಲಿ ಉದ್ಘಾಟನೆಗೊಂಡಿರುವ ಟುಲಿಪ್ ಉದ್ಯಾನದಲ್ಲಿ ವೀಕ್ಷಕರೊಬ್ಬರು ಬುಧವಾರ ಸೆಲ್ಫಿ ತೆಗೆದುಕೊಂಡರು –ಪಿಟಿಐ ಚಿತ್ರ

ಲುಧಿಯಾನ ಉಪಚುನಾವಣೆ: ಅರೋರಾ ಕಣಕ್ಕೆ

ಚಂಡೀಗಢ (ಪಿಟಿಐ): ಪಶ್ಚಿಮ ಲುಧಿಯಾನ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಗೆ, ರಾಜ್ಯಸಭಾ ಸದಸ್ಯ ಸಂಜೀವ್ ಅರೋರಾ ಅವರನ್ನು ಆಮ್ ಆದ್ಮಿ ಪಕ್ಷವು ಅಭ್ಯರ್ಥಿಯನ್ನಾಗಿ ಬುಧವಾರ ಘೋಷಿಸಿದೆ.

ಇದರ ಬೆನ್ನಲ್ಲೇ, ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮೇಲ್ಮನೆ (ರಾಜ್ಯಸಭೆ) ಪ್ರವೇಶಿಸಲಿದ್ದಾರೆ ಎಂದು ಪಂಜಾಬ್‌ನ ವಿರೋಧ ಪಕ್ಷಗಳು ಅಂದಾಜಿಸಿವೆ.

ಆದರೆ, ವಿರೋಧ ಪಕ್ಷಗಳ ಈ ಹೇಳಿಕೆಯನ್ನು ಎಎಪಿ ವಕ್ತಾರರು ಅಲ್ಲಗಳೆದಿದ್ದಾರೆ. 'ಪಕ್ಷವನ್ನು ದೇಶದಾದ್ಯಂತ ವಿಸ್ತರಿಸುವ ದೊಡ್ಡ ಜವಾಬ್ದಾರಿ ಕೇಜ್ರಿವಾಲ್ ಅವರ ಮೇಲಿದೆ. ಅವರು ಪಂಜಾಬ್‌ನಿಂದ ರಾಜ್ಯಸಭೆಗೆ ಪ್ರವೇಶಿಸುವುದಿಲ್ಲ' ಎಂದು ಎಎಪಿ ನಾಯಕರು ಸ್ಪಷ್ಟಪಡಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣ: ಸಾಕ್ಷ್ಯ ಸಮೇತ ದೂರು- ದೀಕ್ಷಿತ್

ಬಿಜೆಪಿ ನಾಯಕರೂ ಭಾಗಿ: 'ಕೈ' ಆರೋಪ

ನವದೆಹಲಿ (ಪಿಟಿಐ): 'ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಬಿಜೆಪಿ ನಾಯಕರ ಪಾತ್ರವೂ ಇದೆ. ಈ ಬಗ್ಗೆ ನಾವು ತನಿಖಾ ಸಂಸ್ಥೆಗೆ ಸಾಕ್ಷ್ಯಗಳ ಸಮೇತ ಲಿಖಿತ ದೂರು ನೀಡಿದ್ದೇವೆ. ಆದ್ದರಿಂದ ಹಗರಣದ ಕುರಿತು ನಡೆಯುತ್ತಿರುವ ತನಿಖೆಯ ವ್ಯಾಪ್ತಿ ವಿಸ್ತರಣೆಯಾಗಬೇಕು' ಎಂದು ಕಾಂಗ್ರೆಸ್ ಬುಧವಾರ ಒತ್ತಾಯಿಸಿದೆ.

ಅಬಕಾರಿ ನೀತಿ ಹಗರಣದಿಂದ ದೆಹಲಿ ಸರ್ಕಾರಕ್ಕೆ ₹2,000 ಕೋಟಿ ನಷ್ಟವಾಗಿದೆ ಎಂಬ 2021–22ನೇ ಸಾಲಿನ ಸಿಎಜಿ ವರದಿಯನ್ನು ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಮಂಗಳವಾರ ಅಧಿವೇಶನದಲ್ಲಿ ಮಂಡಿಸಿದ್ದರು. ಈ ಬಗ್ಗೆ ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ದೇವೆಂದ್ರ ಯಾದವ್ ಹಾಗೂ ಪಕ್ಷದ ನಾಯಕ ಸಂದೀಪ್ ದೀಕ್ಷಿತ್ ಅವರು ಮಾಧ್ಯಮ ಗೋಷ್ಠಿ ನಡೆಸಿದರು.

'ದೆಹಲಿ ಸರ್ಕಾರವು ಕೂಡಲೇ ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನು (ಪಿಎಸಿ) ರಚಿಸಬೇಕು. ಸಿಎಜಿ ವರದಿಯನ್ನು ಈ ಸಮಿತಿ ಪರಿಶೀಲಿಸಬೇಕು. ಹಗರಣದಲ್ಲಿ ಭಾಗಿಯಾಗಿರುವ ಎಲ್ಲರಿಗೂ ಶಿಕ್ಷೆಯಾಗಬೇಕು. ಸಮಿತಿಗೆ ಯಾವಾಗಲೂ ವಿರೋಧ ಪಕ್ಷದ ನಾಯಕ ಅಧ್ಯಕ್ಷನಾಗಿರಬೇಕು. ಆದರೆ, ಇಲ್ಲಿಯವರೆಗೂ ದೆಹಲಿ ಸರ್ಕಾರವೇ ಈ ಸಮಿತಿಯ ಅಧ್ಯಕ್ಷತೆ ವಹಿಸಿಕೊಂಡಿದೆ. ಆದ್ದರಿಂದ, ಸಿಎಜಿಯ ಎಲ್ಲ ವರದಿಗಳನ್ನು ಸಾರ್ವಜನಿಕರ ಮುಂದಿಡಬೇಕು' ಎಂದರು

'ಎಂಸಿಡಿ: ಅಧಿಕಾರದಲ್ಲಿದ್ದ ಬಿಜೆಪಿ'

'ಮಾಸ್ಟರ್ ಪ್ಲಾನ್ ಉಲ್ಲಂಘಿಸಿ ಹೊಸ ಹೊಸ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡಲಾಯಿತು. ದೆಹಲಿ ಮುನ್ಸಿಪಲ್ ಕಾರ್ಪೊರೇಶನ್‌ನ ಅನುಮತಿ ಇಲ್ಲದೆ ಹೊಸ ಪರವಾನಗಿಗಳನ್ನು ನೀಡಲು ಸಾಧ್ಯವಿಲ್ಲ. ಹಗರಣ ನಡೆದ ಸಮಯದಲ್ಲಿ ದೆಹಲಿ ಮುನ್ಸಿಪಲ್ ಕಾರ್ಪೊರೇಶನ್‌ನಲ್ಲಿ ಬಿಜೆಪಿ ಆಡಳಿತವಿತ್ತು. ಜೊತೆಗೆ, ಅಷ್ಟೇನು ಮದ್ಯ ಮಾರಾಟ ನಡೆಯದಂಥ ಪ್ರದೇಶಗಳಲ್ಲಿಯೂ ಹೊಸ ಮದ್ಯದ ಅಂಗಡಿಗಳನ್ನು ತೆರೆಯಲು ಎಎಪಿ ನೇತೃತ್ವದ ದೆಹಲಿ ಸರ್ಕಾರಕ್ಕೆ ಬಿಜೆಪಿ ಅನುವು ಮಾಡಿಕೊಟ್ಟಿತು' ಎಂದು ದೇವೆಂದ್ರ ಯಾದವ್ ಆರೋಪಿಸಿದರು.

'ಇತರೆ ರಾಜ್ಯದ ರಾಜಕಾರಣಿಗಳ ನಂಟು'

'ಅಬಕಾರಿ ನೀತಿಯಲ್ಲಿ ಮೊದಲಿಗೆ 77 ಮದ್ಯ ವಿತರಕ ಕಂಪನಿಗಳಿದ್ದವು. ಇದನ್ನು 14ಕ್ಕೆ ಕಡಿತ ಮಾಡಲಾಯಿತು. ಎಲ್ಲ 14 ಕಂಪನಿಗಳಿಗೂ ಪರಸ್ಪರ ಸಂಬಂಧವಿದೆ. ಇವು ಎಎಪಿ ಸರ್ಕಾರದ ಜೊತೆಗೆ ಸಂಬಂಧ ಹೊಂದಿರುವ ದೇಶದ ಬೇರೆ ಬೇರೆ ಭಾಗಗಳ ರಾಜಕಾರಣಿಗಳು ಮತ್ತವರ ಕುಟುಂಬ ಸದಸ್ಯರ ಒಡೆತನದ ಕಂಪನಿಗಳಾಗಿವೆ' ಎಂದು ಸಂದೀಪ್ ದೀಕ್ಷಿತ್ ಹೇಳಿದರು.

ದಾಖಲೆ ಹಸ್ತಾಂತರಿಸಿ: ಕೋರ್ಟ್

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಆರೋಪ ಪಟ್ಟಿಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಆರೋಪಿಗಳಿಗೆ ಹಸ್ತಾಂತರಿಸಿ ಎಂದು ತನಿಖಾ ಸಂಸ್ಥೆಗೆ ದೆಹಲಿ ನ್ಯಾಯಾಲಯವೊಂದು ಬುಧವಾರ ಸೂಚಿಸಿದೆ.

ಹಗರಣ ಸಂಬಂಧ ಚಾರ್ಜ್‌ಶೀಟ್ ಸೇರಿದಂತೆ ವಿವಿಧ ದಾಖಲೆಗಳ ಬಗ್ಗೆ ನ್ಯಾಯಾಲಯವು ಸದ್ಯ ಪರಿಶೀಲನೆ ನಡೆಸುತ್ತಿದೆ. ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ, ಮುಂದಿನ ವಿಚಾರಣೆಯನ್ನು ಮಾ. 3ಕ್ಕೆ ನಿಗದಿ ಮಾಡಿದರು.

14 ಸಿಎಜಿ ವರದಿಗಳಿವೆ. ಈ ಎಲ್ಲವನ್ನೂ ಅಧಿವೇಶನದಲ್ಲಿ ಏಕೆ ಮಂಡಿಸಿಲ್ಲ. ಒಂದು ಸಿಎಜಿ ವರದಿಯನ್ನು ಮಾತ್ರವೇ ಬಿಜೆಪಿ ಸರ್ಕಾರ ಮಂಡಿಸಿದೆ

ದೇವೇಂದ್ರ ಯಾದವ್, ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ

ಬಂಧನ್ ಬ್ಯಾಂಕ್ ಲಿಮಿಟೆಡ್
CIN: L67190WB2014PLC204622
ನೋಂದಾಯಿತ ಕಛೇರಿ: DN 32, SEC-V, ಸಾಲ್ಟ್ ಲೇಕ್ ಸಿಟಿ, ಕೋಲ್ಕತ್ತಾ–700091
ದೂರವಾಣಿ: (033) 66090909, **ವೆಬ್‌ಸೈಟ್:** www.bandhanbank.com

ಸಾರ್ವಜನಿಕ ಪ್ರಕಟಣೆ

ಮಲ್ಲೇಶ್ವರಂ, ಕಲ್ಯಾಣ ನಗರ, ಚಂದ್ರಾ ಲೇಔಟ್, ಇಂದಿರಾನಗರ, ಎಂಜಿ ರೋಡ್, ಮೈಸೂರು, ಉಡುಪಿ ಶಾಖೆಗಳು

ಕೆಳಗೆ ತಿಳಿಸಲಾದ ವ್ಯಕ್ತಿ(ಗಳು) ('ಲಾಕರ್ ಬಾಡಿಗೆದಾರರು') ನಮ್ಮ ಬ್ಯಾಂಕಿನಿಂದ ಲಾಕರ್ ಸೌಲಭ್ಯಗಳನ್ನು ('ಲಾಕರ್‌ಗಳು') ಪಡೆದುಕೊಂಡಿದ್ದಾರೆ ಮತ್ತು ಲಾಕರ್‌ಗಳಿಗೆ ಅಗತ್ಯವಾದ ಬಾಡಿಗೆಯನ್ನು ಪಾವತಿಸಲು ವಿಫಲರಾಗಿದ್ದಾರೆ ಮತ್ತು ನಿರ್ಲಕ್ಷಿಸಿದ್ದಾರೆ ಮತ್ತು/ಅಥವಾ ಗಣನೀಯ ಸಮಯದವರೆಗೆ ಲಾಕರ್‌ಗಳನ್ನು ಕಾರ್ಯ ನಿರ್ವಹಿಸಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ:

ಕ್ರ. ಸಂ.	ಶಾಖೆಯ	ಲಾಕರ್ ಸಂಖ್ಯೆ.	1 ನೇ ಬಾಡಿಗೆದಾರರ ಹೆಸರು	2 ನೇ ಬಾಡಿಗೆದಾರರ ಹೆಸರು/ ಮಾಲೀಕರು/ನಿರ್ದೇಶಕರು/ ನಾಮನಿರ್ದೇಶಿತರು
1	ಚಂದ್ರಾ ಲೇಔಟ್	1751C01S01044	ಏಷ್ಯನ್ 3ಡಿ ಫ್ಲೋರಿಂಗ್ ಮತ್ತು 3ಡಿ ವಾಲ್‌ಪೇಪರ್ಸ್	ಕಾರ್ತಿಕ್ ಶೆಟ್ಟಿ
2	ಚಂದ್ರಾ ಲೇಔಟ್	1751C01S01006	ಲಿಂಗರಾಜು ಎಚ್ ಬಿ	NA
3	ಚಂದ್ರಾ ಲೇಔಟ್	1751C01S01050	ಜೈ ರಾಮದೇವ್ ಫ್ಯಾಶನ್	ಚಂಪಾ ಲಾಲ್
4	ಚಂದ್ರಾ ಲೇಔಟ್	1751C01S01027	ಪ್ರೀಮಿಯರ್ ಡಿಸ್ಟ್ರಿಬ್ಯೂಟರ್ಸ್	ರಮೇಶ್ ಜೈನ್ ಎಚ್ ಆರ್
5	ಚಂದ್ರಾ ಲೇಔಟ್	1751C01S01031	ಶ್ರೀ ನಾಕೋಡಾ ಎಂಟರ್‌ಪ್ರೈಸಸ್	ರಂಜಿತಾ ಜೈನ್
6	ಚಂದ್ರಾ ಲೇಔಟ್	1751C01S01045	ಶಶಿಧರ ಶೆಟ್ಟಿ	NA
7	ಇಂದಿರಾನಗರ	1609C01S01044	ಅರುಣ್ ಪ್ರಸಾದ್	ಶಕ್ತಿ ವಂದನಾ
8	ಇಂದಿರಾನಗರ	1609C01S01020	ನಿರ್ಮಲಾ ಜನಾರ್ಧನನ್	NA
9	ಇಂದಿರಾನಗರ	1609C01S01008	ಶಂಕರ್ ಎಸ್	NA
10	ಇಂದಿರಾನಗರ	1609C01S01015	ನ್ಯಾಟ್ ಅಸೋಸಿಯೇಟ್ಸ್	ಶಿವಲಿಂಗ ಎಚ್
11	ಇಂದಿರಾನಗರ	1609C01S01024	ಎಸ್‌ಎಸ್ ಆರ್ ಟ್ರೇಡರ್ಸ್	ಶ್ರೀನಾಥ ಎಚ್ ಎಂ
12	ಇಂದಿರಾನಗರ	1609C01S01026	ಗೌರವ್ ಬಬ್ಬರ್	NA
13	ಇಂದಿರಾನಗರ	1609C01S01028	ನರೋತ್ತಮ್ನ್ ಬೈರವೇಶ್ವರಪ್ರಸಾದ್ ನವ್ ಅರುಣ್	NA
14	ಇಂದಿರಾನಗರ	1609C01S01040	ಫ್ಯಾಬ್ರಿಕ್ ಡಿಸೈನಿಂಗ್ ಲೈಟ್	ದಿಲ್ವಾರ್ ಅಹ್ಮದ್ ಚೌಧರಿ
15	ಇಂದಿರಾನಗರ	1609C01S01042	ನರೋತ್ತಮ್ನ್ ಬೈರವೇಶ್ವರಪ್ರಸಾದ್ ನವ್ ಅರುಣ್	NA
16	ಇಂದಿರಾನಗರ	1609C01S01048	ಶಶಿಕುಮಾರ್ ಎಸ್ ಎ	NA
17	ಇಂದಿರಾನಗರ	1609C01S01016	ಸುವೆಂದು ಬೇಜ್ (ಮೃತರು)	ಲಿಪಿಕಾ ಬೇಜ್
18	ಇಂದಿರಾನಗರ	1609C01S01043	ಕರ್ನಾಟಕ ಹ್ಯಾಮ್ ಶಾಪ್	ವಿ ಎ ವೆಂಕಟೇಶ್
19	ಕಲ್ಯಾಣ್ ನಗರ	1864C01M01074	ಕ್ರಾ ಅಸೋಸಿಯೇಟ್ಸ್	ಚುನಾ ರಫಿ ಅಹಮದ್
20	ಮಲ್ಲೇಶ್ವರಂ	1750C01M01070	ದಿಸ್ಪಾ	ಪ್ರಶಾಂತ್ ದೇವ್ ಟಿ
21	ಮಲ್ಲೇಶ್ವರಂ	1750C01S01003	ಪ್ರತಿಭಾ ಎಚ್ ಪಿ	NA
22	ಮಲ್ಲೇಶ್ವರಂ	1750C01S01030	ಬಾಲರಾಜ್ ಪಿ	ಬಸವರಾಜಪ್ಪ ಪಿ
23	ಮಲ್ಲೇಶ್ವರಂ	1750C01S01021	ರಾಜೇಶ್ ಕಾಮತ್ ಎಚ್	NA
24	ಮಲ್ಲೇಶ್ವರಂ	1750C01S01044	ರಾಜೇಂದ್ರ ಕುಮಾರ್ ಎಸ್	NA
25	ಮಲ್ಲೇಶ್ವರಂ	1750C01S01005	ಬಿಸ್ಮಿಲ್ಲಾ ಸೈಕಲ್ ಮಾರ್ಟ್	ಇಮ್ರಾನಾ
26	ಮಲ್ಲೇಶ್ವರಂ	1750C01S01008	ರವಿ ಶಂಕರ ಎಸ್	NA
27	ಮಲ್ಲೇಶ್ವರಂ	1750C01S01016	ಚನ್ನಕೇಶವ ಗೌಡ ಸಿ ಕೆ	NA
28	ಮಲ್ಲೇಶ್ವರಂ	1750C01S01023	ಶ್ರೀ ಮಾರುತಿ ಪ್ಲಾಸ್ಟ್ ಇಂಡಿಯಾ	ಬಿ ಸರಣ್ಯಾ
29	ಮಲ್ಲೇಶ್ವರಂ	1750C01S01054	ಮಹಾಲಕ್ಷ್ಮಿ ಎಲೆಕ್ಟ್ರಿಕಲ್ಸ್	ರಾಮಲಾಲ್ ಚೌಧರಿ
30	ಮಲ್ಲೇಶ್ವರಂ	1750C01S01065	ನಕುಲ್	NA
31	ಮಲ್ಲೇಶ್ವರಂ	1750C01S01036	ತಿರುಮಲ ವಸ್ತ್ರಾಲಯ	ಅಮಿತ್ ಅಗರವಾಲ
32	ಎಂಜಿ ರೋಡ್	1866C01S01025	ವನ್ನೆ ಸಿಂಗ್	NA
33	ಎಂಜಿ ರೋಡ್	1866C01S01025	ಮದನ್ ಲಾಲ್	NA
34	ಮೈಸೂರು	1797C01S01056	ಸಚಿನ್ ಬಿ	NA
35	ಮೈಸೂರು	1797C01L01073	ವಿಕ್ರಮ್ ಮುತ್ತಣ್ಣ ಪುಟ್ಟಿಚಂದ	NA
36	ಮೈಸೂರು	1797C01S01027	ಪವನ್ ಕುಮಾರ್	NA
37	ಮೈಸೂರು	1797C01S01005	ಎನ್ ವಿನಾಯಕ	NA
38	ಉಡುಪಿ	1800C01S01020	ಪೃಥ್ವಿ ಎಲೆಕ್ಟ್ರಾನಿಕ್ಸ್	ರವಿ
39	ಉಡುಪಿ	1800C01S01037	ಮೊಹಮ್ಮದ್ ಅಕ್ರಮ್	NA

ಪತ್ರಗಳು/ ಸಂದೇಶಗಳು/ ಇಮೇಲ್‌ಗಳು/ ಕರೆಗಳ ಮೂಲಕ ಸಂವಹನ ನಡೆಸಲು ಹಲವಾರು ಪ್ರಯತ್ನಗಳ ಹೊರತಾಗಿಯೂ, ಈ ಲಾಕರ್ ಬಾಡಿಗೆದಾರರಿಂದ ಬ್ಯಾಂಕ್‌ಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಅಂತೆಯೇ, ಈ ಸಾರ್ವಜನಿಕ ಸೂಚನೆಯ ಮೂಲಕ, ಈ ಸೂಚನೆ ನೀಡಿದ ದಿನಾಂಕದಿಂದ 90 (ತೊಂಬತ್ತು) ದಿನಗಳೊಳಗೆ, ಲಾಕರ್ ಬಾಡಿಗೆದಾರರು ಬ್ಯಾಂಕಿನ ಆಯಾ ಶಾಖೆಯಲ್ಲಿ ಬಾಡಿಗೆ ಬಾಕಿಗಳನ್ನು ಪಾವತಿಸಲು ವಿಫಲರಾಗಿದ್ದಲ್ಲಿ, ಲಾಕರ್‌ಗಳನ್ನು ಒಡೆಯುವುದು ಸೇರಿದಂತೆ ಲಾಕರ್ ಬಾಡಿಗೆದಾರ(ರು) ಮತ್ತು ಬ್ಯಾಂಕ್ ನಡುವಿನ ಒಪ್ಪಂದದ ಪ್ರಕಾರ (ಒಪ್ಪಂದ') ಸೂಕ್ತ ಕ್ರಮಗಳನ್ನು ಪ್ರಾರಂಭಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ ಎಂದು ಬ್ಯಾಂಕ್ ತಿಳಿಸುತ್ತದೆ.

ಲಾಕರ್‌ಗಳನ್ನು ಒಡೆದು ತೆರೆಯಬೇಕಾದ ಸಂದರ್ಭದಲ್ಲಿ, ಲಾಕರ್‌ಗಳಲ್ಲಿರುವ ವಸ್ತುಗಳಿಗೆ ಯಾವುದೇ ಹಾನಿ/ನಷ್ಟ ಸೇರಿದಂತೆ, ಲಾಕರ್ ಬಾಡಿಗೆದಾರರಿಂದ ಉಂಟಾಗುವ ಯಾವುದೇ ವೆಚ್ಚ, ನಷ್ಟ ಅಥವಾ ಹೊಣೆಗಾರಿಕೆಗೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ.

ಲಾಕರ್‌ಗಳನ್ನು ಒಡೆದರೆ ಬ್ಯಾಂಕ್‌ಗೆ ಆಗಬಹುದಾದ ಯಾವುದೇ ಇತರ ವೆಚ್ಚಗಳ ಜೊತೆಗೆ ಬಾಡಿಗೆ ಬಾಕಿಗಳನ್ನು ಪಾವತಿಸಲು ಲಾಕರ್ ಬಾಡಿಗೆದಾರರು ಜವಾಬ್ದಾರರಾಗಿರುತ್ತಾರೆ. ಲಾಕರ್ ಬಾಡಿಗೆದಾರರ ವೆಚ್ಚ, ಹೊಣೆಗಾರಿಕೆ ಮತ್ತು ಮುಂದಿನ ಪರಿಣಾಮಗಳಲ್ಲಿ ಲಾಕರ್ ಬಾಡಿಗೆದಾರರಿಂದ ತನ್ನ ಬಾಕಿಗಳನ್ನು ಮರುಪಡೆಯಲು ಒಪ್ಪಂದ ಮತ್ತು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಬ್ಯಾಂಕ್ ತನ್ನ ಹಕ್ಕುಗಳನ್ನು ಕಾಯ್ದಿರಿಸುತ್ತದೆ.

ದಿನಾಂಕ: ಜನವರಿ 21, 2025
ಸ್ಥಳ: ಕರ್ನಾಟಕ ಮತ್ತು ತೆಲಂಗಾಣ

ಬಂಧನ್ ಬ್ಯಾಂಕ್ ಲಿಮಿಟೆಡ್
ವಲಯ ಮುಖ್ಯಸ್ಥರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಕಾಲಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರೀ ಅಲಂಕಾರವಷ್ಟೆ.

-ಕೆ.ಎಸ್.ನಿಸಾರ್ ಅಹಮದ್

ಕುಲಪತಿ ನೇಮಕದಲ್ಲಿ ವಿಳಂಬ ಶೈಕ್ಷಣಿಕ ಚಟುವಟಿಕೆಗೆ ಪೆಟ್ಟು

ರಾಜ್ಯ ಸರ್ಕಾರದ ಅಧೀನದ ಆರು ವಿಶ್ವವಿದ್ಯಾಲಯಗಳು ನಾಯಕತ್ವ ಇಲ್ಲದೆ ಸೊರಗುತ್ತಿವೆ. ಅಂದರೆ, ಈ ವಿಶ್ವವಿದ್ಯಾಲಯಗಳಲ್ಲಿ ಪೂರ್ಣಾವಧಿ ಕುಲಪತಿ ಇಲ್ಲದೆ ಹಲವು ತಿಂಗಳು ಸಂದಿವೆ. ಇದು ಸರ್ಕಾರದ ಉದಾಸೀನ ಧೋರಣೆಯನ್ನು ತೋರಿಸುತ್ತಿದೆ. ಆರು ವಿಶ್ವವಿದ್ಯಾಲಯಗಳಲ್ಲಿ ಪೂರ್ಣಾವಧಿ ಕುಲಪತಿ ಇಲ್ಲದ ಕಾರಣಕ್ಕೆ ಅಲ್ಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ, ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಮತ್ತು ರಾಯಚೂರು ವಿಶ್ವವಿದ್ಯಾಲಯದಲ್ಲಿ ಈ ಸಮಸ್ಯೆ ಉಂಟಾಗಿದೆ. ಈ ವಿಶ್ವವಿದ್ಯಾಲಯಗಳಲ್ಲಿ ವಿವಿಧ ನಿಕಾಯಗಳ ಹಿರಿಯರಿಗೆ ಹಂಗಾಮಿ ಕುಲಪತಿ ಹೊಣೆ ವಹಿಸಲಾಗಿದೆ. ಆದರೆ ಅವರ ನೇಮಕ ತಾತ್ಕಾಲಿಕ ಆಗಿರುವ ಕಾರಣದಿಂದಾಗಿ ನಿರ್ಧಾರಗಳನ್ನು ಕೈಗೊಳ್ಳುವುದು ಕಷ್ಟವಾಗುತ್ತಿದೆ. ಪೂರ್ಣಾವಧಿ ಕುಲಪತಿಗೆ ಇರುವ ಅಧಿಕಾರ ಇವರಿಗೆ ಇಲ್ಲವಾದ ಕಾರಣದಿಂದಾಗಿ ಅವರು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಉನ್ನತ ಶಿಕ್ಷಣದ ಭವಿಷ್ಯ ಚೆನ್ನಾಗಿರಬೇಕು ಎಂದಾದರೆ, ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಮರ್ಥ ನಾಯಕತ್ವ ಇರಬೇಕು ಎಂಬ ಅರಿವು ಸರ್ಕಾರಕ್ಕೆ ಇರಬೇಕು

ಹೀಗಾಗಿ, ಶೈಕ್ಷಣಿಕ ಕಾರ್ಯಕ್ರಮಗಳು ವಿಳಂಬ ಆಗುತ್ತಿವೆ, ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿವೆ, ನಿರ್ಧಾರ ಕೈಗೊಳ್ಳದೇ ಇರುವುದರಿಂದಾಗಿ ನಿತ್ಯದ ಚಟುವಟಿಕೆಗಳಿಗೆ ಅಡಚಣೆ ಉಂಟಾಗಿದೆ. ದೀರ್ಘಾವಧಿಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಅಗತ್ಯ ಅಧಿಕಾರ ಇಲ್ಲದಿರುವುದರಿಂದಾಗಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಅನಿಶ್ಚಿತ ಸ್ಥಿತಿಗೆ ಸಿಲುಕಿದ್ದಾರೆ. ಇದರಿಂದಾಗಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಉಂಟಾಗುತ್ತದೆ.

ಪೂರ್ಣಾವಧಿ ಕುಲಪತಿಗಳ ನೇಮಕಕ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ನೀಡಿರುವ ಭರವಸೆಯು ಅಲ್ಪ ಸಮಾಧಾನವನ್ನಷ್ಟೇ ನೀಡುತ್ತದೆ. ಏಕೆಂದರೆ ನೇಮಕದಲ್ಲಿ ಆಗಿರುವ ವಿಳಂಬವೇ ಕಳವಳ ಮೂಡಿಸುವಂತಿದೆ. ಕುಲಪತಿ ನಿವೃತ್ತಿ ಆಗುವುದು ಯಾವಾಗ ಎಂಬುದು ಸಂಬಂಧಪಟ್ಟವರಿಗೆ ಮೊದಲೇ ಗೊತ್ತಿರುತ್ತದೆ. ಹೀಗಿದ್ದರೂ ಹೊಸ ಕುಲಪತಿ ನೇಮಕಕ್ಕೆ ಅಗತ್ಯವಿರುವ ಶೋಧನಾ ಸಮಿತಿಯನ್ನು ರಚಿಸಲು ಸರ್ಕಾರ ವಿಫಲವಾಗಿದ್ದುದು ಈಗಿನ ಸಮಸ್ಯೆಗೆ ಕಾರಣ. ಶೋಧನಾ ಸಮಿತಿಯಲ್ಲಿ ಸರ್ಕಾರ, ರಾಜ್ಯಪಾಲ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಪ್ರತಿನಿಧಿಗಳು ಇರುತ್ತಾರೆ. ಎಲ್ಲವೂ ಸರಿಯಾಗಿ ನಡೆದರೆ, ಕುಲಪತಿಯೊಬ್ಬರ ಅಧಿಕಾರ ಅವಧಿ ಪೂರ್ಣಗೊಳ್ಳುವ ಮೊದಲೇ ಶೋಧನಾ ಸಮಿತಿಯ ಕೆಲಸಗಳು ಪೂರ್ಣಗೊಂಡಿರಬೇಕು. ಆಗ ಹೊಸ ಕುಲಪತಿಯ ನೇಮಕ ಹಾಗೂ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಸುಗಮವಾಗಿ ನಡೆಯುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ವಿಳಂಬ ಆದಾಗ, ವಿಶ್ವವಿದ್ಯಾಲಯಗಳಿಗೆ ಬಹುಕಾಲದವರೆಗೆ ನಾಯಕ ಇಲ್ಲದಂತೆ ಆಗುತ್ತದೆ. ಇದರ ಜೊತೆಗೆ ಕುಲಪತಿ ನೇಮಕದಲ್ಲಿ ಪ್ರತಿಭೆಯನ್ನು ಮಾನದಂಡವಾಗಿ ಇರಿಸಿಕೊಳ್ಳುವ ಬದಲು ವ್ಯಕ್ತಿಗಳ ರಾಜಕೀಯ ಒಲವು, ಜಾತಿ, ಪ್ರಭಾವ, ಹಣ ಮತ್ತು ಇತರ ಅಂಶಗಳನ್ನು ಪರಿಗಣಿಸಲಾಗುತ್ತದೆ, ನಾಯಕತ್ವದ ಗುಣ ಹಾಗೂ ಶೈಕ್ಷಣಿಕ ಅರ್ಹತೆಗಳಿಗಿಂತ ಇವೇ ಹೆಚ್ಚು ಪರಿಗಣಿತವಾಗುತ್ತವೆ ಎಂಬ ಆರೋಪಗಳು ಇವೆ. ಇದರಿಂದಾಗಿ ನೇಮಕ ಪ್ರಕ್ರಿಯೆಯ ಬಗ್ಗೆ ಅನುಮಾನ ಮೂಡುವಂತಾಗುತ್ತದೆ. ವಿಶ್ವವಿದ್ಯಾಲಯಗಳ ಭವಿಷ್ಯ ಹಾಳಾಗುತ್ತದೆ. ಕುಲಪತಿಗಳ ನೇಮಕವು ಅರ್ಹತೆ ಮತ್ತು ಸಾಮರ್ಥ್ಯವನ್ನು ಆಧರಿಸಿಯೇ ಆಗಬೇಕು. ಈ ಪ್ರಕ್ರಿಯೆಯಲ್ಲಿ ವೈಯಕ್ತಿಕ ಹಾಗೂ ರಾಜಕೀಯ ಕಾರ್ಯಸೂಚಿಗಳು ಕೆಲಸ ಮಾಡಬಾರದು.

ಕರ್ನಾಟಕದ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯಂತಹ ಸಮಸ್ಯೆಗಳನ್ನು ಈಗಾಗಲೇ ಎದುರಿಸುತ್ತಿವೆ. ಹೀಗಾಗಿ, ಸಮಸ್ಯೆಗಳು ಇನ್ನಷ್ಟು ಹೆಚ್ಚಾಗದಂತೆ ನೋಡಿಕೊಳ್ಳಲು ಸರ್ಕಾರವು ಮುಂದಡಿ ಇರಿಸಬೇಕು, ಕುಲಪತಿ ಹುದ್ದೆಗೆ ಅರ್ಹರನ್ನು ತ್ವರಿತವಾಗಿ ನೇಮಕ ಮಾಡಬೇಕು. ಮುಂದಿನ ದಿನಗಳಲ್ಲಿ ಶೋಧನಾ ಸಮಿತಿಯನ್ನು ಸಕಾಲದಲ್ಲಿ ರಚಿಸಬೇಕು. ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಸೂಕ್ತ ವ್ಯಕ್ತಿಯು ಸಮಯಕ್ಕೆ ಸರಿಯಾಗಿ ನೇಮಕ ಆಗುವಂತೆ ಮಾಡಬೇಕು. ಪೂರ್ಣಾವಧಿಯ ಹಾಗೂ ಸಮರ್ಥವಾದ ಕುಲಪತಿ ಇಲ್ಲದೇ ಇದ್ದರೆ ವಿಶ್ವವಿದ್ಯಾಲಯಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಇದರಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಸೊರಗುತ್ತವೆ ಎಂಬುದು ಆಳುವ ವರ್ಗಕ್ಕೆ ತಿಳಿದಿರಬೇಕು. ಉನ್ನತ ಶಿಕ್ಷಣದ ಭವಿಷ್ಯವು ಚೆನ್ನಾಗಿರಬೇಕು ಎಂದಾದರೆ, ಸಮರ್ಥ ನಾಯಕತ್ವವು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಇರಬೇಕು ಎಂಬುದು ಸರ್ಕಾರದ ಅರಿವಿಗೆ ಬರಬೇಕು. ವಿಶ್ವವಿದ್ಯಾಲಯಗಳ ಕುಲಾಧಿಪತಿ ಕೂಡ ಆಗಿರುವ ರಾಜ್ಯಪಾಲರು ಈ ವಿಚಾರದಲ್ಲಿ ಮೌನವಾಗಿ ಇರುವುದು ಆಶ್ಚರ್ಯ ಮೂಡಿಸುವಂತೆ ಇದೆ.

ರಾಜ್ಯದ ಸಾಲದ ಪ್ರಮಾಣವೂ ಏರಿಕೆ, ಶಾಸಕರ ಆಸ್ತಿಯೂ ಗಣನೀಯ ಏರಿಕೆ

ಬಡ ಸರ್ಕಾರ, ಶ್ರೀಮಂತ ರಾಜಕಾರಣಿಗಳು!



ಅನುಸಂಧಾನ

ರವೀಂದ್ರ ಭಟ್ಟ

ಆಚಾರ್ಯ ರಜನೀಶ್ ಅವರದ್ದು ಎಂದು ಹೇಳಲಾದ ವಿಡಿಯೊ ತುಣುಕೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರಲ್ಲಿ ರಜನೀಶ್ ಅವರು ಮಹಾತ್ಮ ಗಾಂಧಿ ಅವರನ್ನು ಗೇಲಿ ಮಾಡಿದ್ದಾರೆ. ಗಾಂಧಿಯವರು ಸಾಧಾರಣವಾಗಿ ರೈಲ್ವೆಯ ಮೂರನೇ ದರ್ಜೆ ಬೋಗಿಯಲ್ಲಿಯೇ ಪ್ರಯಾಣ ಬೆಳೆಸುತ್ತಿದ್ದರು. 60–70 ಮಂದಿ ಪ್ರಯಾಣ ಮಾಡುವ ಮೂರನೇ ದರ್ಜೆಯ ಒಂದು ಬೋಗಿಯನ್ನು ಗಾಂಧಿ ಅವರಿಗಾಗಿಯೇ ಮೀಸಲಿಡಲಾಗುತ್ತಿತ್ತು ಎಂದು ಆರೋಪಿಸುವ ರಜನೀಶ್ ‘ಗಾಂಧೀಜಿ ಅವರ ಬಡವರ ಮೇಲಿನ ಪ್ರೀತಿ ಅತಿ ದುಬಾರಿ’ ಎಂದು ಟೀಕಿಸುತ್ತಾರೆ. ಗಾಂಧಿ ಅವರ ಬಡವರ ಮೇಲಿನ ಪ್ರೀತಿ ದುಬಾರಿ ಹೌದೋ ಅಲ್ಲವೋ ಎನ್ನುವುದು ಭಾರತೀಯರಿಗೆಲ್ಲಾ ಗೊತ್ತಿದೆ. ಆದರೆ ನಮ್ಮ ರಾಜಕಾರಣಿಗಳ ಬಡವರ ಮೇಲಿನ ಪ್ರೀತಿ ಮತ್ತು ಪ್ರಾಮಾಣಿಕತನ ರಾಜ್ಯಕ್ಕೆ ದುಬಾರಿಯಾಗಿರುವುದು ಹೌದು.

ಕೆಲವು ವರ್ಷಗಳ ಹಿಂದೆ ಮಾಜಿ ಮುಖ್ಯಮಂತ್ರಿಯೊಬ್ಬರು ಖಾಸಗಿ ಮಾತುಕತೆಯಲ್ಲಿ ಒಂದು ಮಾತು ಹೇಳಿದ್ದರು. ಅವರ ಮಾತು ಹೀಗಿದೆ: ‘ಅತ್ಯಂತ ಪ್ರಾಮಾಣಿಕ ಮುಖ್ಯಮಂತ್ರಿ, ಹಣ ಹೊಡೆಯಲು ಯಾವುದೇ ಯೋಜನೆ ರೂಪಿಸದವರು, ಹಣಕ್ಕಾಗಿ ಯಾರ ಮೇಲೂ ಒತ್ತಡ ಹೇರದವರು ಮನೆಗೆ ಬಂದ ಹಣವನ್ನು ಹಾಗೆಯೇ ಇಟ್ಟುಕೊಂಡರೂ ವರ್ಷಕ್ಕೆ ಎರಡು ಸಾವಿರ ಕೋಟಿ ರೂಪಾಯಿ ಗಳಿಸಬಹುದು’. ವರ್ಷಕ್ಕೆ ₹ 2 ಸಾವಿರ ಕೋಟಿ ಅಂದರೆ ಐದು ವರ್ಷಕ್ಕೆ ಸುಮ್ಮನೆ ₹ 10 ಸಾವಿರ ಕೋಟಿ ಬಂದು ಬೀಳುತ್ತದೆ ಎಂದಾಯಿತು. ಅಲ್ಲಿಗೆ ಮುಖ್ಯಮಂತ್ರಿಯೊಬ್ಬನ ‘ಪ್ರಾಮಾಣಿಕತೆ’ ಎಷ್ಟು ದುಬಾರಿ ಎಂದು ಯೋಚಿಸಿ. ಜೊತೆಗೆ 34 ಮಂದಿ ಮಂತ್ರಿಗಳೂ ‘ಪ್ರಾಮಾಣಿಕರು’ ಎಂದುಕೊಂಡರೂ ವರ್ಷಕ್ಕೆ ಕನಿಷ್ಠ ಎಷ್ಟು ಗಳಿಸಬಹುದು ಎಂದು ಊಹಿಸಿ.

ಕರ್ನಾಟಕ ರಾಜ್ಯ ವಿಧಾನಸಭೆಯ ಈಗಿನ 224 ಶಾಸಕರ ಪೈಕಿ ಶೇ 97ರಷ್ಟು ಮಂದಿ ಕೋಟ್ಯಧಿಪತಿಗಳು. ಈಗಿರುವ ಶಾಸಕರ ಸರಾಸರಿ ಆಸ್ತಿ ₹ 64.39 ಕೋಟಿ. ಕಳೆದ ವಿಧಾನಸಭೆಯಲ್ಲಿ ಶಾಸಕರ ಸರಾಸರಿ ಆಸ್ತಿ ₹ 34.59 ಕೋಟಿಯಷ್ಟು ಇತ್ತು. ಅಂದರೆ ಐದು ವರ್ಷದಲ್ಲಿ ಶಾಸಕರ ಆಸ್ತಿ ಸರಿಸುಮಾರು ದುಪ್ಪಟ್ಟಾಗಿದೆ. ಸರ್ಕಾರದ ಸಾಲದ ಪ್ರಮಾಣವೂ ಹಾಗೆಯೇ ಬೆಳೆದಿದೆ. ನೆನಪಿಡಿ, ದೇಶದಲ್ಲಿಯೇ ಅತ್ಯಂತ ಹೆಚ್ಚು ಆಸ್ತಿಯನ್ನು ಹೊಂದಿದ ಶಾಸಕರ ಸಾಲಿನಲ್ಲಿ ಕರ್ನಾಟಕದ ಶಾಸಕರಿಗೇ ಮೊದಲ ಸ್ಥಾನ ಇದೆ. ಸರ್ಕಾರ ಬಡವಾಗುತ್ತಿದೆ, ರಾಜಕಾರಣಿಗಳು ಶ್ರೀಮಂತರಾಗುತ್ತಿದ್ದಾರೆ. ಇದರ ಮ್ಯಾಜಿಕ್ ಏನಿರಬಹುದು?

ಅಧಿಕಾರದಲ್ಲಿ ಇರುವವರಿಗೆ ಹಣ ಮಾಡುವುದು ಸುಲಭ. ಸರ್ಕಾರದ ಯೋಜನೆಗಳ ಒಳಮಾಹಿತಿಗಳನ್ನು ಮೊದಲೇ ಪಡೆದುಕೊಂಡು, ಹಣ ಮಾಡಿಕೊಳ್ಳುವ ದಾರಿಗಳನ್ನು ಅವರೇ ಸೃಷ್ಟಿಸಿಕೊಳ್ಳುತ್ತಾರೆ. ಉದಾಹರಣೆಗೆ, ಬೆಂಗಳೂರಿಗೆ ಎರಡನೇ ವಿಮಾನ ನಿಲ್ದಾಣ ಯೋಜನೆಯನ್ನೇ ನೋಡಿ. ಕೆಲವರು ಅದು ಬಿಡದಿ ಬಳಿ ಬರುತ್ತದೆ ಎನ್ನುತ್ತಾರೆ. ಇನ್ನು ಕೆಲವರು ನೆಲಮಂಗಲದ ಬಳಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸಲಾಗುವುದು ಎನ್ನುತ್ತಾರೆ. ಅಧಿಕಾರದಲ್ಲಿ ಇರುವವರಿಗೆ ವಿಮಾನ ನಿಲ್ದಾಣ ಎಲ್ಲಿ ಬರುತ್ತದೆ ಎನ್ನುವುದು ಮೊದಲೇ ಗೊತ್ತಾಗುತ್ತದೆ. ಆ ಪ್ರದೇಶದ ಭೂಮಿ ಬೆಲೆ ಗಗನಮುಖಿಯಾಗುತ್ತದೆ. ಅಧಿಕಾರಿಗಳು, ರಾಜಕಾರಣಿಗಳು ಬೇನಾಮಿಯಾಗಿ ಅಲ್ಲಿ ಭೂಮಿ ಖರೀದಿ ಮಾಡುತ್ತಾರೆ. ಅದೇ ಭೂಮಿಯನ್ನು ಸರ್ಕಾರಕ್ಕೇ ಮಾರಾಟ ಮಾಡಿ ಹಣ ಗಳಿಸುತ್ತಾರೆ. ಸರ್ಕಾರಕ್ಕೆ ಮಾರದೇ ಇದ್ದರೂ ಭೂಮಿಯ ಬೆಲೆ ಹಲವು ಪಟ್ಟು ಹೆಚ್ಚಾಗುವುದ ರಿಂದ ವರ್ಷದೊಳಗೇ ಅಪಾರ ಲಾಭವಂತೂ ಗ್ಯಾರಂಟಿ.

ಈಗ ಒಂದು ನಗರದಲ್ಲಿ ವರ್ತುಲ ರಸ್ತೆ ನಿರ್ಮಾಣವಾಗುತ್ತಿದೆ ಎಂದುಕೊಳ್ಳಿ. ರಸ್ತೆಗೆ ಭೂಮಿ ವಶಪಡಿಸಿಕೊಳ್ಳುವುದು ಸರಿ. ಆ ರಸ್ತೆಯ ಅಕ್ಕಪಕ್ಕದ ಭೂಮಿಯನ್ನೂ ವಶಪಡಿಸಿಕೊಳ್ಳಲಾಗುತ್ತದೆ ಎಂದು ಇಲಾಖೆಯೊಳಗೇ ಒಂದು ಅಧಿಸೂಚನೆ ಹೊರಬೀಳುತ್ತದೆ. ಇದು ಸಾರ್ವಜನಿಕ ಅಧಿಸೂಚನೆ ಅಲ್ಲ. ಇಲಾಖೆಯ ಒಳಗೇ ಮಾಡಿಕೊಂಡಿದ್ದು. ಆದರೂ ಅದು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತದೆ. ವರ್ತುಲ ರಸ್ತೆ ಬರುತ್ತದೆ ಎಂದು ಗೊತ್ತಾದಾಗಲೇ ಅದರ ಸುತ್ತಮುತ್ತ ಭೂಮಿಯ ಬೆಲೆ ಗಗನಕ್ಕೆ ಏರಿರುತ್ತದೆ. ಜೊತೆಗೆ ಈ ಅಧಿಸೂಚನೆಯಿಂದ ಬೆದರಿದ ಭೂಮಾಲೀಕರು ಅಧಿಸೂಚನೆಯನ್ನು ಕೈಬಿಡುವಂತೆ ರಾಜಕಾರಣಿಗಳ ಬಳಿಗೆ ಧಾವಿಸುತ್ತಾರೆ. ವ್ಯವಹಾರ ಕುದುರುತ್ತದೆ. ರಾಜಕಾರಣಿಗಳು ಅನಾಯಾಸವಾಗಿ ಹಣ ಗಳಿಸುತ್ತಾರೆ.

ನೀರಾವರಿ ಯೋಜನೆ, ಕೈಗಾರಿಕೆಗಳ ಸ್ಥಾಪನೆ, ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆಗಳ ನಿರ್ಮಾಣ ಮುಂತಾದ ಯೋಜನೆಗಳಲ್ಲಿಯೂ ಇದೇ ರೀತಿ ಭೂಮಿಯ ದುರ್ಬಳಕೆಯಾಗುತ್ತದೆ. ಅಧಿಸೂಚನೆ ಹೊರಡಿಸಲು, ಅಧಿಸೂಚನೆ ವಾಪಸು ಪಡೆಯಲೂ ಹಣದ ಚಲಾವಣೆ ನಡೆಯುತ್ತದೆ. ಯಾವುದೇ ಯೋಜನೆ ಬಂದರೂ ಅದರಿಂದ ಜನರಿಗೆ ಅನುಕೂಲವಾಗುತ್ತದೋ ಇಲ್ಲವೋ ಗೊತ್ತಿಲ್ಲ, ಆದರೆ ರಾಜಕಾರಣಿಗಳಿಗೆ ಮಾತ್ರ ಒಳಿತಾಗುತ್ತದೆ. ಒಳಿತಾಗದೇ ಇದ್ದರೆ ಅದನ್ನು ಒಳಿತಾಗುವಂತೆ ಮಾಡಿಕೊಳ್ಳುವುದು ಹೇಗೆ ಎಂಬ ಕಲೆಗಾರಿಕೆ ರಾಜಕಾರಣಿಗಳಿಗೆ ಗೊತ್ತಿರುತ್ತದೆ.

ಯೋಜನೆಗಳ ಜಾರಿಗೆ ಬೇನಾಮಿ ಗುತ್ತಿಗೆದಾರರಾಗಿಯೂ ಕೆಲವು ರಾಜಕಾರಣಿಗಳು ಕೆಲಸ ಮಾಡುತ್ತಾರೆ. ಸಾಮಗ್ರಿ ಖರೀದಿಯಲ್ಲಿಯೂ ಹಣ ಮಾಡುತ್ತಾರೆ. ಮೊದಲೆಲ್ಲಾ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ ಕಮಿಷನ್ ಪಡೆಯುವ ಪದ್ಧತಿ ಇತ್ತು. ಈಗ ಕೆಲವು ವರ್ಷಗಳಿಂದ ಕಾಮಗಾರಿಗೆ ಆದೇಶ ಹೊರಡಿಸುವಾಗಲೇ ಕಮಿಷನ್ ಪಡೆಯುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ರಾಜಕಾರಣಿಗಳು ಎಷ್ಟು ಸೃಜನಶೀಲರಾಗಿದ್ದಾರೆಂದರೆ ಎಲ್ಲವೂ ಕಾನೂನುಬದ್ಧವಾಗಿಯೇ ನಡೆಯುತ್ತವೆ ಮತ್ತು ಇದರಲ್ಲಿ ಆ ಪಕ್ಷ ಈ ಪಕ್ಷ ಎಂಬ ಭೇದಭಾವ ಇಲ್ಲ. ಈ ವಿಚಾರದಲ್ಲಿ ಎಲ್ಲರೂ ಒಂದು. ಅವರ ಕಿಸೆಯಲ್ಲಿ ಇವರ ಕೈ ಇವರ ಕಿಸೆಯಲ್ಲಿ ಅವರ ಕೈ ಇದ್ದೇ ಇರುತ್ತದೆ.

ಇನ್ನು ವರ್ಗಾವಣೆ ಮತ್ತು ನೇಮಕಾತಿ ಕತೆ ಬೇರೆಯದೇ ಇದೆ. ಸಾಮೂಹಿಕ ವರ್ಗಾವಣೆಯದ್ದು ಒಂದು ಕತೆಯಾದರೆ ವರ್ಷಪೂರ್ತಿ ನಡೆಯುವ ವರ್ಗಾವಣೆಯದ್ದು ಇನ್ನೊಂದು ಕತೆ. ವರ್ಗ ಮಾಡಿಸಿಕೊಳ್ಳಲೂ ಹಣ, ವರ್ಗ ರದ್ದು ಮಾಡಿಸಲೂ ಹಣ. ಆರ್‌ಟಿಒ, ಸಬ್ ರಿಜಿಸ್ಟ್ರಾರ್, ಪೊಲೀಸ್ ಇನ್‌ಸ್ಪೆಕ್ಟರ್ ಮುಂತಾದ ಹುದ್ದೆಗಳ ವರ್ಗಾವರ್ಗಿಗೆ ಹಣವೋ ಹಣ. ಈಗಿನ ಟ್ರೆಂಡ್ ಏನೆಂದರೆ, ವರ್ಗ ಮಾಡಲು ಅಥವಾ ವರ್ಗ ರದ್ದು ಮಾಡಲು ಹಣ ಕೊಡುವುದಲ್ಲದೆ ನಿಯಮಿತವಾಗಿ ಇಂತಿಷ್ಟು ಕೊಡಬೇಕು ಎಂಬ ಷರತ್ತೂ ಸೇರಿಕೊಂಡಿದೆ. ಬಡ್ತಿ ಯಾರಿಗೆ ಬೇಡ ಹೇಳಿ? ಆದರೆ ಆರ್‌ಟಿಒ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬಡ್ತಿ ನೀಡದೇ ಇರಲು ಹಣ ಕೊಡುವ ಪದ್ಧತಿಯೂ ಇದೆ! ಮೇಲಿನ ಹುದ್ದೆಗಿಂತ ಇರುವ ಹುದ್ದೆಯೇ ಹೆಚ್ಚು ‘ಲಾಭದಾಯಕ’ ಎಂಬ ಕಾರಣ ಇದರ ಹಿಂದೆ ಇರುತ್ತದೆ. ಹಣ ಇಲ್ಲದೆ ಯಾವುದೇ ನೇಮಕಾತಿ ನಡೆಯುವ ಪರಿಸ್ಥಿತಿಯೇ ಇಲ್ಲ. ಕೆಪಿಎಸ್‌ಸಿಯಾದರೂ ಪರೀಕ್ಷೆ ನಡೆಸಲಿ, ಪರೀಕ್ಷಾ ಪ್ರಾಧಿಕಾರವಾದರೂ ಪರೀಕ್ಷೆ ನಡೆಸಲಿ ಅಥವಾ ನೇರ ನೇಮಕಾತಿಯೇ ಆಗಿರಲಿ, ಎಲ್ಲ ಕಡೆಯೂ ಝಣ ಝಣ ಕಾಂಚಾಣದ್ದೇ ಕಾರುಬಾರು.

ಅಧಿಕಾರ ನಡೆಸಿದ ಅಧಿಕಾರಿಯೇ ಆಗಲಿ, ರಾಜಕಾರಣಿಯೇ ಆಗಲಿ ಬಡವರಾದ ಉದಾಹರಣೆಗಳು ಇಲ್ಲ. ಅಧಿಕಾರಿಗಳು ನೇಮಕಾತಿ ಸಂದರ್ಭದಲ್ಲಿ ಬಂಡವಾಳ ಹೂಡಿದರೆ ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಬಂಡವಾಳ ಹೂಡುತ್ತಾರೆ. ಚುನಾವಣೆಗಾಗಿ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡುವ ರಾಜಕಾರಣಿಗಳ ಆಸ್ತಿ ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಹೆಚ್ಚಾಗುತ್ತದೆಯೇ ವಿನಾ ಕರಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಇದೊಂದು ಪವಾಡ. ಈ ಪವಾಡದಲ್ಲಿ ಪ್ರಜೆಗಳಿಗೆ ಪಾಲಿಲ್ಲ. ಪ್ರಜಾಪ್ರಭುತ್ವವೂ ಬಡವಾಗುತ್ತಿದೆ, ರಾಜ್ಯವೂ ಬಡವಾಗುತ್ತಿದೆ, ಪ್ರಜೆಗಳೂ ಬಡವರಾಗುತ್ತಿದ್ದಾರೆ, ಇದರಿಂದ ಹೊರಬರಬೇಕು ಎಂದರೆ ಇನ್ನು ಮುಂದೆ ಬಡವರನ್ನೇ ಅಧಿಕಾರದ ಗದ್ದುಗೆಯಲ್ಲಿ ಕುಳ್ಳಿರಿಸಬೇಕು.

ಚುರುಮುರಿ



ಪೊಲಿಟಿಕಲ್ ಕ್ರಿಕೆಟ್!

• ಗುರು ಪಿ.ಎಸ್.

‘ಅಬ್ಬಾ, ಕೊನೆಗೂ ವಿರಾಟ್ ಕೊಹ್ಲಿ ಫಾರ್ಮ್‌ಗೆ ಬಂದ’ ಇಂಡಿಯಾ–ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ನೋಡುತ್ತಾ ಖುಷಿಯಿಂದ ಹೇಳಿದೆ.

‘ಅವನು ಫಾರ್ಮ್‌ಗೆ ಬಂದ್ರೂ, ನೀವು ಫಾರ್ಮ್‌ಗೆ ಬರಲಿಲ್ವಲ್ಲ’ ತಿವಿದಳು ಹೆಂಡತಿ.

‘ಏನು ನಿನ್ನ ಮಾತಿನ ಅರ್ಥ?’

‘ಇಷ್ಟು ವರ್ಷಗಳಿಂದ ದುಡೀತಿದ್ದೀರಿ, ಆದರೂ ನೀವು ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ವಲ್ಲ ಅಂದೆ’.

‘ನಮ್ ದೇಶ, ನಮ್ ನಾಡನ್ನು ಪ್ರತಿನಿಧಿಸೋರು ಚೆನ್ನಾಗಿ ಆಡಿದಾಗ ಖುಷಿಪಡು, ಸ್ವಲ್ಪ ವಿಶಾಲವಾಗಿ ಯೋಚಿಸೋದನ್ನು ಕಲಿ, ಸುತ್ತಿ ಬಳಸಿ ನನ್ನ ವಿಷಯಕ್ಕೇ ಬರಬೇಡ’ ಎಂದೆ ಜೋರಾಗಿ.

‘ಆಯ್ತಪ್ಪ ವಿಶಾಲವಾಗೇ ಯೋಚಿಸ್ತೀನಿ, ನಮ್ಮನ್ನ ಈಗ ಆಳ್ತಿರೋ ‘ದಿಲ್ಲಿ’ ನಾಯಕರು ಮತ್ತು ‘ಇಲ್ಲಿ’ಯ ನಾಯಕರೂ ಫಾರ್ಮ್‌ನಲ್ಲಿ ಇಲ್ವಲ್ಲ, ಅವರು ಯಾವಾಗ ಚೆನ್ನಾಗಿ ಆಡೋಕೆ ಶುರು ಮಾಡ್ತಾರೆ’ ಎನ್ನುತ್ತಾ ಸೀದಾ ಪಾಲಿಟಿಕ್ಸ್ ವಿಷಯ ಎತ್ತಿಕೊಂಡಳು.

‘ದಿಲ್ಲಿ ಲೀಡರ್‌ಗೆ ಟ್ರಂಪ್ ಅಣ್ಣ ಹಾಕ್ತಿರೋದು ಇನ್ ಸ್ವಿಂಗೋ, ಔಟ್ ಸ್ವಿಂಗೋ ಇನ್ನೂ ಗೊತ್ತಾಗ್ತಿಲ್ಲ. ಅದಕ್ಕೆ ಸದ್ಯಕ್ಕೆ ಅವರ ಫಾರ್ಮ್ ಡೌನ್ ಆಗಿದೆ. ಇನ್ನು, ‘ಇಲ್ಲಿ’ ನಾಯಕರು ಹಿಟ್ ವಿಕೆಟ್ ಔಟ್ ಆಗಬಹುದು ಅಂತ ಎಲ್ಲರೂ ಕಾಯ್ತಿದ್ರು, ಆದರೆ ಸದ್ಯಕ್ಕೆ ಬಚಾವ್ ಆಗಿದ್ದಾರೆ. ಗಾಯದಿಂದ ಗುಣವಾಗಿ ಬಂದ ಆಟಗಾರನಂತೆ ಮುಂದೆ ನಿಧಾನವಾಗಿ ರನ್ ಹೊಡೆಯೋಕೆ ಶುರು ಮಾಡಬಹುದು’.

‘ಬೆಳಗಾವಿಯ ಗಲಾಟೆ ಬಗ್ಗೆಯೂ ನಿಮ್ ಕ್ರಿಕೆಟ್ ಉತ್ತರ ಇದೆಯೇ’ ವ್ಯಂಗ್ಯವಾಗಿ ಕೇಳಿದಳು.

‘ಮರಾಠಿಗರ ವಿರುದ್ಧ ಜೋರಾಗಿ ಮಾತನಾಡಿದರೆ, ವೋಟ್‌ಗಳೆಂಬ ರನ್ ಬಾರದಿರಬಹುದು ಅಂತ ಲೋಕಲ್ ಲೀಡರ್ಸ್ ಸೈಲೆಂಟ್ ಆಗಿದ್ದಾರೆ, ಅದೇ ಬೇಜಾರು’.

‘ಎಲ್ಲ ಸರಿ, ಆಕಾಂಕ್ಷಿತರು ಮತ್ತು ರೆಬೆಲ್ ಲೀಡರ್ಸ್ ಬಗ್ಗೆ ಏನೂ ಹೇಳಲೇ ಇಲ್ಲ ನೀವು’.

‘ಓಹ್ ಅವರಾ?! ಅವರೆಲ್ಲ, ಸೆಂಚುರಿ ಸನಿಹದಲ್ಲಿರುವ ಬ್ಯಾಟರ್ ಎದುರು ಬ್ಯಾಟಿಂಗ್‌ಗೆ ಬಂದ ಹಾರ್ದಿಕ್ ಪಾಂಡ್ಯನಂತೆ ಕಾಣುತ್ತಿದ್ದಾರೆ ನನಗೆ!’ ಎಂದು ನಕ್ಕ.

ದಿನದ ಟ್ವೀಟ್

ಇದೆಂಥಾ ನಡವಳಿಕೆ?

ಈಗಿನ ಯುವಜನರಿಗೆ ಏನಾಗಿದೆ? ಇದು ಪ್ರೀತಿ ವ್ಯಕ್ತಪಡಿಸುವ ರೀತಿಯೇ?... ಬೆಂಗಳೂರಿನ ಸರ್ಜಾಪುರ ಮುಖ್ಯ ರಸ್ತೆಯಲ್ಲಿ ಜೋಡಿಯೊಂದು ಅತ್ಯಂತ ಅಪಾಯಕಾರಿ ಮತ್ತು ಬೇಜವಾಬ್ದಾರಿಯಿಂದ ಬೈಕ್‌ನಲ್ಲಿ ಚಲಿಸುತ್ತಿದ್ದ ಆಘಾತಕಾರಿ ದೃಶ್ಯ ಕಂಡುಬಂತು. ಹುಡುಗಿಯು ಪೆಟ್ರೋಲ್ ಟ್ಯಾಂಕ್ ಮೇಲೆ ಅವನನ್ನು ತಬ್ಬಿ ಕುಳಿತು ಮುತ್ತು ಕೊಡುತ್ತಿದ್ದರೆ, ಆ ಹುಡುಗ ತಮ್ಮ ಬಗ್ಗೆ ಅಥವಾ ರಸ್ತೆಯಲ್ಲಿದ್ದ ಇತರರ ಸುರಕ್ಷತೆಯ ಬಗ್ಗೆ ಯಾವುದೇ ಕಾಳಜಿ ಇಲ್ಲದಂತೆ ಎಗ್ಗಿಲ್ಲದೇ ವಾಹನ ಚಲಾಯಿಸುತ್ತಿದ್ದ...

ಕರ್ನಾಟಕ ಪೋರ್ಟ್‌ಫೋಲಿಯೊ, ಮಾಧ್ಯಮ ಮತ್ತು ಸುದ್ದಿ ಸಂಸ್ಥೆ

ಕಿಡಿನುಡಿ

ಮೋಹನ್‌ದಾಸ್ ಪೈ ಸೇರಿದಂತೆ ಇತರ ಉದ್ಯಮಿಗಳು ಬೆಂಗಳೂರಿನ ಮೂಲಸೌಕರ್ಯದ ಬಗ್ಗೆ ಮಾತನಾಡಿದ್ದಕ್ಕೆ ಅವರನ್ನು ಅವಮಾನಿಸುವಂತಹ, ಮಾನಸಿಕವಾಗಿ ಕುಗ್ಗಿಸುವಂತಹ ಯತ್ನವನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ಮಾಡುತ್ತಿದೆ. ರಾಜಕಾರಣದಲ್ಲಿ ಇರುವವರಿಗೆ ದುರಹಂಕಾರ ಒಳ್ಳೆಯದಲ್ಲ. ಪ್ರಿಯಾಂಕ್ ಖರ್ಗೆ ತಮ್ಮ ತಂದೆಯನ್ನಾದರೂ ನೋಡಿ ಸರಿಯಾಗಿ ಮಾತನಾಡುವುದನ್ನು ಕಲಿಯಲಿ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 27-2-2000

• **ವಿದ್ಯುತ್ ಕ್ಷೇತ್ರ ಸುಧಾರಣೆ ಪಾರೇಖ್ ಸಮಿತಿ ವರದಿ ಸಲ್ಲಿಕೆ**

ಬೆಂಗಳೂರು, ಫೆ. 26– ರಾಜ್ಯದಲ್ಲಿ ಸ್ವತಂತ್ರವಾಗಿ ವಿದ್ಯುತ್ ಉತ್ಪಾದನೆ ಮಾಡುವವರಿಂದ ವಿದ್ಯುತ್ ಕೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ಪ್ರಾರಂಭಿಸಬೇಕಾದ ‘ನಗದು ಹಣದ ಖಾತೆ’ (ಎಸ್ಕ್ರೊ) ಹಾಗೂ ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಬಗ್ಗೆ ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ರಚಿಸಿದ್ದ ಉನ್ನತ ಮಟ್ಟದ ಪಾರೇಖ್ ಸಮಿತಿ ಇಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು.

‘ವಿದ್ಯುತ್ ಉತ್ಪಾದನೆ, ಸಾಗಣೆ ಹಾಗೂ ವಿತರಣೆ ಬಗ್ಗೆ ಸಮಿತಿ ತನ್ನ ಶಿಫಾರಸುಗಳನ್ನು ನೀಡಿದೆ. ಈ ವರದಿ ಸರ್ಕಾರಕ್ಕೆ ಬಹಳ ಮಹತ್ವವಾದುದು. ಸರ್ಕಾರ ಕೈಗೊಳ್ಳುವ ಯಾವುದೇ ನೀತಿ ಹಾಗೂ ನಿರ್ಧಾರಗಳು ಪಾರದರ್ಶಕವಾಗಿರಬೇಕೆಂಬುದೇ ನಮ್ಮ ಉದ್ದೇಶ’ ಎಂದು ವರದಿ ಸ್ವೀಕರಿಸಿದ ನಂತರ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 27-2-1975

• **‘ಅಳುಕದೆ ದಿಟ್ಟ ಹೆಜ್ಜೆ ಇಡುವ ಸಾಹಸಿ’**

ಬೆಂಗಳೂರು, ಫೆ. 26– ವಿಧಾನಸೌಧದ ಶಿಲ್ಪಿ, ಮಾಜಿ ಮುಖ್ಯಮಂತ್ರಿ ಕೆ.ಹನುಮಂತಯ್ಯನವರ 67ನೇ ಜನ್ಮದಿನೋತ್ಸವವಾದ ಇಂದು ಅವರನ್ನು, ಪುರಭವನದಲ್ಲಿ ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

‘ಅಳುಕದೆ ದಿಟ್ಟ ಹೆಜ್ಜೆಯೊಡನೆ ಮುನ್ನುಗ್ಗುವ ಸಾಹಸಿ’ ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಎಚ್.ಪಾಟೀಲ ಬಣ್ಣಿಸಿದರು.

ಕೈಗಾರಿಕಾ ಸಚಿವ ಎಸ್.ಎಂ.ಕೃಷ್ಣ ಅವರು, ರಾಜಕೀಯ, ರಾಗದ್ವೇಷ, ಅಸೂಯೆಗಳ ಪ್ರಸ್ತುತ ಸನ್ನಿವೇಶದಲ್ಲಿ ಅವರ ಮಾರ್ಗದರ್ಶನದ ಅಗತ್ಯವನ್ನು ಒತ್ತಿ ಹೇಳಿದರು.

ಕೆಂಗಲ್ಲರು ವಿಧಾನಸೌಧ ಕಟ್ಟಿದರೂ ಮುಖ್ಯಮಂತ್ರಿಯಾಗಿ ಅಲ್ಲಿ ಕುಳಿತು ಕಾರ್ಯನಿರ್ವಹಿಸುವ ಅದೃಷ್ಟ ಅವರ ಪಾಲಿಗೆ ದೊರೆಯಲಿಲ್ಲ ಎಂದು ವಿಷಾದಿಸಿದ ಶಾಸಕ ಎ.ಆರ್.ಬದರಿನಾರಾಯಣ್ ಅವರು, ಕೆಂಗಲ್ಲರ ಹೆಚ್ಚಿನ ಸಾಮರ್ಥ್ಯ ಮತ್ತು ದಕ್ಷತೆಯೇ ಇದಕ್ಕೆ ಅಡ್ಡಿಯಾಯಿತೇನೊ ಎಂದು ಸಂದೇಹ ವ್ಯಕ್ತಪಡಿಸಿದರು.

• **ಅಧಿಕೃತ ಮಸೂದೆಗೆ ಮೇಲ್ಮನೆ ತಿರಸ್ಕಾರ**

ಬೆಂಗಳೂರು, ಫೆ. 26– ಸಚಿವರ ವಿದೇಶ ಪ್ರವಾಸದ ಭತ್ಯೆಗಳನ್ನು ನಿಗದಿ ಮಾಡುವ ಅಧಿಕಾರವನ್ನು ರಾಜ್ಯಪಾಲರಿಗೆ ಒಪ್ಪಿಸುವ ಮಸೂದೆ ವಿಧಾನಪರಿಷತ್ತಿನಲ್ಲಿ ತಿರಸ್ಕೃತಗೊಂಡು, ಆಡಳಿತ ಪಕ್ಷ ಸೋಲನುಭವಿಸಿತು.

ಸಚಿವ ಎನ್.ಹುಚ್ಚಮಾಸ್ತಿಗೌಡ ಅವರು ಮಂಡಿಸಿದ ಕರ್ನಾಟಕ ಸಚಿವರ ವೇತನ ಮತ್ತು ಭತ್ಯೆಗಳ ತಿದ್ದುಪಡಿ ಮಸೂದೆಯನ್ನು ಸಭೆ ಬಹುಮತದಿಂದ ತಿರಸ್ಕರಿಸಿತು.

ಸಂಗತ

ತ್ರಿಭಾಷಾ ಕಲಿಕೆ: ಜಾಣತನದ ನಡೆ

ಭಾಷೆಗಳ ಆಯ್ಕೆ ಮಕ್ಕಳ ಭವಿಷ್ಯ ರೂಪಿಸುವ ಗುರಿಯನ್ನಷ್ಟೇ ಹೊಂದಿರಬೇಕು

• ಎಂ. ಅಬ್ದುಲ್ ರೆಹಮಾನ್ ಪಾಷ

ಶಿಕ್ಷಣದಲ್ಲಿ ಭಾಷಾ ನೀತಿ ಕುರಿತ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ತಮಿಳುನಾಡು ಸರ್ಕಾರ ತ್ರಿಭಾಷಾ ಸೂತ್ರವನ್ನು ತಿರಸ್ಕರಿಸಿ, ದ್ವಿಭಾಷಾ ನೀತಿಯನ್ನು ಅಳವಡಿಸಿಕೊಳ್ಳುವ ನಿಲುವನ್ನು ಗಟ್ಟಿಯಾಗಿ ಹಿಡಿದಿದೆ. ಅದನ್ನು ಉದಾಹರಣೆಯನ್ನಾಗಿ ಇಟ್ಟುಕೊಂಡು, ನಮ್ಮ ರಾಜ್ಯದಲ್ಲಿಯೂ ದ್ವಿಭಾಷಾ ನೀತಿಯನ್ನೇ ಅನುಸರಿಸಬೇಕು ಎಂದು ಕೆಲವು ವಿದ್ವಾಂಸರು ಬಯಸುತ್ತಾರೆ. ಭಾಷೆ ಕುರಿತ ರಾಜಕೀಯವನ್ನು ಒಂದು ಕ್ಷಣ ಬದಿಗಿರಿಸಿ, ಇದನ್ನು ಭಾಷಾ ವೈಜ್ಞಾನಿಕ ದೃಷ್ಟಿಯಿಂದ, ಭಾಷೆಯ ಕಲಿಕೆಯು ವ್ಯಕ್ತಿಯ ಅಭ್ಯುದಯಕ್ಕೆ ಪೂರಕವಾಗಬೇಕು ಎನ್ನುವ ನೆಲೆಯಿಂದ ನಾವು ಈ ಕುರಿತು ಚಿಂತನೆ ಮಾಡಬಹುದು.

ಭಾರತದ ಶ್ರೀಮಂತ ಭಾಷಿಕ ಬಹುತ್ವವನ್ನು ಪರಿಗಣಿಸಿ, 2020ರ ರಾಷ್ಟ್ರೀಯ ಶಿಕ್ಷಣ ನೀತಿಯು (ನಂತರದ ಕೆಲವು ಪರಿಷ್ಕರಣೆಗಳನ್ನೂ ಒಳಗೊಂಡು) ಶಿಕ್ಷಣದ ಭಾಷೆಯ ಕುರಿತು ಹೇಳಿರುವುದು ಹೀಗೆ: ‘ಎಲ್ಲೆಲ್ಲಿ ಸಾಧ್ಯವೋ ಅಲ್ಲಿ, ಕನಿಷ್ಠ ಐದನೇ ತರಗತಿಯವರೆಗೆ, ಸಾಧ್ಯವಾದರೆ 8ನೇ ತರಗತಿಯವರೆಗೆ ಅಥವಾ ಇನ್ನೂ ಮುಂದಕ್ಕೂ, ಶಿಕ್ಷಣದ ಮಾಧ್ಯಮವು ಕಲಿಯುವವರ ಮನೆಮಾತು, ಮಾತೃಭಾಷೆ, ಸ್ಥಳೀಯ ಭಾಷೆ, ಪ್ರಾದೇಶಿಕ ಭಾಷೆ ಆಗಿರತಕ್ಕದ್ದು’. ಶಾಲೆಯಲ್ಲಿ ಮೂರು ಭಾಷೆಗಳನ್ನು ಕಲಿಯಬೇಕು ಎಂದು ಹೇಳುತ್ತಾ, ‘ಮಕ್ಕಳು ಕಲಿಯುವ ಮೂರು ಭಾಷೆಗಳು ರಾಜ್ಯ, ಪ್ರದೇಶ ಮತ್ತು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟಿದ್ದು, ಈ ಮೂರರಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು’ ಎಂಬ ಆಶಯವನ್ನು ತೋರಿದೆ.

ರಾಜ್ಯದಲ್ಲಿನ ಕನ್ನಡೇತರ ಮಾತೃಭಾಷೆಯವರಲ್ಲಿ ಹೆಚ್ಚಿನವರು ತಮ್ಮ ಮಾತೃಭಾಷೆಯ ಜೊತೆ ಪರಿಸರದ ಭಾಷೆಯಾದ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿತಿರುವ ಸಾಧ್ಯತೆ ಇರುತ್ತದೆ. ಹೀಗಾಗಿ, ಶಿಕ್ಷಣದಲ್ಲಿ ಕನ್ನಡವನ್ನೇ ಮಾಧ್ಯಮವನ್ನಾಗಿ ಅಳವಡಿಸಿಕೊಳ್ಳುವುದು ಒಳ್ಳೆಯ ವಿಧಾನ. ಇದರಿಂದ ಕನ್ನಡೇತರ ಅಲ್ಪಸಂಖ್ಯಾತ ಭಾಷೀಯರಿಗೆ ಆಗಬಹುದಾದ ಸಮಸ್ಯೆಗಳನ್ನು ಬಗೆಹರಿಸಿದರೆ, ಭಾಷಿಕವಾಗಿ ಎಲ್ಲರನ್ನೂ ಮುಖ್ಯವಾಹಿನಿಗೆ ತಂದಂತಾಗುತ್ತದೆ. ಇದು ಕಲಿಕೆಯ ಸೌಲಭ್ಯವಷ್ಟೇ ಅಲ್ಲ, ಶಿಕ್ಷಣವನ್ನು ಜೀವನೋಪಾಯದ ಸಾಧನವನ್ನಾಗಿ ಕಾಣುವುದಕ್ಕೂ ಸಾಧ್ಯವಾಗುತ್ತದೆ. ಇದಿಲ್ಲವಾದರೆ, ಉದಾಹರಣೆಗೆ, ಉರ್ದು ಮಾತ್ರ ಭಾಷೆಯಲ್ಲಿ ಹತ್ತನೇ ತರಗತಿ ಓದಿರುವ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕೆ ಹೋಗುವುದಕ್ಕೆ ಅಥವಾ ಉದ್ಯೋಗಗಳನ್ನು ಗಳಿಸಿಕೊಳ್ಳುವುದಕ್ಕೆ ಇರುವ ಅವಕಾಶಗಳು ತೀವ್ರವಾಗಿ ಕಡಿಮೆ ಆಗುತ್ತವೆ.

ಕನ್ನಡವು ಕಲಿಕೆಯ ಮಾಧ್ಯಮವಾಗಿದ್ದರೆ, ಕನ್ನಡವನ್ನೇ ಪ್ರಥಮ ಭಾಷೆಯನ್ನಾಗಿ ಕಲಿಯುವುದು ಇತರ ವಿಷಯಗಳ ಕಲಿಕೆಗೆ ಪೂರಕವಾಗಿರುತ್ತದೆ. ಇನ್ನು ದ್ವಿತೀಯ ಭಾಷೆಯಾಗಿ ಇಂಗ್ಲಿಷ್‌ನ ಆಯ್ಕೆಯೂ ಭವಿಷ್ಯದ ದೃಷ್ಟಿಯಿಂದ ಹೆಚ್ಚು ಉಪಯುಕ್ತವೇ. ಇನ್ನು ಇರುವುದು ಮೂರನೇ ಭಾಷೆ. ಇಲ್ಲಿ ಹಿಂದಿ ಕಲಿಯುವುದು ಕಲಿಕೆಗೆ ಒಂದು ಸಮಗ್ರತೆಯನ್ನು ಒದಗಿಸುತ್ತದೆ. ರಾಜ್ಯದ ಅಧಿಕೃತ ಭಾಷೆಯಾದ ಕನ್ನಡವನ್ನು ಪ್ರಥಮ ಭಾಷೆಯಾಗಿ ಹೇಗೂ ಕಲಿಯುತ್ತಾರೆ. ಅದೇ ರೀತಿ ರಾಷ್ಟ್ರದ ಆಡಳಿತ ಭಾಷೆಯಾಗಿರುವ ಹಿಂದಿಯನ್ನೂ ಕಲಿತರೆ ಮಕ್ಕಳಿಗೆ ಹೆಚ್ಚು ಪ್ರಯೋಜನ. ಹಿಂದಿಯು ಕನ್ನಡದ ಹಾಗೆಯೇ ಅನೇಕ ಮಾಧ್ಯಮಗಳ ಜನಪ್ರಿಯ ರೂಪದಲ್ಲಿ, ಅದಕ್ಕೆ ಹತ್ತಿರವಾದ ಉರ್ದುವಿನಲ್ಲಿ ಕಿವಿಗೆ ಬೀಳುವುದರಿಂದ ಹಿಂದಿಯು ಇಂಗ್ಲಿಷಿನಷ್ಟು ಆಗಂತುಕವಾಗಿ ಅನ್ನಿಸುವುದಿಲ್ಲ. ಅಲ್ಲದೆ ಹಿಂದಿ ವರ್ಣಮಾಲೆಯು ಕನ್ನಡದ ತರಹವೇ ಇರುವುದರಿಂದ ವ್ಯಾವಹಾರಿಕ ಹಿಂದಿಯನ್ನು ಕಲಿಯುವುದು ಹೆಚ್ಚು ಸುಲಭ. ಔಪಚಾರಿಕ ಹಿಂದಿ ಭಾಷೆಯಲ್ಲಿ ಸಂಸ್ಕೃತದಿಂದ ಎರವಲು ಪಡೆದ ನೂರಾರು ಪದಗಳು ಕನ್ನಡಕ್ಕೂ ಸಮಾನವಾದ್ದರಿಂದ ಅಧಿಕೃತ ಹಿಂದಿಯನ್ನೂ ಕಲಿಯುವುದು ಸುಲಭ.



ಅಧಿಕೃತ ಕನ್ನಡವನ್ನು ಕಲಿತರೆ ರಾಜ್ಯದಲ್ಲಿ ಹೇಗೆ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತವೆಯೋ ಹಾಗೆಯೇ ಹಿಂದಿಯನ್ನು ಚೆನ್ನಾಗಿ ಕಲಿಯುವ ಮೂಲಕ, ಅಂತರರಾಜ್ಯ, ರಾಷ್ಟ್ರ ಮಟ್ಟ, ಕೇಂದ್ರ ಸರ್ಕಾರಿ ಹುದ್ದೆಗಳ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ವೃತ್ತಿ ಅವಕಾಶಗಳು ತೆರೆಯುತ್ತವೆ. ಕರ್ನಾಟಕ ಅಧಿಕೃತ ಭಾಷಾ ಕಾಯ್ದೆ– 1963ರ ಪ್ರಕಾರ, ರಾಜ್ಯದ ಆಡಳಿತ ಭಾಷೆಯಾದ ಕನ್ನಡವನ್ನು ನಾವೆಲ್ಲರೂ ಕಲಿಯುತ್ತಿರುವ ಹಾಗೆ, ಸಂವಿಧಾನದ ವಿಧಿ 343ರ ಪ್ರಕಾರ, ಒಕ್ಕೂಟದ ಆಡಳಿತದ ಭಾಷೆಯೆಂದು ಗುರುತಿಸಲಾಗಿರುವ ಹಿಂದಿ ಭಾಷೆಯನ್ನು ಕಲಿತ ಹಾಗೂ ಆಗುತ್ತದೆ.

ಆಡಳಿತ, ನ್ಯಾಯಾಂಗ, ಶಿಕ್ಷಣದಂಥ ಕ್ಷೇತ್ರಗಳಲ್ಲಿ ಬಳಕೆಯಾಗುತ್ತಿರುವ ಮಾದರಿಯ ಕನ್ನಡವು ನಿಜವೆಂದರೆ ಯಾರ ಮನೆ ಮಾತೂ ಅಲ್ಲ. ಕನ್ನಡದ ಅನೇಕ ಮನೆಮಾತುಗಳಿಗೆ ಸರ್ವೇಸಾಮಾನ್ಯವಾದ ಅಂಶಗಳು ಮತ್ತು ವ್ಯಾವಹಾರಿಕ ಅಗತ್ಯಕ್ಕೆ ತಕ್ಕಂತೆ ಸಂಸ್ಕೃತ, ಇಂಗ್ಲಿಷ್, ಪರ್ಶಿಯನ್‌ನಂಥ ಭಾಷೆಗಳಿಂದ ಪದಗಳನ್ನು ಎರವಲು ಪಡೆದು, ವ್ಯಾಕರಣ ಪದ್ಧತಿಯನ್ನೂ ತಕ್ಕಮಟ್ಟಿಗೆ ಬದಲಾಯಿಸಿಕೊಂಡು ವಿಕಸನ ಹೊಂದಿರುವ ಒಂದು ರೀತಿಯ ಕೃತ್ರಿಮ ಶೈಲಿಯಾಗಿದೆ ಆಡಳಿತ ಕನ್ನಡ. ಹಾಗೆಯೇ ಔಪಚಾರಿಕ ಹಿಂದಿಯೂ ಭೋಜಪುರಿ, ಬುಂದೇಲಿ, ಹರಿಯಾಣ್ವಿಯಂಥ ಭಾಷೆಗಳಿಂದ ಎರವಲು ಪಡೆದು ಆಧುನಿಕವಾಗಿ ವಿಕಾಸ ಹೊಂದಿದ ಔಪಚಾರಿಕ ಶೈಲಿ.

ಈ ಎಲ್ಲ ಅಂಶಗಳನ್ನು ಮನಗಂಡು, ಶಾಲಾ ಶಿಕ್ಷಣದಲ್ಲಿ ಕನಿಷ್ಠ ಮೂರು ಭಾಷೆಗಳನ್ನು ಕಲಿಯುವುದು ಜಾಣತನ. ಭಾಷೆಗಳ ಆಯ್ಕೆಯು ಮಕ್ಕಳ ಭವಿಷ್ಯವನ್ನು ರೂಪಿಸುವ ಗುರಿಯನ್ನು ಹೊಂದಿರಬೇಕೇ ವಿನಾ, ಅದು ಭಾಷೆ-ಭಾಷೆ, ರಾಜ್ಯ-ಕೇಂದ್ರದ ನಡುವಿನ ರಾಜಕಾರಣದಲ್ಲಿ ನಲುಗಿ ಹೋಗಬಾರದು.

ವಾಚಕರ ವಾಣಿ

ದೂರ ಪ್ರಯಾಣ: ಇರಲಿ ಸುರಕ್ಷತೆಯ ಖಾತರಿ

ನಮ್ಮ ರಾಜ್ಯದಿಂದ ಉತ್ತರಪ್ರದೇಶದಲ್ಲಿರುವ ಪ್ರಯಾಗರಾಜ್‌ಗೆ ತೆರಳಿದ್ದಾಗ ಕೆಲವು ಭಕ್ತರು ಪ್ರತ್ಯೇಕ ಅಪಘಾತಗಳಲ್ಲಿ ಜೀವ ಕಳೆದುಕೊಂಡಿದ್ದು ದುರದೃಷ್ಟಕರ. ಕರ್ನಾಟಕದಿಂದ 1,700 ಕಿ.ಮೀ. ದೂರವಿರುವ ಪ್ರಯಾಗರಾಜ್‌ಗೆ ರಸ್ತೆ ಮೂಲಕ ಹೋಗಬೇಕಾದರೆ, ನಾವು ಪ್ರಯಾಣಿಸುವ ವಾಹನವು ಸುಸ್ಥಿತಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ. ಹಾಗೆಯೇ ಇಬ್ಬರು ಚಾಲಕರನ್ನು ನಿಯಮಿಸಬೇಕು. ಚಾಲಕರಿಗೆ ಬಹಳಷ್ಟು ವಿಶ್ರಾಂತಿ ಮತ್ತು ನಿದ್ದೆ ಇರುವಂತೆ ನೋಡಿಕೊಳ್ಳಬೇಕು. ಇದೆಲ್ಲವನ್ನೂ ದೃಢಪಡಿಸಿಕೊಂಡಿದ್ದರೆ ಈಗ ಆಗಿರುವ ಜೀವಹಾನಿಯನ್ನು ತಪ್ಪಿಸಬಹುದಿತ್ತೇನೊ.

ಜಿ.ಪಿ.ದಯಾನಂದ, ಬೆಂಗಳೂರು

ಟೀಕೆಗೆ ಪ್ರತಿಟೀಕೆ ಉತ್ತರವಲ್ಲ

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಉದ್ಯಮಿ ಮೋಹನ್‌ದಾಸ್ ಪೈ ಅವರ ಟೀಕೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರತಿಕ್ರಿಯೆ ವರದಿಯಾಗಿದೆ (ಪ್ರ.ವಾ., ಫೆ. 26). ಬೆಂಗಳೂರು ನಗರ ಹತ್ತಿರವಾಗುತ್ತಿದ್ದಂತೆ ವಾಹನಗಳ ಸಮಯಪಾಲನೆಯ ಲೆಕ್ಕ ತಲೆಕೆಳಗಾಗುತ್ತದೆ. ಗೌರಿಬಿದನೂರು– ಬೆಂಗಳೂರು ಪಯಣವನ್ನು ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಎರಡೂ ದಿಕ್ಕಿನಲ್ಲಿ ಮಾಡಿದಾಗ ಇದರ ‘ಅನುಭವ’ ಆಯಿತು. ಬೆಂಗಳೂರಿನ ಯಲಹಂಕ ಪೊಲೀಸ್ ಠಾಣೆಯಿಂದ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆವರೆಗಿನ ದೂರ ಕ್ರಮಿಸಲು ಎಷ್ಟು ಸಮಯ ಹಿಡಿಯಬಹುದು ಎಂದು ಅಂದಾಜು ಮಾಡುವ ಹಾಗೆಯೇ ಇಲ್ಲ.

ಸುಮಾರು ಮೂವತ್ತು ವರ್ಷಗಳಿಂದ ಅನೇಕ ನಿರ್ಮಾಣಗಳು, ಪ್ರಯೋಗಗಳು ಆಗಿವೆ. ಸರ್ಕಾರಗಳು ಬಂದಿವೆ, ಹೋಗಿವೆ. ಟ್ರಬಲ್ ಸ್ಪಾಟ್‌ಗಳು ಸ್ಥಳಾಂತರಗೊಂಡಿವೆ, ಹೆಚ್ಚಾಗಿವೆ ಅಷ್ಟೇ. ಹೊಸ ಸಂಸ್ಥೆ ಸ್ಥಾಪಿಸಿ, ಕೃತಕ ಬುದ್ಧಿಮತ್ತೆ ಉಪಯೋಗಿಸಿ ಅಥವಾ ಇನ್ನೇನೇ ಮಾಡಿದರೂ ಜನಸಂಖ್ಯೆ ಹಾಗೂ ವಾಹನಬಾಹುಳ್ಯ ‘ಗೋರ್ಕಲ್ಲು’ ಇದ್ದಂತೆ. ಅಧಿಕಾರದಲ್ಲಿ ಇರುವವರು ಟೀಕೆ ಮಾಡುವವರ ಆಶಯ, ಉದ್ದೇಶಗಳನ್ನೇ ಪ್ರಶ್ನಿಸುವ ‘ಜಾಣತನ’ ತೋರತೊಡಗಿದ್ದಾರೆ! ಆಗ ಸಮಸ್ಯೆಗೆ ಪರಿಹಾರ ಹೇಗೆ ಸಿಕ್ಕೀತು?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

‘ಅರ್ಥ’ಪೂರ್ಣವಾಗಿದೆ ಉನ್ನತ ಶಿಕ್ಷಣ!

ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಸಂಶೋಧನೆಯ ಗುಣಮಟ್ಟ ಹೆಚ್ಚಳಕ್ಕೆ ಸಂಬಂಧಿಸಿದಂತೆ ಯುಜಿಸಿ ಮಾಡಬೇಕಾದುದೇನು ಎಂಬ ಕುರಿತ ಜ್ಯೋತಿ ಅವರ ವಿಶ್ಲೇಷಣೆ (ಪ್ರ.ವಾ., ಫೆ. 25) ಸಮಯೋಚಿತ ಅಭಿವ್ಯಕ್ತಿಯಾಗಿದೆ. ಕೃಷಿ ವಿಶ್ವವಿದ್ಯಾಲಯಗಳ ಮಟ್ಟಿಗೆ ಹೇಳುವುದಾದರೆ, ಕೃಷಿಕನಿಗೆ ಉಪಯುಕ್ತವೆನಿಸುವ ‘ಸಮಗ್ರ ಕೃಷಿ ಸಂಸ್ಕೃತಿ’ಯನ್ನು ಕಲಿಸುವ ಶಿಕ್ಷಣ ಬೇಕು. ಶ್ರೇಯಾಂಕದ ಭರಾಟೆಯಲ್ಲಿ ‘ನ್ಯಾಕ್’ ಕೂಡ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿರುವುದು ದುರಂತ. ಒಟ್ಟಿನಲ್ಲಿ, ಉನ್ನತ ಶಿಕ್ಷಣವು ಇಂದು ‘ಅರ್ಥ’ಪೂರ್ಣವೇ ಆಗಿದೆ! ಬದುಕಲು ಕಲಿಸದ ಯಾವ ಮಟ್ಟದ ವಿದ್ಯೆಯೂ ಪ್ರಯೋಜನಕಾರಿ ಅಲ್ಲ. ಯುಜಿಸಿ ಇತ್ತ ಗಮನಹರಿಸಲಿ.

ಅನಿಲಕುಮಾರ ಮುಗಳಿ, ಧಾರವಾಡ

ಗ್ಯಾರಂಟಿ ಯೋಜನೆ: ಸಾರ್ವತ್ರೀಕರಣ ಅವೈಜ್ಞಾನಿಕ

‘ಬಡವರಿಗೆ ಮಾತ್ರ ಗ್ಯಾರಂಟಿ ಯೋಜನೆಗಳ ಲಾಭ ಸಿಗುವಂತೆ ಮಾಡಬೇಕಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿರುವುದು ವಾಸ್ತವಿಕವಾದದ್ದು. ಯಾವುದೇ ಸವಲತ್ತುಗಳನ್ನು ಉಚಿತವಾಗಿ ಎಲ್ಲರಿಗೂ ಕೊಡುವಂತಹ ಯೋಜನೆಗಳು ತುಂಬಾ ಅವೈಜ್ಞಾನಿಕ ಹಾಗೂ ಆರ್ಥಿಕವಾಗಿ ರಾಜ್ಯ ಮತ್ತು ದೇಶವನ್ನು ದುರ್ಬಲಗೊಳಿಸುವಂತಹವು. ಈ ಗ್ಯಾರಂಟಿ ಯೋಜನೆಗಳ ಫಲವಾಗಿ ರಾಜ್ಯದಾದ್ಯಂತ ಅಭಿವೃದ್ಧಿ ಕಾಮಗಾರಿಗಳು ನನೆಗುದಿಗೆ ಬಿದ್ದಿರುವ ದಾರುಣ ಸ್ಥಿತಿಯನ್ನು ಕಾಣುತ್ತಿದ್ದೇವೆ. ಇಂತಹ ಯೋಜನೆಗಳು ಜನರ ಬದುಕಿಗೆ ಸಂಬಂಧಿಸಿದ ಬೆಲೆ ಏರಿಕೆಯಂತಹ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತವೆ. ದುಡಿಯಲು ಶಕ್ತರಾದ ಯುವಜನರನ್ನು ಸೋಮಾರಿತನದ ಕೂಪಕ್ಕೆ ತಳ್ಳುತ್ತವೆ.

ಈ ಉಚಿತ ಯೋಜನೆಗಳು ಬಡವರು, ವಯೋವೃದ್ಧರು, ಅಂಗವಿಕಲರು, ಅನಾಥರಂತಹ ದುಡಿಯಲು ಶಕ್ತರಲ್ಲದವರಿಗೆ ಮಾತ್ರ ಸೀಮಿತವಾಗಬೇಕೇ ವಿನಾ ಅವುಗಳನ್ನು ಸಾರ್ವತ್ರೀಕರಣಗೊಳಿಸುವುದು ಜನವಿರೋಧಿ ಧೋರಣೆ. ಚುನಾವಣೆಯ ಸಮಯದಲ್ಲಿ ಜನರನ್ನು ದಾರಿ ತಪ್ಪಿಸುವ ಭರವಸೆ ಕೊಡುವವರಿಗೆ ಕಡಿವಾಣ ಹಾಕುವ ಕಾನೂನು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಇದು, ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಆಶಯ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಲೋಕಾಯುಕ್ತ: ಪ್ರತ್ಯೇಕ ನೇಮಕಾತಿ ಇರಲಿ

‘ಯಾವುದೇ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಕೊಡುವುದೂ ಒಂದೇ ಸ್ಮಶಾನಕ್ಕೆ ಹೋಗುವುದೂ ಒಂದೇ’– ಇದು ಸಾಮಾನ್ಯ ನಾಗರಿಕನೊಬ್ಬನ ಹೇಳಿಕೆಯಲ್ಲ. ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ತುಮಕೂರಿನಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಅಸಹನೆಯಿಂದ ನೀಡಿರುವ ಹೇಳಿಕೆ (ಪ್ರ.ವಾ., ಫೆ. 25). ಹೌದು, ಮೊದಲು ಲೋಕಾಯುಕ್ತ ಹೆಸರು ಕೇಳಿದ ತಕ್ಷಣ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಯಾವುದೇ ಫಲಾಪೇಕ್ಷೆ ಇಲ್ಲದೆ ಅರ್ಜಿಗಳನ್ನು ಇತ್ಯರ್ಥಪಡಿಸುತ್ತಿದ್ದರು. ನಂತರದ ದಿನಗಳಲ್ಲಿ ಲೋಕಾಯುಕ್ತ ಸಂಸ್ಥೆಯು ವಿಧಾನಸೌಧವನ್ನೂ ಬಿಡದ ಮಟ್ಟಕ್ಕೆ ಹೋದಾಗ ಸಾರ್ವಜನಿಕರಲ್ಲಿ ಸಂಸ್ಥೆಯ ಬಗ್ಗೆ ಅಪಾರವಾದ ವಿಶ್ವಾಸ ಮತ್ತು ನಂಬಿಕೆ ದೃಢವಾಯಿತು. ಆದರೆ ಇತ್ತೀಚೆಗೆ ಪ್ರಮುಖ ಪ್ರಕರಣಗಳಲ್ಲಿ ತನಿಖೆ ಮತ್ತು ವರದಿ ಸಲ್ಲಿಸುವಿಕೆಯಲ್ಲಿ ಲೋಕಾಯುಕ್ತದ ನಡೆ ನಿಜಕ್ಕೂ ಆ ದಿನಗಳ ಕಾರ್ಯವೈಖರಿಗೆ ಮಂಕು ಕವಿಯುವಂತೆ ಮಾಡಿದೆ ಎಂದು ಅನ್ನಿಸದೇ ಇರದು.

ಲೋಕಾಯುಕ್ತ ಸಂಸ್ಥೆಯಲ್ಲಿ ನ್ಯಾಯಮೂರ್ತಿಗಳು ಮಾತ್ರ ನ್ಯಾಯ, ನಿಷ್ಠುರತೆಯಿಂದ ಇದ್ದರೆ ಸಾಲದು, ಅವರ ಅಧೀನ ಅಧಿಕಾರಿಗಳಲ್ಲಿಯೂ ಸಂಸ್ಥೆಯ ಗೌರವ ಕಾಪಾಡುವ ಮನೋಭಾವ ಇರಬೇಕಾಗುತ್ತದೆ. ಸಾಮಾನ್ಯವಾಗಿ ಲೋಕಾಯುಕ್ತ ಸಂಸ್ಥೆಗೆ ವಿವಿಧ ಹಂತದ ಪೊಲೀಸ್ ಅಧಿಕಾರಿಗಳು ಕಾರ್ಯನಿರ್ವಾಹಕ ಹುದ್ದೆಗಳಿಂದ ನಿಯೋಜನೆ ಮೇರೆಗೆ ವರ್ಗಾವಣೆಯಾಗುತ್ತಾರೆ. ಇಂತಹವರು ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಹೊಂದಾಣಿಕೆಯ ಆಡಳಿತ ನಡೆಸಿರುತ್ತಾರೆ. ಅವರು ಅದು ಹೇಗೆ ಲೋಕಾಯುಕ್ತ ಸಂಸ್ಥೆಗೆ ಹೊಂದಿಕೊಳ್ಳುತ್ತಾರೆ? ಲೋಕಾಯುಕ್ತಕ್ಕೆಂದೇ ಪ್ರತ್ಯೇಕ ತನಿಖಾಧಿಕಾರಿಗಳನ್ನು ನೇಮಕ ಮಾಡಿಕೊಂಡಲ್ಲಿ ಸುಧಾರಣೆಯ ಮತ್ತೊಂದು ಹಂತವನ್ನು ನಿರೀಕ್ಷಿಸಬಹುದು?

ತಿಮ್ಮೇಶ ಮುಸ್ಟೂರು, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೊಜ್ಜು 'ಭಾರ'

ಬೊಜ್ಜು ಈಗ ಜಾಗತಿಕ ಸಮಸ್ಯೆಯಾಗಿದೆ. ಭಾರತದಲ್ಲೂ ಜನಾರೋಗ್ಯಕ್ಕೆ ದೊಡ್ಡ ಕಂಟಕವಾಗಿದೆ. ದೇಶದಲ್ಲಿ ಬೊಜ್ಜಿನ ಸಮಸ್ಯೆ ಮೂರು ಪಟ್ಟು ಹೆಚ್ಚಾಗಿದ್ದು, ಜನರಲ್ಲಿ ಮಧುಮೇಹ, ರಕ್ತದೊತ್ತಡ, ಹೃದ್ರೋಗ ಮುಂತಾದ ಕಾಯಿಲೆಗಳು ಹೆಚ್ಚುತ್ತಿವೆ. ಬೊಜ್ಜಿನ ಮೂಲ ಆಹಾರ ಪದ್ಧತಿಯಲ್ಲಿದೆ. ಅಧಿಕ ಉಪ್ಪು, ಸಕ್ಕರೆ, ಎಣ್ಣೆಯಲ್ಲಿ ಕರಿದ ಪದಾರ್ಥಗಳ ಸೇವನೆಯು ಸ್ಥೂಲಕಾಯಕ್ಕೆ ಕಾರಣವಾಗುವುದಲ್ಲದೆ, ತೀವ್ರಗತಿಯಲ್ಲಿ ಕಾಯಿಲೆಗಳು ಹೆಚ್ಚಾಗಲು ಕಾರಣವಾಗಿದೆ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರು ಈ ಬಾರಿಯ 'ಮನದ ಮಾತು' ಕಾರ್ಯಕ್ರಮದಲ್ಲಿ ದೇಶದ ಜನರಿಗೆ ಹೊಸ ಸಂದೇಶವೊಂದನ್ನು ನೀಡಿದ್ದಾರೆ. ಬೊಜ್ಜಿನ ಸಮಸ್ಯೆ ನಿವಾರಿಸಲು ಆಹಾರದಲ್ಲಿ ಬಳಸುವ ಅಡುಗೆ ಎಣ್ಣೆಯ ಪ್ರಮಾಣವನ್ನು ಪ್ರತಿ ತಿಂಗಳು ಶೇ 10ರಷ್ಟು ಕಡಿತ ಮಾಡುವಂತೆ ಮನವಿ ಮಾಡಿದ್ದಾರೆ. ಇದಕ್ಕಾಗಿ ಒಂದು ಅಭಿಯಾನವನ್ನೇ ಆರಂಭಿಸಿದ್ದು, ಜನಜಾಗೃತಿ ಮೂಡಿಸಲು ವಿವಿಧ ಕ್ಷೇತ್ರಗಳ 10 ಮಂದಿ ಗಣ್ಯರನ್ನು ನಾಮ ನಿರ್ದೇಶನ ಮಾಡಿದ್ದಾರೆ.

ಈ ಅಭಿಯಾನವು ಬೊಜ್ಜಿನ ಸಮಸ್ಯೆಯ ತೀವ್ರತೆಯನ್ನು ಹೇಳುತ್ತಿದೆ. ಮಧುಮೇಹ, ರಕ್ತದೊತ್ತಡ, ಹೃದಯದ ಕಾಯಿಲೆಗಳಿಂದ ಮುಕ್ತವಾಗಿ ಆರೋಗ್ಯಕರ ಜೀವನ ನಡೆಸುವುದು ಭಾರತೀಯರ ಮಟ್ಟಿಗೆ ಇಂದು ಭಾರಿ ಸವಾಲೇ ಆಗಿದೆ. ಚಿಕ್ಕ ವಯಸ್ಸಿನಲ್ಲೇ ಜನರ ಪ್ರಾಣಕ್ಕೆ ಸಂಚಕಾರ ತರುತ್ತಿರುವ ಈ ಕಾಯಿಲೆಗಳ ಹಿಂದೆ ಬೊಜ್ಜಿನ ಕೊಡುಗೆ ಇದೆ. ಲಿಂಗ, ವಯಸ್ಸು, ಆರ್ಥಿಕ ಸ್ಥಿತಿಗತಿಗಳ ಭೇದವಿಲ್ಲದೇ ಎಲ್ಲರಲ್ಲೂ ಬೊಜ್ಜಿನ ಸಮಸ್ಯೆ ಹೆಚ್ಚಾಗುತ್ತಿದೆ. ಇದೆಲ್ಲಕ್ಕೂ ಮೂಲ ಜನರು ತಿನ್ನುವ ಆಹಾರ ಎನ್ನುವುದನ್ನು ಅಧ್ಯಯನ ವರದಿಗಳು ಹೇಳುತ್ತಲೇ ಇವೆ.

ಅಂತರರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯ (ಐಎಫ್‌ಪಿಆರ್‌ಐ) ಜಾಗತಿಕ ಆಹಾರ ಪದ್ಧತಿ ವರದಿ–2024ರ ಪ್ರಕಾರ, ಭಾರತೀಯರ ಆಹಾರ ಪದ್ಧತಿಯಲ್ಲಿ ಅನಾರೋಗ್ಯಕರ ಅಂಶಗಳು ಹಲವು ಇವೆ. ದೇಶದ ಶೇ 38 ಮಂದಿ ಅಧಿಕ ಉಪ್ಪು ಇರುವ, ಎಣ್ಣೆಯಲ್ಲಿ ಕರಿದ ಪದಾರ್ಥ ಸೇರಿದಂತೆ ಅನಾರೋಗ್ಯಕರ ಆಹಾರ ಸೇವಿಸುತ್ತಿದ್ದಾರೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) 2024ರ ಏಪ್ರಿಲ್‌ನಲ್ಲಿ ಆಹಾರ ಸೇವನೆ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ದೇಶದಲ್ಲಿ ಶೇ 56.4ರಷ್ಟು ಕಾಯಿಲೆಗಳು ಆರೋಗ್ಯಕರವಲ್ಲದ ಆಹಾರ ಸೇವನೆಯಿಂದಲೇ ಬರುತ್ತಿವೆ ಎಂದು ಪ್ರತಿಪಾದಿಸಿದೆ. ದೇಶದ ಜನರನ್ನು ಕಾಡುತ್ತಿರುವ ಬೊಜ್ಜಿನ ಸಮಸ್ಯೆಯ ಕುರಿತಾಗಿ 2023–24ರ ಆರ್ಥಿಕ ಸಮೀಕ್ಷೆ ತೀವ್ರ ಕಳವಳ ವ್ಯಕ್ತಪಡಿಸಿತ್ತು.

ಜನರ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿರುವುದು, ಅಡುಗೆ ಎಣ್ಣೆ, ಕೊಬ್ಬು, ಸಕ್ಕರೆ ಬಳಸಿದ ಆಹಾರಗಳ ಸೇವನೆ ಹೆಚ್ಚಿರುವುದು, ಪಿಜ್ಜಾ, ಬರ್ಗರ್, ಫ್ರೆಂಚ್ ಫ್ರೈಗಳಂತಹ ಜಂಕ್ ಫುಡ್ ಸೇವನೆ, ಆಹಾರದಲ್ಲಿ ವೈವಿಧ್ಯ, ಸೂಕ್ಷ್ಮ ಪೋಷಕಾಂಶಗಳ ಕೊರತೆ ಇರುವ ಕಾರಣಕ್ಕೆ ಭಾರತದಲ್ಲಿ ಬೊಜ್ಜಿನ ಸಮಸ್ಯೆ ಗಣನೀಯವಾಗಿ ಹೆಚ್ಚಳವಾಗಿದೆ; ಮಕ್ಕಳಲ್ಲಿಯೂ ಸ್ಥೂಲಕಾಯದ ಏರಿಕೆ ಪ್ರಮಾಣ ಜಾಗತಿಕ ಮಟ್ಟಕ್ಕೆ ಹೋಲಿಸಿದರೆ ವಿಪರೀತ ಹೆಚ್ಚುತ್ತಿದೆ ಎಂದು ವಿಶ್ವ ಸ್ಥೂಲಕಾಯ ಒಕ್ಕೂಟ ಹೇಳಿದೆ.

ಬೊಜ್ಜು ಜಾಗತಿಕ ಮಟ್ಟದಲ್ಲಿಯೂ ದೊಡ್ಡ ಸಮಸ್ಯೆಯಾಗಿದೆ. ಲ್ಯಾನ್ಸೆಟ್ ವರದಿ ಪ್ರಕಾರ, 1990ರಿಂದ 2022ರ ನಡುವೆ ಜಗತ್ತಿನಲ್ಲಿ ಬೊಜ್ಜು ಹೊಂದಿರುವವರ ಸಂಖ್ಯೆ ದುಪ್ಪಟ್ಟಾಗಿದೆ.

ಹಲವು ರೀತಿಯ ಕಾಯಿಲೆಗಳಿಗೆ ಕಾರಣವಾಗುವ ಬೊಜ್ಜು ದೀರ್ಘಾವಧಿಯ ಸಮಸ್ಯೆ. ಇದು ದೇಹದ ವಿವಿಧ ಅಂಗಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಮುಕ್ತಿ ಹೊಂದಿ, ಆರೋಗ್ಯಕರ ಜೀವನ ಸಾಗಿಸಬೇಕೆಂದರೆ, ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಮುಖ್ಯವಾಗಿ ಆರೋಗ್ಯಕರವಾದ ಆಹಾರ ಸೇವಿಸಬೇಕು. ನಾರಿನ ಅಂಶ ಹೆಚ್ಚಿರುವ ಪದಾರ್ಥ, ಹಸಿರು ತರಕಾರಿ, ಸೊಪ್ಪು, ಧಾನ್ಯ, ಮೊಟ್ಟೆ, ಮೀನು, ಮಾಂಸ ಉತ್ತಮ ಆರೋಗ್ಯಕ್ಕೆ ಸಹಕಾರಿ. ಕಾರ್ಬೋಹೈಡ್ರೇಟ್ಸ್ (ಶರ್ಕರಪಿಷ್ಟ) ಇರುವ ಆಹಾರ ಮಿತವಾಗಿ ಸೇವಿಸಬೇಕು ಎನ್ನುವುದು ತಜ್ಞರ ಸಲಹೆ.

ಕಾಯಿಲೆಗಳನ್ನು ತಡೆಯುವಲ್ಲಿ, ಆಹಾರ ಸೇವನೆಯಷ್ಟೇ ದೈಹಿಕ ಚಟುವಟಿಕೆಯೂ ಮುಖ್ಯ ಪಾತ್ರ ವಹಿಸುತ್ತದೆ. ವಯಸ್ಕರಿಗೆ ವಾರಕ್ಕೆ 150 ನಿಮಿಷ ಮಧ್ಯಮ ತೀವ್ರತೆಯ ಅಥವಾ 75 ನಿಮಿಷ ಭಾರಿ ತೀವ್ರತೆಯ ದೈಹಿಕ ಚಟುವಟಿಕೆ ಅಥವಾ ವ್ಯಾಯಾಮ ಅಗತ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಪ್ರಸ್ತುತ ಭಾರತದಲ್ಲಿ ತಲಾ ಅಡುಗೆ ಎಣ್ಣೆ ಬಳಕೆಯ ಪ್ರಮಾಣ ವಾರ್ಷಿಕವಾಗಿ 20 ಕೆ.ಜಿ.ಗೂ ಅಧಿಕ ಇದೆ ಎನ್ನಲಾಗಿದೆ. ಐಸಿಎಂಆರ್ ಪ್ರಕಾರ, ತಲಾ ಅಡುಗೆ ಎಣ್ಣೆ ಬಳಕೆ ವಾರ್ಷಿಕ ಮಿತಿ 12 ಕೆ.ಜಿ., ಡಬ್ಲ್ಯುಎಚ್‌ಒ ಪ್ರಕಾರ ತಲಾ 13 ಕೆ.ಜಿ. ಇರಬೇಕು.

ಎಣ್ಣೆ ಪದಾರ್ಥ ಸೇವನೆ ಕಡಿಮೆ ಮಾಡಿ

ದೊಡ್ಡವರಲ್ಲಿ ಮಾತ್ರವಲ್ಲ, ಮಕ್ಕಳಲ್ಲೂ ಸ್ಥೂಲಕಾಯದ ಸಮಸ್ಯೆ ಹೆಚ್ಚುತ್ತಿದೆ. ಎಣ್ಣೆಯಲ್ಲಿ ಕರಿದ ಪದಾರ್ಥಗಳ ಸೇವನೆ ಒಳ್ಳೆಯದಲ್ಲ. ಕುರುಕಲು ತಿಂಡಿಗಳ ಅತಿಯಾದ ಸೇವನೆಯೂ ಮುಖ್ಯ ಕಾರಣ. ಮಕ್ಕಳಲ್ಲಿ ದೈಹಿಕ ಚಟುವಟಿಕೆಗಳು ಕಡಿಮೆಯಾಗುತ್ತಿದ್ದು, ಟಿ.ವಿ. ವೀಕ್ಷಿಸುತ್ತಾ ಕುರುಕಲು ತಿಂಡಿ ತಿನ್ನುವವರ ಸಂಖ್ಯೆ ಹೆಚ್ಚುತ್ತಿದೆ. ಇದು ಮಕ್ಕಳಿಗೆ ಅಪಾಯ ತಂದೊಡ್ಡುವ ಸಾಧ್ಯತೆಯಿದೆ. ಆದ್ದರಿಂದ ಎಣ್ಣೆಯಲ್ಲಿ ಕರಿದ ತಿನಿಸುಗಳ ಸೇವನೆ ಕಡಿಮೆ ಮಾಡಬೇಕು. ಬಾಲ್ಯಾವಸ್ಥೆಯಲ್ಲಿ ಕಂಡು ಬರುವ ಸ್ಥೂಲಕಾಯವು ಬಹುಬೇಗ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ, ನಿದ್ರಾಹೀನತೆ, ಸಂಧಿವಾತ ಸೇರಿ ವಿವಿಧ ಸಮಸ್ಯೆಗಳಿಗೆ ಕಾರಣವಾಗಬಹುದು

ಡಾ.ಸಂಜಯ್ ಕೆ.ಎಸ್.
ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಕಲಬೆರಕೆ ಅಡುಗೆ ಎಣ್ಣೆಯಿಂದಲೂ ಕುತ್ತು



ಭಾರತದಲ್ಲಿ ಕಲಬೆರಕೆ ಅಡುಗೆ ಎಣ್ಣೆಯ ಸಮಸ್ಯೆಯೂ ತೀವ್ರವಾಗಿದ್ದು, ಇದು ಕೂಡ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ರಿಫೈನ್ಡ್ ಅಡುಗೆ ಎಣ್ಣೆ ದೇಶದಲ್ಲಿ ದುಬಾರಿ. ರಿಫೈನ್ಡ್ ಮಾಡದೇ ಇರುವ ಎಣ್ಣೆ ಮತ್ತೂ ದುಬಾರಿ. ಆರ್ಥಿಕವಾಗಿ ದುರ್ಬಲವಾಗಿರುವವರಿಗೆ ಅಷ್ಟು ಹಣ ನೀಡಿ ಅಡುಗೆ ಎಣ್ಣೆಯನ್ನು ಅಥವಾ ಅಂತಹ ಎಣ್ಣೆಯನ್ನೇ ಬಳಸಿ ತಯಾರಿಸಿದ ಆಹಾರ ಪದಾರ್ಥಗಳನ್ನು ಖರೀದಿಸುವ ಶಕ್ತಿ ಇಲ್ಲ. ಇದೇ ಅವಕಾಶವನ್ನು ಬಳಸಿಕೊಳ್ಳುವ ಅಡುಗೆ ಎಣ್ಣೆ ಮಾಫಿಯಾವು ಕಡಿಮೆ ಬೆಲೆಗೆ ಕಲಬೆರಕೆ ಎಣ್ಣೆಯನ್ನು ಮಾರುಕಟ್ಟೆಗೆ ಬಿಡುತ್ತಿದೆ. ಅಗ್ಗ ಎನ್ನುವ ಕಾರಣಕ್ಕೆ ಬಡ ಕುಟುಂಬಗಳು, ರಸ್ತೆ ಬದಿಗಳಲ್ಲಿ ತಳ್ಳುಗಾಡಿಗಳಲ್ಲಿ ಫಾಸ್ಟ್‌ಫುಡ್ ಅಂಗಡಿಗಳನ್ನು ಇಟ್ಟವರು, ಸಣ್ಣಪುಟ್ಟ ಹೋಟೆಲ್‌ಗಳನ್ನು ನಡೆಸುತ್ತಿರುವವರು ಇಂತಹ ಎಣ್ಣೆಯನ್ನೇ ಅಡುಗೆಗೆ ಬಳಸುತ್ತಾರೆ. ಇದಲ್ಲದೇ, ಹೋಟೆಲ್, ಬೇಕರಿ, ಆಹಾರ ಮಳಿಗೆಗಳಲ್ಲಿ ಒಮ್ಮೆ ಕರಿದ ಎಣ್ಣೆಯಲ್ಲೇ ಮತ್ತೆ ಮತ್ತೆ ಆಹಾರಗಳನ್ನು ಕರಿಯುವುದು ಕೂಡ ಗ್ರಾಹಕರ ಆರೋಗ್ಯಕ್ಕೆ ಮುಳುವಾಗುತ್ತಿದೆ.

ಪ್ರಧಾನಿ ಕರೆಗೆ ಸಿಗುವುದೇ ಸ್ಪಂದನೆ?

ಪ್ರಧಾನಿ ಮೋದಿ ಅವರು 'ಮನದ ಮಾತು' ಕಾರ್ಯಕ್ರಮದಲ್ಲಿ ನೀಡಿರುವ ಕರೆಯನ್ನು ವೈದ್ಯರು, ಸೆಲೆಬ್ರಿಟಿಗಳು ಸೇರಿದಂತೆ ವಿವಿಧ ವಲಯಗಳ ಕೆಲವು ಗಣ್ಯರು ಸ್ವಾಗತಿಸಿದ್ದಾರೆ.

2015ರ ಮಾರ್ಚ್‌ನಲ್ಲಿ ಮೋದಿ ಅವರು 'ಅನುಕೂಲಸ್ಥರು ಎಲ್‌ಪಿಜಿ ಸಬ್ಸಿಡಿ ಬಿಟ್ಟುಕೊಡಿ. ಇದರಿಂದ ಬಡವರಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡಲು ಸಹಾಯವಾಗಲಿದೆ' ಎಂದು ಕರೆ ನೀಡಿದ್ದರು. ಸುಮಾರು ಒಂದು ಕೋಟಿ ಮಂದಿ ತಮ್ಮ ಎಲ್‌ಪಿಜಿ ಸಬ್ಸಿಡಿ ಬಿಟ್ಟುಕೊಟ್ಟಿದ್ದಾರೆ ಎಂದು ವರದಿಯಾಗಿತ್ತು (ಕೊನೆಗೆ, ಸರ್ಕಾರ ಸದ್ದಿಲ್ಲದೇ ಎಲ್‌ಪಿಜಿ ಸಬ್ಸಿಡಿ ರದ್ದು ಮಾಡಿತ್ತು).

ವಿವಿಧ ವಿಷಯಗಳ ಬಗ್ಗೆ ದೇಶದ ಜನರಲ್ಲಿ ಜಾಗೃತಿ ಮೂಡಿಸಲು ಮೋದಿ ಅವರು 'ಮನದ ಮಾತು' ವೇದಿಕೆಯನ್ನು ಬಳಸಿಕೊಳ್ಳುತ್ತಿದ್ದು, ಈ ಹಿಂದೆ ಖಾದಿ ಬಟ್ಟೆ ಬಳಕೆ, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸುವುದು ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ಪ್ರಸ್ತಾಪಿಸಿದ್ದರು.



ಆಹಾರ ಮತ್ತು ಕಾಯಿಲೆ

38%
ಭಾರತದ ಒಟ್ಟು ಜನಸಂಖ್ಯೆಯಲ್ಲಿ ಪ್ರತಿ ದಿನ ಅನಾರೋಗ್ಯಕರ (ಉಪ್ಪು ಹೆಚ್ಚಾದ, ಎಣ್ಣೆಯಲ್ಲಿ ಕರಿದ ತಿಂಡಿಗಳು ಇತ್ಯಾದಿ) ಆಹಾರವನ್ನು ಸೇವಿಸುತ್ತಿರುವವರ ಪ್ರಮಾಣ

56.4%
ಭಾರತದಲ್ಲಿ ಅನಾರೋಗ್ಯಕರ ಆಹಾರ ಸೇವನೆಯಿಂದ ಬರುವ ಕಾಯಿಲೆಗಳ ಪ್ರಮಾಣ

ಆಧಾರ: ಪಿಟಿಐ, ಲ್ಯಾನ್ಸೆಟ್ ವರದಿ, ಡೌನ್‌ಟು ಅರ್ಥ್, ವಿಶ್ವ ಆರೋಗ್ಯ ಸಂಸ್ಥೆ, ಆರ್ಥಿಕ ಸಮೀಕ್ಷೆ–2024–25



ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಹೇಳುವುದೇನು?

ಭಾರತದ ವಯಸ್ಕರಲ್ಲಿ ಬೊಜ್ಜಿನ ಸಮಸ್ಯೆ ಹೆಚ್ಚುತ್ತಿರುವುದು ಕಳವಳಕಾರಿ ಎಂದು 2023–24ನೇ ಸಾಲಿನ ಆರ್ಥಿಕ ಸಮೀಕ್ಷೆ ಅಭಿಪ್ರಾಯಪಟ್ಟಿತ್ತು. 2019–21ರಲ್ಲಿ ನಡೆದಿದ್ದ 5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಮತ್ತು 2014–16ರಲ್ಲಿ ನಡೆದಿದ್ದ 4ನೇ ಎನ್‌ಎಫ್‌ಎಚ್‌ಎಸ್‌ನ ಅಂಕಿ ಅಂಶಗಳನ್ನು ಸಮೀಕ್ಷೆಯು ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಪುರುಷರು ಮತ್ತು ಮಹಿಳೆ ಇಬ್ಬರಲ್ಲೂ ಬೊಜ್ಜಿನ ಸಮಸ್ಯೆ ಹೆಚ್ಚಾಗಿರುವುದನ್ನು ಆರೋಗ್ಯ ಸಮೀಕ್ಷೆ ಬೆಟ್ಟು ಮಾಡಿದೆ.



'ಉಗ್ರಾಣ'ದಲ್ಲಿ ಅನಿತಾ ಭಟ್

ಅನಿತಾ ಭಟ್ ಹಾಗೂ ಪವನ್ ಶೆಟ್ಟಿ ನಟನೆಯ 'ಉಗ್ರಾಣ' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಿಶಿಕೇಶ್ ಚಿತ್ರದ ನಿರ್ದೇಶನದ ಜೊತೆಗೆ ಸಂಕಲನ, ಛಾಯಾಚಿತ್ರಗ್ರಹಣದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.

'ಮಿಸ್ಟ್ರಿ, ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿರುವುದರಿಂದ ಕಥೆಯ ಎಳೆಯನ್ನು ಈಗಲೇ ಹೇಳುವುದಿಲ್ಲ. ಈ 'ಉಗ್ರಾಣ' ರಹಸ್ಯ ಹೊಂದಿರುವ ಜಾಗ. ಕನ್ನಡ ಮತ್ತು ತೆಲುಗಿನಲ್ಲಿ ಚಿತ್ರ ಮೂಡಿಬರುತ್ತಿದೆ. ಬೆಂಗಳೂರು, ಹೈದರಬಾದ್, ಸಾಗರ, ತೀರ್ಥಹಳ್ಳಿ, ಮೂಡುಬಿದಿರೆ, ಸಿರ್ಸಿ, ಗೋಕರ್ಣ, ಹೊಸಗುಂದದ ಪುರಾತನ ದೇವಸ್ಥಾನದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದಿದ್ದಾರೆ ನಿರ್ದೇಶಕರು. ಈ ಚಿತ್ರದ ಮೂಲಕ ನಟಿ ಅನಿತಾ ಭಟ್ ನಿರ್ಮಾಪಕಿಯಾಗಿದ್ದು, ಎಬಿಸಿ ಪ್ರೊಡಕ್ಷನ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ತೆಲುಗಿನ ಷಫಿ, ಕೆ.ಜಿ.ಕೃಷ್ಣಮೂರ್ತಿ, ಸಿದ್ದು ಮೂಲಮನಿ, ಮಿಮಿಕ್ರಿ ಗೋಪಿ, ಕರಿಸುಬ್ಬು ಮುಂತಾದವರು ಚಿತ್ರದಲ್ಲಿದ್ದಾರೆ. ಕವಿರಾಜ್ ಸಾಹಿತ್ಯವಿದ್ದು, ಆಕಾಶ್ ಪರ್ವ ಸಂಗೀತ ಸಂಯೋಜಿಸಿದ್ದಾರೆ. ❖

'ಗಣಿ ಬಿ.ಕಾಂ ಪಾಸ್' ಮುಂದಿನ ಭಾಗ

'ನಮ್ ಗಣಿ ಬಿ.ಕಾಂ ಪಾಸ್' ಮೂಲಕ ನಾಯಕ, ನಿರ್ದೇಶಕರಾಗಿದ್ದ ಅಭಿಷೇಕ್ ಶೆಟ್ಟಿ 'ಗಣಿ ಬಿ. ಕಾಂ ಪಾಸ್ 2' ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ಚಿತ್ರ ತೆರೆಗೆ ಬರಲಿದೆ.

ಅಭಿಷೇಕ್ ಶೆಟ್ಟಿ, ಐಶಾನಿ ಶೆಟ್ಟಿ ಜೋಡಿಯಾಗಿ ನಟಿಸಿದ್ದ 'ನಮ್ ಗಣಿ ಬಿ.ಕಾಂ ಪಾಸ್' ಪ್ರೇಕ್ಷಕರ ಮೆಚ್ಚುಗೆ ಗಳಿಸಿತ್ತು. ಅದಾದ ಬಳಿಕ ಅಭಿಷೇಕ್ 'ಗಜಾನನ ಆಂಡ್ ಗ್ಯಾಂಗ್', 'ಆರಾಮ್ ಅರವಿಂದ್ ಸ್ವಾಮಿ' ಚಿತ್ರಗಳನ್ನು ನಿರ್ದೇಶಿಸಿದರು. ಆದರೆ ಅವು ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ. ಇದೀಗ ಮತ್ತೆ ನಟನೆಗೆ ಮರಳಿದ್ದು, ತಮಗೆ ಯಶಸ್ಸು ನೀಡಿದ್ದ ಮೊದಲ ಚಿತ್ರದ ಸಿಕ್ವೆಲ್ ಕಥೆಯನ್ನು ಕೈಗೆತ್ತಿಕೊಂಡಿದ್ದಾರೆ.

'ನಮ್ ಗಣಿ' 2019ರಲ್ಲಿ ತೆರೆ ಕಂಡಿತ್ತು. ಅದರ ಮುಂದಿನ ಭಾಗವಿದು. ಕೌಟಂಬಿಕ ಕಥಾಹಂದರದ ಚಿತ್ರವಾಗಿದ್ದು, ಹಲವಾರು ಭಾವನೆಗಳನ್ನು, ಕೌಟುಂಬಿಕ ಮೌಲ್ಯಗಳನ್ನು ಹೊಂದಿದೆ' ಎಂದಿದೆ ಚಿತ್ರತಂಡ. ಹೃತಿಕಾ ಶ್ರೀನಿವಾಸ್, ದಿವ್ಯಾ ಸುರೇಶ್, ಸುಧಾ ಬೆಳವಾಡಿ, ಜಹಂಗೀರ್, ರಾಘು ರಾಮನಕೊಪ್ಪ ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ಆನಂದ್ ರಾಜವಿಕ್ರಮ್ ಸಂಗೀತ ಸಂಯೋಜನೆಯಿದೆ. ಬಿ.ಎಸ್ ಪ್ರಶಾಂತ್ ಶೆಟ್ಟಿ ಮತ್ತು ಪ್ರಶಾಂತ್ ರೆಡ್ಡಿ ಬಂಡವಾಳ ಹೂಡಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 27, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ದಶಿ ಗಂ. 08-55 ನಂತರ ಅಮಾವಾಸ್ಯೆ ಗಂ. 30-15 ನಕ್ಷತ್ರ: ಧನಿಷ್ಠ ಗಂ. 15-44 ಯೋಗ: ಶಿವ ಗಂ. 23-41 ಕರಣ: ಶಕುನಿ ಗಂ. 08-55, ಕುಂಭ ಮಾಸದ 15 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-51 **ಸೂರ್ಯಾಸ್ತ:** 06-35
ಮುಸ್ಲಿಂ ದಿನಾಂಕ: 28 ಶಬನ್
ಅದೃಷ್ಟ ಸಂಖ್ಯೆ: 5, 6

ಮೇಷ: ಕಳೆದು ಹೋದ ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ನಿಷ್ಪ್ರಯೋಜಕ. ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಕೆಲಸಕ್ಕೆ ಅಡ್ಡಿ ಆತಂಕವಿರುವುದಿಲ್ಲ.

ವೃಷಭ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡಿ. ಹಿಂದೆ ಕೆಲಸಗಳನ್ನು ಉಳಿಸಿಕೊಂಡ ಕಾರಣದಿಂದಾಗಿ ಅಧಿಕ ಕಾರ್ಯದೊತ್ತಡ ಅನುಭವಿಸುವಿರಿ.

ಮಿಥುನ: ಸಂಸಾರದಲ್ಲಿ ಯಾವುದೇ ಕಾರಣಕ್ಕೂ ಅನುಮಾನಗಳಿಗೆ ಜಾಗ ನೀಡಬೇಡಿ. ನಂಬಿಕೆ ವಿಶ್ವಾಸವಿರಲಿ. ಸಮಸ್ಯೆಗಳಿಗೆ ಪರಿಹಾರ ಕೇಳಬೇಕಾದವರಲ್ಲಿ ಕೇಳದೆ ಇದ್ದರೆ ಕೆಲಸ ಸಾಗದು.

ಕರ್ಕಾಟಕ: ಬಾಡಿಗೆಗೆ ಕೊಟ್ಟಿರುವ ಕಟ್ಟಡ ಅಥವಾ ಯಂತ್ರದಲ್ಲಿ ಪದೇ ಪದೇ ಬರುತ್ತಿರುವ ದುರಸ್ತಿ ಕಾರ್ಯ ನಿದ್ರಾಹೀನತೆಗೆ ಕಾರಣವಾಗುವುದು. ಓದು ಹಾಗೂ ವೃತ್ತಿಯ ಮಧ್ಯದಲಿ ಆಯ್ಕೆ ನಿಮಗೆ ಕಷ್ಟಕರವಾಗುವುದು.

ಸಿಂಹ: ಸಣ್ಣ ನೋವಿಗಾಗಿ ವೈದ್ಯರನ್ನು ಭೇಟಿ ಮಾಡಿದ ನಿಮಗೆ ತಪಾಸಣೆಯಿಂದ ಬಂದ ಫಲಿತಾಂಶ ಆತಂಕ ಸೃಷ್ಟಿ ಮಾಡಲಿದೆ. ಆದಷ್ಟು ಬೇಗ ಸರಿಯಾದ ವ್ಯಕ್ತಿಯನ್ನು ಸಂಪರ್ಕಿಸುವುದರಿಂದ ಅನಾರೋಗ್ಯ ಗುಣವಾಗುವುದು.

ಕನ್ಯಾ: ಯಾವುದೇ ವಿಚಾರವಾಗಿದ್ದರೂ ಕ್ಷಿಪ್ರ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಇಂದಿನ ಮಟ್ಟಿಗೆ ಸಮಯ ಕೊಟ್ಟಷ್ಟು ನಿರ್ಧಾರಗಳು ಪಕ್ವವಾಗುವುದು. ಮಗಳ ವಿವಾಹ ಪ್ರಸ್ತಾವನೆ ನಡೆದು ಶುಭದಲ್ಲಿ ಮುಕ್ತಾಯವಾಗಲಿದೆ.

ತುಲಾ: ಕಲಾ ವಿದ್ಯಾರ್ಥಿಗಳಿಗೆ ಅದರಲ್ಲೂ ವಿಶೇಷವಾಗಿ ಸಂಗೀತ ಶಾಸ್ತ್ರದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅಧಿಕ ಸಮಯ ಸಿಗುವುದು. ಉದ್ಯೋಗದ ನಿಮಿತ್ತ ಕಚೇರಿಯಲ್ಲಿದ್ದ ಸಮಸ್ಯೆ ತನ್ನಿಂತಾನೆ ಬಗೆಹರಿಯುವುದು.

ವೃಶ್ಚಿಕ: ಮಾತಿನ ಚತುರತೆಯಿಂದ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಮಗ ಅಥವಾ ಮಗಳಿಗೆ ಸಂಸಾರದ ಮುಂದಿನ ಜವಾಬ್ದಾರಿಗಳನ್ನು ವಹಿಸಿ ಕೊಡುವಿರಿ.

ಧನು: ಸಹೋದರಿಯ ಸಹಾಯದಿಂದ ಅಧ್ಯಯನದಲ್ಲಿ ಸಹಾಯವಾಗಲಿದೆ. ಎದುರಿನಲ್ಲಿರುವ ವ್ಯಕ್ತಿಯ ಮನಸ್ಸಿನ ಭಾವನೆ ಅವರ ಮಾತಿನಲ್ಲಿ ವ್ಯಕ್ತವಾಗುತ್ತದೆ. ಅದನ್ನು ಅರಿತುಕೊಂಡು ಮುಂದಿನ ವ್ಯವಹಾರಕ್ಕೆ ಇಳಿಯಿರಿ.

ಮಕರ: ಕಿವಿ ಅಥವಾ ಕಣ್ಣಿನ ಸಮಸ್ಯೆಗಳಿಗೆ ಆಸ್ಪತ್ರೆಗೆ ಭೇಟಿ ನೀಡಬೇಕಾಗಬಹುದು. ಪ್ರಯಾಣವನ್ನು ಮಾಡಿದಲ್ಲಿ ನಿದ್ರಾಹೀನತೆ ಕಾಡಬಹುದು. ಕಠಿಣ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸುವ ಚಾಕಚಕ್ಯತೆ ಬೆಳೆಸಿಕೊಳ್ಳುವಿರಿ.

ಕುಂಭ: ಸಹಾಯ ಮಾಡಿದವರಲ್ಲಿ ಕೃತಜ್ಞತಾ ಭಾವವನ್ನು ಇಟ್ಟುಕೊಳ್ಳುವುದು ಅಗತ್ಯ. ಮಾತು ಮತ್ತು ಕೃತಿಯಲ್ಲಿ ಸಾಮ್ಯತೆಯನ್ನು ಇಟ್ಟುಕೊಳ್ಳಿ. ಮಕ್ಕಳ ಸಾಧನೆಯಿಂದ ಹೃದಯ ತುಂಬಿದ ಅನುಭವ ಉಂಟಾಗಲಿದೆ.

ಮೀನ: ಆರೋಗ್ಯದ ದೃಷ್ಟಿಯಿಂದಾಗಿ ನಾಲಿಗೆಗೆ ರುಚಿಸದಂಥ ಆಹಾರವನ್ನು ಸೇವಿಸಬೇಕಾಗುವುದು. ನಿರ್ಭಯತ್ವವು ಇತರರ ದೃಷ್ಟಿಗೆ ಕಾರಣವಾಗುವುದು. ಮಗುವಿನ ಆರೋಗ್ಯದ ಮೇಲೆ ಗಮನವಿಡಿ.

ಡೊನೇಷನ್ ಇಲ್ಲದೆ ಪಾಠ ಕಲಿಸುವ ಶಾಲೆ

ನುಡಿ ಬೆಳಗು
ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ
141

ನೀವು ಯಾವುದೇ ಶಾಲೆಗೆ ನಿಮ್ಮ ಮಕ್ಕಳನ್ನು ಸೇರಿಸಿದರೂ ಡೊನೇಷನ್ ತೆಗೆದುಕೊಳ್ಳುತ್ತಾರೆ. ಆದರೆ, ನಿಮ್ಮ ಮಕ್ಕಳಿಗೆ ಡೊನೇಷನ್ ಇಲ್ಲದೆ ಪಾಠ ಹೇಳಿಕೊಡುವ ಶಾಲೆ ಎಂದರೆ ಅದು ಜೀವನ ಮಾತ್ರ. ಜೀವನ ಹಲವು ಪಾಠಗಳನ್ನು ಕಲಿಸುತ್ತದೆ. ತಂದೆ ತಾಯಿಗಳೂ ಮಕ್ಕಳಿಗೆ ಜೀವನದ ಪಾಠ ಹೇಳಿಕೊಡಬೇಕು.ಅಬ್ರಾಹಂ ಲಿಂಕನ್ ಅಮೆರಿಕದ ಅಧ್ಯಕ್ಷರಾಗಿದ್ದರು. ಅವರು ತಮ್ಮ ಮಗ ಯಾವ ಶಾಲೆಯಲ್ಲಿ ಓದುತ್ತಿದ್ದನೋ, ಆ ಶಾಲೆಯ ಮಾಸ್ತರ್‌ಗೆ ಪತ್ರ ಬರೆದಿದ್ದರು. 'ನನ್ನ ಮಗ ಬಹಳ ಚೊಲೋ ಇದ್ದಾನೆ. ದಾರಿಯಲ್ಲಿ ಹೋಗುವಾಗ ಸಿಕ್ಕ 5 ರೂಪಾಯಿಗಿಂತ ಕಷ್ಟಪಟ್ಟು ದುಡಿದ ಒಂದು ರೂಪಾಯಿಯ ಬೆಲೆ ಹೆಚ್ಚು ಅನ್ನೋದನ್ನು ನನ್ನ ಮಗನಿಗೆ ಕಲಿಸಿರಿ' ಎಂದು ಪತ್ರದಲ್ಲಿ ಹೇಳಿದ್ದರು.

ಒಬ್ಬ ಹುಡುಗ ಇದ್ದ. ತಾಯಿ, ಪ್ರತಿ ದಿನ ಬೆಳಿಗ್ಗೆ ಅವನನ್ನು ಎಬ್ಬಿಸಿ ಸ್ನಾನ ಮಾಡಿಸಿ ಕೂದಲು ಬಾಚಿ, ಶೂ ಹಾಕಿ ಟೈ ಕಟ್ಟಿ ಶಾಲೆ ಬಸ್ಸು ಹತ್ತಿಸುತ್ತಿದ್ದಳು. ಆದರೂ ಅವ ಫೇಲಾದ. ಅಲ್ಲೇ ಪಕ್ಕದಲ್ಲಿದ್ದ ಗುಡಿಸಿಲಿನಲ್ಲಿಯೂ ಒಬ್ಬ ಹುಡುಗ ಇದ್ದ. ಅವನಿಗೆ ಯಾರೂ ಎಬ್ಬಿಸುವವರು ಇರಲಿಲ್ಲ. ಸ್ನಾನ ಮಾಡಿಸುವವರೂ ಇರಲಿಲ್ಲ. ಆದರೂ ಅವ ಮೊದಲನೇ ಸ್ಥಾನ ಪಡೆದ. ಯಾಕೆ? ಇದನ್ನು ವಿಚಾರ ಮಾಡಬೇಕಲ್ಲ ಪೋಷಕರು. ಎಲ್ಲ ಅನುಕೂಲ ಇದ್ದರೂ ನಮ್ಮ ಮಕ್ಕಳು ಯಾಕೆ ಓದುತ್ತಿಲ್ಲ? ಯಾವುದೇ ಅನುಕೂಲ ಇಲ್ಲದಿದ್ದರೂ ಕೆಲವು ಮಕ್ಕಳು ಓದಿ ಶ್ಯಾಣ್ಯಾರಾಗಿದ್ದಾರೆ ಯಾಕೆ ಎನ್ನುವುದನ್ನು ವಿಚಾರ ಮಾಡಬೇಕು.

ಚಾಣಕ್ಯ ಅಂತ ಇದ್ದ. ಕೌಟಿಲ್ಯ ಅರ್ಥಶಾಸ್ತ್ರ ಬರೆದ. ನಂದ ರಾಜ್ಯಕ್ಕೆ ಹೋದಾಗ ಅವನನ್ನು ಅವಮಾನ ಮಾಡಲಾಯಿತು. ಕೌಟಿಲ್ಯ ಬಹಳ ಬಡವ. ನಾಲ್ಕಾರು ಮಕ್ಕಳನ್ನು ಕಟ್ಟಿಕೊಂಡು ನಾಟಕ ಮಾಡುತ್ತಿದ್ದ. ಅವ ಗುಡಿಸಿನಲ್ಲಿ ಇದ್ದು ಸಾಮ್ರಾಜ್ಯ ಕಟ್ಟಿದ. ಅಬ್ದುಲ್ ಕಲಾಂ ಎಂಬ ಹುಡುಗ ಬೋಟು ಕಟ್ಟುವವನ ಮಗ. ಪೇಪರ್ ಮಾರಿ ಜೀವನ ನಡೆಸುತ್ತಿದ್ದವ ರಾಷ್ಟ್ರಪತಿ ಆದ, ಭಾರತ ರತ್ನ ಆದ. ನಮ್ಮ ಮಕ್ಕಳಿಗೆ ಓದಲು ಒಂದು ಕೋಣೆ ಕಟ್ಟಿಕೊಟ್ಟೇವಿ, ಚಾ ಕೊಟ್ಟೇವಿ, ತಿಂಡಿ ಕೊಟ್ಟೇವಿ. ಆದರೂ ಓದೋದಿಲ್ಲ. ಮನೆಗೆ ರತ್ನ ಆಗೋದಿಲ್ಲ. ಇನ್ನು ಭಾರತ ರತ್ನ ಆಗೋದು ಯಾವಾಗ? ಕೌಟಿಲ್ಯನಿಗೆ ಯಾರು ಗೆಟೌಟ್ ಅಂದಿದ್ದರಲ್ಲ, ಅವರೇ ಕಟೌಟ್ ಹಾಕಿ ವೆಲ್‌ಕಂ ಮಾಡುವ ಹಾಗೆ ಬೆಳೆದ. ಯಾಕೆ ನಮ್ಮ ಮಕ್ಕಳು ಹಾಗೆ ಬೆಳೆಯೋದಿಲ್ಲ? ಕೌಟಿಲ್ಯನಿಗೆ ಗುಡಿಸಲಿನಲ್ಲಿದ್ದು ಸಾಮ್ರಾಜ್ಯ ಕಟ್ಟೋಕೆ ಸಾಧ್ಯವಾದರೆ, ನಮ್ಮ ಮಕ್ಕಳಿಗೆ ಒಂದು ಯುಪಿಎಸ್ ಸಿ ಪರೀಕ್ಷೆ, ಒಂದು ಕೆಪಿಎಸ್‌ಸಿ ಪರೀಕ್ಷೆ ಪಾಸು ಮಾಡೋಕೆ ಆಗೋದಿಲ್ಲವಲ್ಲ ಯಾಕೆ? ವಿಚಾರ ಮಾಡಬೇಕಲ್ಲ ಮನುಷ್ಯ.

ನಮ್ಮಲ್ಲಿ ಯಾಕೆ ನಿರುತ್ಸಾಹ ಬಂತು? ತಾಯಂದಿರಿಗೆ ಕಾಲ್ಗುಣ ಅಂತಾರೆ. ಆಕೆಯ ಕಾಲ್ಗುಣದಿಂದ ಒಳ್ಳೇದಾಯಿತು ಅಂತಾರೆ. ಆದರೆ ತಿಳಕೋಬೇಕು, ಕಾಲಿನಲ್ಲಿ ಗುಣ ಇರೋದಿಲ್ಲ. ಕಾಲಕ್ಕೆ ತಕ್ಕಂತೆ ನಡೆದುಕೊಳ್ಳುವ ಗುಣ ಇದ್ದಿದ್ದರಿಂದ ಒಳ್ಳೇದಾಯಿತು. ಗಂಡನಿಂದ ಸಾಲ ಮಾಡಿಸದೆ, ಗಂಡ ದುಡಿದಿದ್ದರಲ್ಲೇ ಅಚ್ಚುಕಟ್ಟಾಗಿ ಸಂಸಾರ ನಿಭಾಯಿಸಿ ಮನೆ ಕಟ್ಟಿದಳಲ್ಲ. ಅದು ಕಾಲ್ಗುಣ ಅಲ್ಲ. ಕಾಲಕ್ಕೆ ತಕ್ಕ ಗುಣ ಅಷ್ಟೆ. ❖

ಪದಬಂಧ 5966

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅವ್ಯವಸ್ಥೆಯಲ್ಲೇ ಅಚ್ಚುಕಟ್ಟನ್ನು ಹುಡುಕಿ! (3)
3.ಲಿಂಗ ಧರಿಸಿದ ಗಂಡು! (3)
5.ಈ ಸ್ಟೋರಿ ಕನ್ನಡಿಗನದು! (2)
6.ಮಂದಿಗೆಲ್ಲಾ ಈತನೇ ಲೀಡರ್! (5)
8.ಕರವನ್ನೇ ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ (3)
9.ನಂಜಿನಿಂದ ಕೂಡಿದ ಸಂಗತಿಯಿದು (3)
12.ರಮಣ ಸಾಯುವ ಸಮಯದಲ್ಲಿ ಬರೆದ ಓಲೆ (5)
13.ಮಾತೇ ಇಲ್ಲದ ನೀರವತೆ (2)
14.ಈ ಚಡ್ಡಿಯನ್ನು ನೋಡಿದ್ದಕ್ಕೇ ತಲ್ಲಣವೇ? (3)
15.ಬಲಾತ್ಕಾರಕ್ಕೂ ಮಣಿಯದ ಈತ ಶಕ್ತಿಶಾಲಿ (3)

ಮೇಲಿಂದ ಕೆಳಕ್ಕೆ
1.ಕಥೆ ಕೇಳಿದಾಗ ಉಂಟಾದ ನೋವು (2)
3.ಬಹು ದಿನಗಳ ನಂತರ ಜಳಕ ಮಾಡಿದ್ದಕ್ಕೇ ಈ ರೋಮಾಂಚನ (3)
4.ಗರಬಡಿದಂತೆ ನಿಂತಿಹನಲ್ಲಾ ಈ ಹಳ್ಳಿಗ! (3)
5.ಕನ್ನಡಿಗರ ಹೆಮ್ಮೆಯ ನಾಡು (4)
6.ಜಡಿ ಮಳೆ ಸುರಿಯುವಾಗ ಹಿಡಿದ ವಂದರಿ (3)
7.ನಾಮ ಹಾಕಿಯೇ ಮಾಡಿದ ಹೆಸರಿಡುವ ಶಾಸ್ತ್ರ (5)
9.ಕೊನೆಗಿದ್ದ ಚಿತ್ರವೇ ವಿಲಕ್ಷಣ! (3)
10.ಮಾನ ಹೊಂದಿದ ಒಡೆಯನಿವನು (4)
11.ಕಚಡಾ ಬಟ್ಟೆ ಧರಿಸಿದ ರೊಡ್ಡ ಇಲ್ಲಿಗೇಕೆ ಬಂದ? (3)
12.ಮಣ ಭಾರದ ಹೆಣ ಸಾಗಿಸಿದ ಸ್ಮಶಾನ (3)
13.ತಿಳಿಗೇಡಿತನವಿದು (2)



5965ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವ್ಯತ್ಯಾಸ 3.ಸಂದಣಿ 5.ಡಮರುಗ 7.ವಿಭಜನೆ 9.ರಜನಿ 11.ಆರ್ಯೆ 12.ಲಡಿ 13.ಸವತಿ 15.ಹಸುಗೂಸು 19.ಮದಗಜ 20.ವರ್ಣನೆ 21.ಲಿಲಾವು

ಮೇಲಿಂದ ಕೆಳಕ್ಕೆ:
1.ವ್ಯಸನಿ 2.ಸಡಗರ 4.ದನುಜ 6.ಗವಿ 8.ನೆಗಡಿ 10.ನಿವಾಸ 11.ಆರೋಹ 14.ತಿಲಾಂಜಲಿ 16.ಸುಪರ್ಣ 17.ಸುಮ 18.ಹಗೇವು

ಸುಡೊಕು 6351

	3		6		2		4	
6		2				8		3
	4		3		9		1	
4		8			5		2	
						4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6350 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

₹10 ಲಕ್ಷ ಕೋಟಿ ಕೆಸಿಸಿ ಸಾಲ ವಿತರಣೆ

ನವದೆಹಲಿ (ಪಿಟಿಐ): ಕಳೆದ ವರ್ಷದ ಡಿಸೆಂಬರ್ ಅಂತ್ಯದವರೆಗೆ ಬಳಕೆಯಲ್ಲಿರುವ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ (ಕೆಸಿಸಿ) ಮೂಲಕ 7.72 ಕೋಟಿ ರೈತರಿಗೆ ₹10 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಸಾಲ ಸೌಲಭ್ಯ ಕಲ್ಪಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

2014ರ ಮಾರ್ಚ್‌ವರೆಗೆ ₹4.26 ಲಕ್ಷ ಕೋಟಿ ಕೆಸಿಸಿ ಸಾಲ ನೀಡಲಾಗಿತ್ತು.

ಇದರಡಿ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ರೈತರಿಗೆ ಕೈಗೆಟಕುವ ಬಡ್ಡಿದರದಲ್ಲಿ ಸಾಲ ಸಿಗುತ್ತದೆ. ಇದರಿಂದ ಹಣಕಾಸುಯೇತರ ಸಂಸ್ಥೆಗಳ ಸಾಲದ ಮೇಲಿನ ಅವಲಂಬನೆಯು ಕಡಿಮೆ ಆಗಿದೆ ಎಂದು ಹೇಳಿದೆ.

ಸದ್ಯ ಶೇ 7ರ ಬಡ್ಡಿದರದಲ್ಲಿ ₹3 ಲಕ್ಷದವರೆಗೆ ಕೆಸಿಸಿ ಸಾಲ ನೀಡಲಾಗುತ್ತದೆ. ರೈತರು ಬಿತ್ತನೆಬೀಜ, ರಸಗೊಬ್ಬರ, ಕೀಟನಾಶಕ ಖರೀದಿಸಲು ನೆರವಾಗಲಿದೆ. ಸಕಾಲದಲ್ಲಿ ಮರುಪಾವತಿಸಿದರೆ ಶೇ 3ರಷ್ಟು ಬಡ್ಡಿ ಸಬ್ಸಿಡಿ ದೊರೆಯಲಿದೆ.

ಕೇಂದ್ರ ಸರ್ಕಾರವು ರೈತರಿಗೆ ಮತ್ತಷ್ಟು ಅನುಕೂಲ ಕಲ್ಪಿಸಲು 2025–26ನೇ ಸಾಲಿನ ಬಜೆಟ್‌ನಲ್ಲಿ ಈ ಸಾಲದ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹523-672
ದ್ವಿತಳಿ (ಬಿ.ವಿ)	₹323-846

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1470)
ಸೋಯಾ (ರಿಫೈನ್ಡ್)	₹1360 (1360)
ಸೂರ್ಯಕಾಂತಿ (ರಿಫೈನ್ಡ್)	₹1430 (1430)
ಪಾಮೋಲಿನ್	₹1380 (1380)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹500
12 ಕ್ಕೆ	₹67
ಮೈಸೂರು	
100ಕ್ಕೆ	₹500

ಆರ್‌ಬಿಐನಿಂದ ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಹೇರಿದ್ದ ನಿರ್ಬಂಧ ತೆರವು

ವೈಯಕ್ತಿಕ ಸಾಲ: ನಿಯಮ ಸಡಿಲ

ಮುಂಬೈ (ಪಿಟಿಐ): ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆಗೆ ಸಂಬಂಧಿಸಿದಂತೆ ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಮತ್ತು ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ವಿಧಿಸಿದ್ದ ಬಿಗಿ ನಿಯಮಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಡಿಲಗೊಳಿಸಿದೆ.

ಆರ್‌ಬಿಐನ ಈ ನಿರ್ಧಾರವು ಹಣದ ಹರಿವು ಹೆಚ್ಚಳದ ಜೊತೆಗೆ, ಅಧಿಕ ಪ್ರಮಾಣದಲ್ಲಿ ಸಾಲ ನೀಡಿಕೆಗೆ ನೆರವಾಗಲಿದೆ. ರಿಟೇಲ್ ವಲಯದಲ್ಲಿ ಸಾಲ ನೀಡಿಕೆ ಪ್ರಮಾಣವು ಏರಿಕೆ ಆಗುವುದರಿಂದ ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಂಭವಿಸ ಬಹುದಾದ ಅಪಾಯ ನಿಯಂತ್ರಿಸುವ ಉದ್ದೇಶದಿಂದ 2023ರ ನವೆಂಬರ್‌ನಲ್ಲಿ ಮುನ್ನೆಚ್ಚರಿಕೆಯ ಹೆಜ್ಜೆ ಇಟ್ಟಿದ್ದ ಆರ್‌ಬಿಐ, ಸಾಲ ನೀಡಿಕೆಯ ನಿಯಮಗಳನ್ನು ಬಿಗಿಗೊಳಿಸಿತ್ತು.

ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಆಗಬಹುದಾದ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಹೆಚ್ಚಿಸಿತ್ತು. ಈ ಕ್ರಮದಿಂದಾಗಿ ಸಾಲ ನೀಡಿಕೆಯ ಪ್ರಮಾಣ ಇಳಿಕೆಯಾಗಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ ಸಾಲ ನೀಡಿಕೆಯು ಇಳಿಕೆ ಕಂಡಿತ್ತು.

ಎನ್‌ಬಿಎಫ್‌ಸಿಗಳ ರಿಸ್ಕ್ ವೇಯ್ಟ್ ಅನ್ನು ಶೇ 100ರಿಂದ ಶೇ 125ಕ್ಕೆ ಹೆಚ್ಚಿಸಲಾಗಿತ್ತು. ಸದ್ಯ ಇದನ್ನು ಶೇ 100ಕ್ಕೆ ಪರಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಆರ್‌ಬಿಐನ ಸುತ್ತೋಲೆ ತಿಳಿಸಿದೆ.

ಅಲ್ಲದೆ, ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ನಿಗದಿಪಡಿಸಿದ್ದ ರಿಸ್ಕ್ ವೇಯ್ಟ್ ಅನ್ನು ಪರಿಷ್ಕರಿಸುವುದಾಗಿ ಮತ್ತೊಂದು ಸುತ್ತೋಲೆಯಲ್ಲಿ ತಿಳಿಸಿದೆ.

ವೈಯಕ್ತಿಕ ಸಾಲಕ್ಕಷ್ಟೇ ನಿಯಮಗಳು ಅನ್ವಯಿಸುತ್ತವೆ. ಇತರೆ ಸಾಲಗಳಿಗೆ ಅನ್ವಯಿಸುವುದಿಲ್ಲ. ಅಂದರೆ ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ವ್ಯಕ್ತಿಗಳು ಮತ್ತು ಸಣ್ಣ ವ್ಯಾಪಾರಕ್ಕೆ ನೀಡುವ ಸಾಲಗಳಿಗೆ ನಿಗದಿಪಡಿಸಿರುವ ನಿಯಮಗಳು ಇದರಿಂದ ಹೊರತಾಗಿವೆ. ಈ ಸಾಲಗಳಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗಲಿವೆ ಎಂದು ಸ್ಪಷ್ಟಪಡಿಸಿದೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸ್ಥಳೀಯ ಬ್ಯಾಂಕ್‌ಗಳು ನೀಡುವ ಸಾಲಗಳಿಗೆ ರಿಸ್ಕ್ ವೇಯ್ಟ್ ಶೇ 100ರಷ್ಟು ಇರಲಿದೆ ಎಂದು ಹೇಳಿದೆ.

ಆರ್‌ಬಿಐನ ಬಿಗಿ ನಿಯಮಗಳಿಂದಾಗಿ ಮೈಕ್ರೊ ಫೈನಾನ್ಸ್ ಕಂಪನಿಗಳ ಬಂಡವಾಳವು ಶೇ 3.53ರಷ್ಟು ಕಡಿಮೆಯಾಗಿದೆ ಎಂದು ಮೈಕ್ರೊ ಫೈನಾನ್ಸ್ ಕಂಪನಿಗಳ ನೆಟ್‌ವರ್ಕ್‌ನ ವರದಿ ಹೇಳಿದೆ.

‘ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಂಭಾವ್ಯ ಅಪಾಯ ತಡೆಯಲು ಆರ್‌ಬಿಐ ನಿಯಮಗಳನ್ನು ಬಿಗಿಗೊಳಿಸಿತ್ತು. ಇದರಿಂದ ಎನ್‌ಬಿಎಫ್‌ಸಿ ವಲಯವು ಸಂಕಷ್ಟಕ್ಕೆ ಸಿಲುಕಿತ್ತು. ಸದ್ಯ ನಿಯಮಗಳನ್ನು ಸಡಿಲಗೊಳಿಸಲಾಗಿದ್ದು, ಇದಕ್ಕೆ ಪರಿಹಾರ ಸಿಕ್ಕಿದೆ. ಸಾಲ ನೀಡಿಕೆ ಪ್ರಮಾಣ ಹೆಚ್ಚಲಿದೆ’ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಹಿರಿಯ ಉಪಾಧ್ಯಕ್ಷ ಅನಿಲ್ ಗುಪ್ತಾ ಹೇಳಿದ್ದಾರೆ.

ವಿನಿಮಯ ದರ

$ ಡಾಲರ್	87.13
£ ಪೌಂಡ್	110.29
€ ಯುರೊ	91.38
¥ ಯೆನ್ (100ಕ್ಕೆ)	58

ಮುಂಬೈ ಧಾರಣೆ (ಶೇಂಗಾ)

26-02-2025

ಜಾವಾ 70/80(ಹೊಸ)	10000-10100
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	7900-8000
ದಪ್ಪ ಗುಜರಾತ್(ಹೊಸ)	8200-8300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಪಾಮ್ ವಾರದ ಡೆಲಿವರಿ	1378 (1378)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹85,650 (86,450)
ಬೆಳ್ಳಿ ಕೆ.ಜಿ	₹95,000 (95,850)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮಾ.13ಕ್ಕೆ ಢಾಕಾಗೆ ಗುಟೆರಸ್

ಢಾಕಾ (ಪಿಟಿಐ): ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು ಮಾರ್ಚ್ 13ರಿಂದ 16ರವರೆಗೆ ಢಾಕಾಗೆ ಭೇಟಿ ನೀಡಲಿದ್ದು, ರೋಹಿಂಗ್ಯಾ ನಿರಾಶ್ರಿತರ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಮ್ಯಾನ್ಮಾರ್‌ನಿಂದ ಬಲವಂತವಾಗಿ ಸ್ಥಳಾಂತರಗೊಂಡಿರುವ ರೋಹಿಂಗ್ಯಾಗಳಿಗೆ ಆತಿಥ್ಯ ನೀಡುತ್ತಿರುವ ಬಾಂಗ್ಲಾದೇಶಕ್ಕೆ ಅಂತರರಾಷ್ಟ್ರೀಯ ಸಮುದಾಯದ ಬೆಂಬಲ ಸಿಗುವಂತೆ ಮಾಡುವ ಪ್ರಯತ್ನವನ್ನು ವಿಶ್ವಸಂಸ್ಥೆಯು ಮುಂದುವರಿಸಲಿದೆ ಎಂದು ಗುಟೆರಸ್ ಹೇಳಿದ್ದಾರೆ.

ಬಾಂಗ್ಲಾದೇಶದ ಮುಖ್ಯ ಸಲಹೆಗಾರ ಮಹಮ್ಮದ್ ಯೂನಸ್ ಅವರು ಗುಟೆರಸ್ ಅವರನ್ನು ಆಹ್ವಾನಿಸಿದ್ದಾರೆ ಎಂದು ಮಾಧ್ಯಮವೊಂದು ಬುಧವಾರ ವರದಿ ಮಾಡಿದೆ.

ಹಸಿರು ಜಲಜನಕ ಬಳಕೆಗೆ ಒತ್ತು: ಸಚಿವ ಪುರಿ

ಎಥೆನಾಲ್ ಮಿಶ್ರಣ: ಗುರಿ ಹೆಚ್ಚಳ

ಹರ್ದೀಪ್ ಸಿಂಗ್ ಪುರಿ

ಗುವಾಹಟಿ (ಪಿಟಿಐ): ‘ಪೆಟ್ರೋಲ್‌ನೊಂದಿಗೆ ಶೇ 20ರಷ್ಟಕ್ಕಿಂತ ಹೆಚ್ಚು ಎಥೆನಾಲ್ ಮಿಶ್ರಣ ಮಾಡುವ ಗುರಿ ನಿಗದಿಗೆ ಸಂಬಂಧಿಸಿದಂತೆ ನೀತಿ ಆಯೋಗದಡಿ ಸಮಿತಿ ರಚಿಸಲಾಗಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಮಾತನಾಡಿದ ಅವರು, ‘2026ರೊಳಗೆ ಶೇ 20ರಷ್ಟು ಎಥೆನಾಲ್ ಮಿಶ್ರಣದ ಗುರಿ ನಿಗದಿಯಾಗಿತ್ತು. ಸದ್ಯ ಶೇ 19.6ರಷ್ಟು ಗುರಿ ಸಾಧನೆಯಾಗಿದೆ. ಮುಂದಿನ ತಿಂಗಳು ನಿಗದಿತ ಗುರಿ ಪೂರ್ಣಗೊಳ್ಳಲಿದೆ’ ಎಂದು ವಿವರಿಸಿದರು.

ಪೆಟ್ರೋಲ್‌ನೊಟ್ಟಿಗೆ ಹೆಚ್ಚಿನ ಪ್ರಮಾಣದಲ್ಲಿ ಜೈವಿಕ ಇಂಧನ ಮಿಶ್ರಣ ಮಾಡುವತ್ತ ಸರ್ಕಾರ ಚಿತ್ತ ನೆಟ್ಟಿದೆ. ಸಮಿತಿಯು ಈ ನಿಟ್ಟಿನಲ್ಲಿ ಕಾರ್ಯತತ್ಪರವಾಗಿದೆ ಎಂದರು.

ದೇಶದ ಎಥೆನಾಲ್ ಉತ್ಪಾದನಾ ಸಾಮರ್ಥ್ಯವು 1,700 ಕೋಟಿ ಲೀಟರ್ ಆಗಿದೆ. ಈ ಪೈಕಿ ಪೆಟ್ರೋಲ್‌ನೊಂದಿಗೆ 1,500 ಕೋಟಿ ಲೀಟರ್ ಮಿಶ್ರಣ ಮಾಡಲಾಗಿದೆ ಎಂದು ಹೇಳಿದರು.

ಭಾರತವು ವಾರ್ಷಿಕವಾಗಿ ವಿದೇಶಗಳಿಂದ ತೈಲ ಆಮದಿಗೆ ₹13 ಲಕ್ಷ ಕೋಟಿ ಮೊತ್ತವನ್ನು ವ್ಯಯಿಸುತ್ತದೆ. ಆಮದು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಹಸಿರು ಜಲಜನಕ ಉತ್ಪಾದನೆಯತ್ತ ದೃಷ್ಟಿ ನೆಟ್ಟಿದೆ ಎಂದರು.

ಪ್ರಸ್ತುತ ಹಸಿರು ಜಲಜನಕ ಬೆಲೆಯು ಕೆ.ಜಿಗೆ ₹390 ಇದೆ. ಇದು ಅರ್ಧದಷ್ಟು ತಗ್ಗಿದರೆ ಇಂಧನ ವಲಯದಲ್ಲಿ ಹೊಸ ಕ್ರಾಂತಿಯಾಗಲಿದೆ. ಸಾಂಪ್ರದಾಯಿಕ ಇಂಧನ ಬಳಕೆಯ ಬದಲು ನಾವು ಹಸಿರು ಜಲಜನಕ ಬಳಕೆಯತ್ತ ಗಮನ ಹರಿಸಿದ್ದೇವೆ ಎಂದರು.

ವಿಶ್ವದ ಪ್ರತಿ ದೇಶವೂ ನವೀಕರಿಸಬಹುದಾದ ಇಂಧನ ಉತ್ಪಾದನೆಯತ್ತ ಗಮನ ಕೇಂದ್ರೀಕರಿಸಿದೆ. ದೇಶದ ಇಂಧನ ವಲಯದಲ್ಲಿ ಎದುರಾಗುತ್ತಿರುವ ಸವಾಲುಗಳು ಮತ್ತು ಆರ್ಥಿಕತೆ ಬೆಳವಣಿಗೆ ದೃಷ್ಟಿಯಿಂದ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ಐದು ತಿಂಗಳಲ್ಲಿ ಸೆನ್ಸೆಕ್ಸ್ 11,376 ಅಂಶ ಕುಸಿತ

ನವದೆಹಲಿ (ಪಿಟಿಐ): ಕಳೆದ ಐದು ತಿಂಗಳಿನಲ್ಲಿ ಷೇರು ಸೂಚ್ಯಂಕಗಳು ಶೇ 14ರಷ್ಟು ಕುಸಿದಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಕಳೆದ ವರ್ಷದ ಸೆಪ್ಟೆಂಬರ್ 27ರಂದು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 85,978 ಅಂಶಗಳಿಗೆ ಮುಟ್ಟಿತ್ತು. ಅದೇ ದಿನ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 26,277 ಅಂಶಗಳಿಗೆ ತಲುಪಿತ್ತು.

ಅಂದಿನಿಂದ ಫೆಬ್ರುವರಿ 25ರವರೆಗೆ ಸೆನ್ಸೆಕ್ಸ್ 11,376 ಅಂಶ (ಶೇ 13.23) ಕುಸಿತ ಕಂಡಿದ್ದರೆ, ನಿಫ್ಟಿ 3,729 ಅಂಶ (ಶೇ 14.19) ಇಳಿಕೆಯಾಗಿದೆ.

ಜನವರಿ ಆರಂಭದಿಂದ ಇಲ್ಲಿಯವರೆಗೆ ಸೆನ್ಸೆಕ್ಸ್ 3,536 ಅಂಶ (ಶೇ 4.52) ಮತ್ತು ನಿಫ್ಟಿ 1,097 ಅಂಶ (ಶೇ 4.64) ಕುಸಿದಿದೆ. ಇದೇ ಅವಧಿಯಲ್ಲಿ ₹1 ಲಕ್ಷ ಕೋಟಿ ವಿದೇಶಿ ಬಂಡವಾಳ ಹೊರಹೋಗಿದೆ.

‘ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ಲಾಭ ಗಳಿಕೆಯು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಜಾಗತಿಕ ಅನಿಶ್ಚಿತ ಸ್ಥಿತಿಯು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ’ ಎಂದು ಮಾಸ್ಟರ್ ಟ್ರಸ್ಟ್ ಸಮೂಹದ ನಿರ್ದೇಶಕ ಪುನೀತ್ ಸಿಂಘಾನಿಯಾ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ₹1.29 ಲಕ್ಷ ಕೋಟಿ ನಿವ್ವಳ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳು, ₹1.29 ಲಕ್ಷ ಕೋಟಿ ನಿವ್ವಳ ಲಾಭಗಳಿಸಿವೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 31.3ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಬ್ಯಾಂಕ್‌ಗಳ ಲಾಭ ಗಳಿಕೆ, ಆಸ್ತಿಯ ಗುಣಮಟ್ಟ ಸುಧಾರಣೆ ಹಾಗೂ ಬಂಡವಾಳ ಕೂಡ ಸದೃಢವಾಗಿದೆ. ನಿವ್ವಳ ಎನ್‌ಪಿಎ ಶೇ 0.59ಕ್ಕೆ ಇಳಿದಿದೆ ಎಂದು ಹೇಳಿದೆ.

ಬ್ಯಾಂಕ್‌ಗಳ ಒಟ್ಟು ವಹಿವಾಟು ಶೇ 11ರಷ್ಟು ಏರಿಕೆಯಾಗಿದೆ. ಈ ಅವಧಿಯಲ್ಲಿ ₹242.27 ಲಕ್ಷ ಕೋಟಿ ವಹಿವಾಟು ನಡೆಸಿವೆ ಎಂದು ತಿಳಿಸಿದೆ.

5ಕ್ಕೆ ಪ್ರಗತಿ ಪರಿಶೀಲನೆ: ಹಣಕಾಸು ವ್ಯವಹಾರಗಳ ಕಾರ್ಯದರ್ಶಿ ಎಂ. ನಾಗರಾಜು ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 5ರಂದು ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Multiple Vacancy

ಬಿಲಿಯರ್ಡ್ಸ್ ರೂಮ್ ಕೆ ಮಾರ್ಕರ್ ಬೇಕಾಗಿದ್ದಾರೆ ದಯವಿಟ್ಟು ಸಂಪರ್ಕಿಸಿ ಮೊಬೈಲ್ ಸಂಖ್ಯೆ 7090650796 ಜೆಪಿ ನಗರ್ 2 ನೇ ಹಂತ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

2.4.2025 ದೆಹಲಿ, ಅಮೃತ್‌ಸರ್, ವೈಷ್ಣೋದೇವಿ,ಕಾಶಿ,ಗಯಾ18.4. 2025 ಅಯೋಧ್ಯಾ,ಕಾಶಿ, ಪ್ರಯಾಗ್‌ರಾಜ್, ನೈಮಿಶರಣ್ಯ 22.4.2025 ಶಿರಡಿ/ ಮಹಾರಾಷ್ಟ್ರ, ಜ್ಯೋರ್ತಿಲಿಂಗ ಪ್ರವಾಸ1.5.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟ್ರಂಪ್ ಆಡಳಿತದ ವಿರುದ್ಧ ದಾವೆ

ವಾಷಿಂಗ್ಟನ್ (ಎಪಿ): ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಜನಾಂಗೀಯ ಆಚರಣೆಗಳನ್ನು ಎರಡು ವಾರಗಳಲ್ಲಿ ನಿಲ್ಲಿಸಬೇಕು ಎಂದು ಟ್ರಂಪ್ ಆಡಳಿತವು ಗಡುವು ವಿಧಿಸಿದ್ದು, ಇದನ್ನು ಪ್ರಶ್ನಿಸಿ ದಾವೆ ಹೂಡಲಾಗಿದೆ.

ಜನಾಂಗೀಯ ಆಚರಣೆಗಳನ್ನು ಮುಂದುವರಿಸಿದರೆ ಸರ್ಕಾರದ ನೆರವು ಸಿಗುವುದಿಲ್ಲ ಎಂದು ಟ್ರಂಪ್ ಆಡಳಿತ ಸುತ್ತೋಲೆ ಹೊರಡಿಸಿತ್ತು. ಅಮೆರಿಕನ್ ಫೆಡರೇಷನ್ ಆಫ್ ಟೀಚರ್ಸ್ ಯೂನಿಯನ್ ಮತ್ತು ಅಮೆರಿಕನ್ ಸೋಷಿಯಲಾಜಿಕಲ್ ಅಸೋಸಿಯೇಷನ್ ಇದನ್ನು ಪ್ರಶ್ನಿಸಿ ಮೇರಿಲ್ಯಾಂಡ್‌ನಲ್ಲಿ ಮಂಗಳವಾರ ಮೊಕದ್ದಮೆ ಹೂಡಿವೆ.

ಶಿಕ್ಷಣ ಇಲಾಖೆಯು ಫೆ. 14ರಂದು ಹೊರಡಿಸಿರುವ ಸುತ್ತೋಲೆಯು, ಮೊದಲ ಮತ್ತು ಐದನೇ ತಿದ್ದುಪಡಿಯನ್ನು ಉಲ್ಲಂಘಿಸಿದೆ ಎಂದು ದಾವೆಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರ ಒಪ್ಪುವ ಧೋರಣೆಯನ್ನಷ್ಟೆ ಶಾಲೆಗಳಲ್ಲಿ ಕಲಿಸುವಂತೆ ಒತ್ತಡ ಹಾಕುವುದು ವಾಕ್ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ ಎಂದು ದಾವೆ ಹೂಡಿರುವ ಸಂಘಟನೆಗಳು ಹೇಳಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಜಿ.ಕೆ. ಓಬಯ್ಯ, 89 ವರ್ಷ
ಮಾಜಿ ಉಪಾಧ್ಯಕ್ಷರು, ಕರ್ನಾಟಕ ಆರ್ಯ ಈಡಿಗರ ಸಂಘ
ಮಾಜಿ ಉಪಾಧ್ಯಕ್ಷರು, ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಸಂಸ್ಥಾಪಕ ಸದಸ್ಯರು, ಶ್ರೀ ವಿದ್ಯಾರಣ್ಯ ಯುವಕ ಸಂಘ
ಮಾಜಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್
ಮಾಲೀಕರು, ಹೋಟೆಲ್ ಕಾಂತಿ ಕಂಫರ್ಟ್ಸ್, ಗಾಂಧಿನಗರ, ಬೆಂಗಳೂರು
ನಿಮ್ಮ ನಿಸ್ವಾರ್ಥ ಸೇವೆ, ಶೋಷಿತ ಹಾಗೂ ಹಿಂದುಳಿದ ವರ್ಗಗಳ ಆಶಾಕಿರಣ, ಬಹುಜನರ ಬದುಕಿನ ದಾರಿದೀಪ, ಜನಮನದಲ್ಲಿ ಆದರ್ಶರಾಗಿ, ಬದುಕಿಗೆ ಪ್ರೇರಕರಾಗಿದ್ದ ಮತ್ತು ಮಾರ್ಗದರ್ಶಕರಾಗಿದ್ದ ನೀವು ನಮ್ಮ ಮನದಂಗಳದಲ್ಲಿ ಸದಾ ನೆನಪಾಗಿರುವಿರಿ.
ಇಂತಿ ದುಃಖತಪ್ತರು:
ಜಿ. ಓ. ಕೃಷ್ಣ ಬಾಬು ಮತ್ತು ಕುಟುಂಬದವರು

ಸಡಗರ

ಶ್ರೀನಗರದ ದಾಲ್ ಸರೋವರದಲ್ಲಿ ಬುಧವಾರ ನಡೆದ ಪಾರಂಪರಿಕ ಹಬ್ಬವಾದ ಸೋನ್ ಮೀರಾಸ್‌ನಲ್ಲಿ ತರಕಾರಿ ಮತ್ತು ಹೂವಿನ ವ್ಯಾಪಾರಿಗಳು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

‘ಮಾಲೀಕರ ಬಳಕೆಗೆ ಜಮೀನು ಸಿಗದಂತೆ ಮಾಡಬಾರದು’

ನವದೆಹಲಿ (ಪಿಟಿಐ): ಜಮೀನು ಮಾಲೀಕನಿಗೆ ತನ್ನ ಜಮೀನು ಅನಿರ್ದಿಷ್ಟ ಅವಧಿಗೆ ಬಳಕೆಗೆ ಸಿಗದಂತೆ ಮಾಡುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಈಚೆಗೆ ಹೇಳಿದೆ.

ಬಾಂಬೆ ಹೈಕೋರ್ಟ್ ನೀಡಿದ ಆದೇಶವೊಂದನ್ನು ರದ್ದುಪಡಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಈ ಮಾತು ಹೇಳಿದೆ.

‘ಜಮೀನು ಮಾಲೀಕನಿಗೆ ಅದನ್ನು ಬಳಸಲು ಅನಿರ್ದಿಷ್ಟಾವಧಿಗೆ ಸಾಧ್ಯವಾಗದಂತೆ ಮಾಡಬಾರದು. ಜಮೀನನ್ನು ನಿರ್ದಿಷ್ಟ ಬಗೆಯಲ್ಲಿ ಬಳಸಬಾರದು ಎಂಬ ನಿರ್ಬಂಧವನ್ನು ಹೇರಿದ ನಂತರದಲ್ಲಿ, ಆ ನಿರ್ಬಂಧವು ಅನಿರ್ದಿಷ್ಟ ಅವಧಿಗೆ ಮುಂದುವರಿಯಬಾರದು’ ಎಂದು ಪೀಠವು ಹೇಳಿದೆ.

ಮಹಾರಾಷ್ಟ್ರ ಪ್ರಾದೇಶಿಕ ಮತ್ತು ಪಟ್ಟಣ ಯೋಜನಾ ಕಾಯ್ದೆ – 1966ನ್ನು ಉಲ್ಲೇಖಿಸಿದ ಪೀಠವು, ಅಭಿವೃದ್ಧಿ ಯೋಜನೆಯಲ್ಲಿ ಜಾಗವೊಂದನ್ನು 33 ವರ್ಷಗಳವರೆಗೆ ಮೀಸಲಾಗಿ ಇರಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದೆ.

ಮೂಲ ಮಾಲೀಕರಿಗೆ ಜಮೀನು ಬಳಕೆಗೆ ಸಿಗದಂತೆ ಮಾಡಿದ್ದಷ್ಟೇ ಅಲ್ಲದೆ ಪ್ರಾಧಿಕಾರವು, ಜಮೀನು ಖರೀದಿ ಮಾಡಿದವರಿಗೂ ಅದನ್ನು ಬಳಕೆ ಮಾಡಿಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ ಎಂದು ಕೋರ್ಟ್ ಹೇಳಿದೆ.

‘ಕಾಯ್ದೆಯ ಸೆಕ್ಷನ್ 126ರ ಅಡಿಯಲ್ಲಿ ಜಮೀನು ಸ್ವಾಧೀನಕ್ಕೆ ವಿಧಿಸಲಾಗಿರುವ ಕಾಲಮಿತಿಯನ್ನು ಸರ್ಕಾರ ಅಥವಾ ಅಧಿಕಾರಿಗಳು ಪಾಲಿಸಬೇಕು’ ಎಂದು ಹೇಳಿದೆ.

ತೆಲಂಗಾಣ: ತೆಲುಗು ಭಾಷೆ ಕಡ್ಡಾಯ

ಹೈದರಾಬಾದ್ (ಪಿಟಿಐ): ರಾಜ್ಯದಲ್ಲಿ 1ರಿಂದ 10ನೇ ತರಗತಿ ಮಕ್ಕಳಿಗೆ ತೆಲುಗು ಭಾಷೆಯನ್ನು ಕಡ್ಡಾಯ ವಿಷಯವಾಗಿ ಬೋಧನೆ ಮಾಡಬೇಕು ಎಂದು ತೆಲಂಗಾಣ ಸರ್ಕಾರವು ಆದೇಶ ಹೊರಡಿಸಿದೆ.

2025–26ನೇ ಶೈಕ್ಷಣಿಕ ವರ್ಷದಿಂದ ಸಿಬಿಎಸ್‌ಇ, ಐಸಿಎಸ್‌ಇ ಹಾಗೂ ಇತರ ಮಂಡಳಿಗಳ ಶಾಲೆಗಳಲ್ಲಿ ತೆಲುಗು ಭಾಷೆಯನ್ನು ಕಡ್ಡಾಯಗೊಳಿಸಿದ್ದು, ಈ ಬಗ್ಗೆ ಸರ್ಕಾರವು ಮಂಗಳವಾರ ಅಧಿಕೃತ ಪ್ರಕಟಣೆ ಹೊರಡಿಸಿದೆ.

2018ರಲ್ಲಿ ರಾಜ್ಯ ಸರ್ಕಾರವು ಎಲ್ಲಾ ಶಾಲೆಗಳಲ್ಲಿ ತೆಲುಗು ಬೋಧನೆ ಹಾಗೂ ಕಲಿಕೆಯನ್ನು ಕಡ್ಡಾಯಗೊಳಿಸಿ ಕಾಯ್ದೆಯೊಂದನ್ನು ಜಾರಿ ಮಾಡಿತ್ತು.

ಆದರೆ ವಿವಿಧ ಕಾರಣಗಳಿಂದ ಹಿಂದಿನ ಸರ್ಕಾರವು (ಬಿಆರ್‌ಎಸ್) ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲಿಲ್ಲ. ಈಗಿನ ಸರ್ಕಾರವು (ಕಾಂಗ್ರೆಸ್) ಎಲ್ಲ ಶಿಕ್ಷಣ ಮಂಡಳಿಗಳೊಂದಿಗೆ ಸಭೆ ನಡೆಸಿ, ಕಾಯ್ದೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದೆ. ಇದಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗಾಜಾ ಮಾರ್ಪಾಡು ಹರಿದಾಡಿದ ಎ.ಐ ವಿಡಿಯೊ



ವಾಷಿಂಗ್ಟನ್ (ಎಎಫ್‌ಪಿ): ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಿಂದಾಗಿ ಬಹುತೇಕ ನಾಶಗೊಂಡಿರುವ ಗಾಜಾವನ್ನು ಕಡಲತೀರದ ಸುಂದರ ನಗರವನ್ನಾಗಿ ಮಾರ್ಪಾಡು ಮಾಡಿರುವಂತಹ ಎ.ಐ (ಕೃತಕ ಬುದ್ಧಿಮತ್ತೆ) ಮೂಲಕ ಸೃಷ್ಟಿಸಿದ ವಿಡಿಯೊವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಗಾಜಾದ ಸಮುದ್ರ ತೀರದಲ್ಲಿ ರೆಸಾರ್ಟ್, ಬೃಹತ್ ಕಟ್ಟಡಗಳು, ಮನರಂಜನಾ ತಾಣಗಳು ಹಾಗೂ ಟ್ರಂಪ್ ಅವರ ಬೃಹತ್ ಚಿನ್ನದ ಪ್ರತಿಮೆಯನ್ನು ಸ್ಥಾಪಿಸಿರುವಂತೆ ವಿಡಿಯೊ ಸೃಷ್ಟಿಸಲಾಗಿದೆ.

ಗಾಜಾವನ್ನು ಅಮೆರಿಕ ಸ್ವಾಧೀನ ಪಡಿಸಿಕೊಂಡಿರುವ ರೀತಿಯ ಕಲ್ಪನೆಯನ್ನು ಟ್ರಂಪ್ ತೋರಿಸಿದ್ದಾರೆ ಎನ್ನಲಾಗಿದೆ.

‘ಗಾಜಾ 2025, ಮುಂದೇನು?’ ಎಂಬ ವಾಕ್ಯದೊಂದಿಗೆ 33 ಸೆಕೆಂಡಿನ ವಿಡಿಯೊ ಪ್ರಾರಂಭವಾಗುತ್ತದೆ. ಇದರಲ್ಲಿ, ಗಾಜಾದಲ್ಲಿ ಜನರು ನೃತ್ಯ ಮಾಡುತ್ತ ಸಂತೋಷದಿಂದ ಸಮಯ ಕಳೆಯುತ್ತಿರುವುದು ಕಾಣುತ್ತದೆ. ಉದ್ಯಮಿ ಇಲಾನ್ ಮಸ್ಕ್ ಅವರು ಖುಷಿಯಿಂದ ತಿಂಡಿಗಳನ್ನು ಸವಿಯುತ್ತಿರುವುದು, ಅವರ ಮೇಲೆ ಹಣದ ಮಳೆ ಬೀಳುತ್ತಿರುವಂತಹ ದೃಶ್ಯವೂ ವಿಡಿಯೊದಲ್ಲಿದೆ.

ಟ್ರಂಪ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅರೆಬಟ್ಟೆಯಲ್ಲಿ ಕಡಲ ತೀರದಲ್ಲಿ ಹಾಯಾಗಿ ಕುಳಿತಿರುವುದು ಕೂಡ ವಿಡಿಯೊದಲ್ಲಿದೆ. ಒಟ್ಟಾರೆ, ಗಾಜಾ ಐಷಾರಾಮಿ ನಗರದಂತೆ ಕಂಗೊಳಿಸುತ್ತಿದೆ.

ಪುಣೆ: ನಿಲ್ದಾಣದಲ್ಲಿದ್ದ ಬಸ್‌ನಲ್ಲಿ ಅತ್ಯಾಚಾರ

ಪುಣೆ (ಪಿಟಿಐ): ನಗರದ ಸ್ವಾರ್ಗೇಟ್ ಬಸ್ ನಿಲ್ದಾಣದ ನಿರ್ಜನ ಪ್ರದೇಶದಲ್ಲಿ ನಿಂತಿದ್ದ ಬಸ್ ಒಳಗಡೆ ಮಹಿಳೆಯ ಮೇಲೆ ಅತ್ಯಾಚಾರ ಎಸಗಲಾಗಿದೆ.

‘ಅಪರಾಧದ ಹಿನ್ನೆಲೆಯುಳ್ಳ ದತ್ತ ಗಡೆ ಎಂಬಾತ ಈ ಹೇಯ ಕೃತ್ಯ ಎಸಗಿದ್ದಾನೆ. ಈತನ ವಿರುದ್ಧ ಕಳ್ಳತನದ ಆರೋಪಗಳಿವೆ’ ಎಂದು ಸ್ವಾರ್ಗೇಟ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

‘ಪೈಥಾನ್‌ಗೆ ತೆರಳಲು ಮಂಗಳವಾರ ಮುಂಜಾನೆ 5.30ರ ವೇಳೆಯಲ್ಲಿ ಪ್ಲಾಟ್‌ಫಾರ್ಮ್‌ನಲ್ಲಿ ಕಾಯುತ್ತಿದ್ದೆ. ಆರೋಪಿಯು, ನಾನು ಇದ್ದಲ್ಲಿಗೆ ಬಂದು ಪೈಥಾನ್‌ಗೆ ಹೋಗುವ ಬಸ್ ಬಂದಿದೆ. ನಿಗದಿತ ಸ್ಥಳದ ಬದಲು ಮತ್ತೊಂದು ಕಡೆ ನಿಂತಿದೆ ಎಂದು ಹೇಳಿ ನಿರ್ಜನ ಪ್ರದೇಶದತ್ತ ಕರೆದೊಯ್ದ. ಆಗ ಇನ್ನೂ ಕತ್ತಲೆಯಿತ್ತು. ಅಲ್ಲಿ ನಿಂತಿದ್ದ ಬಸ್‌ಗೆ ನನ್ನನ್ನು ಹತ್ತಿಸಿ, ಆತನೂ ಹತ್ತಿದ. ನಂತರ ನನ್ನ ಮೇಲೆ ಅತ್ಯಾಚಾರ ಎಸಗಿ ಪರಾರಿಯಾದ’ ಎಂದು ಮಹಿಳೆಯು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದು, ಆರೋಪಿಯ ಗುರುತು ಪತ್ತೆಯಾಗಿದೆ. ಆತನ ಬಂಧನಕ್ಕಾಗಿ ತಂಡಗಳನ್ನು ರಚಿಸಲಾಗಿದೆ ಎಂದು ಅವರು ಹೇಳಿದರು.

ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮದ (ಎಂಎಸ್‌ಆರ್‌ಟಿಸಿ) ಅತಿದೊಡ್ಡ ಬಸ್ ಜಂಕ್ಷನ್‌ಗಳಲ್ಲಿ ಸ್ವಾರ್ಗೇಟ್ ಒಂದಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಹಮಾಸ್–ಇಸ್ರೇಲ್ ಮಧ್ಯೆ ಹೊಸ ಒಪ್ಪಂದ

ಜೆರುಸಲೇಂ (ಎಪಿ): ನಾಲ್ವರು ಒತ್ತೆಯಾಳುಗಳ ಮೃತದೇಹಗಳನ್ನು ಹಸ್ತಾಂತರಿಸುವುದಕ್ಕೆ ಪ್ರತಿಯಾಗಿ, ಪ್ಯಾಲೆಸ್ಟೀನ್‌ನ ನೂರಾರು ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂದು ಪರಸ್ಪರ ಒಪ್ಪಂದಕ್ಕೆ ಬರಲಾಗಿದೆ ಎಂದು ಇಸ್ರೇಲ್ ಮತ್ತು ಹಮಾಸ್ ಅಧಿಕಾರಿಗಳು ಮಂಗಳವಾರ ತಿಳಿಸಿದರು.

ಈ ಮೂಲಕ ಕದನ ವಿರಾಮದ ಅವಧಿಯು ಇನ್ನಷ್ಟು ದಿನ ಮುಂದುವರಿಯಲಿದೆ.

ಪ್ಯಾಲೆಸ್ಟೀನ್‌ನ 600 ಕೈದಿಗಳನ್ನು ಬಿಡುಗಡೆ ಮಾಡಲು ಇಸ್ರೇಲ್ ವಿಳಂಬ ಮಾಡಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಹಮಾಸ್ ಬಂಡುಕೋರ ಸಂಘಟನೆಯು ‘ಇದು ಕದನ ವಿರಾಮ ಒಪ್ಪಂದದ ಗಂಭೀರ ಉಲ್ಲಂಘನೆಯಾಗಿದೆ. ಈ ಕೈದಿಗಳನ್ನು ಬಿಡುಗಡೆ ಮಾಡುವವರೆಗೂ ಎರಡನೇ ಹಂತದ ಮಾತುಕತೆ ಅಸಾಧ್ಯ’ ಎಂದು ಹೇಳಿತ್ತು.

ಮೊದಲನೇ ಹಂತದ ಕದನ ವಿರಾಮ ಒಪ್ಪಂದವು ಈ ವಾರಾಂತ್ಯದಲ್ಲಿ ಮುಕ್ತಾಯಗೊಳ್ಳಲಿದೆ. ಇಸ್ರೇಲ್ ವಿಳಂಬ ನೀತಿಯು ಎರಡನೇ ಹಂತದ ಮಾತುಕತೆಗೆ ಅಡ್ಡಿಯಾಗಿ ಪರಿಣಮಿಸಿತ್ತು.

ಸದ್ಯ ಹೊಸ ಒಪ್ಪಂದದ ಮೂಲಕ ವಿವಾದವನ್ನು ಇತ್ಯರ್ಥ ಮಾಡಿಕೊಳ್ಳಲಾಗಿದೆ ಎಂದು ಹಮಾಸ್ ತಿಳಿಸಿದೆ.

ಪೋಪ್ ಆರೋಗ್ಯ ಸ್ಥಿತಿ ಇನ್ನೂ ಗಂಭೀರ

ರೋಮ್ (ಎ.ಪಿ): ಪೋಪ್ ಫ್ರಾನ್ಸಿಸ್ ಅವರು ಆರಾಮ ಕುರ್ಚಿ ಮೇಲೆ ನೇರವಾಗಿ ಕುಳಿತು, ನ್ಯುಮೋನಿಯಾಗೆ ಚಿಕಿತ್ಸೆ ಪಡೆದುಕೊಂಡರು. ಆದರೂ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿಯೇ ಇದೆ ಎಂದು ವ್ಯಾಟಿಕನ್ ಆಡಳಿತದ ಪ್ರಕಟಣೆಯು ಬುಧವಾರ ತಿಳಿಸಿದೆ.

ಪೋಪ್ ಅವರು ಚೇತರಿಸಿಕೊಳ್ಳಲಿ ಎಂದು ಅರ್ಜೆಂಟೀನಾದವರು ಹಾಗೂ ರೋಮನ್ನರು ರೋಮ್ ನಗರದಲ್ಲಿ ಪ್ರಾರ್ಥಿಸಿದರು.

ಮಂಗಳವಾರ ಇನ್ನೊಂದು ಸಿ.ಟಿ. ಸ್ಕ್ಯಾನ್ ಮಾಡಲಾಗಿದ್ದು, ಶ್ವಾಸಕೋಶದಲ್ಲಿನ ಸೋಂಕಿನ ಸ್ವರೂಪವು ಅದರ ವರದಿಯ ಬಂದ ನಂತರ ಸ್ಪಷ್ಟವಾಗಲಿದೆ ಎಂದು ವ್ಯಾಟಿಕನ್ ಪ್ರಕಟಣೆ ಹೇಳಿದೆ.

ಸುಡಾನ್ ವಿಮಾನ ಪತನ: 46 ಜನ ಸಾವು

ಕೈರೋ (ಪಿಟಿಐ): ಒಮ್‌ಡರ್ಮನ್‌ನಲ್ಲಿ ಸುಡಾನ್ ಸೇನಾ ವಿಮಾನ ಪತನಗೊಂಡು, ಕನಿಷ್ಠ 46 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದರು.

ಆಂಟೊನೋವ್ ವಿಮಾನವು ಒಮ್‌ಡರ್ಮನ್‌ನ ಉತ್ತರದ ವಾದಿ ಸಯಿದ್ನಾ ವಾಯುನೆಲೆಯಿಂದ ಮಂಗಳವಾರ ಟೇಕ್–ಆಫ್ ಆಗುವಾಗ ಪತನಗೊಂಡಿದೆ ಎಂದು ಸೇನಾ ಹೇಳಿಕೆ ತಿಳಿಸಿದೆ. ಅಪಘಾತದಲ್ಲಿ 10 ಜನರು ಗಾಯಗೊಂಡಿದ್ದು, ಸಶಸ್ತ್ರ ಪಡೆಗಳ ಸಿಬ್ಬಂದಿ ಮತ್ತು ನಾಗರಿಕರು ಮೃತಪಟ್ಟಿದ್ದಾರೆ ಎಂದು ಸೇನೆ ತಿಳಿಸಿದೆ. ಆದರೆ ಘಟನೆಗೆ ಕಾರಣವೇನೆಂದು ಅದು ತಿಳಿಸಿಲ್ಲ.

ಸೇನಾ ವಾಹನದ ಮೇಲೆ ಉಗ್ರರ ದಾಳಿ

ರಜೌರಿ/ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿ ಇರುವ ಸುಂದರ್‌ಬನಿ ವಲಯದ ಫಾಲ್ ಗ್ರಾಮದಲ್ಲಿ, ಶಂಕಿತ ಭಯೋತ್ಪಾದಕರು ಸೇನಾ ವಾಹನದ ಮೇಲೆ ಬುಧವಾರ ಗುಂಡಿನ ದಾಳಿ ನಡೆಸಿದ್ದಾರೆ.

ಕಾಡಿನಲ್ಲಿ ಅವಿತಿರುವ ಭಯೋತ್ಪಾದಕರು, ಆ ಮಾರ್ಗದಲ್ಲಿ ಹಾದು ಹೋಗುತ್ತಿದ್ದ ಸೇನಾ ವಾಹನದ ಮೇಲೆ ಗುಂಡು ಹಾರಿಸಿದ್ದಾರೆ. ಈ ದಾಳಿಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಯೋತ್ಪಾದಕರನ್ನು ಸದೆಬಡಿಯಲು ಸೇನಾ ತುಕಡಿಗಳು ತೆರಳುತ್ತಿದ್ದಾಗ ದಾಳಿ ನಡೆದಿದ್ದು, ಯೋಧರು ಪ್ರತಿ ದಾಳಿ ನಡೆಸಿದ್ದಾರೆ. ಈ ಪ್ರದೇಶದಲ್ಲಿ ಉಗ್ರರ ಶೋಧ ಕಾರ್ಯಾಚರಣೆ ಬಿರುಸುಗೊಂಡಿದೆ.

ಅಫ್ಗಾನಿಸ್ತಾನ ತಂಡಕ್ಕೆ ಸೋತು ಟೂರ್ನಿಯಿಂದ ಹೊರಬಿದ್ದ ಇಂಗ್ಲೆಂಡ್

ಜದ್ರಾನ್ ಭರ್ಜರಿ ಶತಕ, ಮಿಂಚಿದ ಅಜ್ಮತ್

ಅಫ್ಗಾನಿಸ್ತಾನದ ಬ್ಯಾಟರ್ ಇಬ್ರಾಹಿಂ ಜದ್ರಾನ್ ಅವರು ಬುಧವಾರ ನಡೆದ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಶತಕ ಗಳಿಸಿದ ನಂತರ ಸಂಭ್ರಮಿಸಿದ್ದು ಹೀಗೆ –ಎಎಫ್‌ಪಿ ಚಿತ್ರ

ಲಾಹೋರ್ (ಪಿಟಿಐ): ಆರಂಭಿಕ ಬ್ಯಾಟರ್ ಇಬ್ರಾಹಿಂ ಜದ್ರಾನ್ (177, 146 ಎಸೆತ) ಅವರ ಅತ್ಯಮೋಘ ಶತಕದ ಬಳಿಕ, ಅಜ್ಮತ್‌ವುಲ್ಲಾ ಒಮರ್‌ಝೈ ಐದು ವಿಕೆಟ್ ಗೊಂಚಲು ಪಡೆದು ಅಫ್ಗಾನಿಸ್ತಾನ ತಂಡ, ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಇಂಗ್ಲೆಂಡ್ ತಂಡಕ್ಕೆ ಆಘಾತ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇಂಗ್ಲೆಂಡ್ ತಂಡ ಕೊನೆಯವರೆಗೆ ಹೋರಾಟ ತೋರಿದರೂ ಎಂಟು ರನ್‌ಗಳಿಂದ ಸೋತು ಟೂರ್ನಿಯಿಂದ ಹೊರಬಿತ್ತು.

‘ಬಿ’ ಗುಂಪಿನ ಈ ಪಂದ್ಯದಲ್ಲಿ ಇದು ಇಂಗ್ಲೆಂಡ್‌ಗೆ ಸತತ ಎರಡನೇ ಸೋಲು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಅಫ್ಗಾನಿಸ್ತಾನ 50 ಓವರುಗಳಲ್ಲಿ 7 ವಿಕೆಟ್‌ಗೆ 325 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಇಂಗ್ಲೆಂಡ್ ತಂಡ 49.5 ಓವರುಗಳಲ್ಲಿ 317 ರನ್‌ಗಳಿಗೆ ಆಲೌಟ್ ಆಯಿತು. ಜೋ ರೂಟ್ (120, 111 ಎಸೆತ) ಅವರು ಕ್ರೀಸ್‌ನಲ್ಲಿರುವವರೆಗೆ ಇಂಗ್ಲೆಂಡ್ ಆಸೆ ಜೀವಂತವಾಗಿತ್ತು. ಅವರು ಏಳನೇಯವರಾಗಿ ನಿರ್ಗಮಿಸಿದ ಮೇಲೆ ಅಫ್ಗನ್ನರು ಮರಳಿ ಹಿಡಿತ ಸಾಧಿಸಿದರು.

ದೊಡ್ಡ ಮೊತ್ತದ ಬೆನ್ನಟ್ಟಿದ ಇಂಗ್ಲೆಂಡ್ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ರೂಟ್ ಮತ್ತು ನಾಯಕ ಜೋಸ್ ಬಟ್ಲರ್ (38, 42ಎ) ಐದನೇ ವಿಕೆಟ್‌ಗೆ 83 ರನ್ ಸೇರಿಸಿದ್ದೇ ತಂಡದ ದೊಡ್ಡ ಜೊತೆಯಾಟ ಎನಿಸಿತು. ವೇಗ ಮತ್ತು ಸ್ಪಿನ್ ಬೌಲರ್‌ಗಳು ಇಂಗ್ಲೆಂಡ್ ನಾಗಾಲೋಟದಲ್ಲಿ ಸಾಗದಂತೆ ಕಡಿವಾಣ ಹಾಕಿದರು.

ಐದು ವಿಕೆಟ್ ಪಡೆದು ಮಿಂಚಿದ ಅಜ್ಮತ್‌ವುಲ್ಲಾ ಒಮರ್‌ಝೈ

ಈ ಫಲಿತಾಂಶದ ಮೂಲಕ ಐಸಿಸಿ ಟೂರ್ನಿಗಳಲ್ಲಿ ಕಠಿಣ ಸ್ಪರ್ಧೆಯೊಡ್ಡುವ ತಂಡ ತಾನೆಂಬುದನ್ನು ಅಫ್ಗನ್ನರ ಪಡೆ ಸಾರಿತು. ಒಮರ್‌ಝೈ ಬ್ಯಾಟಿಂಗ್‌ನಲ್ಲೂ ಮಿಂಚಿ ಉಪಯುಕ್ತ 41 ರನ್ (31 ಎಸೆತ) ಗಳಿಸಿದ್ದರು.

ಆರಂಭದಲ್ಲೇ ಆಘಾತ ಅನುಭವಿಸಿದ ಜದ್ರಾನ್ ಅವರಿಗೆ ಮಧ್ಯಮ ಕ್ರಮಾಂಕದಲ್ಲಿ ಹಷ್ಮತ್‌ವುಲ್ಲಾ ಶಾಹೀದಿ (40, 67 ಎಸೆತ), ಅಜ್ಮತ್‌ವುಲ್ಲಾ ಮತ್ತು ಮೊಹಮ್ಮದ್ ನಬಿ (40, 24 ಎಸೆತ) ಅವರು ಉಪಯುಕ್ತ ಬೆಂಬಲ ನೀಡಿದ ಪರಿಣಾಮ ಅಫ್ಗಾನಿಸ್ತಾನ ತಂಡದ ಮೊತ್ತ ಬೆಳೆಯಿತು. ಜದ್ರಾನ್ ಆಟದಲ್ಲಿ 12 ಬೌಂಡರಿ ಮತ್ತು ಅರ್ಧ ಡಜನ್ ಸಿಕ್ಸರ್‌ಗಳಿದ್ದವು.

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗರಿಷ್ಠ ವೈಯಕ್ತಿಕ ಸ್ಕೋರ್ ಗಳಿಸಿದ ಹೆಗ್ಗಳಿಕೆ ಅವರದ್ದಾಯಿತು. ಲಾಹೋರ್‌ನಲ್ಲಿ ಮೂರು ದಿನಗಳ ಹಿಂದೆ ನಡೆದಿದ್ದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಎದುರು ಇಂಗ್ಲೆಂಡ್‌ನ ಬೆನ್ ಡಕೆಟ್ (165 ರನ್) ದಾಖಲೆಯನ್ನು ಜದ್ರಾನ್ ಮೀರಿನಿಂತರು.

ಅಫ್ಗಾನಿಸ್ತಾನ ಬೇಗನೇ ಮೂರು ವಿಕೆಟ್‌ಗಳನ್ನು ಬೇಗನೆ ಕಳೆದುಕೊಂಡಿತು. ಇಂಗ್ಲೆಂಡ್ ವೇಗಿ ಜೋಫ್ರಾ ಆರ್ಚರ್ ಹಾಕಿದ ಐದನೇ ಓವರ್‌ನಲ್ಲಿ ಎರಡು ವಿಕೆಟ್‌ಗಳನ್ನು ಉರುಳಿಸಿದರು. ರಹಮಾನುಲ್ಲಾ ಗುರ್ಬಾಜ್ (6) ಕ್ಲೀನ್‌ಬೌಲ್ಡ್ ಆದರೆ, ಸಿದ್ದಿಕುಲಾ ಅಟಲ್ (4) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಾಲ್ಕು ಓವರ್‌ಗಳ ನಂತರ ರೆಹಮತ್ ಅವರು ಜೋಫ್ರಾ ಎಸೆತದಲ್ಲಿ ಆದಿಲ್ ರಶೀದ್‌ಗೆ ಕ್ಯಾಚಿತ್ತರು. ಇದರಿಂದಾಗಿ 37 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ಅಫ್ಗನ್ ಸಂಕಷ್ಟಕ್ಕೀಡಾಯಿತು.

ಜದ್ರಾನ್ ಅವರಿಗೆ ಇದು ಏಕದಿನ ಕ್ರಿಕೆಟ್‌ನಲ್ಲಿ ಆರನೇ ಶತಕ. 106 ಎಸೆತಗಳಲ್ಲಿ ಮೂರಂಕಿ ಮೊತ್ತ ಮುಟ್ಟಿದರು. ಓವರ್ಟನ್ ಅವರ ಒಂದೇ ಓವರ್‌ನಲ್ಲಿ ಒಂದು ಸಿಕ್ಸರ್ ಮತ್ತು ಎರಡು ಬೌಂಡರಿ ಹೊಡೆದರು. ಆರ್ಚರ್ ಅವರನ್ನೂ ಬಿಡಲಿಲ್ಲ. ಅವರ ಒಂದೇ ಓವರ್‌ನಲ್ಲಿ 3 ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ತಮ್ಮ ವೃತ್ತಿ ಜೀವನದಲ್ಲಿ ಎರಡನೇ ಬಾರಿ 150 ರನ್ ಗಡಿಯನ್ನು ದಾಟಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 50 ಓವರ್‌ಗಳಲ್ಲಿ 7ಕ್ಕೆ325 (ಇಬ್ರಾಹಿಂ ಜದ್ರಾನ್ 177, ಹಷ್ಮತ್ ಉಲ್ಲಾ ಶಾಹೀದಿ 40, ಅಜ್ಮತ್‌ಉಲ್ಲಾ ಶಹೀದಿ 41, ಮೊಹಮ್ಮದ್ ನಬಿ 40, ಜೋಫ್ರಾ ಆರ್ಚರ್ 64ಕ್ಕೆ3, ಲಿಯಾಮ್ ಲಿವಿಂಗ್‌ಸ್ಟೋನ್ 28ಕ್ಕೆ2); **ಇಂಗ್ಲೆಂಡ್:** 49.5 ಓವರುಗಳಲ್ಲಿ 317 (ಬೆನ್ ಡಕೆಟ್ 38, ಜೋ ರೂಟ್ 120, ಹ್ಯಾರಿ ಬ್ರೂಕ್ 25, ಜೋಸ್ ಬಟ್ಲರ್ 38, ಜೇಮಿ ಓವರ್ಟನ್ 32; ಅಜ್ಮತ್‌ವುಲ್ಲಾ ಒಮರ್‌ಝೈ 58ಕ್ಕೆ5, ಮೊಹಮ್ಮದ್ ನಬಿ 57ಕ್ಕೆ2). **ಪಂದ್ಯದ ಆಟಗಾರ:** ಇಬ್ರಾಹಿಂ ಜದ್ರಾನ್.

ಸೋಲುಂಡ ತಂಡಗಳ ಹಣಾಹಣಿ ಇಂದು

‘ಸಮಾಧಾನಕರ’ ಜಯಕ್ಕಾಗಿ ಪಾಕ್–ಬಾಂಗ್ಲಾ ಸೆಣಸು

ರಾವಲ್ಪಿಂಡಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಿಂದ ಈಗಾಗಲೇ ಹೊರಬಿದ್ದಿರುವ ಹಾಲಿ ಚಾಂಪಿಯನ್ ಮತ್ತು ಆತಿಥೇಯ ಪಾಕಿಸ್ತಾನ ತಂಡವು ಗುರುವಾರ ಬಾಂಗ್ಲಾದೇಶ ತಂಡದ ಎದುರು ಆಡಲಿದೆ.

ಪಾಕ್ ತಂಡದ ಆಟಗಾರರು

ಎ ಗುಂಪಿನ ಕಳೆದ ಪಂದ್ಯದಲ್ಲಿ ಪಾಕ್ ತಂಡವು ತನ್ನ ಬದ್ಧ ಎದುರಾಳಿ ಭಾರತದ ಎದುರು ಸೋತಿತ್ತು. ಅದರಿಂದಾಗಿ ತನ್ನದೇ ದೇಶದ ಅಭಿಮಾನಿಗಳು ಮತ್ತು ಮಾಜಿ ಕ್ರಿಕೆಟಿಗರ ಕೆಂಗಣ್ಣಿಗೆ ಗುರಿಯಾಗಿದೆ. ಬಹಳಷ್ಟು ಟೀಕೆಗಳನ್ನು ಕೇಳಬೇಕಾಗಿದೆ. ಪಾಕ್ ಕ್ರಿಕೆಟ್ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆಯಾಗಬೇಕು. ಉತ್ತಮ ತಂಡ ಕಟ್ಟಬೇಕು ಎಂದು ಅಲ್ಲಿಯ ಕ್ರಿಕೆಟ್ ಅಭಿಮಾನಿಗಳು ಆಗ್ರಹಿಸುತ್ತಿದ್ದಾರೆ.

ಹುಸೇನ್ ಶಾಂತೊ

29 ವರ್ಷಗಳ ನಂತರ ಪಾಕಿಸ್ತಾನವು ಐಸಿಸಿ ಟ್ರೋಫಿ ಟೂರ್ನಿಗೆ ಆತಿಥ್ಯ ವಹಿಸಿದೆ. ಆದರೆ, ನಾಕೌಟ್ ಪ್ರವೇಶಿಸುವಲ್ಲಿ ವಿಫಲವಾಗಿದೆ. 2024ರ ಟಿ20 ವಿಶ್ವಕಪ್ ಮತ್ತು 2023ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿಯೂ ಪಾಕ್ ತೀವ್ರ ಮುಖಭಂಗ ಅನುಭವಿಸಿತ್ತು.

ಪಾಕ್ ತಂಡದ ಆಟಗಾರರ ದೌರ್ಬಲ್ಯಗಳು ಈ ಟೂರ್ನಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಎದ್ದು ಕಂಡಿವೆ. ಕಳೆದೆರಡೂ ಪಂದ್ಯಗಳಲ್ಲಿ ಪಾಕ್ ತಂಡವು ರನ್ ಗಳಿಕೆಯಲ್ಲಿ ಯಾವುದೇ ವೇಗ ತೋರಿರಲಿಲ್ಲ. ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ 161 ಮತ್ತು ದುಬೈನಲ್ಲಿ ನಡೆದಿದ್ದ ಭಾರತದ ಎದುರಿನ ಪಂದ್ಯದಲ್ಲಿ 147 ಡಾಟ್ ಬಾಲ್‌ಗಳು ದಾಖಲಾಗಿದ್ದವು.

ಹೊಡೆತಗಳ ಆಯ್ಕೆಯಲ್ಲಿ ಲೋಪ, ಕಳಪೆ ಫೀಲ್ಡಿಂಗ್ ಮತ್ತು ಆಟಗಾರರ ಗಾಯದ ಸಮಸ್ಯೆಗಳಲ್ಲಿ ತಂಡವು ಸೋಲಿನ ಹಾದಿ ಹಿಡಿದಿದೆ. ಫಕರ್ ಜಮಾನ್ ಅವರಂತಹ ಮ್ಯಾಚ್ ವಿನ್ನಿಂಗ್ ಬ್ಯಾಟರ್ ಗೈರಾಗಿರುವುದು ಪಾಕ್ ಹಿನ್ನಡೆಗೆ ಪ್ರಮುಖ ಕಾರಣ. ಅವರ ಬದಲಿಗೆ ಸ್ಥಾನ ಪಡೆದಿರುವ ಇಮಾಮ್ ಉಲ್ ಹಕ್ ಪರಿಣಾಮಕಾರಿಯಾಗಿಲ್ಲ. ಅನುಭವಿ ಬಾಬರ್ ಆಜಂ ಮತ್ತು ನಾಯಕ ರಿಜ್ವಾನ್ ಕೂಡ ವಿಫಲರಾಗಿದ್ದಾರೆ. ಹೀಗಾಗಿ ಪಾಕ್ ತಂಡವು ತನ್ನ ವೇಗದ ಬೌಲಿಂಗ್ ಪಡೆಯ ಮೇಲೆ ಹೆಚ್ಚು ಅವಲಂಬಿತವಾಗಿದೆ. ಆದರೆ ಶಹೀನ್ ಶಾ ಅಫ್ರಿದಿ, ನಸೀಂ ಶಾ ಮತ್ತು ಹ್ಯಾರಿಸ್ ರವೂಫ್ ಅವರೂ ಪರಿಣಾಮಕಾರಿಯಾಗಿಲ್ಲ.

ಬಾಂಗ್ಲಾ ತಂಡ ಕೂಡ ತನ್ನ ಎರಡೂ ಪಂದ್ಯಗಳಲ್ಲಿ ಸೋತಿದೆ. ಸೆಮಿಫೈನಲ್ ಹಾದಿಯಿಂದ ಹೊರಬಿದ್ದಿದೆ. ನಜ್ಮುಲ್ ಹುಸೇನ್ ಶಾಂತೊ ಬಳಗಕ್ಕೂ ಸಮಾಧಾನಕರ ಜಯದ ಮೇಲೆ ಕಣ್ಣಿದೆ. ಮೇಲ್ನೋಟಕ್ಕೆ ಪಾಕ್ ಆಟಗಾರರಿಗಿಂತಲೂ ಬಾಂಗ್ಲಾದ ಆಟಗಾರರು ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ಆತಿಥೇಯರು ಕಠಿಣ ಸವಾಲು ಎದುರಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಐಸಿಸಿ ರ್‍ಯಾಂಕಿಂಗ್: ಅಗ್ರಸ್ಥಾನದಲ್ಲಿ ಮುಂದುವರಿದ ಶುಭಮನ್



ದುಬೈ (ಪಿಟಿಐ): ಭಾರತ ತಂಡದ ಬ್ಯಾಟರ್ ಶುಭಮನ್ ಗಿಲ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಏಕದಿನ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಸೆಮಿಫೈನಲ್ ಪ್ರವೇಶಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಎ ಗುಂಪಿನ ಪಂದ್ಯಗಳಲ್ಲಿ ಅವರು ಬಾಂಗ್ಲಾ ಎದುರು ಅಜೇಯ 101 ಹಾಗೂ ಪಾಕಿಸ್ತಾನ ವಿರುದ್ಧ 46 ರನ್ ಗಳಿಸಿದ್ದರು. ಇದರೊಂದಿಗೆ ಅವರು 21 ರೇಟಿಂಗ್ ಅಂಕಗಳನ್ನು ಪಡೆದಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 817 ರೇಟಿಂಗ್ ಅಂಕಗಳಿವೆ. ಎರಡನೇ ಸ್ಥಾನದಲ್ಲಿರುವ ಪಾಕಿಸ್ತಾನದ ಬಾಬರ್ ಆಜಂ ಅವರಿಗಿಂತ 47 ಅಂಕಗಳನ್ನು ಹೆಚ್ಚು ಗಳಿಸಿದ್ದಾರೆ.

ಪಾಕ್ ಎದುರಿನ ಪಂದ್ಯದಲ್ಲಿ ಅಜೇಯ ಶತಕ ಗಳಿಸಿದ ವಿರಾಟ್ ಕೊಹ್ಲಿ ಐದನೇ ಸ್ಥಾನಕ್ಕೇರಿದ್ದಾರೆ. ಈ ಹಾದಿಯಲ್ಲಿ ಅವರು ನ್ಯೂಜಿಲೆಂಡ್‌ನ ಡ್ಯಾರಿಲ್ ಮಿಚೆಲ್ ಅವರನ್ನು ಹಿಂದಿಕ್ಕಿದ್ದಾರೆ. ಕೆ.ಎಲ್. ರಾಹುಲ್ ಎರಡು ಸ್ಥಾನಗಳ ಬಡ್ತಿ ಪಡೆದು 15ಕ್ಕೇರಿದ್ದಾರೆ. ಕಿವೀಸ್ ಬ್ಯಾಟರ್ ವಿಲ್ ಯಂಗ್ ಮತ್ತು ಟಾಮ್ ಲೇಥಮ್ ಅವರು ಕ್ರಮವಾಗಿ 14 ಹಾಗೂ 30ನೇ ಸ್ಥಾನಕ್ಕೇರಿದ್ದಾರೆ. ರಚಿನ್ ರವೀಂದ್ರ 18 ಸ್ಥಾನಗಳ ಬಡ್ತಿ ಪಡೆದು 24ಕ್ಕೆ ಜಿಗಿದಿದ್ದಾರೆ. ಗ್ಲೆನ್ ಫಿಲಿಪ್ಸ್ 12ನೇ ಸ್ಥಾನ ಪಡೆದಿದ್ದಾರೆ.

ಭಾರತ ತಂಡಕ್ಕೆ ಒಂದೇ ತಾಣದ ಅನುಕೂಲ: ಟೀಕೆ

ದುಬೈ (ಎಎಫ್‌ಪಿ): ಚಾಂಪಿಯನ್ಸ್ ಟ್ರೋಫಿಯಲ್ಲಿ ಉಳಿದ ತಂಡಗಳಿಗೆ ಮೂರು ಕಡೆ ಆಡಿಸಿ, ಭಾರತಕ್ಕೆ ಎಲ್ಲ ಪಂದ್ಯಗಳನ್ನು ದುಬೈನ ಒಂದೇ ತಾಣದಲ್ಲಿ ಆಡುವ ‘ನಿರಾಕರಿಸಲಾಗದ’ ಅನುಕೂಲ ಮಾಡಿಕೊಟ್ಟಿರುವುದಕ್ಕೆ ಹಿರಿಯ ಕ್ರಿಕೆಟ್ ಆಟಗಾರರು ಟೀಕಾಪ್ರಹಾರ ನಡೆಸಿದ್ದಾರೆ.

ಈ ಟೂರ್ನಿಯ ಆತಿಥ್ಯ ವಹಿಸಿದ್ದ ಪಾಕಿಸ್ತಾನಕ್ಕೆ ತೆರಳಲು ಭದ್ರತೆ ಮತ್ತು ರಾಜಕೀಯ ಉದ್ವಿಗ್ನತೆಯ ಕಾರಣ ನೀಡಿ ಬಿಸಿಸಿಐ ನಿರಾಕರಿಸಿತ್ತು. ಇದರಿಂದ ಭಾರತ ತಂಡಕ್ಕೆ ಹೈಬ್ರಿಡ್ ಮಾದರಿಯಲ್ಲಿ ಆಡಲು ಅವಕಾಶ ನೀಡಲಾಗಿತ್ತು. ಭಾರತ ಎಲ್ಲ ಪಂದ್ಯಗಳನ್ನು ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡುತ್ತಿದೆ.

ಪಾಕಿಸ್ತಾನ ಮೊದಲು ಈ ಮಾದರಿಗೆ ಒಪ್ಪಿರಲಿಲ್ಲ. ಆದರೆ ಐಸಿಸಿ ಜೊತೆ ಸಂಧಾನದ ನಂತರ ಹೈಬ್ರಿಡ್ ಮಾದರಿಗೆ ಸಮ್ಮತಿ ಸೂಚಿಸಿತ್ತು. ಇದರಂತೆ ಪಾಕಿಸ್ತಾನ ತಂಡವೂ 2027ರವರೆಗೆ ಭಾರತ ಆತಿಥ್ಯದ ಐಸಿಸಿ ಟೂರ್ನಿಗಳ ವೇಳೆ ತನ್ನ ಪಂದ್ಯಗಳನ್ನು ತಟಸ್ಥ ತಾಣದಲ್ಲಿ ಆಡಲಿದೆ.

‘ಭಾರತವನ್ನು ಈ ರೀತಿ ಆದರಿಸುವುದನ್ನು ನೋಡಿದರೆ ನನಗೆ ಮಜುಗರವೆನಿಸುತ್ತದೆ’ ಎಂದು ಇಂಗ್ಲೆಂಡ್‌ನ ಮಾಜಿ ವೇಗಿ ಹಾಗೂ ವೀಕ್ಷಕ ವಿವರಣೆಗಾರ ಜೊನಾಥನ್ ಆ್ಯಗ್ನೂ ‘ಎಬಿಸಿ ಸ್ಪೋರ್ಟ್ಸ್’ಗೆ ತಿಳಿಸಿದ್ದಾರೆ. ‘ಇದು ಸರಿಯಲ್ಲ. ಅಂತರ ರಾಷ್ಟ್ರೀಯ ಟೂರ್ನಿ ಆಡಲು ಹೋಗುವಾಗ, ಎಲ್ಲಿ ಆಡಬೇಕು, ಆಡಬಾರದು ಎಂದು ತಂಡವೇ ಆಯ್ಕೆ ಮಾಡುವುದು ಕ್ರಮವಲ್ಲ’ ಎಂದಿದ್ದಾರೆ ಆ್ಯಗ್ನೂ.

ಸ್ಪಿನ್ ಬೌಲಿಂಗ್ ಎದುರಿಸಿದ ಕೊಹ್ಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡವು ಬುಧವಾರ ಇಲ್ಲಿ ಅಭ್ಯಾಸ ನಡೆಸಿತು.

ಈ ಸಂದರ್ಭದಲ್ಲಿ ‘ಚೇಸಿಂಗ್ ಮಾಸ್ಟರ್’ ವಿರಾಟ್ ಕೊಹ್ಲಿ ಅವರು ಸ್ಪಿನ್ ಬೌಲರ್‌ಗಳ ಎದುರು ಹೆಚ್ಚು ಹೊತ್ತು ಆಡಿದರು. ತಂಡದಲ್ಲಿರುವ ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಮತ್ತು ರವೀಂದ್ರ ಜಡೇಜ ಬೌಲಿಂಗ್ ಎದುರು ಕೊಹ್ಲಿ ಅಭ್ಯಾಸ ಮಾಡಿದರು. ಅರ್ಧ ಗಂಟೆಗೂ ಹೆಚ್ಚು ಕಾಲ ಅವರು ಸ್ಪಿನ್ನರ್ ಗಳೊಂದಿಗೆ ಆಡಿದರು. ಫೆಬ್ರುವರಿ 23ರಂದು ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅಜೇಯ 100 ರನ್ ಹೊಡೆದು ಲಯಕ್ಕೆ ಮರಳಿದ್ದರು.

ಭಾರತ ತಂಡ ಸೇರಿಕೊಂಡ ಮಾರ್ಕೆಲ್



ದುಬೈ (ಪಿಟಿಐ): ‘ಕುಟುಂಬದ ತುರ್ತು’ ಕಾರಣಕ್ಕೆ ಕೆಲದಿನಗಳ ಹಿಂದೆ ದಕ್ಷಿಣ ಆಫ್ರಿಕಕ್ಕೆ ಹಿಂತಿರುಗಿದ್ದ ಭಾರತದ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಅವರು ಬುಧವಾರ ತಂಡವನ್ನು ಮರಳಿ ಸೇರಿಕೊಂಡಿದ್ದಾರೆ. ಅವರು ಸಂಜೆ ತಂಡದ ನೆಟ್ ಪ್ರಾಕ್ಟೀಸ್ ವೇಳೆ ಕಾಣಿಸಿಕೊಂಡರು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಬಾಂಗ್ಲಾದೇಶ ವಿರುದ್ಧ ಭಾರತ ತನ್ನ ಮೊದಲ ಪಂದ್ಯ ಆಡುವ ಮೊದಲು, ಫೆ. 20ರಂದು ಮಾರ್ಕೆಲ್ ಅವರು ಭಾರತ ತಂಡದ ಶಿಬಿರ ತೊರೆದು ತವರಿಗೆ ಮರಳಿದ್ದರು.

ಬುಧವಾರ ಸಂಜೆ ಇಲ್ಲಿನ ಐಸಿಸಿ ಅಕಾಡೆಮಿಯಲ್ಲಿ ಭಾರತದ ಆಟಗಾರರು ವಾರ್ಮ್‌ಅಪ್‌ನಲ್ಲಿ ತೊಡಗಿರುವ ವೇಳೆ, ದಕ್ಷಿಣ ಆಫ್ರಿಕಾದ ಈ ಮಾಜಿ ವೇಗದ ಬೌಲರ್, ಹೆಡ್ ಕೋಚ್ ಗೌತಮ್ ಗಂಭೀರ್ ಜೊತೆ ದೀರ್ಘ ಸಮಾಲೋಚನೆಯಲ್ಲಿ ತೊಡಗಿದ್ದು ಕಂಡುಬಂತು.

ಉತ್ತಮ ಪ್ರದರ್ಶನ ನೀಡಿರುವ ಶುಭಮನ್ ಗಿಲ್ ಅವರು ಪ್ರಾಕ್ಟೀಸ್ ವೇಳೆ ಕಾಣಿಸಿಕೊಳ್ಳಲಿಲ್ಲ. ಅನಾರೋಗ್ಯದಿಂದ ಚೇತರಿಸಿಕೊಂಡಿರುವ ರಿಷಭ್ ಪಂತ್ ಅವರು ಬುಧವಾರ ಅಭ್ಯಾಸದಲ್ಲಿ ನಿರತರಾಗಿದ್ದರು.

‘ಎ’ ಗುಂಪಿನಲ್ಲಿ ಎರಡನೇ ಪಂದ್ಯವನ್ನು ಫೆ. 23ರಂದು ಪಾಕಿಸ್ತಾನದ ವಿರುದ್ಧ ಆಡಿದ ನಂತರ ಭಾರತಕ್ಕೆ ಮುಂದಿನ ಪಂದ್ಯ (ನ್ಯೂಜಿಲೆಂಡ್ ವಿರುದ್ಧ) ಆಡಲು ಒಂದು ವಾರದ ಬಿಡುವು ದೊರೆತಿದೆ.

ಮಾರ್ಚ್ 2ರಂದು ‘ಎ’ ಗುಂಪಿನ ಈ ಕೊನೆಯ ಲೀಗ್ ಪಂದ್ಯ ನಡೆಯಲಿದೆ. ಎರಡೂ ತಂಡಗಳು ಈಗಾಗಲೇ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿವೆ.

ಪಾಕಿಸ್ತಾನ ಟೂರ್ನಿಯ ಆತಿಥ್ಯ ವಹಿಸಿದ್ದರೂ, ಅಲ್ಲಿಗೆ ಹೋಗಲು ನಿರಾಕರಿಸಿದ್ದ ಭಾರತ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಡುತ್ತಿದೆ. ಭಾರತ ಫೈನಲ್ ತಲುಪಿದರೆ ಆ ಪಂದ್ಯವೂ ದುಬೈನಲ್ಲೇ ನಡೆಯಲಿದೆ.

ಬ್ಯಾಡ್ಮಿಂಟನ್: ಪ್ರಿಯಾಂಶು, ರಕ್ಷಿತಾಗೆ ಮುನ್ನಡೆ

ಜರ್ಮನಿ(ಪಿಟಿಐ): ಪ್ರಿಯಾಂಶು ರಾಜಾವತ್ ಹಾಗೂ ಕಿರಣ್ ಜಾರ್ಜ್ ಸೇರಿದಂತೆ ಭಾರತದ ನಾಲ್ವರು ಜರ್ಮನಿ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು.

ಬುಧವಾರ ನಡೆದ ಪಂದ್ಯದಲ್ಲಿ ಪ್ರಿಯಾಂಶು 21–14, 21–12ರಿಂದ ಸ್ವದೇಶದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ವಿರುದ್ಧ ಗೆದ್ದರು.

ಸಿಂಗಲ್ಸ್ ವಿಭಾಗದ ಇನ್ನೊಂದು ಪಂದ್ಯದಲ್ಲಿ ಕಿರಣ್ ಜಾರ್ಜ್ 21–18, 19–21, 21–16ರಿಂದ ಫಿನ್ಲೆಂಡ್‌ನ ಜೆ. ಓಲ್ಡ್‌ಆರ್ಫ್ ವಿರುದ್ಧ ಗೆದ್ದರು.

ಮಹಿಳೆಯರ ವಿಭಾಗದಲ್ಲಿ ರಕ್ಷಿತಾ ಶ್ರೀ ಸಂತೋಷ್ ರಾಮರಾಜ್ 22–20, 5–21, 25–23ರಿಂದ ಮಲೇಷ್ಯಾದ ಕಿಸೊನಾ ಸೆಲ್ವದುರೈ ವಿರುದ್ಧ ಗೆದ್ದರು. ಇನ್ನೊಂದು ಪಂದ್ಯದಲ್ಲಿ ಉನ್ನತಿ ಹೂಡಾ 21–13, 21–17ರಿಂದ ಕೆನಡಾದ ಡಬ್ಲ್ಯು ಝೂಂಗ್ ವಿರುದ್ಧ ಗೆದ್ದರು.

ಬ್ರಂಟ್ ಆಲ್‌ರೌಂಡ್ ಆಟಕ್ಕೆ ಜಯ

ಡಬ್ಲ್ಯುಪಿಎಲ್: ಅಗ್ರಸ್ಥಾನಕ್ಕೇರಿದ ಮುಂಬೈ ಇಂಡಿಯನ್ಸ್; ವಾರಿಯರ್ಸ್‌ಗೆ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಟ್ ಶಿವರ್ ಬ್ರಂಟ್ ಆಲ್‌ರೌಂಡ್ ಆಟದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಮಹಿಳಾ ಪ್ರಿಮಿಯರ್ ಲೀಗ್ ಪಂದ್ಯದಲ್ಲಿ ಯು.ಪಿ. ವಾರಿಯರ್ಸ್ ವಿರುದ್ಧ ಜಯಿಸಿತು.

ಮೊದಲು ಬೌಲಿಂಗ್‌ನಲ್ಲಿ ಮಿಂಚಿದ ಬ್ರಂಟ್ (18ಕ್ಕೆ3 ಮತ್ತು ಔಟಾಗದೇ 75)ನಂತರ ಬ್ಯಾಟಿಂಗ್‌ನಲ್ಲೂ ಅಬ್ಬರಿಸಿದರು. ಇದರಿಂದಾಗಿ ಮುಂಬೈ ತಂಡವು 8 ವಿಕೆಟ್‌ಗಳಿಂದ ಗೆದ್ದಿತು. ತಂಡಕ್ಕೆ ಇದು 3ನೇ ಜಯ. ಒಟ್ಟು 6 ಅಂಕ ಗಳಿಸಿ ಅಗ್ರಸ್ಥಾನಕ್ಕೇರಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಗ್ರೇಸ್ ಹ್ಯಾರಿಸ್ (45; 26ಎಸೆತ) ಅವರ ಬ್ಯಾಟಿಂಗ್‌ನಿಂದ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 142 ರನ್ ಗಳಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡವು 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 143 ರನ್ ಗಳಿಸಿ ಗೆದ್ದಿತು.

ಮುಂಬೈ ತಂಡದ ಹೇಲಿ ಮ್ಯಾಥ್ಯೂಸ್ (59; 50ಎ, 4X7, 6X2) ಮತ್ತು ಬ್ರಂಟ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 133 ರನ್ ಸೇರಿಸಿದರು.ಇದರಿಂದಾಗಿ ಜಯದ ಹಾದಿ ಸುಲಭವಾಯಿತು.

ಮುಂಬೈ ಇಂಡಿಯನ್ಸ್ ತಂಡದ ನಾಟ್ ಶಿವರ್ ಬ್ರಂಟ್ ಬ್ಯಾಟಿಂಗ್–ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ರಂಟ್ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಕಿರಣ್ ನವಗಿರೆ ಔಟಾದರು. ಈ ಹಂತದಲ್ಲಿ ಗ್ರೇಸ್ ಮತ್ತು ವೃಂದಾ ದಿನೇಶ್ (33; 30ಎ, 4X5) ಅವರಿಬ್ಬರೂ ಜೊತೆಗೂಡಿ ಎರಡನೇ ವಿಕೆಟ್‌ಗೆ 79 ರನ್ ಸೇರಿಸಿದರು.

10ನೇ ಓವರ್‌ನಲ್ಲಿ ಹೇಲಿ ಮ್ಯಾಥ್ಯೂಸ್ ಅವರು ಗ್ರೇಸ್ ಹ್ಯಾರಿಸ್ ವಿಕೆಟ್ ಪಡೆದು ಈ ಜೊತೆಯಾಟ ಮುರಿದರು. ಇದಾದ ಮೇಲೆ ನಾಟಕೀಯ ರೀತಿಯಲ್ಲಿ ವಾರಿಯರ್ಸ್ ವಿಕೆಟ್‌ಗಳು ಪತನವಾದವು. 61 ರನ್‌ಗಳ ಅಂತರದಲ್ಲಿ 7 ವಿಕೆಟ್‌ಗಳು ಪತನವಾದವು. ಇದರಿಂದಾಗಿ ದೊಡ್ಡ ಮೊತ್ತ ಗಳಿಸಲಾಗಲಿಲ್ಲ.

ಬ್ರಂಟ್ ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. 170.45ರ ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಿದರು. 13 ಬೌಂಡರಿಗಳನ್ನು ಹೊಡೆದರು.

ಸಂಕ್ಷಿಪ್ತ ಸ್ಕೋರು: ಯು.ಪಿ. ವಾರಿಯರ್ಸ್: 20 ಓವರ್‌ಗಳಲ್ಲಿ 9ಕ್ಕೆ142 (ಗ್ರೇಸ್ ಹ್ಯಾರಿಸ್ 45, ವೃಂದಾ ದಿನೇಶ್ 33, ಶ್ವೇತಾ ಸೆಹ್ರಾವತ್ 19, ಉಮಾ ಚೆಟ್ರಿ ಔಟಾಗದೇ 13, ನಾಟ್ ಶಿವರ್ ಬ್ರಂಟ್ 18ಕ್ಕೆ3, ಶಬ್ನಿಂ ಇಸ್ಮಾಯಿಲ್ 33ಕ್ಕೆ2, ಸಂಸ್ಕೃತಿ ಗುಪ್ತಾ 11ಕ್ಕೆ2) **ಮುಂಬೈ ಇಂಡಿಯನ್ಸ್:** 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 143 (ಹೇಲಿ ಮ್ಯಾಥ್ಯೂಸ್ 59, ನಾಟ್ ಶಿವರ್ ಬ್ರಂಟ್ ಔಟಾಗದೇ 75, ಸೋಫಿ ಎಕ್ಲೆಸ್ಟೊನ್ 29ಕ್ಕೆ1, ದೀಪ್ತಿ ಶರ್ಮಾ 25ಕ್ಕೆ1) **ಫಲಿತಾಂಶ:** ಮುಂಬೈ ಇಂಡಿಯನ್ಸ್ ತಂಡಕ್ಕೆ 8 ವಿಕೆಟ್‌ಗಳ ಜಯ.

‘ಬಿಎಫ್‌ಐ ಚುನಾವಣೆ ಸ್ಪರ್ಧಿಸಲು ಸಿದ್ಧ’

ನವದೆಹಲಿ (ಪಿಟಿಐ): ‘ಅಂತಃ ಕಲಹದಿಂದ ತತ್ತರಿಸಿರುವ ಭಾರತ ಬಾಕ್ಸಿಂಗ್ ಫೆಡರೇಷನ್‌ಗೆ ಆದಷ್ಟು ಬೇಗ ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಸಬೇಕು. ತಮಗೆ ‘ಹೊಣೆ’ ವಹಿಸಿದರೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧ’ ಎಂದು ಒಲಿಂಪಿಕ್ಸ್ ಪದಕ ವಿಜೇತ ಬಾಕ್ಸರ್ ವಿಜೇಂದರ್ ಸಿಂಗ್ ಹೇಳಿದ್ದಾರೆ.

39 ವರ್ಷ ವಯಸ್ಸಿನ ವಿಜೇಂದರ್ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದು, ಈ ಮಟ್ಟದಲ್ಲಿ ಪದಕ ಗೆದ್ದ ಭಾರತದ ಏಕೈಕ ಬಾಕ್ಸರ್ ಎನಿಸಿದ್ದಾರೆ.

‘ಚುನಾವಣೆ ಯಾವಾಗ ನಡೆದರೂ, ಕಣಕ್ಕಿಳಿಯಲು ನಾನು ಸಿದ್ಧನಿದ್ದೇನೆ. ನಾನು ಜೀವನದುದ್ದಕ್ಕೂ ಹೋರಾಟ ನಡೆಸಿಕೊಂಡು ಬಂದವನು. ಬೆಂಬಲ ಸಿಗುವುದೇ ಎಂಬುದರ ಅರಿವು ನನಗಿಲ್ಲ. ಆದರೆ ಕಣಕ್ಕಿಳಿಯಲು ಹಿಂಜರಿಯುವುದಿಲ್ಲ’ ಎಂದು ವಿಜೇಂದರ್ ತಿಳಿಸಿದರು.

ಭಾರತದ ಬಾಕ್ಸರ್‌ಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ತೋರಬೇಕಾದರೆ ಅವರಿಗೆ ವಿದೇಶದಲ್ಲಿ ತರಬೇತಿ ದೊರೆಯುವಂತಾಗಬೇಕು ಎಂದು ಅವರು ‘ಎಕ್ಸ್’ ಖಾತೆಯಲ್ಲಿ ಬರೆದಿದ್ದಾರೆ.

ಫೆಡರೇಷನ್‌ಗೆ ಸಕಾಲದಲ್ಲಿ ಚುನಾವಣೆಯನ್ನು ನಡೆಸದ ಕಾರಣಕ್ಕೆ ಭಾರತ ಒಲಿಂಪಿಕ್ ಸಂಸ್ಥೆಯು ಎರಡು ದಿನಗಳ ಹಿಂದೆ, ಭಾರತ ಬಾಕ್ಸಿಂಗ್ ಫೆಡರೇಷನ್‌ನ ಕಾರ್ಯಭಾರ ನಿರ್ವಹಣೆಯನ್ನು ಅಡ್‌ಹಾಕ್ ಸಮಿತಿಗೆ ಒಪ್ಪಿಸಿತ್ತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಗುಜರಾತ್ ಜೈಂಟ್ಸ್ ಹಣಾಹಣಿ ಇಂದು

ಜಯದ ಲಯಕ್ಕೆ ಮರಳುವುದೇ ಮಂದಾನ ಪಡೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ಸ್ಮೃತಿ ಮಂದಾನ ಬಳಗವು ತವರಿನಂಗಳದಲ್ಲಿ ಮೊದಲ ಜಯ ಸಾಧಿಸುವ ಒತ್ತಡದಲ್ಲಿದೆ.

ವಡೋದರಾದಲ್ಲಿ ನಡೆದಿದ್ದ ಮೊದಲೆರಡೂ ಪಂದ್ಯಗಳಲ್ಲಿ ಸ್ಮೃತಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಭರ್ಜರಿ ಜಯ ಸಾಧಿಸಿತ್ತು. ಆದರೆ ಚಿನ್ನಸ್ವಾಮಿ ಅಂಗಳದಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಸೋತಿದೆ. ಗುರುವಾರ ನಡೆಯಲಿರುವ ಮೂರನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಎದುರು ಮೇಲುಗೈ ಸಾಧಿಸುವ ಛಲದಲ್ಲಿದೆ.

ಇಲ್ಲಿ ಈಚೆಗೆ ನಡೆದ ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್‌ನಲ್ಲಿ ಉತ್ತಮ ವಾಗಿ ಆಡಿದ್ದ ಆರ್‌ಸಿಬಿ ಬೌಲಿಂಗ್ ವಿಭಾಗದಲ್ಲಿಯೇ ಎಡವಿತ್ತು. ಮುಂಬೈ ಇಂಡಿಯನ್ಸ್ ಎದುರು ಸ್ಪರ್ಧಾತ್ಮಕ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಆತಿಥೇಯ ಬೌಲರ್‌ಗಳು ಯಶಸ್ವಿಯಾಗಿರಲಿಲ್ಲ. ಯು.ಪಿ ವಾರಿಯರ್ಸ್ ಎದುರಿನ ಪಂದ್ಯವು ಟೈ ಆಗಿತ್ತು. ಸೂಪರ್ ಓವರ್‌ನಲ್ಲಿ ಆರ್‌ಸಿಬಿ ಕೈಚೆಲ್ಲಿತು. ಗುರಿ ಬೆನ್ನಟ್ಟಿದ್ದ ವಾರಿಯರ್ಸ್‌ಗೆ ಜಯಕ್ಕಾಗಿ ಕೊನೆಯ ಓವರ್‌ನಲ್ಲಿ 18 ರನ್‌ಗಳು ಬೇಕಿದ್ದವು. ಅನುಭವಿ ಮಧ್ಯಮವೇಗಿ ರೇಣುಕಾ ಸಿಂಗ್ ಯಾದವ್ ಅವರು ಹಾಕಿದ ಓವರ್‌ನಲ್ಲಿ ವಾರಿಯರ್ಸ್ ತಂಡದ ಕೊನೆಯ ಬ್ಯಾಟರ್ ಸೋಫಿ ಎಕ್ಲೆಸ್ಟೋನ್ ಅಬ್ಬರಿಸಿದರು. ಪಂದ್ಯ ಟೈ ಆಯಿತು. ಸೂಪರ್ ಓವರ್‌ನಲ್ಲಿ 9 ರನ್ ಗುರಿ ಮುಟ್ಟಲು ಆರ್‌ಸಿಬಿ ಬ್ಯಾಟರ್‌ಗಳಿಗೆ ಸ್ಪಿನ್ನರ್ ಕೂಡ ಆಗಿರುವ ಸೋಫಿ ಅವಕಾಶ ಕೊಡಲಿಲ್ಲ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎಲಿಸ್ ಪೆರಿ ಪ್ರಜಾವಾಣಿ ಚಿತ್ರ/ಪ್ರಶಾಂತ್‌.ಹೆಚ್‌.ಜಿ

ಬ್ಯಾಟಿಂಗ್ ವಿಭಾಗದಲ್ಲಿ ಎಲಿಸ್ ಪೆರಿ, ಕಳೆದೆರಡೂ ಪಂದ್ಯಗಳಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದಾರೆ. ಕಳೆದ ಪಂದ್ಯದಲ್ಲಿ ವ್ಯಾಟ್ ಹಾಜ್ ಕೂಡ ಅರ್ಧಶತಕ ಹೊಡೆದಿದ್ದರು. ಸ್ಮೃತಿ, ರಿಚಾ ಘೋಷ್ ಮತ್ತು ಕನಿಕಾ ಅಹುಜಾ ಅವರು ಲಯಕ್ಕೆ ಮರಳುವ ಅಗತ್ಯವಿದೆ. ಬೌಲಿಂಗ್ ವಿಭಾಗದಲ್ಲಿ ರೇಣುಕಾ ಅವರು ಡೆತ್ ಓವರ್‌ಗಳ ವೈಫಲ್ಯದಿಂದ ಹೊರಬರಬೇಕಿದೆ. ಕಿಮ್ ಗಾರ್ಥ್ ಮತ್ತು ಸ್ನೇಹ ರಾಣಾ ಅವರು ಉತ್ತಮ ಲಯದಲ್ಲಿದ್ದಾರೆ. ಫೀಲ್ಡಿಂಗ್‌ನಲ್ಲಿಯೂ ಚುರುಕುತನ ಹೆಚ್ಚಿದರೆ ಎದುರಾಳಿಗಳ ಮೇಲೆ ಒತ್ತಡ ಹಾಕಬಹುದಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಜ್ಞಾನಂದಗೆ ನವಾರ ಎದುರಾಳಿ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಪ್ರಜ್ಞಾನಂದ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಥಳೀಯ (ಝೆಕ್ ರಿಪಬ್ಲಿಕ್) ತಾರೆ ಡೇವಿಡ್ ನವಾರ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದಪ್ರಜ್ಞಾನಂದ ಅವರು ಗುರುವಾರ ಆರಂಭವಾಗುವ ಈ ಟೂರ್ನಿಯನ್ನು ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದು, ಮೊದಲ ಸುತ್ತಿನಲ್ಲಿ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ. ನವಾರ ಅವರು ದೀರ್ಘ ಕಾಲದಿಂದ ಯುರೋಪಿನ ಪ್ರಮುಖ ಆಟಗಾರರಾಗಿ ಗುರುತಿಸಿಕೊಂಡಿದ್ದಾರೆ.

ಈ ಟೂರ್ನಿಯಲ್ಲಿ ಹತ್ತು ಆಟಗಾರರು ಭಾಗವಹಿಸಲಿದ್ದು, 9 ಸುತ್ತುಗಳಿವೆ. ಎದುರಿಸಲಿದ್ದಾರೆ.

ಬೆಂಗಳೂರು ಓಪನ್ ಚಾಲೆಂಜರ್ ಟೆನಿಸ್ ಟೂರ್ನಿ

ಎಂಟರ ಘಟ್ಟಕ್ಕೆ ಬಿಲಿ ಹ್ಯಾರಿಸ್

ಪ್ರಜಾವಾಣಿ ವಾರ್ತೆ

ಕೊನೆ ಗಳಿಗೆಯಲ್ಲಿ ಭಾರತದಲ್ಲಿ ಈ ವರ್ಷದ ನಾಲ್ಕನೇ ಟೂರ್ನಿಯನ್ನು ಆಡುವ ನಿರ್ಧಾರಕ್ಕೆ ಬಂದ ಬ್ರಿಟನ್‌ನ ಬಿಲಿ ಹ್ಯಾರಿಸ್, ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ 125 ಮಟ್ಟದ ಟೂರ್ನಿಯಲ್ಲಿ ಯಶಸ್ವಿನ ಓಟ ಮುಂದುವರಿಸಿದರು. ಬುಧವಾರ ಅವರು ಝೆಕ್ ರಿಪಬ್ಲಿಕ್‌ನ ಆಟಗಾರ ಮೆರೆಕ್ ಜೆಂಜೆಲ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಅಂತಿಮ ಎಂಟರ ಘಟ್ಟ ತಲುಪಿದರು.

ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ, ನಾಟಿಂಗ್‌ಹ್ಯಾಮ್‌ನ ಹ್ಯಾರಿಸ್ 6–4, 6–3 ರಿಂದ ಮರೆಕ್ ಅವರನ್ನು ಮಣಿಸಿದರು.

30 ವರ್ಷ ವಯಸ್ಸಿನ ಹ್ಯಾರಿಸ್ ಅವರ ಟೆನಿಸ್ ಬದುಕಿನ ಆರಂಭದ ವರ್ಷಗಳಲ್ಲಿ ತಮ್ಮ ಸಾಹಸಗಳ ಮೂಲಕ ಗಮನ ಸೆಳೆದರು. 3–4 ವರ್ಷ ಫೋರ್ಡ್ ಟ್ರಾನ್ಸಿಟ್ ವ್ಯಾನ್ ಮೂಲಕ ಯುರೋಪಿನ ಇತರ ದೇಶಗಳನ್ನು ಸುತ್ತಿ ಫ್ಯೂಚರ್ ಟೂರ್ನಿಗಳಲ್ಲಿ ಆಡುತ್ತಿದ್ದರು.

ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ 110ನೇ ಸ್ಥಾನದಲ್ಲಿರುವ ಅವರ ಗುರಿ ಅಗ್ರ 100ರಲ್ಲಿ ಸ್ಥಾನ ಪಡೆಯುವುದು. 2024ರ ಸೆಪ್ಟೆಂಬರ್‌ನಲ್ಲಿ ಜೀವನ ಶ್ರೇಷ್ಠ ರ‍್ಯಾಂಕಿಂಗ್ 101 ತಲುಪಿದ್ದರು.

ಬ್ರಿಟನ್‌ನ ಬಿಲಿ ಹ್ಯಾರಿಸ್, 16ರ ಘಟ್ಟದ ಸಿಂಗಲ್ಸ್ ಪಂದ್ಯದಲ್ಲಿ ಚೆಂಡನ್ನು ರಿಟರ್ನ್ ಮಾಡಿದ ಪರಿ ಚಿತ್ರ: ಪುಷ್ಕರ್ ವಿ.

ಈ ಟೂರ್ನಿಯಲ್ಲಿ ಕೊನೆಗಳಿಗೆಯಲ್ಲಿ ಕ್ವಾಲಿಫೈಯಿಂಗ್ ವಿಭಾಗದಲ್ಲಿ ಆಡುವ ಅವಕಾಶ ಪಡೆದ ಹ್ಯಾರಿಸ್ ಎರಡನೇ ಸುತ್ತಿನಲ್ಲಿ ಸೋಲನುಭವಿಸಿದ್ದರು. ಆದರೆ ಪ್ರಧಾನ ಸುತ್ತಿನಲ್ಲಿ ಆಡಬೇಕಾಗಿದ್ದ ಕೆನಡಾದ ಅಲೆಕ್ಸಿಸ್ ಗಲರ್ನೆ ಹಿಂದೆಸರಿದ ಕಾರಣ ‘ಲಕ್ಕಿ ಲೂಸರ್’ ಆಗಿ ಮುಖ್ಯ ಸುತ್ತಿನಲ್ಲಿ ಆಡುವ ಅವಕಾಶ ಪಡೆದಿದ್ದರು!

ಎರಡನೇ ಸುತ್ತಿನ ಇತರ ಪಂದ್ಯಗಳಲ್ಲಿ ಆಸ್ಟ್ರೇಲಿಯಾದ ಜೇಮ್ಸ್ ಮೆಕ್‌ಕ್ಯಾಬ್7–5, 5–7, 7–6 (5) ರಿಂದ ಜಪಾನ್‌ನ ರಿಯೊ ನೊಗುಚಿ ಅವರನ್ನು, ಶ್ರೇಯಾಂಕರಹಿತ ಆಟಗಾರ, ಕೊಲಂಬಿಯಾದ ನಿಕೋಲಸ್ ಮೆಹಿಯಾ 6–1, 7–5 ರಿಂದ ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್ ಅವರನ್ನು, ಎರಡನೇ ಶ್ರೇಯಾಂಕದ ಟ್ರಿಸ್ಟನ್ ಸ್ಕೂಲ್ಕೇಟ್ (ಆಸ್ಟ್ರೇಲಿಯಾ) ಅವರು 6–3, 3–6, 6–2 ರಿಂದ ಜುರಿಜ್ ರೊಡಿಒನೊವ್ ಅವರನ್ನು ಹಿಮ್ಮೆಟ್ಟಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಎಂಟರ ಘಟ್ಟಕ್ಕೆ ರಾಮಕುಮಾರ್– ಮೈನೇನಿ:ಭಾರತದ ರಾಮಕುಮಾರ್ ರಾಮನಾಥನ್ –ಸಾಕೇತ್ ಮೈನೇನಿ ಜೋಡಿ ಡಬಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 6–3, 7–6 (4) ರಿಂದ ಇಟಲಿಯ ಜಾಕೊಪೊ ಬೆರೆಟ್ಟನಿ– ಎನ್ರಿಕೊ ಡೆಲ್ಲಾವಲ್ ಜೋಡಿಯನ್ನು ಸೋಲಿಸಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯಿತು. ರಾಮಕುಮಾರ್– ಸಾಕೇತ್ ಮುಂದಿನ ಸುತ್ತಿನಲ್ಲಿ ಹೈನೆಟ್ ಬಾರ್ಟನ್ (ಝೆಕ್ ರಿಪಬ್ಲಿಕ್)– ಎರಿಕ್ ವನ್ಷೆಲ್‌ಬೊಯಿಮ್ (ಉಕ್ರೇನ್) ಅವರನ್ನು ಎದುರಿಸಲಿದ್ದಾರೆ. ಈ ಜೋಡಿ 6–3, 1–6, 13–11 ರಿಂದ ಜೊಹಾನೆಸ್ ಇಂಗ್ಲಿಂಡ್ಸೆನ್ (ಡೆನ್ಮಾರ್ಕ್)– ಇವಾನ್ ಲಿಯುಟರೆವಿಚ್ (ಬೆಲಾರೂಸ್) ಅವರನ್ನು ಸೋಲಿಸಿತು.

ಇದಕ್ಕೆ ಮೊದಲು ಅಗ್ರ ಶ್ರೇಯಾಂಕದ ಅನಿರುದ್ಧ ಚಂದ್ರಶೇಖರ್ (ಭಾರತ) – ರೇ ಹೊ (ತೈವಾನ್) ಜೋಡಿ 6–4, 6–4 ರಿಂದ ಸಾಯಿ ಕಾರ್ತಿಕ್ ರೆಡ್ಡಿ (ಭಾರತ)– ಖುಮೊಯುನ್ ಸುಲ್ತಾನೋವ್ (ಉಜ್ಬೇಕಿಸ್ತಾನ) ಜೋಡಿಯನ್ನು ಮಣಿಸಿ ಎಂಟರ ಘಟ್ಟಕ್ಕೆ ತಲುಪಿತು.

ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಅದಿಲ್ ಕಲ್ಯಾಣಪುರ್– ಕರಣ್ ಸಿಂಗ್ ಜೋಡಿ 1–6, 6–2, 10–4 ರಿಂದ ನಿತಿನ್ ಕುಮಾರ್ ಸಿನ್ಹಾ–ಮನಿಷ್ ಸುರೇಶ್ ಕುಮಾರ್ ಜೋಡಿಯನ್ನು ಮಣಿಸಿತು.

ರಣಜಿ ಟ್ರೋಫಿ ಫೈನಲ್: ದ್ವಿಶತಕದ ಜೊತೆಯಾಟದಿಂದ ಚೇತರಿಕೆ

ವಿದರ್ಭ ನೆರವಿಗೆ ಮಾಲೆವಾರ್, ನಾಯರ್

ನಾಗಪುರ: ದಿನದ ಕೊನೆಯಲ್ಲಿ ಕರುಣ್ ನಾಯರ್ (86) ಮತ್ತು ದಾನಿಶ್ ಮಾಲೆವಾರ್ (ಔಟಾಗದೇ 138) ನಡುವೆ ಗೊಂದಲದ ಪರಿಣಾಮ ದ್ವಿಶತಕದ ಜೊತೆಯಾಟ ಅಂತ್ಯಗೊಂಡಿತು. ರನ್‌ಔಟ್‌ನಿಂದಾಗಿ ನಾಯರ್ ಅರ್ಹವಾಗಿದ್ದ ಶತಕ ತಪ್ಪಿಸಿಕೊಂಡರು. ಆದರೆ ಇವರಿಬ್ಬರ ಜೊತೆಯಾಟದ ಫಲವಾಗಿ ವಿದರ್ಭ ತಂಡ ಬುಧವಾರ ಕೇರಳ ವಿರುದ್ಧ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ 4 ವಿಕೆಟ್ 254 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ವಿದರ್ಭ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆತಿಥೇಯರಿಗೆ, ಕೇರಳದ ವೇಗದ ಬೌಲರ್‌ಗಳು ಆಘಾತ ನಿಡಿದರು. 24 ರನ್‌ಗಳಾಗುವಷ್ಟರಲ್ಲಿ ಮೂವರು ನಿರ್ಗಮಿಸಿದ್ದರು.

ಆದರೆ ಈ ಋತುವಿನಲ್ಲಿ ರನ್ ಸುಗ್ಗಿ ಕಾಣುತ್ತಿರುವ ನಾಯರ್– ಮಾಲೆವಾರ್ ಜೋಡಿ ನಾಲ್ಕನೇ ವಿಕೆಟ್‌ಗೆ 215 ರನ್ ಸೇರಿಸಿ ಪ್ರಬಲ ಪ್ರತಿಹೋರಾಟದಲ್ಲಿ ಭಾಗಿಯಾದರು. ಯುವ ಮತ್ತು ಅನುಭವಿ ಆಟಗಾರನ ಜೋಡಿ ಎಚ್ಚರಿಕೆಯ ಜೊತೆಗೆ ಆಕ್ರಮಣದ ಆಟವನ್ನು ಹದವಾಗಿ ಬೆರೆಸಿ 68 ಓವರುಗಳನ್ನು ನಿಭಾಯಿಸಿತು.

ರಣಜಿ ಟ್ರೋಫಿ ಫೈನಲ್ ಪಂದ್ಯದ ಮೊದಲ ದಿನವಾದ ಬುಧವಾರ 215 ರನ್ ಜೊತೆಯಾಟದಲ್ಲಿ ಭಾಗಿಯಾದ ಕರುಣ್ ನಾಯರ್ (ಎಡಗಡೆ) ಮತ್ತು ದಾನಿಶ್ ಮಾಲೆವಾರ್ ಪಿಟಿಐ ಚಿತ್ರ

ಇನ್ನೇನು ಇವರಿಬ್ಬರು ದಿನದಾಟ ಮುಗಿಸುವರು ಎನ್ನುವಷ್ಟರಲ್ಲಿ, ಕೇರಳ ದಾರಿಗಾಣದೇ ಎರಡನೇ ಹೊಸ ಚೆಂಡು ಪಡೆಯಿತು; ಅಪಾಯಕಾರಿ ರೀತಿ ಬೆಳೆದಿದ್ದ ಜೊತೆಯಾಟ ಮುರಿಯುವಲ್ಲಿ ಯಶಸ್ವಿಯೂ ಆಯಿತು. 82ನೇ ಓವರಿನಲ್ಲಿ ಏಡನ್ ಆಪಿಲ್ ಟೋಮ್ ಅವರ ಮೊದಲ ಎಸೆತ ಸ್ವಿಂಗ್ ಆಗಿ ವಿಕೆಟ್ ಕೀಪರ್ ಅಜರುದ್ದೀನ್ ಕೈಗೆ ತಾಗಿ ಸ್ಲಿಪ್‌ನತ್ತ ಚಿಮ್ಮಿತು. ಬೈ ರನ್‌ಗಾಗಿ ಇಬ್ಬರೂ ಓಡಿದರು. ಆದರೆ ಎರಡನೇ ಸ್ಲಿಪ್‌ನತ್ತ ಬಂದ ಚೆಂಡನ್ನು ರೋಹನ್ ಕುನ್ನುಮಲ್ ವಿಕೆಟ್‌ನತ್ತ ಎಸೆದು ಬೇಲ್ಸ್ ಉರುಳಿಸಿದರು. ಕ್ರೀಸಿಗೆ ಮರಳಲಾಗದ ನಾಯರ್ 14 ರನ್‌ಗಳಿಂದ ಶತಕ ಕಳೆದುಕೊಂಡ ಹತಾಶೆಯಲ್ಲಿ ಬ್ಯಾಟ್ ನೆಲಕ್ಕೆ ಎಸೆದರು.

ಉಳಿದಂತೆ ನಾಯರ್ ಆಟ ದೋಷರಹಿತವಾಗಿದ್ದು 188 ಎಸೆತಗಳನ್ನು ಆಡಿದ್ದು, ಒಂದು ಸಿಕ್ಸರ್ ಜೊತೆ ಎಂಟು ಬೌಂಡರಿಗಳನ್ನು ಬಾರಿಸಿದರು.

ಅದಕ್ಕೆ ಸ್ವಲ್ಪ ಮೊದಲು, 21 ವರ್ಷ ವಯಸ್ಸಿನ ಮಾಲೇವಾರ್ ತಮ್ಮ ಮೊದಲ ಋತುವಿನ ಎರಡನೇ ಶತಕ ಪೂರೈಸಿದರು. 259 ಎಸೆತಗಳ ಅವರ ಇನಿಂಗ್ಸ್‌ನಲ್ಲಿ ಎರಡು ಸಿಕ್ಸರ್, 14 ಬೌಂಡರಿಗಳಿದ್ದವು.

ಇದಕ್ಕೆ ಮೊದಲು ಕೇರಳದ ವೇಗಿ ಎಂ.ಡಿ.ನಿಧೀಶ್, ಆತಿಥೇಯರಿಗೆ ಆರಂಭದಲ್ಲಿ ಆಘಾತ ನೀಡಿದ್ದರು. ಇನಿಂಗ್ಸ್‌ನ ಎರಡನೇ ಎಸೆತದಲ್ಲೆ ಪಾರ್ಥ ರೇಖಡೆ ಅವರನ್ನು ಎಲ್‌ಬಿ ಬಲೆಗೆ ಕೆಡವಿದ ನಿಧೀಶ್, ಏಳನೇ ಓವರಿನಲ್ಲಿ ದರ್ಶನ್ ನಲ್ಕಂಡೆ ಅವರ ವಿಕೆಟ್ ಕೂಡ ಪಡೆದರು.

ಸಂಕ್ಷಿಪ್ತ ಸ್ಕೋರು: ವಿದರ್ಭ: 86 ಓವರುಗಳಲ್ಲಿ 4 ವಿಕೆಟ್‌ಗೆ 254 (ದಾನಿಶ್ ಮಾಲೆವಾರ್ ಔಟಾಗದೇ 138, ಕರುಣ್ ನಾಯರ್ 86; ಎಂ.ಡಿ. ನಿಧೀಶ್ 33ಕ್ಕೆ2) ವಿರುದ್ಧ ಕೇರಳ.